ಹುಬ್ಬಳ್ಳಿ
ಸೋಮವಾರ, 2 ಮಾರ್ಚ್ 2026
ಸಂಪುಟ 15, ಸಂಚಿಕೆ 343, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಜಿಎಸ್‌ಟಿ ಸಂಗ್ರಹ ₹1.83 ಲಕ್ಷ ಕೋಟಿ ಗೆ ಏರಿಕೆ | ೦೭
ಕನ್ನಡಿಗರ ರಕ್ಷಣೆಗೆ ಸಹಾಯವಾಣಿ | ೦೩
ಸೆಮಿಫೈನಲ್ ಪ್ರವೇಶಿಸಿದ ಭಾರತ | ೧೦

ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಹತ್ಯೆ | ಶನಿವಾರ ಮಧ್ಯರಾತ್ರಿಯೇ ಟ್ರಂಪ್ ಘೋಷಣೆ

ಸುಪ್ರೀಂ ಲೀಡರ್ ಖಮೇನಿ ಖತಂ

• ದುಬೈ / ಟೆಹ್ರಾನ್ / ವಾಷಿಂಗ್ಟನ್ / ಹೊಸದಿಲ್ಲಿ: ಅತ್ಯಂತ ಮಹತ್ವದ ಬೆಳವಣಿಗೆಯಲ್ಲಿ ಇರಾನ್‌ನ ಸುಪ್ರೀಂ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರನ್ನು ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಹತ್ಯೆ ಮಾಡಿವೆ. ಶನಿವಾರ ಮಧ್ಯರಾತ್ರಿ ವೇಳೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಈ ಮಾಹಿತಿಯನ್ನು ಬಹಿರಂಗಪಡಿಸಿದರು. ಇದನ್ನು ಇರಾನ್ ಕೂಡ ಅಧಿಕೃತಪಡಿಸಿದ್ದು, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತೀಕಾರ ತೆಗೆದುಕೊಳ್ಳುವುದಾಗಿ ಘೋಷಿಸಿದೆ.



ಖಮೇನಿ ಹತ್ಯೆ ಬಳಿಕ, ಭಾರತ, ಪಾಕಿಸ್ತಾನ ಸೇರಿದಂತೆ ಜಗತ್ತಿನ ಬೇರೆ ಬೇರೆ ಮುಸ್ಲಿ ದೇಶಗಳು, ಅದರಲ್ಲೂ ಶಿಯಾ ಮುಸ್ಲಿಮರು ಹೆಚ್ಚು ಇರುವ ಕಡೆಗಳಲ್ಲಿ ಭಾರೀ ಪ್ರತಿಭಟನೆಯಾಗಿದೆ. ಪಾಕಿಸ್ತಾನದ ಕರಾಚಿಯಲ್ಲಿ ಅಮೆರಿಕ ರಾಯಭಾರ ಕಚೇರಿಗೆ ನುಗ್ಗಿರುವ ದುಷ್ಕರ್ಮಿಗಳು ದಾಂಧಲೆ ನಡೆಸಿದ್ದಾರೆ. ಈ ವೇಳೆ ಅಮೆರಿಕ ಸೇನೆ ಗುಂಡಿನ ದಾಳಿ ನಡೆಸಿ 21 ಮಂದಿಯನ್ನು ಹತ್ಯೆ ಮಾಡಿದೆ.

ಇರಾನ್‌ನಿಂದಲೇ ಬಹಿರಂಗ: ಟೆಹ್ರಾನ್‌ನ ಡೌನ್ ಟೌನ್‌ನಲ್ಲಿರುವ ಖಮೇನಿ ಅವರ ಕಾಂಪೌಂಡ್ ಅನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಲಾಗಿದ್ದು, ಈ ವೇಳೆ 86 ವರ್ಷದ ಆಯತೊಲ್ಲಾ ಅಲಿ ಖಮೇನಿ ಅವರು ಮೃತಪಟ್ಟಿದ್ದಾರೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ಉಪಗ್ರಹ ಫೋಟೋಗಳು ಸೈಟ್ ಮೇಲೆ ಭಾರಿ ಬಾಂಬ್ ದಾಳಿ ನಡೆಸಲಾಗಿದೆ ಎಂದು ತೋರಿಸಿದೆ.

ಟ್ರಂಪ್ ಘೋಷಣೆ: ಇತಿಹಾಸದ ಅತ್ಯಂತ ದುಷ್ಟ ಜನರಲ್ಲಿ ಒಬ್ಬರಾದ ಖಮೇನಿ ನಿಧನರಾಗಿದ್ದಾರೆ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿ ದ್ದಾರೆ. ದೇಶದ ಪರಮಾಣು ಸಾಮರ್ಥ್ಯಗಳನ್ನು ನಿಷ್ಕ್ರಿಯ ಗೊಳಿಸಬೇಕು ಎಂದು ಸೂಚಿಸಲಾಗಿದ್ದು, ಇದನ್ನು ಒಪ್ಪದ ಹಿನ್ನೆಲೆಯಲ್ಲಿ ಈ ದಾಳಿ ನಡೆಸಲಾಗಿದೆ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ. ಜತೆಗೆ ಇದು ವಾರವಿಡೀ ಅಥವಾ ಅದಕ್ಕೂ ಮೀರಿ ಮುಂದು ವರಿಯುತ್ತದೆ ಎಂದು ಅವರು ಎಚ್ಚರಿಸಿದರು. ಈ ಮಧ್ಯೆ ಖಮೇನಿ ಸಾವು ಖಚಿತವಾಗುತ್ತಿದ್ದಂತೆ, ಇರಾನ್‌ನ ಕೆಲವೆಡೆ ಗಳಲ್ಲಿ ಜನ ಸಂತೋಷದಿಂದ ಕುಣಿದಾಡುತ್ತಿದ್ದರು. ➡ಪುಟ ೪





ಇರಾನ್ ಪ್ರತೀಕಾರದ ಎಚ್ಚರಿಕೆ

ಖಮೇನಿ ಹತ್ಯೆ ಬಳಿಕ ಪ್ರತಿಕ್ರಿಯೆ ನೀಡಿರುವ ಇರಾನ್, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತೀಕಾರ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ಜತೆಗೆ, ಇಸ್ರೇಲ್, ಸೌದಿ ಅರೇಬಿಯಾ, ಯುಎಇ, ಬಹ್ರೈನ್, ಕುವೈತ್, ಕತಾರ್ ಸೇರಿದಂತೆ ಅಮೆರಿಕದ ಸೇನಾ ನೆಲೆಗಳು ಇರುವ ಕಡೆಗಳಲ್ಲಿ ಮತ್ತು ದುಬೈ, ರಿಯಾದ್, ದೋಹಾ ಸೇರಿದಂತೆ ಪ್ರಮುಖ ನಗರಗಳ ಮೇಲೂ ದಾಳಿ ನಡೆಸಿದೆ. ಇಸ್ರೇಲ್ ಮೇಲೆ ನಡೆಸಿದ ದಾಳಿಯಿಂದಾಗಿ ಬೈತ್ ಸಮೇಶ್‌ನಲ್ಲಿ 8 ಮಂದಿ ಸತ್ತಿದ್ದಾರೆ. ಹೀಗಾಗಿ ಇರಾನ್ ದಾಳಿಯಿಂದ ಸತ್ತವರ ಸಂಖ್ಯೆ 9ಕ್ಕೆ ಏರಿದೆ. ಅಮೆರಿಕದ ಕಡೆಯಿಂದಲೂ ನಾಲ್ವರು ಯೋಧರು ಮೃತರಾಗಿದ್ದಾರೆ ಎಂದು ಸೇನೆ ಹೇಳಿದೆ. ➡ಪುಟ ೪

ಭಾರತೀಯರಿದ್ದ ಶಿಪ್ ಮೇಲೆ ದಾಳಿ

ಹೋರ್ಮೂಜ್ ಕಾಲುವೆಯನ್ನೂ ಇರಾನ್ ಗುರಿಯಾಗಿಸಿಕೊಂಡಿದ್ದು, 15 ಮಂದಿ ಭಾರತೀಯ ಸಿಬ್ಬಂದಿ ಇದ್ದ ಹಡಗಿನ ಮೇಲೆ ದಾಳಿ ನಡೆಸಿದೆ. ಒಮಾನ್ ಕರಾವಳಿ ಸಮೀಪದಲ್ಲಿ ಈ ದಾಳಿಯಾಗಿದ್ದು, ಪಲಾವು ಧ್ವಜವನ್ನು ಹೊಂದಿದ್ದ ಹಡಗು ಇದಾಗಿದೆ. ಸ್ಕೈಲೈಟ್ ಎಂಬ ಈ ಹಡಗಿನಲ್ಲಿ 15 ಭಾರತೀಯರು ಮತ್ತು ಐವರು ಇರಾನಿಯನ್ನರು ಇದ್ದರು. ಇವರೆಲ್ಲರನ್ನೂ ರಕ್ಷಿಸಲಾಗಿದೆ ಎಂದೂ ಮೆರಿಟೈನ್ ಸೆಕ್ಯೂರಿಟಿ ಸೆಂಟರ್ ಹೇಳಿದೆ.

ಲಿಂಕನ್ ಸಮರನೌಕೆ ಮೇಲೆ ದಾಳಿ

ಖಮೇನಿ ಸಾವಿನ ಬಳಿಕ ದಾಳಿಯ ತೀವ್ರತೆಯನ್ನು ಹೆಚ್ಚು ಮಾಡಿರುವ ಇರಾನ್ ಪಡೆಗಳು, ಅಮೆರಿಕ ಮಿತ್ರ ದೇಶಗಳ ಜತೆಯಲ್ಲಿ ಅಮೆರಿಕದ ಸಮರ ನೌಕೆ ಮೇಲೂ ದಾಳಿ ನಡೆಸಿದೆ. ಶಕ್ತಿಶಾಲಿ ಲಿಂಕನ್ ಸಮರನೌಕೆಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ನಾಲ್ಕು ಬ್ಯಾಲೆಸ್ಟಿಕ್ ಮಿಸೈಲ್‌ಗಳನ್ನು ಬಳಸಲಾಗಿದೆ ಎಂದು ಮೂಲಗಳು ಹೇಳಿವೆ. ಅಮೆರಿಕವು ಇರಾನ್ ಮೇಲೆ ದಾಳಿ ನಡೆಸುವ ಸಲುವಾಗಿ ಲಿಂಕನ್ ಸೇರಿ ಎರಡು ಹಡಗುಗಳನ್ನು ಕಳಿಸಿತ್ತು. ಆದರೆ, ಈ ದಾಳಿ ಬಗ್ಗೆ ಅಮೆರಿಕ ಇನ್ನೂ ಅಧಿಕೃತವಾಗಿ ಏನನ್ನೂ ಹೇಳಿಲ್ಲ.

ಅರಾಫಿ ಇರಾನ್‌ನ ಮಧ್ಯಂತರ ನಾಯಕ

ಖಮೇನಿ ಉತ್ತರಾಧಿಕಾರಿಯಾಗಿ ಮಧ್ಯಂತರವಾಗಿ ಮೌಲ್ವಿ ಅಲಿರೇಜಾ ಅರಾಫಿ ಅವರನ್ನು ನೇಮಕ ಮಾಡಲಾಗಿದೆ. ಇರಾನ್‌ನ ನಾಯಕತ್ವ



ಮಂಡಳಿ ಈ ನಿರ್ಧಾರ ತೆಗೆದುಕೊಂಡಿದೆ. ಅರಾಫಿ ಅವರು ಗಾರ್ಡಿಯನ್ ಕೌನ್ಸಿಲ್‌ನ ಸದಸ್ಯರಾಗಿದ್ದು, ಇದರಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ನ್ಯಾಯಾಂಗ ಮುಖ್ಯಸ್ಥ ಘೋಲಮ್‌ಹುಸೇನ್ ಮೋಹ್ಸೇನಿ ಇದ್ದಾರೆ. ಈ ಮಧ್ಯೆ ಇರಾನ್ ಅಧ್ಯಕ್ಷರೂ ಮಾತನಾಡಿದ್ದು, ಶತ್ರುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಘೋಷಿಸಿದ್ದಾರೆ.

ಹತ್ಯೆ ಖಂಡಿಸಿ ಭಾರತದಲ್ಲಿ ಶಿಯಾ ಪ್ರತಿಭಟನೆ



ಖಮೇನಿ ಹತ್ಯೆಯನ್ನು ಖಂಡಿಸಿ ಭಾನುವಾರ ಭಾರತದ ವಿವಿಧ ಭಾಗಗಳಲ್ಲಿ ಶಿಯಾ ಸಮುದಾಯದವರು ಪ್ರತಿಭಟನೆ ನಡೆಸಿದರು. ಕಾಶ್ಮೀರದ ಲಾಲ್ ಚೌಕ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ಅಮೆರಿಕ– ಇಸ್ರೇಲ್ ವಿರುದ್ಧ ಘೋಷಣೆಗಳು ಕೇಳಿಬಂದವು. ಲಖನೌ, ಲುಧಿಯಾನಾ, ಅಜ್ಮೇರ್ ಸೇರಿದಂತೆ ಹಲವೆಡೆ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಅಲಿಪುರ ಗ್ರಾಮದಲ್ಲಿ ಮೌನಾಚರಣೆ ಪಾಲಿಸಿ ಅಂಗಡಿಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚಲಾಯಿತು.

350ಕ್ಕೂ ಹೆಚ್ಚು ವಿಮಾನ ಸಂಚಾರ ರದ್ದು

ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾನುವಾರವೂ 350 ವಿಮಾನಗಳನ್ನು ರದ್ದು ಮಾಡಲಾಗಿದೆ. ಜತೆಗೆ ಮಧ್ಯರಾತ್ರಿ ವೇಳೆಗೆ ಈ ಸಂಖ್ಯೆ 444ಕ್ಕೆ ಮುಟ್ಟಿದೆ. ಶನಿವಾರ ದೇಶೀಯವಾಗಿಯೂ 410 ವಿಮಾನಗಳ ಸಂಚಾರ ರದ್ದು ಮಾಡಲಾಗಿತ್ತು. ಬಹುತೇಕ ಎಲ್ಲ ವಿಮಾನಯಾನ ಸಂಸ್ಥೆಗಳೂ ಅಂತಾರಾಷ್ಟ್ರೀಯ ಸಂಚಾರಗಳನ್ನು ರದ್ದು ಮಾಡಿವೆ. ಅದರಲ್ಲೂ ದುಬೈ, ದೋಹಾ, ಅಬುದಾಬಿ ಸೇರಿದಂತೆ ಮಧ್ಯಪ್ರಾಚ್ಯ ದೇಶಗಳಿಗೆ ವಿಮಾನ ಓಡಾಟ ನಡೆಸಲಾಗುತ್ತಿಲ್ಲ.

ಕನ್ನಡಿಗರಿಗೂ ತಟ್ಟಿದ ಯುದ್ಧದ ಬಿಸಿ • ಪುಟ ೩

ವಿದೇಶಾಂಗ ಸಚಿವಾಲಯ ಜತೆ ಸಮಾಲೋಚನೆ: ಸಿದ್ದರಾಮಯ್ಯ

ಕನ್ನಡಿಗರ ರಕ್ಷಣೆಗೆ ತ್ವರಿತ ಕ್ರಮ

• ಶಿವಮೊಗ್ಗ: ಯುದ್ಧಪೀಡಿತ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆ ತರುವ ಯತ್ನ ಮಾಡಲಾಗುತ್ತಿದ್ದು, ಈ ಸಂಬಂಧ ಮುಖ್ಯಕಾರ್ಯದರ್ಶಿ ಹಾಗೂ ವಿದೇಶಾಂಗ ಸಚಿವಾಲಯದ ಅಧಿಕಾರಿಗಳೊಂದಿಗೆ ಸಮಾಲೋಚನೆ



ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಖಾಸಗಿ ಕಾರ್ಯಕ್ರಮಕ್ಕೆ ತೆರಳುವ ಸಲುವಾಗಿ ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಲ್ಲರನ್ನು ಸುರಕ್ಷಿತವಾಗಿ ಕರೆ ತರುವ ನಿಟ್ಟಿನಲ್ಲಿ ಕ್ರಮಕ್ಕೆಗೊಳ್ಳಲಾಗಿದೆ. ಬಳ್ಳಾರಿ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಲ್ಲಿನ ಜನರು ವಿದೇಶಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂದರು.

ಎಂಎಲ್‌ಸಿ ಭೋಜೇಗೌಡರು ಕೂಡ ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ವಿಮಾನ ನಿಲ್ದಾಣಗಳನ್ನು ಬಂದ್ ಮಾಡಿರುವುದರಿಂದ ಸ್ವದೇಶಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂಬ ಮಾಹಿತಿ ಇದೆ. ಭಾರತ ಸರ್ಕಾರದ ವಿದೇಶಾಂಗ ಇಲಾಖೆ ಸುರಕ್ಷಿತವಾಗಿ ಕರೆತರಲು ಕ್ರಮಕ್ಕೆಗೊಳ್ಳಲಿದೆ ಎಂದರು.

ಟ್ರಂಪ್ ದ್ವಂದ್ವ ನಿಲುವು: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದು ಕಡೆ ಶಾಂತಿ ಮಂತ್ರ ಜಪಿಸುತ್ತಿದ್ದಾರೆ. ಇನ್ನೊಂದು ಕಡೆ ಯುದ್ಧಕ್ಕೆ ಪ್ರಚೋದನೆ ನೀಡುತ್ತಿದ್ದಾರೆ. ತದ್ವಿರುದ್ಧವಾದ ನಿಲುವು ಅವರದ್ದಾಗಿದೆ. ಇರಾನ್ ಅಧ್ಯಕ್ಷ ಖಮೇನಿ ಹತ್ಯೆ ಯಾಗಿದೆ ಎಂಬುದನ್ನು ಅಮೆರಿಕ ಹೇಳಿದೆ. ಹತ್ಯೆಯಾದ ಖಮೇನಿ ಆತ್ಮಕ್ಕೆ ಶಾಂತಿ ಕೋರುವುದಾಗಿ ಹೇಳಿದರು. ➡ಪುಟ ೪

ಸಿಎಂ ವಿಡಿಯೋ ಕರೆ

ದುಬೈ ಕನ್ನಡಿಗರೊಂದಿಗೆ ವಿಡಿಯೋ ಕರೆಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಎಲ್ಲಾ ವ್ಯವಸ್ಥೆ ಮಾಡಲಾಗಿದೆ, ಯಾರು ಆತಂಕ ಪಡುವಂತಿಲ್ಲ ಎಂದು ಅಭಯ ನೀಡಿದ್ದಾರೆ.

ಮಧುರೈನಲ್ಲಿ 4,400 ಕೋಟಿ ರೂ. ಯೋಜನೆಗಳಿಗೆ ಮೋದಿ ಚಾಲನೆ

ತ.ನಾಡು ಅಭಿವೃದ್ಧಿಗೆ ಕೇಂದ್ರ ಆದ್ಯತೆ

• ಮಧುರೆ: ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಅಭಿವೃದ್ಧಿ ಹೊಂದಿದ ತಮಿಳುನಾಡು ಎಂಬುದು ಕೇಂದ್ರ ಸರ್ಕಾರದ ಧ್ಯೇಯ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದಾರೆ. ಇಲ್ಲಿ ಸುಮಾರು 4,400 ಕೋಟಿ ರೂ. ಮೊತ್ತದ ವಿವಿಧ ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸಿದ ಅವರು, ರಾಜ್ಯದ ಸರ್ವತೋಮುಖ ಪ್ರಗತಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ಮರಕ್ಕಾನಂ- ಪುದುಚೇರಿ ಸೇರಿದಂತೆ ಪ್ರಮುಖ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಪ್ರಧಾನಿ ಅಡಿಗಲ್ಲು ಹಾಕಿದರು. ಎಂಟು ಪುನರಾಭಿವೃದ್ಧಿ ಹೊಂದಿದ ರೈಲ್ವೆ ನಿಲ್ದಾಣಗಳು ಮತ್ತು ಚೆನ್ನೈ ಬೀಚ್-ಎಗ್ಮೋರ್ ನಡುವಿನ 4ನೇ ರೈಲು ಮಾರ್ಗವನ್ನು ದೇಶಕ್ಕೆ ಸಮರ್ಪಿಸಲಾಯಿತು. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವಲ್ಲಿ ತಮಿಳುನಾಡು ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಮೋದಿ ಹೇಳಿದ್ದಾರೆ. ➡ಪುಟ ೪



ಮಧುರೈನ ತಿರುಪರಂಕುಂದ್ರಂನಲ್ಲಿರುವ ಅರುಲ್ಮಿಗು ಸುಬ್ರಹ್ಮಣ್ಯ ದೇಗುಲಕ್ಕೆ ಭಾನುವಾರ ಭೇಟಿ ನಿಡಿದ್ದ ಪ್ರಧಾನಿ ಮೋದಿಯವರು ಪೂಜೆ ಸಲ್ಲಿಸಿದರು.

ರೇಣುಕಾಚಾರ್ಯರ ಸೇವೆ ಸ್ಮರಿಸಿದ ತಂಗಡಗಿ

ಸಮಸ್ತರ ಅಭಿವೃದ್ಧಿಗೆ ಶ್ರಮ

• ಬೆಂಗಳೂರು: ಸತ್ಯ ಮತ್ತು ಶಾಂತಿಯ ತಳಹದಿಯ ಮೇಲೆ ಸುಸಂಸ್ಕೃತ ಸಮಾಜ ನಿರ್ಮಿಸಲು



ಶ್ರಮಿಸಿದ ಜಗದ್ಗುರು ರೇಣುಕಾಚಾರ್ಯರು ದೀನ-ದಲಿತರು, ಹಿಂದುಳಿದ ವರ್ಗಗಳ ಹಾಗೂ ಸಮಸ್ತ ಮಾನವ ಕುಲದ ಉದ್ಧಾರಕ್ಕಾಗಿ ಕಂಕಣ ಕಟ್ಟಿ ದುಡಿದವರಲ್ಲಿ ಪ್ರಮುಖರಾಗಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ➡ಪುಟ ೪

ಭಾರತೀಯರ ರಕ್ಷಣೆ ಕುರಿತು ಮೋದಿ ಚರ್ಚೆ

• ಹೊಸದಿಲ್ಲಿ: ಮಧ್ಯಪ್ರಾಚ್ಯ ಉದ್ವಿಗ್ನತೆ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ರಾತ್ರಿ ದಿಲ್ಲಿಯಲ್ಲಿ ಸಂಪುಟದ ಭದ್ರತಾ ಸಮಿತಿ(ಸಿಸಿಎಸ್) ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಗಲ್ಫ್ ದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಭಾರತೀಯರ ಸುರಕ್ಷತೆ ಕುರಿತು ಸಭೆಯಲ್ಲಿ ವಿಶೇಷ ಗಮನ ಹರಿಸಲಾಯಿತು. ಅಗತ್ಯವಿದ್ದಲ್ಲಿ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಸಿದ್ಧತಾ ಕ್ರಮ ವೇಗಗೊಳಿಸಲು ಸೂಚನೆ ನೀಡಲಾಗಿದೆ. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಒಳ್ಳೆಯದನ್ನು ಮಾಡುವ ಇಷ್ಟವಿದ್ದರೆ ಈಗಲೇ ಮಾಡು. ಕೆಟ್ಟದ್ದಾದರೆ ನಿಧಾನಿಸು ಹಾಗೂ ಯೋಚಿಸು.

▲ ಲೋಕೋಕ್ತಿ

ಭಕ್ತಿಮಾರ್ಗದ ಹೊಂಬೆಳಕು: ಶ್ರೀ ಚೈತನ್ಯ ಮಹಾಪ್ರಭು

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

17 ಜನ ಸಜೀವ ದಹನ

• ನಾಗ್ಪುರ: ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಸ್ಫೋಟಕ ತಯಾರಿಕಾ ಕಾರ್ಖಾನೆಯೊಂದರಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 17 ಜನರು ಮೃತಪಟ್ಟಿದ್ದು, 18 ಮಂದಿ ಗಾಯಗೊಂಡಿದ್ದಾರೆ. ನಾಗ್ಪುರದಿಂದ ಸುಮಾರು 50 ಕಿಮೀ ದೂರದಲ್ಲಿರುವ ಕಾಟೋಲ್ ತಹಸಿಲ್‌ನ ಎಸ್‌ಬಿಎಲ್ ಎನರ್ಜಿ ಲಿಮಿಟೆಡ್ ಘಟಕದಲ್ಲಿ ಈ ದುರಂತ ನಡೆದಿದೆ.

• ಪುಟ ೭

ನನ್ನ ಧರ್ಮ ಸರಿ, ನಿನ್ನದು ತಪ್ಪು ಎನ್ನುವ ಕಲ್ಪನೆ ಇಲ್ಲ

• ಚಿಕ್ಕಮಗಳೂರು: ಧರ್ಮ, ಪೂಜೆ, ಭಕ್ತಿ ಇವು ಪ್ರದರ್ಶನಕ್ಕೆ ಇರುವಂತಹ ಸಂಗತಿಗಳಲ್ಲ, ಇವು ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚಿಸಲು ಇರುವ ಸಾಧನಗಳು. ನನ್ನ ಧರ್ಮ ಸರಿ, ನಿನ್ನ ಧರ್ಮ ತಪ್ಪು ಎನ್ನುವ ಕಲ್ಪನೆ ಎಲ್ಲಿಯೂ ಇಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಭಿಪ್ರಾಯಪಟ್ಟರು.

• ಪುಟ ೪

ವರ್ಗಾವಣೆ ಮಾರ್ಗಸೂಚಿ ರೂಪಿಸಲು ಹೈ ನಿರ್ದೇಶನ

• ಬೆಂಗಳೂರು : ವರ್ಗಾವಣೆ ಸಂಬಂಧಿತ ಮಾರ್ಗಸೂಚಿ ಇಲ್ಲದೆ, ನೌಕರರಿಂದ ಕೋರಿಕೆಯೂ ಇಲ್ಲದೆ ಇದ್ದರೂ ಸಿಬ್ಬಂದಿಯೊಬ್ಬರನ್ನು ವರ್ಗಾವಣೆ ಮಾಡಿದ್ದ ವಾಯುವ್ಯ ರಸ್ತೆ ಸಾರಿಗೆ ನಿಗಮದ ಕ್ರಮವನ್ನು ಖಂಡಿಸಿರುವ ಹೈಕೋರ್ಟ್, 3 ತಿಂಗಳಲ್ಲಿ ವರ್ಗಾವಣೆ ಮಾರ್ಗ ಸೂಚಿಗಳನ್ನು ರೂಪಿಸಲು ನಿಗಮಕ್ಕೆ ನಿರ್ದೇಶನ ನೀಡಿದೆ.

• ಪುಟ ೪

ಕೈಗಾದಲ್ಲಿ 5, 6ನೇ ಘಟಕದ ನಿರ್ಮಾಣ ಕಾರ್ಯ ಪೂರ್ಣ

• ಕಾರವಾರ: ಉತ್ತರಕನ್ನಡ ಜಿಲ್ಲೆಯ ಕೈಗಾದಲ್ಲಿ 2030 ನೇ ಸಾಲಿಗೆ 5 ಮತ್ತು 6 ನೇ ಘಟಕವು ತನ್ನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ವಿಶ್ವಾಸ ಹೊಂದಲಾಗಿದೆ ಎಂದು ಕೇಂದ್ರ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿ ಡಾ.ಅಜಿತಕುಮಾರ ಮೊಹಂತಿ ಹಾಗೂ ಎನ್.ಪಿ.ಸಿ.ಐ.ಎಲ್ ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭುವನಚಂದ್ರ ಪಾಠಕ್ ಹೇಳಿದರು.

• ಪುಟ ೪

ಸಂಸ್ಕೃತದಿಂದ ಧಾರ್ಮಿಕ ಅಲ್ಗಾರಿದಮ್: ಮುಕುಂದ

• ಪುಟ ೩

ವಾಣಿಜ್ಯ ಬಳಕೆಯ ಅಡುಗೆ ಅನಿಲ ಬೆಲೆ 31ರೂ. ಇಳಿಕೆ

• ಪುಟ ೭

ಕಿರುಸುದ್ದಿ



ಜೋಯಿಡಾ: ತಾಲೂಕಿನ ಹೆಬ್ಬಾಳ ಗ್ರಾಮದ ಗೆದ್ದೆಮನೆ ಸುಗ್ಗಿಕುಣಿತ ತಂಡದವರಿಂದ ಈ ವರ್ಷದ ಸುಗ್ಗಿ ಕುಣಿತ ನಂದಿಗದ್ದಾ ಪಂಚಾಯತ ಭಾಗದಲ್ಲಿ ನಡೆಯಿತು.

ವಿಠ್ಠಲ-ರುಕ್ಮಿಣಿ ದಿಂಡಿ ಉತ್ಸವಕ್ಕೆ ಚಾಲನೆ



◆ **ದಾಂಡೇಲಿ:** ಆಜಾದ್ ನಗರದ ವಿಠ್ಠಲ- ರುಕ್ಮಿಣಿ ಮಂದಿರದಲ್ಲಿ 22ನೇ ವರ್ಷದ ದಿಂಡಿ ಉತ್ಸವಕ್ಕೆ ಭಾನುವಾರ ಬೆಳಗ್ಗೆ ಚಾಲನೆ ನೀಡಲಾಯಿತು.

ಗ್ರಂಥರಾಜ ಜ್ಞಾನೇಶ್ವರ ಸಾಮೂಹಿಕ ಪಾರಾಯಣವು ಧಾರವಾಡ ಮದಿಹಾಳದ ವಿಠ್ಠಲರಾವ್ ಎಸ್.ಕಾಟೇನವರ ನೇತೃತ್ವದಲ್ಲಿ ನಡೆಯುತ್ತಿದೆ.

ಸೋಮವಾರ ಬೆಳಗ್ಗೆ ವಿಶೇಷ ಪೂಜಾ ಕಾರ್ಯಕ್ರಮಗಳೊಂದಿಗೆ ದಿಂಡಿ ಪ್ರದಕ್ಷಣೆ, ಪಲ್ಲಕಿ ಉತ್ಸವ ನಡೆದು ಕಾಲಕೀರ್ತನೆಯ ಬಳಿಕ ಮಧ್ಯಾಹ್ನ ಅನ್ನ ಪ್ರಸಾದ ವಿತರಣೆ ನಡೆಯಲಿದೆ.

ಕಾರ್ಯಕ್ರಮದ ಯಶಸ್ಸಿಗೆ ವಿಠ್ಠಲ-ರುಕ್ಮಿಣಿ ಮಂದಿರದ ಆಡಳಿತ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಸ್ಥಳೀಯ ಭಕ್ತಾಭಿಮಾನಿಗಳು ಶ್ರಮಿಸುತ್ತಿದ್ದಾರೆ.

ಮಕ್ಕಳಲ್ಲಿ ಸೃಜನಶೀಲ ಮನೋಭಾವ ಬೆಳೆಸಿ



◆ **ಕುಮಟಾ:** ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ ಮತ್ತು ಸೃಜನಶೀಲ ಮನೋಭಾವ ಬೆಳೆಸುವುದು ಇಂದಿನ ಶಿಕ್ಷಣ ವ್ಯವಸ್ಥೆಯ ಪ್ರಮುಖ ಉದ್ದೇಶವಾಗಿದ್ದು, ಅದನ್ನು ರಂಗಾ ದಾಸ ಶಾನಭಾಗ ಹೆಗಡೆಕರ ಬಾಲ ಮಂದಿರ ಕಳೆದ ಅನೇಕ ವರ್ಷಗಳಿಂದ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಎಂದು ಡಯಟ್ ಉಪಪ್ರಾಂಶುಪಾಲ ಜಿ.ಎಸ್.ಭಟ್ಟ ಅಭಿಪ್ರಾಯಪಟ್ಟರು.ತಾಲೂಕಿನ ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಆಶ್ರಯದಲ್ಲಿ ನಡೆದ ರಂಗಾ ದಾಸ ಶಾನಭಾಗ ಹೆಗಡೆಕರ ಬಾಲಮಂದಿರದ ಪುಟಾಣಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಕಸದಿಂದ ರಸ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಚಿಕ್ಕ ವಯಸ್ಸಿನಲ್ಲಿ ಆತ್ಮವಿಶ್ವಾಸ, ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಸಂಸ್ಕಾರಗಳನ್ನು ಬೆಳೆಸುತ್ತಿರುವುದು ಶ್ಲಾಘನೀಯ. ಕಸದಿಂದ ಉಪಯುಕ್ತ ವಸ್ತುಗಳನ್ನು ಸೃಷ್ಟಿಸುವ ಕಲಿಕೆ ಮಕ್ಕಳಲ್ಲಿ ಪರಿಸರ ಜಾಗೃತಿ ಮತ್ತು ಸಂಶೋಧನಾ ಮನೋಭಾವ ಬೆಳೆಸುತ್ತದೆ ಎಂದು ಅವರು ಹೇಳಿದರು. ಟ್ರಸ್ಟ್ ಉಪಾಧ್ಯಕ್ಷ ದಾಮೋದರ ಭಟ್, ಶೈಕ್ಷಣಿಕ ಮಾರ್ಗದರ್ಶಕ ಆರ್. ಎಚ್. ದೇಶಭಂಡಾರಿ ಮಾತನಾಡಿದರು.ಮುಖ್ಯ ಶಿಕ್ಷಕಿ ಸಾವಿತ್ರಿ ಹೆಗಡೆ ಎಲ್ಲರಿಗೂ ಸ್ವಾಗತಿಸಿದರು. ಮುಖ್ಯಸ್ಥರಾದ ಸುಜಾತಾ ನಾಯ್ಕ, ಗಣೇಶ ಜೋಶಿ ಹಾಗೂ ಇತರೆ ಇದ್ದರು. ಮಕ್ಕಳ ಕಲಾಕೃತಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಪುಟಾಣಿಗಳ ಸೃಜನಶೀಲತೆ ಮತ್ತು ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು.

ನಿಧನ ಸುದ್ದಿ

ಅಪ್ಪಣ್ಣ ಬುದ್ನಿ



◆ **ಮುಂಡಗೋಡ:** ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ನಿವೃತ್ತ ಶಿಕ್ಷಕ, ಇಲ್ಲಿನ ಬಂಕಾಪುರ ರಸ್ತೆಯ ನಿವಾಸಿ ಅಪ್ಪಣ್ಣ ಬುದ್ನಿ(79) ನಿಧನರಾದರು. ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಪ್ರೌಢಶಾಲೆಯ ಹಳೆಯ ಮತ್ತು ಈಗಿನ ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.



ಹಳಿಯಾಳ: ತಾಲೂಕಿನ ಮಲವಡಿಯಲ್ಲಿ ಇತ್ತೀಚೆಗೆ ನಡೆದ ಗೋಕುಳ ಶಿರೋಡ್ಕರರವರ ಸ್ಮರಣಾರ್ಥ ಅವರ ಸುಪುತ್ರ ವಿಠ್ಠಲ ಗೋಕುಳ ಶಿರೋಡ್ಕರ ಹಾಗೂ ಕುಟುಂಬದವರು, ಲಯನ್ಸ್ ಕ್ಲಬ್ ಹಳಿಯಾಳ ಹಾಗೂ ಅಶೋಕಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹುಬ್ಬಳ್ಳಿ ಇವರ ಸಹಯೋಗದಲ್ಲಿ ಉಚಿತ ಹೃದಯ ರೋಗ ತಪಾಸಣಾ ಶಿಬಿರ ನಡೆಯಿತು.

200ಕ್ಕೂ ಅಧಿಕ ಹೆಚ್ಚು ರೋಗಿಗಳ ತಪಾಸಣೆ

◆ **ಹಳಿಯಾಳ:** ತಾಲೂಕಿನ ಮಲವಡಿಯಲ್ಲಿ ಇತ್ತೀಚೆಗೆ ನಡೆದ ಗೋಕುಳ ಶಿರೋಡ್ಕರರವರ ಸ್ಮರಣಾರ್ಥ ಅವರ ಸುಪುತ್ರ ವಿಠ್ಠಲ ಗೋಕುಳ ಶಿರೋಡ್ಕರ ಹಾಗೂ ಕುಟುಂಬದವರು, ಲಯನ್ಸ್ ಕ್ಲಬ್ ಹಳಿಯಾಳ ಹಾಗೂ ಅಶೋಕಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹುಬ್ಬಳ್ಳಿ ಇವರ ಸಹಯೋಗದಲ್ಲಿ ಉಚಿತ ಹೃದಯ ರೋಗ ತಪಾಸಣಾ ಶಿಬಿರವನ್ನು ಏರ್ಪಡಿಸಿದ್ದರು.

ಈ ಶಿಬಿರದಲ್ಲಿ ಡಾ.ದೀಪಕ ಕಲ್ಮಠ ಹಳಿಯಾಳ,ಡಾ. ನದೀಮ್ ಹೀಲಿಂಗ ಹಾಸ್ಪಿಟಲ್ ಹಳಿಯಾಳ, ಡಾ.ಸಿದ್ದು ಅಶೋಕಾ ಹಾಸ್ಪಿಟಲ್ ಹುಬ್ಬಳ್ಳಿ, ಡಾ.ಜಗದೀಶ ಹಿರೇಮಠ ತೇರಗಾಂವ, ಡಾ. ಸಾಗರ ಮುರ್ಕವಾಡ, ಡಾ. ವಿಶ್ವನಾಥ ಪಾಟೀಲ ಹಳಿಯಾಳ, ಡಾ. ಜಯರಾಜ ಹಳಿಯಾಳ ಭಾಗವಹಿಸಿ ಸುಮಾರು 200 ಕ್ಕೂ ಹೆಚ್ಚು ರೋಗಿಗಳನ್ನ ತಪಾಸಣೆ ಮಾಡಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಲಭ್ಯವಿದ್ದ ವಿವಿಧ ಔಷಧಗಳನ್ನು ಉಚಿತವಾಗಿ ಒದಗಿಸಿದರು. 200 ರೋಗಿಗಳಲ್ಲಿ 4 ರೋಗಿಗಳು ಹೃದಯ ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಿದ್ದರು. ಅವರ ಮುಂದಿನ ಚಿಕಿತ್ಸೆಗೆ ಸಲಹೆ ಸೂಚನೆಯನ್ನು ಕೂಡ ನೀಡಲಾಯಿತು.ಈ ಸಂದರ್ಭದಲ್ಲಿ ಹಳಿಯಾಳ ಪೊಲೀಸ್ ಠಾಣೆಯ ಪಿಎಸ್ಐ (ಕಾ.ಸು.) ಬಸವರಾಜ ಮಬನೂರ, ಲಯನ್ಸ ಕ್ಲಬ್ ನ ವಿವಿಧ ಪದಾಧಿಕಾರಿಗಳು, ಮಳವಡಿ ಗ್ರಾಮದ ಊರಿನ ಹಿರಿಯರಾದ ಶಂಕರ ಮಿರಾಶಿ, ಹಾಗೂ ಮಲವಡಿ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು.



ಕುಮಟಾ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುಮಟಾದ ಎನ್‌ಎಸ್‌ಎಸ್ ಘಟಕ 1 ಮತ್ತು 3ರ ಆಶ್ರಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿರ್ಜಾನಿನಲ್ಲಿ ಏಳು ದಿನಗಳ ಕಾಲ ನಡೆದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರವು ಸಮಾರೋಪ ಸಮಾರಂಭದೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಸಚಿವ ಮಂಕಾಳ.ಎಸ್.ವೈದ್ಯ ಹೇಳಿಕೆ

ಮಾವಿನಕುರ್ವೆ ಅಭಿವೃದ್ಧಿಗೆ 185 ಕೋಟಿ ರೂ.ಯೋಜನೆ

◆ **ಭಟ್ಕಳ:** ಭಟ್ಕಳ ಮಾವಿನಕುರ್ವೆ ಬಂದರಿನ ಸಮಗ್ರ ಅಭಿವೃದ್ಧಿಗೆ 185 ಕೋಟಿ ರೂ.ವೆಚ್ಚದ ಯೋಜನೆ ರೂಪಿಸಲಾಗಿದೆ ಎಂದು ರಾಜ್ಯದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ.ಎಸ್.ವೈದ್ಯ ಹೇಳಿದರು.

ಅವರು ಮಾವಿನಕುರ್ವೆ ಬಂದರಿನಲ್ಲಿ ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿ, ಕೊಂಕಣಿ ಖಾರ್ವಿ ಸಮಾಜ ಹಾಗೂ ಕೊಂಕಣಿ ಸಮಾಜ ಕಲಾಮಂಡಲ್ ಸಹಯೋಗದಲ್ಲಿ ಏರ್ಪಡಿಸಲಾದ ಸಿಗ್ಮೆ ಪೊರಬ್ 2026 ನಾಚ್ ಮಂಡಿಲಾ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಭಟ್ಕಳ ಬಂದರು ಅಭಿವೃದ್ಧಿ ಮಾಡಲಾಗುತ್ತಿದೆ. ಹೂಳಿನ ಸಮಸ್ಯೆ ತಪ್ಪಿಸಲು 10 ಕೋಟಿ ರೂ.ವೆಚ್ಚದಲ್ಲಿ ಬ್ರಿಡ್ಜ ಕಂ ಬ್ಯಾರೇಜ್ ನಿರ್ಮಿಸಲಾಗುವುದು. ಹಿಂದಿನ ಸರ್ಕಾರ ಇದ್ದಾಗ ಮೀನುಗಾರರು ಸಮರ್ಪಕ ಸೀಮೆಎಣ್ಣೆ, ಡಿಸೀಲ್ ಸಿಗದೇ ತೊಂದರೆ ಅನುಭವಿಸುತ್ತಿದ್ದರು. ಆದರೆ ನಾನು ಸಚಿವನಾದ ಬಳಿಕ ಮೀನುಗಾರರ ದೋಣಿಗೆ ಬೇಕಾದಷ್ಟು ಸೀಮೆಎಣ್ಣೆ, ಡಿಸೀಲ್ ನೀಡಲಾಗುತ್ತಿದೆ. ಮೀನುಗಾರಿಕೆಗೆ ಹೋಗುವ ಮೀನುಗಾರರಿಗೆಇಲಾಖೆಯಿಂದಲೇಲೈಫ್ ಜಾಕೆಟ್ ನೀಡಲಾಗುತ್ತಿದೆ. ಮೀನುಗಾರಿಕೆ ಸಂದರ್ಭದಲ್ಲಿ ಮೀನುಗಾರರು ದುರ್ಮರಣಕ್ಕೀಡಾದರೆ 24 ಗಂಟೆಯಲ್ಲಿ ಇಲಾಖೆಯಿಂದ 10 ಲಕ್ಷ ರೂ. ಪರಿಹಾರ ಕುಟುಂಬಕ್ಕೆ ನೀಡುವ ಕೆಲಸ ಮಾಡಲಾಗುತ್ತಿದೆ. ಮೀನುಗಾರರಿಗೆ ಅನುಕೂಲವಾಗಲು ಮೀನುಗಾರರಿಗೆ 10 ಸಾವಿರ ಮನೆಗಳನ್ನು ಮಂಜೂರಿಸಲಾಗಿದೆ ಎಂದರು.



> ಅಕಾಡೆಮಿಗೆ ವರ್ಷಕ್ಕೆ 50 ಲಕ್ಷ ರೂಪಾಯಿ ಸರ್ಕಾರದಿಂದ ಅನುದಾನ ನೀಡಲಾತ್ತಿದೆ. ಈ ಹಣದಿಂದಲೇ ಕಾರ್ಯಕ್ರಮ, ಅಧ್ಯಯನ ಎಲ್ಲವೂ ಆಗಬೇಕಿದೆ. ಕೊಂಕಣಿ ಅಕಾಡೆಮಿಯ ಶಾಖೆಯನ್ನು ಭಟ್ಕಳದಲ್ಲೂ ಸ್ಥಾಪಿಸಲು ಮುಂದಾಗಬೇಕು. ಆ ನಿಟ್ಟಿನಲ್ಲಿ ಅಕಾಡೆಮಿಯ ಪದಾಧಿಕಾರಿಗಳ ಪ್ರಯತ್ನ ಆಗಬೇಕು.
>
> ■ ಮಂಕಾಳ ವೈದ್ಯ, ಸಚಿವ

ಕೊಂಕಣಿ ಭಾಷೆ ಯಾವುದೇ ಧರ್ಮ, ಜಾತಿಗೆ ಸೀಮಿತವಾಗಿಲ್ಲ. ಎಲ್ಲಾ ಧರ್ಮದವರೂ ಕೊಂಕಣಿ ಮಾತನಾಡುತ್ತಾರೆ. ಕೊಂಕಣಿ ಭಾಷೆ, ಸಂಸ್ಕೃತಿ ಅಧ್ಯಯನಕ್ಕೆ ಕಳೆದ 32 ವರ್ಷಗಳ ಹಿಂದೆ ಹುಟ್ಟಿಕೊಂಡ ಕೊಂಕಣಿ ಸಾಹಿತ್ಯ ಅಕಾಡೆಮಿ ಉಳಿಸಿ ಬೆಳೆಸಿಕೊಳ್ಳಬೇಕುಎಂದರು. ಅಧ್ಯಕ್ಷತೆವಹಿಸಿದ್ದ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರೀಸ್, ಮಾಜಿ ಅಧ್ಯಕ್ಷ ರೊಯ್ ಕ್ಯಾಸ್ತಲಿನೋ, ತಂಝೀಂ ಅಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ ಮಾತನಾಡಿದರು.

ಕೊಂಕಣಿ ಖಾರ್ವಿ ಸಮಾಜದ ಅಧ್ಯಕ್ಷ ಸುಬ್ರಾಯ ಖಾರ್ವಿ, ಕೊಂಕಣಿ ಖಾರ್ವಿ ಸಮಾಜದ ಟ್ರಸ್ಟಿ ರತ್ನಾಕರ ಖಾರ್ವಿ, ಕೊಂಕಣಿ ಖಾರ್ವಿ ಸಮಾಜದ ಕಲಾಮಂಡ್ ಸಂಚಾಲಕ ಶ್ರೀಧರ ಎಂ ಖಾರ್ವಿ, ಅಖಿಲ ಭಾರತ ಖಾರ್ವಿ ಮಹಾಜನ ಸಭಾದ ಅಧ್ಯಕ್ಷ ರವಿ ನಾಯಕ, ಖಾರ್ವಿ ಸಮುದಾಯದ ಹಿರಿಯ ಮುಖಂಡ ವಸಂತ ಖಾರ್ವಿ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸಚಿವ ಮಂಕಾಳ ವೈದ್ಯ, ಹಿರಿಯರಾದ ವಸಂತ ಖಾರ್ವಿ ಮತ್ತು ನಾರಾಯಣ ಖಾರ್ವಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಭಾ ಕಾರ್ಯಕ್ರಮದ ನಂತರ ಸಿಗ್ಮೆ ಪೊರಬ್ ನಡೆಯಿತು.

ಬಸ್ ಸಂಚಾರಕ್ಕೆ ಮುಕ್ತವಾಗದ ಸೇತುವೆ

◆ **ಗೋಕರ್ಣ:** ಗಂಗಾವಳಿ ಮತ್ತು ಮಂಜುಗುಣಿ ನಡುವಣ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿದ ನೂತನ ಸೇತುವೆಯನ್ನ ಮುಖ್ಯಮಂತ್ರಿ ಸಿದ್ದರಾಮ್ಯನವರು ಉದ್ಘಾಟಿಸಿದರು ಸಹ ಗಂಗಾವಳಿ ಮೂಲಕ ಅಂಕೋಲಾಕ್ಕೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ ಸಂಚರಿಸದೆ ಬಗ್ಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎರಡು ತಾಲೂಕುಗಳ ಬೇಸಿಯುವ ಜೊತೆ, ಧಾರ್ಮಿಕ ಕ್ಷೇತ್ರ ಗೋಕರ್ಣಕ್ಕೆ ಹತ್ತಿರವಾದ ಈ ಮಾರ್ಗ. ಕಳೆದ ಮೇ ತಿಂಗಳಿನಲ್ಲೇ ಸರ್ಕಾರಿ ಬಸ್ ಹೊರತಾಗಿ ಉಳಿದೆಲ್ಲ ಖಾಸಗಿ ವಾಹನಗಳು ತೆರಳುತ್ತಿದೆ. ಆದರೆ ಬಸ್ ಸಂಚರಿಸಲು ಅಧಿಕೃತ ಉದ್ಘಾಟನೆಗೊಳ್ಳ ಬೇಕು ಎಂಬ ಕಾರಣ ನೀಡಲಾಗಿತ್ತು, ಕೇವಲ ಒಂದು ಬಸ್ ಸಂಚರಿಸುತ್ತಿರುವುದನ್ನ ಸಹ ಬಂದ ಮಾಡಲಾಗಿತ್ತು. ಆದರೆ ಅಧಿಕೃತ ಉದ್ಘಾಟನೆಯಾಗಿ ಹಲವು ದಿನಗಳು ಕಳೆದರು ಸಹ ಇದುವರೆಗೂ ಒಂದೇ ಒಂದು ಬಸ್ ಸಂಚರಿಸಲು ಅನುವು ಮಾಡಿಕೊಡದಿರುವುದು ಜನರ ಅಸಮಾಧಾನಕ್ಕೆ ಕಾರವಾಣವಾಗಿದೆ.

ನಿತ್ಯ ನೂರಾರು ವಿದ್ಯಾರ್ಥಿಗಳು ಕಾರವಾರ, ಅಂಕೋಲಾಕ್ಕೆ ತೆರಳಲು ಗಂಗಾವಳಿಯಿಂದ, ಮಂಜುಗುಣಿ ಕಡೆ ಸೇತುವೆಯ ಮೇಲೆ ನಡೆದುಕೊಂಡು ಹೋಗಿ ಮತ್ತೊಂದು ವಾಹನ ಕಾದು ಅಲ್ಲಿಂದ ತೆರಳುತ್ತಾರೆ. ಪ್ರಸ್ತುತ ದ್ವಿತೀಯ ಪಿಯುಸಿ ಪರೀಕ್ಷೆ ಸಹ ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಗೋಕರ್ಣದಿಂದ ಮಾದನಗೇರಿ ಮೂಲಕ ತೆರಳುವ ಅಂಕೋಲಾ ಬಸ್ ರಸ್ತೆ ಮಧ್ಯದಲ್ಲಿ ಕೆಟ್ಟು ನಿಲ್ಲುವುದು, ಅಧಿಕ ಜನರನ್ನ ತುಂಬಿ ನಿಧಾನವಾಗಿ ಸಾಗುತ್ತಾ ವಿಳಂಬವಾಗಿ ತಲುಪುತ್ತಿದ್ದು, ಹತ್ತಿರದ ಮಾರ್ಗದವಾದ ಗಂಗಾವಳಿ ಮೂಲಕ ಬಸ್ ಸಂಚಾರವನ್ನ ತ್ವರಿತವಾಗಿ ಆರಂಭಿಸ ಬೇಕಿದೆ.

> **ಸಮರ್ಪಕ ಬಸ್ ಒದಗಿಸಿ**
>
> ಶಿರಸಿ ಜಾತ್ರೆಯ ಬಳಿಕ ಬಸ್ ಸಂಚಾರ ಆರಂಭಿಸುತ್ತಾರೆ ಎನ್ನಲಾಗಿತ್ತಿದ್ದು, ಆದರೆ ನಿತ್ಯ ಮಾದನಗೇರಿ ಮಾರ್ಗದಲ್ಲೆ ತೆರಳುವ ಬಸ್ ಹಾಗೇ ಇಟ್ಟು, ಗಂಗಾವಳಿ ಮಾರ್ಗದಲ್ಲಿ ಸಿಮೀತ್ ಬಸ್ ಬಿಡುತ್ತಾರೆ ಎಂಬ ಮಾಹಿತಿ ತಿಳಿದು ಬಂದಿದ್ದು, ಆದರೆ ನಿಗದಿತ ಸಮಯಕ್ಕೆ ಬಿಡದೆ, ಇನ್ನಾವುದೂ ಸಮಯಕ್ಕೆ ಬಿಟ್ಟರೆ ಯಾವುದೇ ಪ್ರಯೋಜನವಿಲ್ಲ ಎಂದು ಜನರು ಹೇಳುತ್ತಿದ್ದಾರೆ. ಆದರೆ ಈ ಬಸ್ ಸಂಚಾರ ಮಾತ್ರ ಹಾಲಿ ಪ್ರಾರಂಭವಾಗುವುದು ಮರೀಚಿಕೆಯಾಗಿದೆ.



ಅಶೋಕೆಯ ಜನರ ಕಾರ್ಯ ಮಾದರಿ: ಶೆಟ್ಟಿ

◆ **ಗೋಕರ್ಣ:** ಪಟ್ಟಣದಲ್ಲಿ ಆಯೋಜಿಸುವ ಕಾರ್ಯಕ್ರಮಕ್ಕೂ ಮಿಗಿಲಾಗಿ ಕುಗ್ರಾಮದಲ್ಲಿ ಅಚುಕಟ್ಟಿನ ವ್ಯವಸ್ಥೆ ಕಲ್ಪಿಸಿ ಶಿಕ್ಷಣ ಮಹತ್ವ ಸಾರುವ ಸಮಾರಂಭ ಆಯೋಜಿಸಿರುವ ಅಶೋಕೆಯ ಜನರ ಕಾರ್ಯ ಎಲ್ಲರಿಗೂ ಮಾದರಿ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಶುಕ್ರವಾರ ಸಂಜೆ ಇಲ್ಲಿನ ಅಶೋಕೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಅಮೃತಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 2019ರಲ್ಲಿ ಇಲ್ಲಿನ ಶಾಲೆಗೆ ಅನುದಾನ ಮಂಜೂರಿ ಮಾಡಿ ಹಲವು ಅನುಕೂಲತೆಯನ್ನ ಕಲ್ಪಿಸಿದ್ದೆ, ಇದರ ಜೊತೆ ಬಸ್ ವ್ಯವಸ್ಥೆಯನ್ನ ಸಹ ಇತ್ತೀಚೆಗೆ ಪ್ರಾರಂಭಿಸಿದ್ದು, ನನ್ನ ಕ್ಷೇತ್ರದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡುತ್ತಾ ಬಂದಿದ್ದೇನೆ ಎಂದ ಅವರು, ಬಡ ಹಾಲಕ್ಕಿ ಒಕ್ಕಲಿಗ ಸಮಾದವರೇ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಸರ್ಕಾರಿ ಸೌಲಭ್ಯ ಬಳಸಿಕೊಂಡು ಶಿಕ್ಷಣ ಪಡೆಯುತ್ತಿರುವುದು ಸಂತಸ ತಂದಿದ್ದು, ಊರಿನ ಅಭಿವೃದ್ಧಿಗೆ ನಿರಂತರವಾಗಿ ಜೊತೆಯಿರುತ್ತೇನೆ ಎಂದರು. ತಾವು ಕಾರ್ಯನಿರ್ವಹಿಸಿದ [illegible] ಆರ್.ಎಲ್.ಭಟ್, ಜಾನಪದ ಲೋಕ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಬಿ.ಎಸ್. ಗೌಡ, ತಾಪಂ ಮಾಜಿ ಸದಸ್ಯ ಮಹೇಶ ಶೆಟ್ಟಿ, ಭದ್ರಕಾಳಿ ಪ್ರೌಢಶಾಲೆ ಮುಖ್ಯಾಧ್ಯಾಪಕ ಸಿ.ಜಿ.ನಾಯಕ ದೊರೆ, ಉಪನ್ಯಾಸಕ ರಾಮಮೂರ್ತಿ ನಾಯಕ ಮಾತನಾಡಿದರು.ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮಾಣೇಶ್ವರ ರಾಮಾ ಗೌಡ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಮಾಜಿ ಸದಸ್ಯ ಸಂದೇಶ ಗೌಡ, ಶಾರದಾ ಮೂಡಂಗಿ, ಮೋಹನ ಮೂಡಂಗಿ, ಇಸಿಓ ದೀಪಾ ಕಾಮತ್, ನ್ಯಾಯವಾದಿ ವಿರೇಂದ್ರ ನಾಯಕ ,ಅಶೋಕೆ ಸಸ್ಯಸಂಜೀವಿನ ಆಸ್ಪತ್ರೆಯ ಡಾ. ಪತಂಜಲಿ ಶರ್ಮಾ, ಬಿ.ಐ.ಇ.ಆರ್ .ಸಿ.ಓ.ಕೇಶವ ನಾಯ್ಕ, ಸಿ.ಆರ್.ಪಿ.ಮೋಹಿನಿ ಗೌಡ, ಪತ್ರಕರ್ತ ಗಜಾನನ ನಾಯಕ ಉಪಸ್ಥಿತರಿದ್ದರು. ಶಾಲಾ ಮುಖ್ಯಾಧ್ಯಾಪಕ ನಾರಾಯಣ ನಾಯಕ ಸ್ವಾಗತಿಸಿದರು. ಶಿಕ್ಷಕಿ ಗೀತಾ ಹೆಬ್ಬಾರ ವಂದಿಸಿದರು. ದಿನೇಶ ಗೌಡ ಕಾರ್ಯಕ್ರಮ ನಿರ್ವಹಿಸಿದರು.ಶಿಕ್ಷಕ ವೃಂದ, ಶಾಲಾ ಅಭಿವೃದ್ಧಿ ಸಮಿತಿ ಊರನಾಗರಿಕರು ಸಹಕಾರ ನೀಡಿದರು.ಊರ ಗೌಡರಾದ ಮಹಾಬಲೇಶ್ವರ್ ಗೌಡ, ನಾಟಿ ವೈದ್ಯ ಬೆಳಂಬಾರದ ಹನುಮಂತ ಗೌಡ, ಜಾನಪದ ಲೋಕ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಬಿ.ಎಸ್. ಗೌಡ,ಸಮಾಜ ಸೇವಕ ವೆಂಕಟ್ರಮಣ ಗೌಡ, [illegible] ಮನೋಹರ ಪೈ ಹಾಗೂ ಈ ಶಾಲೆಯಲ್ಲಿ ಕಲಿತು ಉನ್ನತ ಶಿಕ್ಷಣ ಪಡೆದ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.



ದೇಶದ ಪ್ರಗತಿಗೆ ವಿಜ್ಞಾನ, ತಂತ್ರಜ್ಞಾನ ಪೂರಕ: ನಾಯಕ



◆ **ಅಂಕೊಲಾ:** ದೇಶದ ಪ್ರಗತಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಪೂರಕವಾಗಿದೆ ಎಂದು ಪರಿಸರ ವಿಜ್ಞಾನಿ ಡಾ.ವಿ.ಎನ್.ನಾಯಕ ತಿಳಿಸಿದರು.

ಅವರು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ, ಸರಕಾರಿ ಪ್ರೌಢಶಾಲೆ ಕೇಣಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಉಪನ್ಯಾಸ ನೀಡಿದರು. ವರ್ಷದ ಘೋಷವಾಕ್ಯವಾದ 'ವಿಜ್ಞಾನದಲ್ಲಿ ಮಹಿಳೆಯರು-ವಿಕಸಿತ ಭಾರತದ ವೇಗವರ್ಧನೆ' ಎಂಬ ವಿಷಯದ ಕುರಿತು ವಿವರಿಸಿದರು.ಸಿ.ಎಲ್.ವಿಆಭಾಕಸ್ ಬೆಂಗಳೂರು ಇದರ ಮುಖ್ಯಸ್ಥರಾದ ಜ್ಞಾನದೇವ ನಾಯಕ ಸೂರ್ವೆರವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಅವರು, ಸಿ.ವಿ.ರಾಮನ್ ಸಂಶೋಧನೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ. ವಿದ್ಯಾರ್ಥಿಗಳು ಮೂಲ ವಿಜ್ಞಾನ ದತ್ತ ಆಸಕ್ತಿ ಬೆಳೆಸಿಕೊಳ್ಳಲು ಕರೆ ನೀಡಿದರು.ಸಂಘಟಕರಾದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಬೆಂಗಳೂರಿನ ಉತ್ತರ ಕನ್ನಡ ಜಿಲ್ಲಾ ಘಟಕದ ಯೋಜನಾ ಸಂಯೋಜಕರಾದ ಡಾ.ಪ್ರಕಾಶ ಮೆಸ್ತಾರವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿದರು. ವಿಜ್ಞಾನ ಶಿಕ್ಷಕರಾದ ಸುಧೀರ ನಾಯಕರವರು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ನಾವು ಏಕೆ ಆಚರಿಸಬೇಕು ಮತ್ತು ವಿಜ್ಞಾನ ಕ್ಷೇತ್ರಕ್ಕೆ ಸಿ.ವಿ.ರಾಮನ್‌ಕೊಡುಗೆ ಕುರಿತುಉಪನ್ಯಾಸ ನೀಡಿದರು. ಮುಖ್ಯ ಶಿಕ್ಷಕಿಯರಾದ ಹರ್ಷಿತಾ ನಾಯಕ ಸ್ವಾಗತಿಸಿದರು. ಜಾಹ್ನವಿ ಸಂಗಡಿಗರು ಪ್ರಾರ್ಥಿಸಿದರು. ನೂತನಾ ನಾಯಕವಂದಿಸಿದರು. ಈಸಂದರ್ಭದಲ್ಲಿ ಸರ್ಕಾರದ ನಿರ್ದೇಶನದಂತೆ ವೈಜ್ಞಾನಿಕ ಮನೋಭಾವನೆ ಮತ್ತು ವೈಚಾರಿಕತೆ ಬೆಳೆಸಿಕೊಳ್ಳುತ್ತೇವೆ ಎಂಬ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರತಿಜ್ಞಾವಿಧಿ ಭೋಧಿಸಲಾಯಿತು.

ನಿರಂತರವಾಗಿ ಯೋಗ ಅಭ್ಯಸಿಸಿ: ಗುಡಿಗಾರ

◆ **ಅಂಕೋಲಾ:** ಯೋಗ ಕೇವಲ ಯುವಕರಿಗೆ ಮಾತ್ರ ಸೀಮಿತ ಆಗಿಲ್ಲ ಇದು ಹುಟ್ಟಿನಿಂದ ವೃದ್ಧಾಪ್ಯದವರೆಗೂ ಅವಶ್ಯಕವಾಗಿದ್ದು, ಯುವಕರಿಗೆ ಅತಿ ಅಗತ್ಯ ಯಾಕೆಂದರೆ ಇವರು ಹಲವಾರು ವರ್ಷಗಳ ಕಾಲ ಆರೋಗ್ಯಯುತ ಸಮಾಜ ಕಟ್ಟಬೇಕಾಗಿದೆ ಅವರಿಗೆ ಭವಿಷ್ಯ ನಿರ್ಮಿಸುವ ಅವಕಾಶ ಹೆಚ್ಚಿದೆ ಅದಕ್ಕೆ ಯೋಗ ಅತಿ ಅವಶ್ಯವಾಗಿದೆ. ಯೋಗ ಉತ್ತಮ ಆರೋಗ್ಯ ಒದಗಿಸುವುದರಿಂದ ಅದನ್ನು ನಿರಂತರವಾಗಿ ಅಭ್ಯಸಿಸಬೇಕು ಎಂದು ಪತಂಜಲಿ ಯೋಗ ಪೀಠದ ಪ್ರಭಾರಿಗಳಾದ ವಿನಾಯಕ ಗುಡಿಗಾರ ಹೇಳಿದರು.

ಅವರು ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯ ಬಾಸಗೋಡದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಯಲ್ಲಿ ಆಯೋಜಿಸಿದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಈ ಶಿಬಿರ ಸಂಪೂರ್ಣ ಜೀವನದ ಮೇಲೆ ಪ್ರಭಾವಬೀರುವದಲ್ಲದೆ ಮುಂದಿನ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಉಪನ್ಯಾಸಕರಾದ ಮಂಜುನಾಥ ಇಟಗಿಯವರು ಮಾತನಾಡಿ, ಇಂಥ ಶಿಬಿರ ಕುಟುಂಬ ಭಾವನೆ ಬೆಳೆಸುವುದರಿಂದ ಸಹಕಾರ ಸಮನ್ವಯದ ಮೂಲಕ ಮಾದರಿ ಆಗಿದೆ ಆ ಮೂಲಕ ಶಿಬಿರ ಅತ್ಯಂತ ಯಶಸ್ವಿ ಆಗಿದೆ ಎಂದರು ಬಿ.ಎನ್.ವರ್ಷ ಸಂಗಡಿಗರು ಪ್ರಾರ್ಥಿಸಿದರು. ವರ್ಷಿತಾ ಗೌಡ ಸ್ವಾಗತಿಸಿದರು. ಎನ್‌ಎಸ್‌ಎಸ್ ಕಾರ್ಯದರ್ಶಿ ಸ್ಮಿತಾ ಅಂಬಿಗ ವರದಿ ವಾಚಿಸಿದರು. ಪ್ರಸನ್ನ ಮರಾಠಿ ಹಾಗೂ ಪವಿತ್ರ ಹೆಗಡೆ ಅನಿಸಿಕೆ ವ್ಯಕ್ತಪಡಿಸಿದರು. ಪ್ರಶೀಲಾ ಬಡ್ಡೇಕರ್ ವಂದಿಸಿದರು.

ಎನ್‌ಎಸ್‌ಎಸ್ ಅಧಿಕಾರಿಗಳಾದ ರಾಘವೇಂದ್ರ ಅಂಕೋಲೆಕರ್ ಹಾಗೂ ಪ್ರಧಾನ ಕಾರ್ಯದರ್ಶಿ ಸೂರಜ್ ನಾಯಕ ಉಪಸ್ಥಿತರಿದ್ದರು. ಶಾಂತಲಾ ನಾಯಕ ನಿರೂಪಿಸಿದರು ಈ ಏಳು ದಿನಗಳ ಶಿಬಿರದಲ್ಲಿ 60ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪ್ರಯೋಜನ ಪಡೆದರು.



ಪಿಡಿಓ ವರ್ಗಾವಣೆ ಹಿಂಪಡೆಯಲು ಆಗ್ರಹ



◆ **ಸಿದ್ದಾಪುರ:** ತಾಲೂಕಿನ ದೊಡ್ಮನೆ ಪಂಚಾಯತದ ಗ್ರಾಮ ಅಭಿವೃದ್ಧಿ ಅಧಿಕಾರಿಯನ್ನು ಅವಧಿಗೂ ಮುನ್ನವೇ ವಿನಾ ಕಾರಣ ವರ್ಗಾವಣೆ ಮಾಡಿರುವುದನ್ನು ಗ್ರಾಮಸ್ಥರು ತೀವ್ರವಾಗಿ ಖಂಡಿಸುತ್ತೇವೆ ಎಂದು ಗ್ರಾಮಸ್ಥರಾದ ಗಣೇಶ ಭಟ್ಟ ಕಲಕ್ಕೈ ಹೇಳಿದರು. ಪಟ್ಟಣದ ಬಾಲಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದ ಪಂಚಾಯತ ಅಭಿವೃದ್ಧಿ ಅಧಿಕಾರಿಯಾಗಿದ್ದ ಉಮೇಶ ಗೌಡರ್ ನಿರೀಕ್ಷೆಗೂ ಮೀರಿ ಕೆಲಸ ಮಾಡಿದ್ದಾರೆ. ದೊಡ್ಮನೆ ಪಂಚಾಯತ ಸುಮಾರು 15 ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಹೆಚ್ಚಿನ ಪ್ರದೇಶವು ಅಡವಿಗಳ ಮಧ್ಯದಲ್ಲಿರುವುದರಿಂದ ಹೆಚ್ಚಿನ ಪಿಡಿಓಗಳು ಇಲ್ಲಿ ಕರ್ತವ್ಯ ನಿರ್ವಹಿಸಲು ಹಿಂದೇಟು ಹಾಕುತ್ತಾರೆ. ಆದರೆ ಕಳೆದ ಎರಡು ವರ್ಷಗಳಿಂದ ಉಮೇಶ ಗೌಡರ್ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರು ಕರ್ತವ್ಯಕ್ಕೆ ಬಂದ ನಂತರ ಒಂದು ಪಂಚಾಯಿತಿ ಹೇಗೆಲ್ಲಾ ಕೆಲಸ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಯಾವುದೇ ಕಾರಣವಿಲ್ಲದೇ ಅವಧಿಗೂ ಮುನ್ನ ಅವರನ್ನು ಬೇರೆಡೆ ವರ್ಗಾಯಿಸಲಾಗಿದೆ. ಇದು ನಮ್ಮ ಊರಿಗೆ ತುಂಬಲಾರದ ನಷ್ಟ ಎಂದರು. ಗ್ರಾಮಸ್ಥರಾದ ಅಶೋಕ ಕುಮಾರ ಮಾತನಾಡಿ, ತಾಲೂಕಿನಲ್ಲಿ ಒಂಬತ್ತು ಪಿಡಿಓಗಳ ಕೊರತೆ ಇದ್ದು, ಇವರ ವರ್ಗಾವಣೆಯಿಂದ ಅದು 10ಕ್ಕೆ ಏರಿಕೆಯಾಗಿದೆ. ಅವಧಿ ಮುಗಿಯುವವರೆಗೆ ನಮ್ಮಲ್ಲಿಯೇ ಕರ್ತವ್ಯ ನಿರ್ವಹಿಸುವಂತಾಗಬೇಕು. ಇನ್ನು ನಾಲ್ಕು ದಿನಗಳಲ್ಲಿ ನಮ್ಮ ಬೇಡಿಕೆ ಇಡೇರದಿದ್ದರೆ ಗ್ರಾಮಸ್ಥರೆಲ್ಲರೂ ಒಟ್ಟಾಗಿ ಪ್ರತಿಭಟನೆ ಮಾಡುತ್ತೇವೆ ಎಂದರು. ವಿನಾಯಕ ಹೆಗಡೆ ಕಡವಡಿ, ಸುಬ್ರಹ್ಮಣ್ಯ ಹೆಗಡೆ, ಪ್ರಭಾಕರ ಹಸ್ವಿಗುಳಿ, ಲೋಕೇಶ ನಾಯ್ಕ, ಮಂಜುನಾಥ ಗೌಡ, ಶೀಪಾದ ಶೇಟ್ ಇದ್ದರು.

ಸಾವಿತ್ರಿ ಬಾಯಿ ಫುಲೆ ಪ್ರಶಸ್ತಿ ಪ್ರದಾನ



◆ **ಮುಂಡಗೋಡ:** ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಮಟ್ಟದ ಶಿಕ್ಷಕರ ಶೈಕ್ಷಣಿಕ ಸಮ್ಮೇಳನದಲ್ಲಿ ಶಿರಸಿ ಶೈಕ್ಷಣಿಕ ಜಿಲ್ಲೆಯ, ತಾಲೂಕಿನ ಹಿರೇಹಳ್ಳಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಶಕೀಲಾಬೇಗಂ ಜೈಲರ್ ಇವರಿಗೆ ಸಾವಿತ್ರಿ ಬಾಯಿ ಫುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸಂದಿರುವ ಕಾರಣ ತಾಲೂಕಿನ ಸಮಸ್ತ ಶಿಕ್ಷಕರು ಮತ್ತು ಹಿರೇಹಳ್ಳಿ ಶಾಲೆಯ ಎಸ್.ಡಿ.ಎಮ್.ಸಿ.ಯವರು ಹರ್ಷ ವ್ಯಕ್ತಪಡಿಸಿದ್ದಾರೆ.



ಭಟ್ಕಳ: ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ನೀಗಿಸಬೇಕೆಂದು ಆಗ್ರಹಿಸಿ ಸಾಮಾಜಿಕ ಹೋರಾಟಗಾರ ಮತ್ತು ಉದ್ಯಮಿ ಮಾಸ್ತಪ್ಪ ನಾಯ್ಕ ಅವರು ಸಾರ್ವಜನಿಕರೊಡಗೂಡಿ ತಹಶೀಲ್ದಾರರು ಮತ್ತು ತಾಲೂಕು ಆಸ್ಪತ್ರೆಯ ಆಡಳಿತಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಅಶೋಕ ನಾಯ್ಕ, ವಿಶ್ವನಾಯ್ಕ, ಗಣೇಶ ಹಳ್ಳೇರ, ವಿನಾಯಕ ನಾಯ್ಕ ಇದ್ದರು.

ಯಕ್ಷಗಾನದ ಅರಿವು ಅಗತ್ಯ: ಶ್ರೀಗಳು

◆ **ಹೊನ್ನಾವರ:** ಕಲೆಯ ಆಸಕ್ತಿಯನ್ನು ಎಳವೆಯಲ್ಲಿಯೇ ಪ್ರೇರಣೆ ನೀಡಬೇಕು. ಕಲೆಯನ್ನು ಪ್ರೀತಿಸುವ ಸಮಾಜ ನಿರ್ಮಾಣವಾಗಬೇಕು ಎಂದು ಎಡನೀರು ಮಠದ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರು ನುಡಿದರು. ಕಡತೋಕದ ಜನತಾ ವಿದ್ಯಾಲಯದ ಆವರಣದಲ್ಲಿ ಯಕ್ಷರಂಗದ ಸಂಯೋಜನೆಯಲ್ಲಿ ಆಯೋಜಿಸಿದ ಯಕ್ಷಗಾನ ಭಾಗವತರಾಗಿದ್ದ ದಿ. ಕಡತೋಕ ಮಂಜುನಾಥ ಭಾಗವತ ಅವರ ನೆನಪಿನ ಕಡತೋಕ ಕೃತಿ-ಸ್ಮೃತಿ ವಿಂಶತಿ ಯಕ್ಷರಂಗೋತ್ಸವದಲ್ಲಿ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು. ಇವತ್ತಿನ ಮಕ್ಕಳಿಗೆ ಯಕ್ಷಗಾನದ ಅರಿವು ಆಗಬೇಕು. ಆಗ ಅದು ಹೆಚ್ಚು ಔಚಿತ್ಯಪೂರ್ಣವಾಗುವುದು. ಕಡತೋಕ ಮಂಜುನಾಥ ಭಾಗವತರು ಅವರದ್ದೇ ಆದ ಶೈಲಿಯನ್ನು ಬಿಟ್ಟು ಹೋಗಿದ್ದಾರೆ. ಅವರ ನೆನಪು ಇವತ್ತಿನ ಕಲಾವಿದರಿಗೆ, ಕಲಾಸಕ್ತರಿಗೆ ಆದರ್ಶವಾಗಬೇಕು ಎಂದು ನುಡಿದರು. ಯಕ್ಷಗಾನ ವಿದ್ವಾಂಸರಾದ ಡಾ. ಎಂ.ಪ್ರಭಾಕರ ಜೋಶಿ, ವಿದ್ವಾನ್ ಉಮಾಕಾಂತ ಭಟ್ಟ ಅವರನ್ನು ಸನ್ಮಾನಿಸಲಾಯಿತು. ಪ್ರಶಸ್ತಿ ಸ್ವೀಕರಿಸಿದ ಡಾ. ಎಂ. ಪ್ರಭಾಕರ ಜೋಶಿ, ವಿದ್ವಾನ ಉಮಾಕಾಂತ ಭಟ್, ಕಾಂಗ್ರೆಸ್ ಧುರೀಣೆ ಸುಷ್ಮಾ ರೆಡ್ಡಿ, ಅರ್ಥಧಾರಿ ಮೋಹನ ಹೆಗಡೆ ಹೆರವಟ್ಟಾ ಮಾತನಾಡಿದರು. ಪತ್ರಕರ್ತ ಶಶಿಧರ ಹೆಗಡೆ ನಂದಿಕಲ್ಲು ಅಭಿನಂದನಾ ಮಾತನಾಡಿದರು. ಯಕ್ಷರಂಗೋತ್ಸವದ ಸಂಘಟನಾ ಸಮಿತಿ ಅಧ್ಯಕ್ಷ ಶಿವಾನಂದ ಹೆಗಡೆ ಕಡತೋಕ ಇದ್ದರು. ವಕೀಲ ಸತೀಶ ಭಟ್ಟ ಉಳಗೆರೆ ಸ್ವಾಗತಿಸಿದರು. ಸಂಘಟಕ ಗೋಪಾಲಕೃಷ್ಣ ಭಾಗವತ ವಂದಿಸಿದರು. ನಂತರ 'ಬ್ರಹ್ಮಕಪಾಲ' ಯಕ್ಷಗಾನ ಪ್ರದರ್ಶನ ನಡೆಯಿತು.



ರೋಗ ಮುಕ್ತ ಸಮಾಜಕ್ಕೆ ಯೋಗ ಸಹಕಾರಿ



◆ **ದಾಂಡೇಲಿ:** ಸಹಜ ಯೋಗ ಧ್ಯಾನ ಕೇಂದ್ರ ದಾಂಡೇಲಿ ಇವರ ಆಶ್ರಯದಡಿ ನಗರದ ಕಾರ್ಮಿಕ ಭವನದಲ್ಲಿ ಆಯೋಜಿಸಲಾಗಿದ್ದ ಸಹಜ ಯೋಗ ಉಚಿತ ಧ್ಯಾನ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ರಾಜು ಮಂಗಳವೇಡೆ ಅವರು ಸಹಜ ಯೋಗವು 1970 ರಲ್ಲಿ ಶ್ರೀ ಮಾತಾಜಿ ನಿರ್ಮಲಾ ದೇವಿ ಅವರಿಂದ ಸ್ಥಾಪಿಸಲ್ಪಟ್ಟ ಒಂದು ವಿಶಿಷ್ಟ ಧ್ಯಾನ ಪದ್ಧತಿಯಾಗಿದ್ದು, ಇದು ಸುಪ್ತ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸುವ ಮೂಲಕ ಆಲೋಚನೆಯಿಲ್ಲದ ಅರಿವು ಮತ್ತು ಆತ್ಮಸಾಕ್ಷಾತ್ಕಾರವನ್ನು ಸಾಧಿಸಲು ಸಹಾಯ ಮಾಡುತ್ತದೆ. ಇದು ಸಂಪೂರ್ಣ ಉಚಿತ ಸರಳ ಮತ್ತು ದೈಹಿಕ ಮಾನಸಿಕ ಹಾಗೂ ಆಧ್ಯಾತ್ಮಿಕ ಸಮತೋಲನವನ್ನು ಒದಗಿಸುವ ಆಧುನಿಕ ಯೋಗ ಮಾರ್ಗವಾಗಿದೆ ಎಂದ ಅವರು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಹಜ ಯೋಗ ಅತ್ಯಂತ ಪರಿಣಾಮಕಾರಿಯಾಗಿದೆ ಎಂದರು. ಈ ಸಂದರ್ಭದಲ್ಲಿ ದಾಂಡೇಲಿಯ ಸಹಜ ಯೋಗ ಉಚಿತ ಧ್ಯಾನ ಕೇಂದ್ರದ ಸಂಯೋಜಕ ರಾಘವೇಂದ್ರ ಆಚಾರಿ ಹಾಗೂ ಕೇಂದ್ರದ ಸದಸ್ಯರಾದ ಆನಂದ ಚೌಗಲಾ, ಶರಣಪ್ಪ ಶಿರಬಡಗಿ, ಹುಬ್ಬಳ್ಳಿ ಸಹಜ ಯೋಗ ಕೇಂದ್ರದ ರವಿ ನಾಯ್ಕ, ಪಂಚಾಕ್ಷರಿ ಮಠದ, ಬೆಂಗಳೂರಿನ ಸಹಜ ಯೋಗ ಕೇಂದ್ರದ ಹನುಮ ರಾಯುಡು, ಕೃಷ್ಣ, ರಾಧಾಕೃಷ್ಣ ಉಪಸ್ಥಿತರಿದ್ದರು. ಗುರು ಮತ್ತು ಗಿರೀಶ ಬಳಗದವರಿಂದ ಭಜನಾ ಕಾರ್ಯಕ್ರಮ ಜರುಗಿತು.

ಸಂಸ್ಕೃತದಿಂದ ಧಾರ್ಮಿಕ ಅಲ್ಗಾರಿದಮ್: ಮುಕುಂದ

ಬೆಂಗಳೂರು: ಯುಗಧರ್ಮ ಅಥವಾ ಯುಗಾನುಕೂಲ ಪರಿವರ್ತನೆಗೆ ಆಚಾರ್ಯ ರಾಮಚಂದ್ರ ಭಟ್ಟ ಕೋಟೆಮನೆ ಅವರು ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ. ಮುಂದಿನ ಪೀಳಿಗೆಗೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ ಎಂದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಸಹಸರಕಾರ್ಯವಾಹ ಮುಕುಂದ ಸಿ.ಆರ್. ಅಭಿಪ್ರಾಯಪಟ್ಟಿದ್ದಾರೆ.

ಚನ್ನೇನಹಳ್ಳಿಯ ಜನಸೇವಾ ಟ್ರಸ್ಟ್‌ನ ವೇದ ವಿಜ್ಞಾನ ಗುರುಕುಲಮ್ ಆವರಣದಲ್ಲಿ ವೇದ ವಿಜ್ಞಾನ ಶೋಧ ಸಂಸ್ಥಾನಮ್ ಟ್ರಸ್ಟ್, ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ ತ್ರಿಪಾತ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದಿನಚರ್ಯ, ಅಧ್ಯಾಪನ, ನಡವಳಿಕೆ, ಮೌಲ್ಯಗಳು ಎಲ್ಲವನ್ನು ಅವರು ಸ್ವಂತ ಪರಿಶ್ರಮದಿಂದ ನಿರ್ಮಾಣ ಮಾಡಿದ್ದಾರೆ. ಪ್ರಾಚೀನ ಗುರುಕುಲ ಪದ್ಧತಿ ಈಗಿನ ಆಧುನಿಕ ಕಾಲಕ್ಕೆ ಹೇಗಿರಬೇಕೆಂದು ರೂಪಿಸಿದ್ದಾರೆ. ಗುರುಶಿಷ್ಯ ಪರಂಪರೆಯನ್ನು ಕೇವಲ ಗುರುಕುಲದಲ್ಲಿ ಸ್ಥಾಪಿಸಿರುವುದಲ್ಲ, ಇದನ್ನು ಎಲ್ಲಿ ಬೇಕಾದರೂ ತೆಗೆದುಕೊಂಡು ಹೋಗಬಹುದಾದ ಮಾದರಿಯಲ್ಲಿ ರೂಪಿಸಲಾಗಿದೆ ಎಂದು ವಿವರಿಸಿದರು.

ಕೃತಕ ಬುದ್ಧಿಮತ್ತೆ (ಎಐ)ಯಲ್ಲಿ ಬಹಳಷ್ಟು ಪ್ರಗತಿಯಾಗುತ್ತಿದೆ. ಸಂಸ್ಕೃತ ಮತ್ತು ಜರ್ಮನಿ ಈ ಎರಡು ಭಾಷೆಗಳ ವ್ಯಾಕರಣದಲ್ಲಿ ತುಂಬಾ ಸಾಮ್ಯವಿದೆ. ಆದ್ದರಿಂದ ಈ ಎರಡು ಭಾಷೆಗಳಲ್ಲಿ ಅಲ್ಗಾರಿದಮ್ (ಕ್ರಮಾವಳಿ) ಬರೆಯುವುದು ಮತ್ತು ಈ ಎರಡು ಭಾಷೆಗಳನ್ನು ಗೊತ್ತಿಲ್ಲದೇ ಇರುವವರು ಕ್ರಮಾವಳಿ ಬರೆಯುವುದು. ಎರಡರ ತೌಲನಿಕ ಅಧ್ಯಯನ ನಡೆಸಲಾಗುತ್ತಿದೆ. ಬೇರೆ ಭಾಷೆಯ ಮನಸ್ಥಿತಿಯ ಆಧಾರದಲ್ಲಿ ಅಲ್ಗಾರಿದಮ್ ಬರೆದರೆ ಧಾರ್ಮಿಕ ಪ್ರಜ್ಞೆ ಇರುವುದಿಲ್ಲ, ಸಂಸ್ಕೃತದಲ್ಲಿ ರಚಿಸುವ ಕ್ರಮಾವಳಿಗೆ ಧಾರ್ಮಿಕ ಮುಖವಿದೆ. ಇದನ್ನು ಧಾರ್ಮಿಕ ಅಲ್ಗಾರಿದಮ್ ಎಂದು ಕರೆಯಲಾಗುತ್ತಿದೆ. ಎಂದು ಮುಕುಂದ ಅವರು ವಿವರಿಸಿದರು. ಇವತ್ತಿನ ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಎಲ್ಲವೂ ಬೆಳೆಯುತ್ತಿದ್ದಂತೆ ಧಾರ್ಮಿಕ ಪ್ರಜ್ಞೆಯ ಅವಶ್ಯಕತೆ ಹೆಚ್ಚು ಇದೆ. ಆಧುನಿಕ ತಂತ್ರಜ್ಞಾನ ಬೇಕು. ಅದರೊಳಗೆ ಧಾರ್ಮಿಕತೆಯ ದೃಷ್ಟಿ ಇರಬೇಕು. ಇಂತಹ ಯುಗಧರ್ಮದ ವಿಶಿಷ್ಟತೆ ಭಾರತೀಯ ದೃಷ್ಟಿಯಿಂದ ಜಗತ್ತಿಗೆ ಕೊಡಬಹುದಾದ ಕೊಡುಗೆಯನ್ನು ರಾಮಚಂದ್ರ ಭಟ್ಟ ಅವರು ಉಳಿಸಿ ಬೆಳೆಸಿದ್ದಾರೆ ಎಂದು ಹೇಳಿದರು.

ಈಗ ಘೋಷಣೆಯಾಗಿರುವ ಅಮೃತಕಾಲದಲ್ಲಿ ನಾವು ವಿಕಾಸ ಮಾರ್ಗದಲ್ಲಿ ಸಾಗಬೇಕು. ಅದರಲ್ಲಿ ಗುರುಕುಲ ಶಿಕ್ಷಣ ಬಹಳ ಮಹತ್ವವನ್ನು ಪಡೆಯುತ್ತದೆ. ಭಾರತೀಯ ಪರಂಪರೆ, ಸಂಸ್ಕೃತ ಪರಂಪರೆ, ಶಾಸ್ತ್ರ ಪರಂಪರೆಯು ಮಹತ್ವಪೂರ್ಣವಾಗಿದೆ. ಸಂಸ್ಕೃತ ಎಂದರೆ ಕೇವಲ ಭಾಷೆಯಲ್ಲ, ವೇದದ ಮಂತ್ರ ಉಚ್ಚಾರಣೆಯಿಂದ ಅಂತರಿಕ್ಷದಲ್ಲಿ ಏನು ಪ್ರಭಾವವಾಗುತ್ತದೆ ಎನ್ನುವ ಅಧ್ಯಯನ ಮಾಡಲಾಗುತ್ತಿದೆ. ಸಂಸ್ಕೃತವು ವಿಶ್ವ ಕಲ್ಯಾಣಕ್ಕೆ, ಮಾನವನ ಸ್ವಾಸ್ಥ್ಯಕ್ಕೆ, ಬ್ರಹ್ಮಾಂಡ ಮತ್ತು ಪಿಂಡಾಂಡಗಳ ಶುದ್ಧೀಕರಣಕ್ಕೆ ಸಾಧನವಾಗುತ್ತಿದೆ ಎಂಬುದನ್ನು ಅತ್ಯಾಧುನಿಕ ತಂತ್ರಜ್ಞಾನ ಇಂದು ಸಿದ್ಧಪಡಿಸುತ್ತಿದೆ ಎಂದು ವಿವರಿಸಿದರು.

ಇದೇ ವೇಳೆ ಆಚಾರ್ಯ ಡಾ. ರಾಮಚಂದ್ರ ಭಟ್ಟ ಕೋಟೆಮನೆ ಅವರ ರಚಿಸಿದ 11 ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಸ್ವಾಮಿ ಆತ್ಮಪ್ರಿಯಾನಂದ, ಆರ್‌ಎಸ್‌ಎಸ್ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ್ ಸೋನಿ, ಡಾ. ಎಚ್.ಆರ್. ನಾಗೇಂದ್ರ, ಯಜ್ಞೇಶ್ವರ ಶಾಸ್ತ್ರೀ, ಕುಟುಂಬ ಶಾಸ್ತ್ರೀ ಮಾತನಾಡಿದರು. ಜನಸೇವಾ ಟ್ರಸ್ಟ್ ಗೌರವ ಕಾರ್ಯದರ್ಶಿ ಅ.ಸಾ. ನಿರ್ಮಲಕುಮಾರ್ ವೇದಿಕೆಯಲ್ಲಿದ್ದರು.

ಸವಾಲಿನ ಪ್ರಯೋಗ

ಅಭಿವಾದನವನ್ನು ಸ್ವೀಕರಿಸಿದ ಆಚಾರ್ಯ ರಾಮಚಂದ್ರ ಭಟ್ಟ ಕೋಟೆಮನೆ ಮಾತನಾಡಿ, ಗುರುಕುಲದಲ್ಲಿ ಪ್ರಯೋಗ, ಪರಿಶೀಲನಾ ಮತ್ತು ಪರಿಷ್ಕಾರ ಎಂಬ ಸೂತ್ರ ಇಟ್ಟುಕೊಂಡಿದ್ದೇವೆ. ಈಗಿನ ಕಾಲದಲ್ಲಿ ಗುರುಕುಲ ಎಂಬುದು ಬಹಳ ಸವಾಲಿನ ಪ್ರಯೋಗವಾಗಿದೆ. ದಿನದ 24 ತಾಸು ವಿದ್ಯಾರ್ಥಿಗಳೊಂದಿಗೆ ಗುರುಕುಲದಲ್ಲಿ ಸಹವಾಸದಲ್ಲಿರುತ್ತೇವೆ. ಕೋವಿಡ್ ಬಂದಾಗಲೇ ಯುವ ಮಾನಸದಲ್ಲಿ ಪ್ರತ್ಯಕ್ಷ ಶಿಕ್ಷಣದ ಬಗ್ಗೆ ಗೌರವ ಉಳಿದಿಲ್ಲ. ಈಗ ಎಐ ಬರುತ್ತಿದೆ. ಹೀಗಿರುವಾಗ ಸಹವಾಸದಲ್ಲಿ ಯುವ ಮಾನಸವನ್ನು ತಿದ್ದುವ, ಅದನ್ನು ಉದಾರೀಕರಿಸುವ ಬಹುದೊಡ್ಡ ಸವಾಲು ಗುರುಕುಲದ್ದಾಗಿದೆ ಎಂದು ಹೇಳಿದರು.

ಮ್ಯಾರಥಾನ್ ಓಟ



ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ನಡೆದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಮ್ಯಾರಥಾನ್ ಓಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹಾದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ ಹಾಗೂ ನಟ ವಿನಯ್ ರಾಜಕುಮಾರ್ ಭಾಗವಹಿಸಿದ್ದರು.

ಕಿರುಸುದ್ದಿ

ಪ್ರಾಚಾರ್ಯರಿಗೆ ಡಿಡಿಪಿಯು ನೋಟಿಸ್

ಚಿತ್ರದುರ್ಗ: ದ್ವಿತೀಯ ಪಿಯುಸಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳಿಗೆ ಶುಭ ಹಾರೈಸಲು ಕಾಲೇಜಿನ ಬಳಿ ಸಂಸದ ಕಾರಜೋಳ ಭೇಟಿ ನೀಡಿದ ಕಾರಣ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ನೋಟಿಸ್ ಜಾರಿ ಮಾಡಿದ್ದಾರೆ. ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ಪಿಯುಸಿ ಪರೀಕ್ಷೆ ಸಂಬಂಧ ಮಕ್ಕಳಿಗೆ ಧೈರ್ಯ ತುಂಬಿ ಶುಭಕೋರಲು ಸಂಸದ ಗೋವಿಂದ ಕಾರಜೋಳ ಅವರು ಅಲ್ಲಿಗೆ ಭೇಟಿ ನೀಡಿದ್ದರು. ಈ ಸಂಬಂಧ ಕಾಲೇಜಿನ ಪ್ರಾಚಾರ್ಯ ಎನ್.ದೊಡ್ಡಪ್ಪ ಅವರಿಗೆ ನೋಟೀಸ್ ನೀಡಲಾಗಿದೆ. ಸಂಸದ ಗೋವಿಂದ ಕಾರಜೋಳ ಮತ್ತವರ ಬೆಂಬಲಿಗರು ಹಾಗೂ ಮಾಧ್ಯಮದವರು ಕಾಲೇಜು ಆವರಣಕ್ಕೆ ಆಗಮಿಸಿದ್ದು, ಪರೀಕ್ಷಾ ನಿಯಮಾವಳಿಗಳ ಉಲ್ಲಂಘನೆಯಾಗಿದೆ. ಇದರಿಂದ ಇಲಾಖೆಗೆ ಮುಜುಗರ ಉಂಟಾಗಿದೆ. ಹಾಗಾಗಿ ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಕಾರಣ ಕೇಳಿ ನೋಟೀಸ್ ನೀಡಲಾಗಿದೆ. ಪರೀಕ್ಷಾ ಕೇಂದ್ರದ ಬಳಿ ನಿಷೇಧಾಜ್ಞೆ ಇದ್ದಾಗ್ಯೂ ಅನಧಿಕೃತ ಪ್ರವೇಶ ಮಾಡಲಾಗಿದೆ ಎಂಬ ಕಾರಣ ಇಟ್ಟುಕೊಂಡು ಪ್ರಾಂಶುಪಾಲರಿಗೆ ನೋಟೀಸ್ ನೀಡಲಾಗಿದೆ. ಈ ಕುರಿತು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ಕೇಳಿಬಂದಿದೆ. ಜನಪ್ರತಿನಿಧಿಗಳು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಬಾರದೆ? ಪರೀಕ್ಷೆ ಬರೆಯುವ ಮಕ್ಕಳಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಭೇಟಿ ನೀಡಿದ್ದರಲ್ಲಿ ತಪ್ಪೇನಿದೆ? ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿವೆ.

ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಬದ್ಧ: ಎಂಬಿ ಪಾಟೀಲ



ವಿಜಯಪುರ (ಆಲಮಟ್ಟಿ): ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಯೋಜನೆ ಅನುಷ್ಠಾನಕ್ಕೆ ನಮ್ಮ ಸರಕಾರ ಬದ್ಧವಾಗಿದ್ದು, ಯಾವುದೇ ಕಾರಣಕ್ಕೂ ಈ ಯೋಜನೆ ಅನುಷ್ಠಾನ ಮುಂದೂಡದೇ ಬರುವ ಎರಡ್ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಡಾ.ಎಂ.ಬಿ. ಪಾಟೀಲ ಹೇಳಿದರು. ಜಲಸಂಪನ್ಮೂಲ ಇಲಾಖೆ, ಕೃಷ್ಣಾ ಭಾಗ್ಯ ಜಲ ನಿಗಮದ ಸಹಯೋಗದಲ್ಲಿ ಭಾನುವಾರ ಆಲಮಟ್ಟಿಯಲ್ಲಿ ನಿರ್ಮಾಣವಾದ ಜಲ ಮನೋರಂಜನಾ ಉದ್ಯಾನವನ ಉದ್ಘಾಟಿಸಿ ಅವರು ಮಾತನಾಡಿದರು. ಆಲಮಟ್ಟಿ ಅಣೆಕಟ್ಟನ್ನು 524 ಮೀಟರ್‌ವರೆಗೆ ಎತ್ತರಿಸಲು ಸರ್ಕಾರ ಬದ್ಧವಾಗಿದೆ. ಜಲಾಶಯವನ್ನು ಎತ್ತರಿಸುವುದರಿಂದ 75 ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ. 20 ಹಳ್ಳಿಗಳು ಸ್ಥಳಾಂತರಗೊಳ್ಳುತ್ತವೆ. ಈ ಬೃಹತ್ ಯೋಜನೆ ಅನುಷ್ಠಾನಕ್ಕೆ ದೊಡ್ಡ ಪ್ರಮಾಣದ ಅನುದಾನ ಬೇಕಾಗುತ್ತದೆ ಇದನ್ನು ಅವಳಿ ಜಿಲ್ಲೆಯ ಜನಪ್ರತಿನಿಧಿಗಳೆಲ್ಲ ಸೇರಿ, ಸಚಿವ ಸಂಪುಟದಲ್ಲಿ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಯಾವುದೇ ಕಾರಣಕ್ಕೂ ಈ ಯೋಜನೆ ಮುಂದೂಡಲಿಕ್ಕಾಗಲ್ಲ ಎಂಬ ಬೇಡಿಕೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾಗಿ ಸಚಿವರು ತಿಳಿಸಿದರು.

ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿ | ವಿಮಾನ ಸಂಚಾರದಲ್ಲಿ ವ್ಯತ್ಯಯ

ಕನ್ನಡಿಗರಿಗೂ ತಟ್ಟಿದ ಯುದ್ಧದ ಬಿಸಿ



ಬೆಂಗಳೂರು: ಇರಾನ್ ಮತ್ತು ಇಸ್ರೇಲ್ ನಡುವಿನ ಉದ್ವಿಗ್ನತೆಯಿಂದ ಮಧ್ಯಪ್ರಾಚ್ಯದ ಹಲವು ದೇಶಗಳಿಗೆ ವ್ಯಾಪಿಸಿದ್ದು, ಭದ್ರತಾ ಆತಂಕ ಹೆಚ್ಚಿಸಿದೆ. ವಿಮಾನ ಸಂಚಾರದಲ್ಲಿ ವ್ಯತ್ಯಯದ ಪರಿಣಾಮವಾಗಿ ದುಬೈ, ಬಹ್ರೇನ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇರಾನ್–ಇಸ್ರೇಲ್ ಯುದ್ಧದ ಪರಿಣಾಮವಾಗಿ ಮಧ್ಯಪ್ರಾಚ್ಯದ ಹಲವು ರಾಷ್ಟ್ರಗಳಲ್ಲಿ ಭಯ ಮತ್ತು ಆತಂಕದವಾತಾವರಣ ನಿರ್ಮಾಣವಾಗಿದೆ. ವಿಶೇಷವಾಗಿ ಬಹ್ರೇನ್ ಮತ್ತು ದುಬೈ ನಗರಗಳು ಭದ್ರತಾ ಕ್ರಮಗಳು ಕಠಿಣಗೊಂಡಿದ್ದು, ವಿಮಾನ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಈ ಬೆಳವಣಿಗೆಯಿಂದಾಗಿ ವಿದೇಶ ಪ್ರವಾಸದಲ್ಲಿದ್ದ ಮತ್ತು ಉದ್ಯೋಗ ನಿಮಿತ್ತ ತೆರಳಿದ್ದ ಅನೇಕ ಕನ್ನಡಿಗರು ಅಲ್ಲಿ ಸಿಲುಕಿಕೊಂಡಿದ್ದಾರೆ.

ಬಹ್ರೇನ್ ರಾಜಧಾನಿ ಮನಾಮಾ ನಗರದಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಅಂಗಡಿಹಳ್ಳಿ ಗ್ರಾಮದ ಪಂಜು, ಜಮುನ, ಸುರೇಂದ್ರ ಪ್ರಸಾದ್, ರತೀಶ್ ಹಾಗೂ ಮೈಸೂರು ಮೂಲದ ನೇತ್ರಾವತಿ ಸೇರಿದಂತೆ ಒಟ್ಟು ಆರು ಮಂದಿ ಕನ್ನಡಿಗರು ಸಿಲುಕಿದ್ದಾರೆ. ತಾವು ವಾಸಿಸುತ್ತಿರುವ ಕಟ್ಟಡದ ಪಕ್ಕದಲ್ಲೇ ಬಾಂಬ್ ಸ್ಫೋಟವಾಗುತ್ತಿರುವುದಾಗಿ ಅವರು ತಿಳಿಸಿದ್ದು, ಅವರ ಕುಟುಂಬಸ್ಥರು ತೀವ್ರ ಆತಂಕದಲ್ಲಿದ್ದಾರೆ. ತಮ್ಮವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದ್ದಾರೆ.

ಬಾಗಲಕೋಟೆ ವಿದ್ಯಾರ್ಥಿಗಳು ಸುರಕ್ಷಿತ





ಬಾಗಲಕೋಟೆ (ಬೀಳಗಿ): ಇರಾನ್–ಅಮೆರಿಕಾ–ಇಸ್ರೇಲ್–ದುಬೈ ಯುದ್ಧದ ಕರಿನೆರಳಿನಲ್ಲಿ ಇಬ್ಬರು ಬಾಗಲಕೋಟೆ ಜಿಲ್ಲೆಯವರು ಯಾವುದೇ ಭಯ ಇಲ್ಲದೆ ಸುರಕ್ಷಿತರಾಗಿದ್ದಾರೆ. ಜಿಲ್ಲೆಯ ಬೀಳಗಿ ಪಟ್ಟಣದ ನಿವಾಸಿಯಾಗಿರುವ ಗಿರೀಶ ಕೆರೂರ. ಸಾಫ್ಟವೇರ್ ಉದ್ಯೋಗಿಯಾಗಿರುವ ಇವರು ಬೆಂಗಳೂರಿಂದ ದುಬೈ ಮಾರ್ಗವಾಗಿ ಪ್ಯಾರಿಸ್‌ಗೆ ಹೊರಟಿದ್ದರು. ವಿಮಾನ ಹಾರಾಟ ರದ್ದುಗೊಂಡ ಪರಿಣಾಮ ಪ್ಯಾರಿಸ್‌ಗೆ ತೆರಳು ಸಾಧ್ಯವಾಗದೇ ದುಬೈನ ಅಬುದಾಬಿಯಲ್ಲಿ ಸಿಲುಕಿದ್ದಾರೆ. ಬಾಗಲಕೋಟೆ ನಗರ ಮೂಲದ ಮತ್ತೊಬ್ಬ ಧ್ರುವ ಹೊಕ್ರಾಣಿ ಎಂಬಿಎ ವಿದ್ಯಾರ್ಥಿ ದುಬೈನ ಮಿಡಲೇಸೆಕ್ಸ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾರೆ. ಬಾಗಲಕೋಟೆ ವಿದ್ಯಾರ್ಥಿ ವಿಡಿಯೊ ಕರೆ ಮೂಲಕ ಪೋಷಕರ ಜೊತೆ ಮಾತಾಡಿದ ಧೃವ ಹೊಕ್ರಾಣಿ, ಇಲ್ಲಿ ಯಾವುದೇ ತೊಂದರೆಯಿಲ್ಲ, ಸಾಮಾಜಿಕ ಜಾಲತಾಣದಲ್ಲಿ ಸುಮ್ನೆ ಹೈಪ್ ಆಗಿದೆ. ಆದರೆ ಯಾವುದೇ ಆತಂಕ ಪಡುವ ಅಗತ್ಯ ಇಲ್ಲ ಅಂತ ತಿಳಿಸಿದ್ದಾರೆ.

ಶಾಸಕ ನಾರಾ ಭರತ್ ರೆಡ್ಡಿ ಪರದಾಟ!

ದುಬೈನಲ್ಲಿ ಕೂಡ ಪರಿಸ್ಥಿತಿ ಉದ್ವಿಗ್ನವಾಗಿದ್ದು, ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಪ್ರವಾಸದ ವೇಳೆ ಅಲ್ಲೇ ಸಿಲುಕಿಕೊಂಡಿದ್ದಾರೆ. ಅವರು ಉಳಿದಿದ್ದ ಹೋಟೆಲ್ ಸಮೀಪ ಮಿಸೈಲ್ ದಾಳಿ ನಡೆದಿದ್ದು, ಅವರು ಸುರಕ್ಷಿತವಾಗಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಶಾಸಕ ಬಿ. ನಾಗೇಂದ್ರ ಅವರು ಮುಖ್ಯಮಂತ್ರಿ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರೊಂದಿಗೆ ಮಾತನಾಡಿ ದುಬೈನಲ್ಲಿ ಸಿಲುಕಿರುವ ಜನರ ಕುರಿತು ಮಾಹಿತಿ ನೀಡಿದ್ದಾರೆ. ಮಾರ್ಚ್ 2ರವರೆಗೆ ವಿಮಾನ ಹಾರಾಟ ಇರುವುದಿಲ್ಲವೆಂದು ತಿಳಿಸಲಾಗಿದೆ. ಬಳ್ಳಾರಿಯಿಂದ ಫೆಬ್ರವರಿ 24ರಂದು ದುಬೈ ಪ್ರವಾಸಕ್ಕೆ ತೆರಳಿದ್ದ 35 ಮಂದಿ ಪ್ರವಾಸಿಗರು ವಾಪಸ್ಸಾಗಬೇಕಿದ್ದ ವೇಳೆಯಲ್ಲಿ ಯುದ್ಧ ಭೀತಿ ಹಿನ್ನೆಲೆಯಲ್ಲಿ ಅಲ್ಲೇ ಉಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇ ರೀತಿ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಒಟ್ಟು 50 ಮಂದಿ ಪ್ರವಾಸಿಗರು ವಿಮಾನ ರದ್ದಾದ ಪರಿಣಾಮ ಸಂಕಷ್ಟ ಅನುಭವಿಸುತ್ತಿದ್ದಾರೆ.

ದುಬೈನಲ್ಲಿ ಸಿಲುಕಿದ ಕೋಲಾರದ ದಂಪತಿ



ಕೋಲಾರ ನಗರದ ವಿಜಯ ಮೆಡಿಕಲ್ಸ್‌ನ ಮಾಲೀಕ ಮೋಹನ್–ರಮಣಿ ದಂಪತಿಯೇ ದುಬೈನಲ್ಲಿ ಸಿಲುಕಿಕೊಂಡವರಾಗಿದ್ದು, ಇವರು ದುಬೈ ಪ್ರವಾಸಕ್ಕೆ ತೆರಳಿದ್ದು, ದಂಪತಿ 6 ದಿನಗಳ ಪ್ರವಾಸಕ್ಕೆಂದು ಸಾಯಿ ಟ್ರಾವಲ್ಸ್‌ನ ಪ್ಯಾಕೇಜ್ ಟ್ರಿಪ್‌ನಲ್ಲಿ ತೆರಳಿದ್ದರು ಎನ್ನಲಾಗಿದೆ.

ದುಬೈನಲ್ಲಿ ಸಿಲುಕಿದ ಮನ್‌ಮುಲ್ ನಿರ್ದೇಶಕ ಕೆ.ರವಿ

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಮನ್‌ಮುಲ್ ನಿರ್ದೇಶಕ ಕೆ.ರವಿ(ಡಾಲು ರವಿ) ದುಬೈನಲ್ಲಿ



ಸಿಲುಕಿದ್ದಾರೆ.ಕಳೆದ ವಾರ ದುಬೈನಲ್ಲಿ ಸಂಘಟನೆಯೊಂದು ಆಯೋಜಿಸಿದ್ದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಡಾಲು ರವಿ ದುಬೈಗೆ ತೆರಳಿದ್ದರು. ಕಾರ್ಯಕ್ರಮ ಮುಗಿಸಿ ಅವರು ಸ್ವದೇಶಕ್ಕೆ ಹಿಂತಿರಬೇಕಾಗಿತ್ತು. ದುಬೈನಿಂದ ತಮ್ಮ ಕುಟುಂಬಸ್ಥರಿಗೆ ಕರೆ ಮಾಡಿರುವ ಡಾಲು ರವಿ ತಾವು ದುಬೈನ ಖಾಸಗಿ ಹೋಟೆಲ್ ಒಂದರಲ್ಲಿದ್ದು ಕ್ಷೇಮವಾಗಿದ್ದೇನೆ. ನಾನಿರುವ ಜಾಗದಲ್ಲಿ ಸದ್ಯಕ್ಕೆ ಯಾವುದೇ ಸಮಸ್ಯೆಯಿಲ್ಲ, ನನ್ನಂತೆಯೇ ಹಲವಾರು ಭಾರತೀಯರು ಇಲ್ಲಿ ಸಿಲುಕಿಕೊಂಡಿದ್ದಾರೆ. ನಾವು ಈಗಾಗಲೇ ಭಾರತೀಯ ರಾಯಭಾರಿ ಕಚೇರಿಯನ್ನು ಸಂಪರ್ಕಿಸಿದ್ದು ನನ್ನ ಕುಟುಂಬಸ್ಥರು ಸೇರಿದಂತೆ ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ. ದುಬೈನಿಂದ ವಿಮಾನಗಳ ಹಾರಾಟ ಅಥವಾ ಭಾರತ ಸರ್ಕಾರದ ಸಹಾಯ ದೊರಕಿದ ಕೂಡಲೇ ನಾನು ಕೆ.ಆರ್.ಪೇಟೆಗೆ ಹಿಂತಿರುಗುವುದಾಗಿ ಡಾಲು ರವಿ ತಮ್ಮ ಕುಟುಂಬಸ್ಥರಿಗೆ ತಿಳಿಸಿದ್ದಾರೆ.



19 ವಿಮಾನಗಳು ರದ್ದು

ಇಸ್ರೇಲ್–ಇರಾನ್ ಯುದ್ಧ ಹಿನ್ನೆಲೆಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 19ಕ್ಕೂ ಹೆಚ್ಚಿನ ಅಂತಾರಾಷ್ಟ್ರೀಯ ವಿಮಾನಗಳ ಹಾರಾಟ ರದ್ದುಗೊಂಡಿದೆ. ಇದರಿಂದ ಪ್ರಯಾಣಿಕರು ಪರದಾಡುವಂತಾಯಿತು. ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾಗಿರುವ ಕಾರಣ ಅನೇಕ ಮಧ್ಯಪ್ರಾಚ್ಯ ದೇಶಗಳಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ ಮತ್ತು ಕೆಲ ದೇಶಗಳ ವಾಯು ಪ್ರದೇಶದಲ್ಲಿ ವಿಮಾನಗಳ ಹಾರಾಟ ನಿಷೇಧಿಸಲಾಗಿದೆ. ಹೀಗಾಗಿ ಶನಿವಾರ ಮತ್ತು ಭಾನುವಾರ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸೇವೆ ನೀಡುತ್ತಿದ್ದ 19 ಅಂತಾರಾಷ್ಟ್ರೀಯ ವಿಮಾನಗಳು ರದ್ದಾಗಿವೆ. ಅವುಗಳಲ್ಲಿ 9 ಆಗಮನ ಮತ್ತು 10 ನಿರ್ಗಮನ ವಿಮಾನಗಳಾಗಿವೆ. ಪ್ರಮುಖವಾಗಿ ಅಬುದಾಬಿ, ರಿಯಾದ್, ಜೆಡ್ಡಾ, ದಮ್ಮಮ್, ದುಬೈ ಮತ್ತು ದೋಹಾ ನಗರಗಳಿಗೆ ಸೇವೆ ನೀಡುವ ವಿಮಾನಗಳಾಗಿವೆ.

ಖಮೇನಿ ಹತ್ಯೆ ಖಂಡಿಸಿ ಅಲೀಪುರ ಗ್ರಾಮಸ್ಥರ ಧರಣಿ

ಗೌರಿಬಿದನೂರು: ತಾಲೂಕಿನ ಅಲ್ಲಿಪುರ ಗ್ರಾಮದ ಶಿಯಾ ಮುಸ್ಲಿಂ ಜನರು ಇರಾನ್ ನಾಯಕ ಖಮೇನಿ ಹತ್ಯೆ ಖಂಡಿಸಿ ಗ್ರಾಮದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಕಪ್ಪು ಬಟ್ಟೆ ದರಿಸಿ ಕಪ್ಪು ಬಾವುಟ ಹಿಡಿದು ಮೃತ ಖಮೇನಿ ಫೋಟೋದೊಂದಿಗೆ ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ ಕೂಗುತ್ತಾ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಖಮೇನಿ ಹತ್ಯೆಯ ಹಿನ್ನೆಲೆಯಲ್ಲಿ ಅಲ್ಲೀಪುರ ಗ್ರಾಮದಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿ ಮೂರು ದಿನಗಳ ಕಾಲ ಶೋಕಾಚರಣೆ ನಡೆಯಲಿದೆ. ಮತ್ತು ಗ್ರಾಮದಲ್ಲಿ ಯಾವುದೇ ರೀತಿಯ ವ್ಯಾಪಾರ ವಹಿವಾಟುಗಳು ನಡೆಯುವುದಿಲ್ಲ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಪ್ರಸ್ತುತ ಇರಾನ್ ದೇಶದಲ್ಲಿ ಅಲ್ಲಿಪುರ ಗ್ರಾಮದ ಸುಮಾರು ಇನ್ನೂರು ಮಂದಿ ಇದ್ದು,ಸದ್ಯ ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಅಲೀಪುರ ಗ್ರಾಮಸ್ಥರಲ್ಲಿ ದುಗುಡ ಹೆಚ್ಚಾಗುತ್ತಿದೆ. ಅಲ್ಲಿರುವ ತಮ್ಮವರ ಸುರಕ್ಷತೆಗೆ ಪ್ರಾರ್ಥನೆ ನಡೆಸುತ್ತಿದ್ದಾರೆ. ತಮ್ಮವರ ಸುರಕ್ಷತೆ ಬಗ್ಗೆ ಕಳವಳಗೊಂಡಿದ್ದಾರೆ. ವೈದ್ಯಕೀಯ ಶಿಕ್ಷಣ, ಧಾರ್ಮಿಕ ಶಿಕ್ಷಣದ ಕಾರಣಕ್ಕೆ ಅಲೀಪುರದ ಶಿಯಾ ಮುಸ್ಲಿಮರಿಗೆ ಇರಾನ್ ಅಚ್ಚುಮೆಚ್ಚಿನ ತಾಣ. ಎಂಟು ಸಾವಿರ ಜನಸಂಖ್ಯೆಯ ಅಲೀಪುರದಲ್ಲಿ ಶಿಯಾ ಮುಸ್ಲಿಮರದ್ದೇ ಪ್ರಾಬಲ್ಯ. ಇರಾನ್ ತಮ್ಮ ಪವಿತ್ರ ಧಾರ್ಮಿಕ ಭೂಮಿ ಎನ್ನುವ ಪೂಜ್ಯ ಭಾವನೆ ಇಲ್ಲಿನ ಜನರದ್ದು. ಆಯಾತೊಲ್ಲಾ ಖಮೇನಿ ಧಾರ್ಮಿಕ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುವ ದೊಡ್ಡ ವರ್ಗವೇ ಇಲ್ಲಿದೆ.



ಅಲೀಪುರಕ್ಕೆ ಬಂದಿದ್ದ ಖಮೇನಿ!: ಅಲಿಪುರದ ಬಡವರ ಮತ್ತು ಸಾರ್ವಜನಿಕರಿಗೆ ಅನುಕೂಲಕ್ಕಾಗಿ 1986 ರಲ್ಲಿ ಆಯತುಲ್ಲಾ ಖಮೇನಿ ಅಲ್ಲಿಪುರ ಗ್ರಾಮಕ್ಕೆ ಬೇಟಿ ನೀಡಿ ಆಸ್ಪತ್ರೆಯನ್ನು ಪ್ರಾರಂಭಿಸಿ ಉದ್ಘಾಟಿಸಿದರು. ಇದು ಇರಾನ್ ಮತ್ತು ಅಲೀಪುರದ ಬಾಂಧವ್ಯಕ್ಕೆ ಸಾಕ್ಷಿ. ಖಮೇನಿ ಗುರು ಇರಾನ್ ಧಾರ್ಮಿಕ ನಾಯಕ ಅಯಾತೊಲ್ಲಾ ಇಮಾಮ್ ಖಮೇನಿ ಹೆಸರಲ್ಲಿ ಅಲೀಪುರದಲ್ಲಿ ಆಸ್ಪತ್ರೆ ಇದೆ. ಇದರ ಉದ್ಘಾಟನೆಗಾಗಿಯೇ ಖಮೇನಿ ಗ್ರಾಮಕ್ಕೆ ಬಂದಿದ್ದರು.

ಐ ಕೆ ಆಸ್ಪತ್ರೆಯ ಆಡಳಿತ ಮಂಡಳಿ ವ್ಯವಸ್ಥಾಪಕರಾದ ನದೀಮ್, ಸಕಿಯ ಅಹ್ಮದ್, ಅಬ್ಬಾಸ್ ರಜಾ,ಮೀರ್ ಸಕಲೇನ್ ಅಬ್ಬಾಸ್ ಮತ್ತಿತರರು ಆಸ್ಪತ್ರೆಯಲ್ಲಿ ಭಾವಚಿತ್ರವನ್ನು ಇಟ್ಟು ಶೋಕಾಚರಣೆ ನಡೆಸಿದರು.

ಕನ್ನಡಿಗರ ರಕ್ಷಣೆಗೆ ಸಹಾಯವಾಣಿ

ಬೆಂಗಳೂರು: ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಪರಿಣಾಮ ಕೊಲ್ಲಿ ದೇಶಗಳಲ್ಲಿ ವೈಮಾನಿಕ ದಾಳಿಗಳು ಭೀಕರವಾಗಿದ್ದು, ಈ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರ ಸಹಾಯಕ್ಕೆ ರಾಜ್ಯ ಸರ್ಕಾರ ಸಹಾಯವಾಣಿ ಸ್ಥಾಪಿಸಿದೆ. ಕೊಲ್ಲಿ ದೇಶಗಳಲ್ಲಿ ಉದ್ಯೋಗ ಅರಸಿ ಮತ್ತು ಪ್ರವಾಸಕ್ಕೆ ತರಳಿರುವ ಕನ್ನಡಿಗರಿಗೆ ಯುದ್ಧದ ಪರಿಸ್ಥಿತಿಯಿಂದ ಆತಂಕ ಎದುರಾಗಿದ್ದು, ಸೂಕ್ತ ಭದ್ರತೆ ಮತ್ತು ವಾಪಸ್ ದೇಶಕ್ಕೆ ಮರಳು ವಿಮಾನದ ಸೌಕರ್ಯ ಸೇರಿದಂತೆ ಇನ್ನಿತರೆ ಸೇವೆಗಾಗಿ ರಾಜ್ಯ ಸರ್ಕಾರ ಸಹಾಯವಾಣಿ ಆರಂಭಿಸಿದೆ. ಕತಾರ್: 00974–55647502, ಬಹ್ರೇನ್: 00973–39418071, ಜೋರ್ಡಾನ್: 00962–770 422 276, ಓಮನ್: 8007 1234 । ವಾಟ್ಸಾಪ್ ಸಂಖ್ಯೆ: +968 9828 2270, ಇರಾಕ್: +964 771 651 1185 (ಇಂಗ್ಲಿಷ್ ಮತ್ತು ಹಿಂದಿ), +964 770 444 4899 (ಅರೇಬಿಕ್), ಕುವೈತ್: +965 65501946, ಪ್ಯಾಲೆಸ್ತೀನ್: +970 592916418 ಇಸ್ರೇಲ್ +972–54–7520711, ಇರಾನ್ +98 912 810 9115, ಸೌದಿ ಅರೇಬಿಯಾ: ರಿಯಾದ್ 00–966–11–4884697, 00–966–542126748 ವಾಟ್ಸಾಪ್ ಸಂಖ್ಯೆ, 800 247 1234 ಸಹಾಯ ಸಂಖ್ಯೆ, 2614093 ಮೊಬೈಲ್ +966 5561 22301 / ಸಹಾಯ ಸಂಖ್ಯೆ 800 244 0003, ಯುಎಇ: ಸಹಾಯವಾಣಿ 800–46342, ವಾಟ್ಸಾಪ್ ಸಂಖ್ಯೆ +971 5430 90571

ಮೂರು ವರ್ಷದಲ್ಲಿ 16,29,86,260 ರೂ.ಮೌಲ್ಯದ 1,940.839 ಕೆಜಿ ಮಾದಕದ್ರವ್ಯ ವಶ

ನೈರುತ್ಯ ರೈಲ್ವೆಯ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ಆಪರೇಷನ್

ಅನುಷಾ ಕೆ.

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ವಿಮಾನ, ಬಸ್, ರೈಲಿನಲ್ಲಿ ಡ್ರಗ್ ಪೆಡ್ಲರ್‌ಗಳು ಮಾದಕ ವಸ್ತುಗಳನ್ನು ಕಳ್ಳಸಾಗಾಣಿಕೆ ಮಾಡುವವರ ಸಂಖ್ಯೆ ಅಧಿಕವಾಗುತ್ತಿದೆ. ಹೀಗಿರುವಾಗ ನೈರುತ್ಯ ರೈಲ್ವೆಯ ಆರ್‌ಪಿಎಫ್ ಸಿಬ್ಬಂದಿ ರೈಲಿನಲ್ಲಿ ಮಾದಕ ವಸ್ತುಗಳ ಕಳ್ಳ ಸಾಗಣೆ ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಮೂಲಕ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಕಳ್ಳಸಾಗಾಣಿಕೆ ತಡೆಯಲು ನೈರುತ್ಯ ರೈಲ್ವೆಯ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ಆಪರೇಷನ್‌ನಾರ್ಕೋ ಎನ್ನುವ ಕಾರ್ಯಚರಣೆ ಕೈಗೊಂಡು, ರೈಲುಗಳ ಮೂಲಕ ನಡೆಯುವ ಮಾದಕವಸ್ತು ಕಳ್ಳಸಾಗಣೆಯನ್ನು ತಡೆಯುವ ಕಾರ್ಯವನ್ನು ಮಾಡುತ್ತಿದ್ದಾರೆ. ನೈರುತ್ಯ ರೈಲ್ವೆಯ ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರು ವಿಭಾಗದಲ್ಲಿ 2023 ರಿಂದ 2025ರವರೆಗೆ ಒಟ್ಟು 137 ಡ್ರಗ್ ಪೆಡ್ಲರ್‌ಗಳಿಂದ ಸುಮಾರು 16,29,86,260 ರೂ.ಮೌಲ್ಯದ 1,940.839 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಆರ್‌ಪಿಎಫ್ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ. ರೈಲ್ವೆ ಇಲಾಖೆಯ ನಿಯಮದ ಅನುಸಾರ ಪ್ರಯಾಣಿಕರು ರೈಲಿನಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು ಕೊಂಡೊಯ್ಯುವಂತಿಲ್ಲ, ಅದರಲ್ಲೂ ಪ್ರಮುಖವಾಗಿ ಮೀನು, ಗ್ಯಾಸ್ ಸಿಲಿಂಡರ್, ಪಟಾಕಿ, ಧೂಮಪಾನ, ಮದ್ಯ, ಅಮಲು ಪದಾರ್ಥಗಳನ್ನು ಒಯ್ಯುವಂತಿಲ್ಲ.

ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿಗಳು ಮಾದಕ ವಸ್ತುಗಳ ಕಳ್ಳ ಸಾಗಣೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಜೊತೆಗೆ, ಅಕ್ರಮ ಚಟುವಟಿಕೆಗಳನ್ನು ತಡೆಯಲು ನಿರಂತರ ತಪಾಸಣೆಗಳನ್ನು ನಡೆಸುತ್ತಿದ್ದಾರೆ. ಆ ಮೂಲಕ ಪ್ರಯಾಣಿಕರಿಗೆ ಸುರಕ್ಷಿತ, ಭದ್ರ ಹಾಗೂ ಸುಗಮ ಪ್ರಯಾಣದ ಅನುಭವ ಒದಗಿಸುವುದು ನಮ್ಮ ಪ್ರಾಥಮಿಕ ಗುರಿಯಾಗಿದೆ ಎಂದು ನೈಋತ್ಯ ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಆಪರೇಷನ್ ನಾರ್ಕೋ ಎಂದರೇನು

ಆರ್‌ಪಿಎಫ್ ಸಿಬ್ಬಂದಿ ಆಪರೇಷನ್ ನಾರ್ಕೋ ಎನ್ನುವ ಕಾರ್ಯಚರಣೆ ಕೈಗೊಂಡು, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ (ಎನ್‌ಸಿಬಿ) ಸಹಯೋಗದೊಂದಿಗೆ ರೈಲ್ವೆ ನಿಲ್ದಾಣ ಮತ್ತು ರೈಲುಗಳಲ್ಲಿ ತಪಾಸಣೆ ನಡೆಸುತ್ತಾರೆ. ಆ ವೇಳೆ ಮಾದಕ ವಸ್ತುವನ್ನು ಪತ್ತೆಹಚ್ಚಿ, ಡ್ರಗ್ ಪೆಡ್ಲರ್‌ಗಳಿಂದ ಮಾದಕ ವಸ್ತುಗಳನ್ನು ವಶಪಡಿಸಿ, ಅಪರಾಧಿಗಳನ್ನು ಬಂಧಿಸಿ ಅವರನ್ನು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುತ್ತಾರೆ.

ಆಪರೇಷನ್ ನಾರ್ಕೋ ಅಡಿಯಲ್ಲಿ ವಶಪಡಿಸಲಾದ ಗಾಂಜಾ ಹಾಗೂ ಮೌಲ್ಯದ ವಿವರ

	2024			2025		
ನೈರುತ್ಯ ಯ ವಿಭಾಗ	ಗಾಂಜಾ	ಮೌಲ್ಯ	ಬಂಧಿತರು	ಗಾಂಜಾ	ಮೌಲ್ಯ	ಬಂಧಿತರು
ಮೈಸೂರು	33.668	33,63,000	1	53.144	30,57,750	05
ಬೆಂಗಳೂರು	183.596	1,69,51,620	16	671.264	4,92,77,580	49
ಹುಬ್ಬಳ್ಳಿ	32.155	32,23,500	1	194.947	1,51,78,200	03
ಒಟ್ಟು ಪ್ರಕರಣ/ಮೊತ್ತ	249.419	2,35,38,120	18	919.355	6,75,13,530	57

ಆ್ಯನಿಮೇಷನ್‌ನಿಂದ ಉದ್ಯೋಗ

ಬೆಂಗಳೂರು: ಆ್ಯನಿಮೇಷನ್, ವಿಷುಯಲ್ ಎಫೆಕ್ಟ್, ಗೇಮಿಂಗ್ ಕ್ಷೇತ್ರಗಳು ಈಗ ಕೇವಲ ಮನರಂಜನೆಯ ಉದ್ಯಮವಾಗಿ ಉಳಿಯದೆ, ಡಿಜಿಟಲ್, ಸೃಜನಶೀಲತೆ ಹಾಗೂ ಕೃತಕ ಬುದ್ಧಿಮತ್ತೆಯ ಆರ್ಥಿಕತೆಯನ್ನು ಮರು ರೂಪಿಸುತ್ತಿವೆ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಬಣ್ಣಿಸಿದ್ದಾರೆ.



ನಗರದ ಖಾಸಗಿ ಹೋಟೆಲ್‌ನಲ್ಲಿ ಮೂರು ದಿನಗಳಿಂದ ನಡೆದ ಬೆಂಗಳೂರು ಜಿಎಫ್‌ಎಕ್ಸ್–7ನೆ ಆವೃತ್ತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸೃಜನಶೀಲತೆಯ ಈ ವಲಯಗಳು ಬೌದ್ಧಿಕ ಆಸ್ತಿ, ನಾವೀನ್ಯತೆಯ ಹೊಸ ಆರೇಂಜ್ ಎಕಾನಾಮಿ ಸಾಧಿಸಲು ಮಹತ್ವದ ಕೊಡುಗೆ ನೀಡುತ್ತಿವೆ. ಈ ಆರ್ಥಿಕತೆಯು ಭಾರಿ ಬದಲಾವಣೆ ತರುತ್ತಿದೆ. ಹೊಸ ಉದ್ಯೋಗ ಅವಕಾಶ ಸೃಷ್ಟಿಸುವ, ಸೃಜನಶೀಲತೆಯ ಹೊಸ ಸಂಸ್ಕೃತಿ ಬೆಳೆಯಲು ನೆರವಾಗುತ್ತಿದೆ ಎಂದರು. ತಮ್ಮ ಭಾಷಣದಲ್ಲಿ ಕಾಂತಾರ–ಚಾಪ್ಟರ್ 1 ಚಿತ್ರದ ಅಭೂತಪೂರ್ವ ಯಶಸ್ಸನ್ನು ಪ್ರಸ್ತಾಪಿಸಿದ ಖರ್ಗೆ ಅವರು, ತಂತ್ರಜ್ಞಾನದ ಸಂಗಮದ ಫಲವಾಗಿ ಸ್ಥಳೀಯ ಕತೆಯು ಜಾಗತಿಕ ಮನ್ನಣೆಗೆ ಪಾತ್ರವಾಗಿದೆ ಎಂದರು. ಇಡೀ ದೇಶದಲ್ಲಿ ಮೊದಲ ಬಾರಿಗೆ ಎವಿಜಿಸಿ ನೀತಿ ರೂಪಿಸಿದ ಹೆಗ್ಗಳಿಗೆ ಕರ್ನಾಟಕದ್ದು ಆಗಿದೆ.

ಸದ್ಯಕ್ಕೆ ಕೃತಕ ಬುದ್ಧಿಮತ್ತೆಯನ್ನು (ಎಐ) ಪ್ರತಿಯೊಬ್ಬರೂ ಅತ್ಯಂತ ಸುಲಭವಾಗಿ ಅಳವಡಿಸಿಕೊಳ್ಳಬಹುದಾಗಿದೆ. ಮಾಹಿತಿ, ವಿಷಯ ಸೃಷ್ಟಿಸಲು ಎಐಯನ್ನು ಬೆಂಗಳೂರಿನ ಆಚೆಗೂ ಹಿಂದುಳಿದ ಪ್ರದೇಶಗಳಲ್ಲಿಯೂ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಇದರಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿವೆ. ದೇಶದಲ್ಲಿಯೇ ಮೊದಲ ಬಾರಿಗೆ ಎವಿಜಿಸಿಯ ಶ್ರೇಷ್ಠತಾ ಕೇಂದ್ರವನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆ. ಆಕ್ಸೆಂಚರ್ ಸೇರಿದಂತೆ ವಿವಿಧ ಕಂಪನಿಗಳ ಸಹಯೋಗದಲ್ಲಿ ತಂತ್ರಜ್ಞಾನ ಕೌಶಲ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.


ಬಾಲಕಿಯರ ಸುರಕ್ಷತೆಗೆ ಆದ್ಯತೆ

ಬೆಂಗಳೂರು: ದೇಶದಲ್ಲಿ ಬಾಲಕಿಯರ ಆರೋಗ್ಯ ಸುರಕ್ಷತೆಗೆ ಹೆಚ್ಚು ಒತ್ತು ನೀಡಲು ಮುಂದಾಗಿರುವ ಸರ್ಕಾರ ಈಗ ಗರ್ಭಕಂಠ ಕ್ಯಾನ್ಸರ್ ತಡೆಗೆ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ಲಸಿಕೆ ನೀಡುವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಆಶಯದಂತೆ ರಾಜ್ಯದಲ್ಲಿಯೂ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ರಾಜಸ್ಥಾನದ ಅಜ್ಮೀರ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದರು. ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ವೆಬ್‌ಕಾಸ್ಟ್ ಮೂಲಕ ಕಾರ್ಯಕ್ರಮ ವೀಕ್ಷಿಸಲಾಯಿತು. 14 ವರ್ಷ ಮೇಲ್ಪಟ್ಟ ವಯಸ್ಸಿನ ಸುಮಾರು 1.15 ಕೋಟಿ ಬಾಲಕಿಯರಿಗೆ ಸರ್ಕಾರಿ ಆರೋಗ್ಯ ಸೌಲಭ್ಯಗಳಲ್ಲಿ, ಆಯುಷ್ಮಾನ್ ಆರೋಗ್ಯ ಮಂದಿರಗಳು (ಪ್ರಾಥಮಿಕ ಆರೋಗ್ಯ ಕೇಂದ್ರಗಳು), ಸಮುದಾಯ ಆರೋಗ್ಯ ಕೇಂದ್ರಗಳು, ಉಪ-ಜಿಲ್ಲಾ ಮತ್ತು ಜಿಲ್ಲಾ ಆಸ್ಪತ್ರೆಗಳು ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಹಾಕಲಾಗುತ್ತದೆ.

ಈ ಅಭಿಯಾನವು ಮೂರು ತಿಂಗಳ ಅವಧಿ ನಡೆಯಲಿದ್ದು, ಸಮರೋಪಾದಿಯಲ್ಲಿ ಕೈಗೊಂಡು ನಿಗದಿಪಡಿಸಿದ ಬಾಲಕಿಯರಿಗೆ ಲಸಿಕೆ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಅಭಿಯಾನವನ್ನು ಎಲ್ಲೆಡೆ ವಿಸ್ತರಿಸಲಾಗುವುದು ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ವೇಳೆ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ರಾಷ್ಟ್ರೀಯ ಆರೋಗ್ಯ ಮಿಷನ್ ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್, ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್, ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕರು ಸೇರಿದಂತೆ ಇತರರು ಇದ್ದರು.

ರಾಮ ಬಾಣ



ಕನ್ನಡಿಗರ ಸುರಕ್ಷತೆಗಾಗಿ ಕೇಂದ್ರಕ್ಕೆ ಶಾಲಿನಿ ರಜನೀಶ್ ಪ್ರತ್ಯೇಕ ಪತ್ರ

ಬೆಂಗಳೂರು: ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಕನ್ನಡಿಗರ ಸುರಕ್ಷತೆ ಮತ್ತು ಸಂಭಾವ್ಯ ವಾಪಸಾತಿಗಾಗಿ ತುರ್ತು ಸಮನ್ವಯ ಹಾಗೂ ಅಲ್ಲಿ ಸಿಲುಕಿರುವ ಪ್ರವಾಸಿಗರಿಗೆ ವಾಪಸ್ ಮರಳುವುದಕ್ಕೆ ಅಗತ್ಯ ವಿಮಾನಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಕೇಂದ್ರಕ್ಕೆ ಪ್ರತ್ಯೇಕ ಪತ್ರ ಬರೆದಿದ್ದಾರೆ.

ದುಬೈ ಮತ್ತು ಪಶ್ಚಿಮ ಏಷ್ಯಾದ ಇತರ ದೇಶಗಳಂತಹ ಪ್ರಮುಖ ಕೇಂದ್ರಗಳಲ್ಲಿ ಗಣನೀಯ ಸಂಖ್ಯೆಯ ಕನ್ನಡಿಗರು ಉದ್ಯೋಗ, ಉನ್ನತ ಶಿಕ್ಷಣ, ವ್ಯಾಪಾರ, ಪ್ರವಾಸೋದ್ಯಮ ಸಂಬಂಧಿಸಿ ನೆಲೆಸಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು, ಪೀಡಿತ ಪ್ರದೇಶಗಳಲ್ಲಿ ಪ್ರಸ್ತುತ ಕನ್ನಡಿಗರ ಸುರಕ್ಷತೆ ಮತ್ತು ಯೋಗಕ್ಷೇಮ ದೃಢಪಡಿಸಲು ಸಂಬಂಧಪಟ್ಟ ಭಾರತೀಯ ರಾಯಭಾರ ಕಚೇರಿಗಳು ಅಥವಾ ದೂತಾವಾಸಗಳ ಮೂಲಕ ಅಗತ್ಯವಿರುವ ಎಲ್ಲಾ ಸಹಾಯ ಒದಗಿಸಲು ವಿದೇಶಾಂಗ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ವಿನಂತಿಸಿದೆ.

ನಾಗರಿಕ ವಿಮಾನಗಳ ವ್ಯವಸ್ಥೆಗೆ ಮನವಿ: ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪ್ರತ್ಯೇಕ ಪತ್ರ ಬರೆಯಲಾಗಿದೆ. ವಿವಿಧ ವಿಮಾನಯಾನ ಸಂಸ್ಥೆಗಳಲ್ಲಿ ರಿಟರ್ನ್ ಟಿಕೆಟ್‌ಗಳನ್ನು ಬುಕ್ ಮಾಡಿದ್ದ ಅನೇಕ ಪ್ರವಾಸಿಗರು, ವಿಮಾನಗಳ ವ್ಯತ್ಯಯ ಮತ್ತು ಪ್ರಸ್ತುತ ಪರಿಸ್ಥಿತಿಯಿಂದ ಉಂಟಾಗುವ ಅನಿಶ್ಚಿತತೆಯಿಂದಾಗಿ ತಮ್ಮ ಪ್ರಯಾಣವನ್ನು ನಿಗದಿತ ಸಮಯಕ್ಕೆ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿಯಾಗಿದೆ. ರಿಟರ್ನ್ ಬುಕಿಂಗ್‌ಗಳನ್ನು ದೃಢಪಡಿಸಿದ್ದರೂ ನಿಯಂತ್ರಣ ಮೀರಿದ ಪರಿಸ್ಥಿತಿಯಿಂದಾಗಿ ವೇಳಾಪಟ್ಟಿಯ ಪ್ರಕಾರ ಪ್ರಯಾಣಿಸಲು ಸಾಧ್ಯವಾಗದ ಸಿಲುಕಿರುವ ಪ್ರವಾಸಿಗರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಸೇರಿದಂತೆ ಅಗತ್ಯ ಸಹಾಯ ಒದಗಿಸಿ. ಟಿಕೆಟ್ ಮರುಹೊಂದಾಣಿಕೆ ಮತ್ತು ಹೆಚ್ಚುವರಿ ಶುಲ್ಕಗಳ ವಿನಾಯಿತಿಗಳನ್ನು ವಿಸ್ತರಿಸಿ. ಸಾಧ್ಯವಾದಷ್ಟು ಬೇಗ ಸಾಕಷ್ಟು ವಿಮಾನಗಳ ವ್ಯವಸ್ಥೆ ಮತ್ತು ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಿ ಎಂದು ಪತ್ರದಲ್ಲಿ ವಿನಂತಿಸಲಾಗಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

ಸರಕಾರವು ಗಾಂಧೀಜಿಯವರಿಗೆ ಗೌರವ ಕೊಡುವುದಾಗಿದ್ದರೆ ಮದ್ಯಪಾನ ಮಾಡಬೇಡಿ ಎಂಬ ಜಾಹೀರಾತು ಕೊಡಬೇಕಿತ್ತು
- ಆರ್.ಅಶೋಕ್
- ಮದ್ಯಪಾನ ಮಾಡಬೇಡಿ ಎಂದು ಜಾಹೀರಾತು ಕೊಟ್ಟವರಿಗೆ ಮತದಾನ ಮಾಡಬೇಡಿ ಎನ್ನುವ ಚಳುವಳಿ ಆರಂಭವಾದೀತೆಂಬ ಭಯವಿರಬಹುದು!

ದಿನ ಭವಿಷ್ಯ

ಮೇಷ
ನಿಮ್ಮ ಪಾಲಿಗೆ ಶುಭ ಸಂಕೇತ ತೋರಿ ಬರಲಿದೆ. ಸದ್ಯದಲ್ಲೆ ಚಿಂತೆಯೊಂದು ಪರಿಹಾರ ಕಾಣಲಿದೆ. ವೃತ್ತಿಯಲ್ಲಿ ಉನ್ನತಿಗೆ ಪೂರಕ ಸನ್ನಿವೇಶ ಸೃಷ್ಟಿ.

ವೃಷಭ
ಸಂವಹನ ಕಲೆಯನ್ನು ಸರಿಯಾಗಿ ಬಳಸಿ. ಆ ಮೂಲಕ ಭಿನ್ನಮತ ನಿವಾರಿಸಿ. ಪರಿಸ್ಥಿತಿ ನಿಭಾಯಿಸಲು ಶಕ್ತರಾಗುವಿರಿ.

ಮಿಥುನ
ಸಣ್ಣದೆಂದು ಭಾವಿಸಿದ ಸಮಸ್ಯೆ ದೊಡ್ಡದಾಗಿ ಕಾಡೀತು. ಅದಕ್ಕೆ ಅವಕಾಶ ಕೊಡದಿರಿ. ಆಪ್ತೀಯರ ವಿರೋಧ ಕಟ್ಟಿಕೊಳ್ಳದಿರಿ.

ಕಟಕ
ವೃತ್ತಿಯಲ್ಲಿ ಕೆಲವು ಅನುಚಿತ ಬೆಳವಣಿಗೆ ಸಂಭವ. ಆರೋಗ್ಯದ ಬಗ್ಗೆ ಗಮನ ಕೊಡಿ. ಅತಿಯಾಗಿ ಎಣ್ಣೆ ತಿನಿಸು ಸೇವಿಸದಿರಿ.

ಸಿಂಹ
ನಿಮ್ಮ ಬದುಕಿನ ಮೇಲೆ ತಕ್ಷಣ ಪರಿಣಾಮ ಬೀರಬಲ್ಲ ವಿಷಯದತ್ತ ಹೆಚ್ಚು ಗಮನ ಹರಿಸಿ. ಅನ್ಯರ ಟೀಕೆ ಕೇಳುವಿರಿ. ಕೌಟುಂಬಿಕ ಸಾಮರಸ್ಯ.

ಕನ್ಯಾ
ವೃತ್ತಿಯಲ್ಲಿ ಎಲ್ಲ ಸುಸೂತ್ರ. ಮೇಲಿನವರ ಪ್ರಶಂಸೆ. ಕೆಲ ವಿಷಯದಲ್ಲಿ ಅತೃಪ್ತಿ ಇದ್ದರೂ ಇಂದು ಖುಷಿಯಿಂದ ಕಳೆಯಿರಿ. ದೂರದ ಬಂಧು ಭೇಟಿ.

ತುಲಾ
ಬಯಸಿದ ಕಾರ್ಯ ಕೈಗೂಡದೆ ಹೋದೀತು. ನಿರಾಶೆ ಪಡದಿರಿ. ಆಶಾವಾದ ಇಟ್ಟುಕೊಳ್ಳಿ. ಸಂಬಂಧದಲ್ಲಿ ಋಣಾತ್ಮಕ ಚಿಂತನೆ ನುಸುಳಬಹುದು.

ವೃಶ್ಚಿಕ
ವಿವಾದದಿಂದ ದೂರವಿರಿ. ನೀವು ಬಯಸದಿದ್ದರೂ ಕೆಲವರು ತಮ್ಮ ಬಿಕ್ಕಟ್ಟಿನಲ್ಲಿ ನಿಮ್ಮನ್ನು ಎಳೆಯಬಹುದು. ಮಾನಸಿಕ ಒತ್ತಡ ಅಧಿಕ.

ಧನು
ನೀವು ಉದ್ದೇಶಿಸಿದ ಕಾರ್ಯ ಇಂದು ಸಾಧ್ಯ ಆಗದಿರಬಹುದು. ಹತಾಶೆ ಬೇಡ, ನಾಳೆಯೆಂಬುದು ಇದ್ದೇ ಇದೆ. ಮರಳಿ ಪ್ರಯತ್ನವ ಮಾಡಿರಿ.

ಮಕರ
ಯಾವುದೋ ವಿಚಾರ ಬೇಸರ ಸೃಷ್ಟಿಸಲಿದೆ. ಅದನ್ನು ನಿವಾರಿಸಲು ಯತ್ನಿಸಿ. ನಿಮ್ಮನ್ನು ಪೂರ್ಣವಾಗಿ ಅರಿತವರ ನೆರವು ಪಡೆಯಿರಿ. ಧನವ್ಯಯ.

ಕುಂಭ
ಯಾವುದೇ ಕೊರತೆ ಇಂದು ಬಾಧಿಸದು. ನೀವು ಇಚ್ಛಿಸಿದಂತೆ ಆಗಲಿದೆ. ಆದರೂ ನಿಮ್ಮಲ್ಲಿ ಅಸಂತೃಪ್ತಿ. ಹೇಳಲಾಗದ ಬೇಸರ ಕಾಡುವುದು.

ಮೀನ
ಅಸೂಯೆ ನೆಮ್ಮದಿ ಕೆಡಿಸಬಲ್ಲುದು. ಅನ್ಯರ ಏಳಿಗೆಗೆ ಮತ್ಸರ ಪಡಬೇಡಿ. ಮನಸ್ಸು ಕೆಡಿಸುವ ಯೋಚನೆ ಮಾಡಲು ಹೋಗಬೇಡಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 9,4,0,5

ಅಣುಶಕ್ತಿ ಇಲಾಖೆ ಕಾರ್ಯದರ್ಶಿ ಅಜಿತಕುಮಾರ ಮೊಹಂತಿ ಭರವಸೆ

ಕೈಗಾದಲ್ಲಿ 5, 6ನೇ ಘಟಕದ ನಿರ್ಮಾಣ ಕಾರ್ಯ ಪೂರ್ಣ

ಕಾರವಾರ: ಉತ್ತರಕನ್ನಡ ಜಿಲ್ಲೆಯ ಕೈಗಾದಲ್ಲಿ 2030 ನೇ ಸಾಲಿಗೆ 5 ಮತ್ತು 6 ನೇ ಘಟಕವು ತನ್ನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ವಿಶ್ವಾಸ ಹೊಂದಲಾಗಿದೆ ಎಂದು ಕೇಂದ್ರ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿ ಡಾ.ಅಜಿತಕುಮಾರ ಮೊಹಂತಿ ಹಾಗೂ ಎನ್.ಪಿ.ಸಿ.ಐ.ಎಲ್ ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭುವನಚಂದ್ರ ಪಾಠಕ್ ಹೇಳಿದರು.



ಕೈಗಾ 5 ಮತ್ತು 6 ನೇ ಘಟಕಕ್ಕೆ ಎಲ್ಲ ಹಂತದ ಅನುಮತಿಯನ್ನು ಪಡೆದು 2025 ರಲ್ಲಿ ಪ್ರಾರಂಭಿಕ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಇಂದು ಉಳಿದ ವಿದ್ಯುತ್ ಗಳಿಗೆ ಹೋಲಿಕೆ ಮಾಡಿದಲ್ಲಿ ಅಣುವಿದ್ಯುತ್ ಅತಿ ಕಡಿಮೆ ವೆಚ್ಚದಲ್ಲಿ ದೇಶದ ವಿದ್ಯುತ್ ಕೊರತೆಯನ್ನು ನೀಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ ಎಂದರು. ಈ ಘಟಕವು ಮುಂದೆ ಕಾರ್ಯಾರಂಭವಾದಲ್ಲಿ ಸಾವಿರ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಸ್ಥಳೀಯರಿಗೂ ದೊರೆಯಲಿದೆ ಎಂದರು. ಎನ್‌ಪಿಸಿಐಎಲ್ ಮುಖ್ಯ ವ್ಯವಸ್ಥಾಪಕರ ನಿರ್ದೇಶಕ ಭುವನಚಂದ್ರ ಪಾಠಕ್ ಮಾತನಾಡಿ, ನ್ಯೂಕ್ಲಿಯರ್ ದಿಂದ ಉತ್ಪಾದನೆಯಾಗುವ ವಿದ್ಯುತ್ ದಿಂದ ಕರ್ನಾಟಕ ರಾಜ್ಯಕ್ಕೆ ಶೇ.25 ರಷ್ಟು ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಭಾರಜಲದ ವಿದ್ಯುತ್ ಘಟಕಗಳು ದೇಶದ ವಿದ್ಯುತ್ ಪೂರೈಕೆಯನ್ನು ನಿಗಿಸುವಲ್ಲಿ ನಮ್ಮ ಘಟಕಗಳು ಪೂರಕವಾಗಿದೆ. ನಮ್ಮ ಕೈಗಾದಲ್ಲಿ ಒಂದರಿಂದ ನಾಲ್ಕು ಘಕಟಗಳಿಂದ 220 ಮೆಗಾವ್ಯಾಟರಂತೆ ಒಟ್ಟು 880 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದರು.

ಸ್ಥಳೀಯರಿಗೆ ಉದ್ಯೋಗಾವಕಾಶದ ಬಗ್ಗೆ ಕೇಳಲಾದ ಪ್ರಶ್ನೆಗೆ ಎನ್.ಪಿ.ಸಿ.ಐ. ಎಲ್ ದಲ್ಲಿ ಸೇರ್ಪಡೆ ಗೊಳಲು ನಮ್ಮಲ್ಲಿ ಮೂರು ರೀತಿಯ ವರ್ಗೀಕರಣಗಳಿವೆ ಎ ಗ್ರುಪ್ ಅಧಿಕಾರಿ ವೃಂದ ಇದಕ್ಕೆ ಉನ್ನತ ಶಿಕ್ಷಣ ಪಡೆದವರು, ಗ್ರುಪ್ ಬಿ ದಲ್ಲಿ ತಾಂತ್ರಿಕ ನೈಪುಣ್ಯತೆಯನ್ನು ಹೊಂದಿರುವ ಡಿಪ್ಲೊಮ ಮತ್ತು ಬಿ.ಇ ಇನ್ನು ಗ್ರುಪ್ ಸಿ ದಲ್ಲಿ ಘಟಕದಲ್ಲಿ ಕಾರ್ಯನಿರ್ವಹಿಸಲು ಸಹಾಯಕ ತಾಂತ್ರಿಕರು ಮತ್ತು ತಳಹಂತದಲ್ಲಿ ಸಿಬ್ಬಂದಿಗಳೆಂದು ವರ್ಗೀಕರಿಸಲಾಗಿದೆ.

ಸ್ಟೆಟ್ ಡೈರೆಕ್ಟರ್ ವಿನೋದ ಕುಮಾರ ಮಾತನಾಡಿ, ನಮ್ಮಲ್ಲಿ 1350 ರೆಗ್ಯುಲರ್ ಸಿಬ್ಬಂದಿ ಇದ್ದಾರೆ. ದರಲ್ಲಿ ಕರ್ನಾಟಕ ರಾಜ್ಯದವರು 805, ಉತ್ತರ ಕನ್ನಡ ಜಿಲ್ಲೆಯವರು 470 ನೌಕರರು ಇದ್ದಾರೆ. ಸಿ.ಎಸ್.ಆರ್ ಅನುದಾನದಡಿ ಸ್ಥಳೀಯ ಶಾಲೆ, ಅಂಗನವಾಡಿಗಳಿಗೆ ಮೂಲಭೂತ ಸೌಕರ್ಯ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಭವನಗಳು, ಶೌಚಾಲಯಗಳನ್ನು ರಸ್ತೆಗಳನ್ನು ನಿರ್ಮಿಸಿಕೊಟ್ಟಿದ್ದೇವೆ. ಶಾಲೆಗಳಿಗೆ ಅನುಕೂಲವಾಗಲು ಅತಿಥಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಲು 100 ಅಭ್ಯರ್ಥಿಗಳು ನಮ್ಮಲ್ಲಿದ್ದು, ಅವರು ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಮಗೆ ಪ್ರತಿ ವರ್ಷ 12 ಕೋ.ರೂ. ಸಿ.ಎಸ್.ಆರ್ ಅನುದಾನ ಬರುತ್ತಿದೆ. ಅದರಿಂದ ನಾವು 30 ಶಾಲೆಗಳ ಕಟ್ಟಡಗಳು, 15 ಕಡೆಯಲ್ಲಿ ಸಮುದಾಯ ಭವನ, 3 ಪ್ರಾಥಮಿಕ ಆರೋಗ್ಯ ಕೇಂದ್ರ ಆಸ್ಪತ್ರೆಯನ್ನು ನಾವು ನಿರ್ಮಿಸಿಕೊಡಲಾಗಿದೆ ಎಂದು ವಿನೋದ ಕುಮಾರ ಹೇಳಿದರು.

3 ಸಾವಿರ ಅರ್ಜಿಗಳು

ಗ್ರುಪ್ ಬಿ ಮತ್ತು ಗ್ರುಪ್ ಸಿ ವರ್ಗಕ್ಕೆ ಸಿಬ್ಬಂದಿಗಳ ನೇಮಕಾತಿಗಾಗಿ ನಾವು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರ ,ಅಂಕೋಲಾ, ಹೊನ್ನಾವರ ತಾಲೂಕುಗಳಲ್ಲಿ ಕೋಚಿಂಗ್ ಸೆಂಟರ್ ಗಳನ್ನು ತೆರೆಯಲಾಗಿದೆ. ಈ ತರಬೇತಿ ಕೇಂದ್ರಗಳಲ್ಲಿ ಕೋಚಿಂಗ್ ಗೆ 3 ಸಾವಿರ ಅರ್ಜಿಗಳು ಬಂದಿದೆ. ಇಂತಹ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆಯಲು ಸ್ಥಳೀಯರಲ್ಲಿ ಆಸಕ್ತಿ ಕೊರತೆ ಇರುವದು ಕಂಡು ಬಂದಿದೆ. ಅಲ್ಲದೆ ಪರೀಕ್ಷೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಬೋನಸ್ ಅಂಕಗಳನ್ನು ನಾವು ನೀಡುತ್ತಿದ್ದೇವೆ ಎಂದು ಪಾಠಕ ಹೇಳಿದರು.

ಭಾರತೀಯರ ರಕ್ಷಣೆ ಕುರಿತು ಮೋದಿ ಚರ್ಚೆ

ಪುಟ ೧ರ → ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ಹತ್ಯೆಯ ನಂತರ ಮಧ್ಯ ಪ್ರಾಚ್ಯದಲ್ಲಿ ಬದಲಾಗಿರುವ ರಾಜಕೀಯ ಹಾಗೂ ಭದ್ರತಾ ಪರಿಸ್ಥಿತಿಯ ಕುರಿತು ಸವಿಸ್ತಾರ ಚರ್ಚೆ ನಡೆಯಿತು.

ಪ್ರಸ್ತುತ ಪರಿಸ್ಥಿತಿಯು ಭಾರತಕ್ಕೆ ಉಂಟುಮಾಡಬಹುದಾದ ಪರಿಣಾಮಗಳ ಬಗ್ಗೆ ಅಧಿಕಾರಿಗಳು ಪ್ರಧಾನಿಗೆ ಮಾಹಿತಿ ನೀಡಿದರು. ಯುದ್ಧ ಭೀತಿಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗುವ ಸಾಧ್ಯತೆಗಳ ಕುರಿತು ಹಣಕಾಸು ಮತ್ತು ಪೆಟ್ರೋಲಿಯಂ ಸಚಿವಾಲಯಗಳೊಂದಿಗೆ ಚರ್ಚೆ ನಡೆಯಿತು. ಇದರ ಪರಿಣಾಮವಾಗಿ ದೇಶೀಯ ಆರ್ಥಿಕತೆಯ ಮೇಲೆ ಬರುವ ಒತ್ತಡವನ್ನು ಸಮರ್ಥವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಗಲ್ಫ್ ವಲಯದಲ್ಲಿ ವಾಯುಪ್ರದೇಶ ಮುಚ್ಚಿರುವ ಹಿನ್ನೆಲೆ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳು ಅಸ್ತವ್ಯಸ್ತಗೊಂಡಿರುವ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಯಿತು. ಭಾರತೀಯ ನಾಗರಿಕರ ಪ್ರಯಾಣದ ಸೌಲಭ್ಯ ಹಾಗೂ ಸುರಕ್ಷತೆ ದೃಷ್ಟಿಯಿಂದ ಅಗತ್ಯ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್. ಜೈಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಉಪಸ್ಥಿತರಿದ್ದರು.

ದಾಳಿಗೆ ಶಿವಕುಮಾರ್ ಖಂಡನೆ

ಬೆಂಗಳೂರು: ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಈಗ ನಡೆಯುತ್ತಿರುವ ಯುದ್ಧ ಸರಿಯಲ್ಲ, ವೈಮಾನಿಕ ದಾಳಿಯಲ್ಲಿ ಮಕ್ಕಳು ಸತ್ತಿದ್ದಾರೆ. ಏನೂ ಮಾಡದ ಮಕ್ಕಳ ಶಾಲೆ ಮೇಲೆ ಏಕೆ ದಾಳಿ ಮಾಡಬೇಕು. ಇದು ಖಂಡನೀಯ. ದುಬೈ ಸೇರಿದಂತೆ ಕೊಲ್ಲಿ ದೇಶಗಳಲ್ಲಿ ಸಿಲುಕಿರುವ ಭಾರತೀಯ ನಾಗರಿಕರನ್ನ ರಕ್ಷಣೆ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರವನ್ನು ಆಗ್ರಹಿಸಿದ್ದಾರೆ.

ಭಾನುವಾರ ಸದಾಶಿವನಗರದ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಕರ್ನಾಟಕ, ಕೇರಳ ಸೇರಿದಂತೆ ಭಾರತೀಯ ನಾಗರಿಕರನ್ನ ರಕ್ಷಣೆ ಮಾಡಬೇಕು ಎಂದು ಕೇಂದ್ರ ಸರ್ಕಾರದ ಬಳಿ ಮನವಿ ಮಾಡುತ್ತೇನೆ. ನಾಗರಿಕರ ರಕ್ಷಣೆಗೆ ಏನೂ ಒತ್ತಡ ಹೇರಬೇಕೋ ಆ ಕೆಲಸವನ್ನು ನಾವು ಮಾಡುತ್ತೇವೆ. ಭಾರತೀಯರು, ಕನ್ನಡಿಗರಿಗೆ ಧೈರ್ಯ ತುಂಬುವ ಕೆಲಸ ನಾವು ಮಾಡುತ್ತೇವೆ. ಪ್ರಪಂಚದ ಯಾವ ಮನುಷ್ಯರು ಹೀಗೆ ಸಾಯುವುದನ್ನ ನಾನು ಖಂಡಿಸುತ್ತೇನೆ ಎಂದರು. ದುಬೈನಲ್ಲಿ ನಮ್ಮ ಶಾಸಕರಾದ ಎ.ಸಿ. ಶ್ರೀನಿವಾಸ್, ಭರತ್ ರೆಡ್ಡಿ ಅವರ ಕುಟುಂಬ, ಎಂಎಲ್‌ಸಿ ಭೋಜೇಗೌಡ ಅವರು ಸಿಲುಕಿಕೊಂಡಿದ್ದಾರೆ. ಜೊತೆಗೆ ಅನೇಕ ನಾಗರಿಕರು ಸಿಲುಕಿಕೊಂಡಿದ್ದಾರೆ.

ತ.ನಾಡು ಅಭಿವೃದ್ಧಿಗೆ ಕೇಂದ್ರ ಆದ್ಯತೆ

ಪುಟ ೧ರ → **ಡಿಜಿಟಲೀಕರಣದ ವಿಸ್ತರಣೆ:** ಕುಂಭಕೋಣಂ, ಯೇರ್ಕಾಡ್ ಮತ್ತು ವೆಲ್ಲೂರುಗಳಲ್ಲಿ ಮೂರು ಹೊಸ ಆಕಾಶವಾಣಿ ಎಫ್‌ಎಂ ರಿಲೇ ಟ್ರಾನ್ಸ್ ಮಿಟರ್‌ಗಳನ್ನು ಪ್ರಧಾನಿ ಉದ್ಘಾಟಿಸಿದರು. ಪ್ರಾದೇಶಿಕ ಪ್ರಸಾರ ಸೇವೆಯನ್ನು ಬಲಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಆದಿಚ್ಚನಲ್ಲೂರು ನಂತಹ ಐತಿಹಾಸಿಕ ತಾಣಗಳನ್ನು ಜಾಗತಿಕ ಪರಂಪರೆಯ ತಾಣಗಳನ್ನಾಗಿ ಅಭಿವೃದ್ಧಿಪಡಿಸುವುದಾಗಿ ಅವರು ಆಶ್ವಾಸನೆ ನೀಡಿದ್ದಾರೆ.

ಕುಟುಂಬವೊಂದರ ಎಟಿಎಂ ಆಗಿತ್ತು ಪುದುಚೇರಿ: ಪಿಎಂ

ಪುದುಚೇರಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಹಿಂದಿನ ಕಾಂಗ್ರೆಸ್ ಆಡಳಿತದಲ್ಲಿ ಪುದುಚೇರಿ ದಿಲ್ಲಿಯ ಒಂದು ಕುಟುಂಬದ ಎಟಿಎಂ ಆಗಿತ್ತು. ಭ್ರಷ್ಟಾಚಾರ ಮತ್ತು ರಾಜಕೀಯ ಅಸ್ಥಿರತೆಯಿಂದಾಗಿ ಇಲ್ಲಿನ ಅಭಿವೃದ್ಧಿ ಕುಂಠಿತವಾಗಿತ್ತು ಎಂದಿದ್ದಾರೆ. 2,700 ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನಾವರಣಗೊಳಿಸಿದ ಅವರು, ಡಿಎಂಕೆ-ಕಾಂಗ್ರೆಸ್ ಮೈತ್ರಿ, ಅಭಿವೃದ್ಧಿಗೆ ಸ್ಪೀಡ್ ಬ್ರೇಕರ್ ಇದ್ದಂತೆ ಎಂದರು. ಪುದುಚೇರಿಯನ್ನು ವೈದ್ಯಕೀಯ ಪ್ರವಾಸೋದ್ಯಮದ ಹಬ್ ಆಗಿ ಮಾಡುವ ಗುರಿಯನ್ನು ಈಗಿನ ಡಬಲ್ ಇಂಜಿನ್ ಸರ್ಕಾರ ಹೊಂದಿದೆ ಎಂದು ಅವರು ಹೇಳಿದ್ದಾರೆ.

ಕನ್ನಡಿಗರ ರಕ್ಷಣೆಗೆ ತ್ವರಿತ ಕ್ರಮ: ಸಿಎಂ

ಪುಟ ೧ರ → **ವಿದ್ಯುತ್ ದರ ಏರಿಕೆ ಸರ್ಕಾರದ ಮುಂದಿಲ್ಲ:** ಬಜೆಟ್ ಆದರ ಪಾಡಿಗೆ ಅದು ಆಗಲಿದೆ. ಮಂಡನೆಯಾದ ಮೇಲೆ ನೋಡಿ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ವಿದ್ಯುತ್ ದರ ಏರಿಕೆ ಸರ್ಕಾರದ ಮುಂದಿಲ್ಲ ಎಂದರು.

ಪರಿಹಾರದ ಚೆಕ್ ವಿತರಣೆ: ಮುಸ್ಲಿಮರಿಂದ ಹತ್ಯೆಗೀಡಾದ ಊರುಗಡೂರಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್ ಪೋಷಕರಿಗೆ ಸರ್ಕಾರದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ 15 ಲಕ್ಷ ರೂ. ಚೆಕ್ ವಿತರಿಸಿದರು. ತರೀಕೆರೆಗೆ ಮದುವೆಗೆ ಹೋಗುವ ಸಲುವಾಗಿ ನಗರದ ವಿಮಾನ ನಿಲ್ದಾಣಕ್ಕೆ ಬಂದಿದ್ದ ಅವರು, ಚೆಕ್ ವಿತರಿಸಿ ಪೋಷಕರಿಗೆ ಸಾಂತ್ವನ ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಎಸ್ಪಿ ನಿಖಿಲ್ ಮೊದಲಾದವರು ಇದ್ದರು.

ಸಮಸ್ತರ ಅಭಿವೃದ್ಧಿಗೆ ಶ್ರಮ

ಪುಟ ೧ರ → ನಮ್ಮ ಭಾರತೀಯ ನೆಲದಲ್ಲಿ ಅಧ್ಯಾತ್ಮ ಪರಂಪರೆ ಅತ್ಯಂತ ಶ್ರೀಮಂತವಾಗಿದೆ. ದೈಹಿಕ ಶುಚಿತ್ವದಷ್ಟೇ ಮಾನಸಿಕ ಶುಚಿತ್ವಕ್ಕೆ ಅಗತ್ಯವಾದ ಧ್ಯಾನ, ಜಪ-ತಪಗಳನ್ನು ಮೈಗೂಡಿಸಿಕೊಂಡ ದೇಶ ನಮ್ಮದು. ಇಂತಹ ಪುಣ್ಯಭೂಮಿಯಲ್ಲಿ ಅನೇಕ ಸಂತರು, ಸಾಧುಗಳು, ಶರಣರಾಗಿ ಹೋಗಿದ್ದಾರೆ. ಇಂತಹ ದಾರ್ಶನಿಕ ಲೋಕದಲ್ಲಿ ಅಗ್ರಗಣ್ಯರಾದವರು ಜಗದ್ಗುರು ರೇಣುಕಾಚಾರ್ಯರು ಎಂದು ಶ್ಲಾಘಿಸಿದರು.

ವಿವಿಧ ಸಮುದಾಯಕ್ಕೆ ಸೇರಿದ 18 ಮಠ ಸ್ಥಾಪನೆ: ರೇಣುಕಾಚಾರ್ಯರು, ತೆಲಂಗಾಣಕ್ಕೆ ಸೇರಿದ ಕೊಲ್ಲಿಪಾಕಿ ಎಂಬ ಗ್ರಾಮದಲ್ಲಿ ವಿವಿಧ ಸಮುದಾಯಕ್ಕೆ ಸೇರಿದ 18 ಮಠಗಳನ್ನು ಸ್ಥಾಪಿಸುವ ಮೂಲಕ ಕ್ರಾಂತಿಯ ಮೊದಲ ಹೆಜ್ಜೆಯನ್ನಿಟ್ಟಿದ್ದರು. ಧಾರ್ಮಿಕ ಸಿದ್ಧಾಂತದ ಜತೆಗೆ ಸೈದ್ಧಾಂತಿಕ, ಸಾಮಾಜಿಕ ಮತ್ತು ಶೈಕ್ಷಣಿಕ, ಮಹಿಳಾ ಕಲ್ಯಾಣಕ್ಕೆ ಒತ್ತು ನೀಡಿದ್ದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಉಪಮೇಯರ್ ಪುಟ್ಟರಾಜು, ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಘಟಕದ ಮಹಿಳಾ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಸಾಹಿತಿ ಪ್ರಶಾಂತ್ ರಿಪ್ಪನ್‌ಪೇಟೆ, ರೇಣುಕಾಚಾರ್ಯ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷ ಎಸ್.ವಿ.ರಾಜೇಂದ್ರ ಪ್ರಸಾದ್, ವೀರಶೈವ ಲಿಂಗಾಯತ ಸಮಾಜದ ಮುಖಂಡ ಪಾಲನೇತ್ರ ಸೇರಿದಂತೆ ಇತರರಿದ್ದರು.

ಮಠಗಳು ಸಮಾಜವನ್ನು ಒಗ್ಗೂಡಿಸಬೇಕು



ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ವೀರಶೈವ ಲಿಂಗಾಯತ ಮಠಮಾನ್ಯಗಳು ಸರ್ವ ಧರ್ಮ, ಸರ್ವಜಾತಿ, ಜನಾಂಗದವರಿಗೂ ಆಶ್ರಯ, ಅನ್ನ ಮತ್ತು ಅರಿವು(ವಿದ್ಯೆ) ನೀಡುವ ಮೂಲಕ ಪರಂಪರೆಯನ್ನು ಪೋಷಿಸಿಕೊಂಡು ಬಂದಿದ್ದಾರೆ. ದೇಶದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ನಮ್ಮ ಪೂರ್ವಿಕರು ಮಹಾಪುರುಷರು, ನಮ್ಮದು ಶ್ರೀಮಂತ ಪರಂಪರೆ ಎಂದು ಹೆಮ್ಮೆಪಟ್ಟರೆ ಸಾಲದು ವರ್ತಮಾನದಲ್ಲಿನ ಸನ್ನಿವೇಶದ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಮಾಜವನ್ನು ಒಗ್ಗೂಡಿಸುವ ಪ್ರಯತ್ನ ಮಾಡಬೇಕು ಎಂದರು.

ಕಾಡಾನೆ ದಾಳಿಗೆ ವಿದ್ಯಾರ್ಥಿನಿ ಬಲಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡುಪ್ರಾಣಿಗಳಿಗೆ ಮನುಷ್ಯರು ಬಲಿಯಾಗುತ್ತಿರುವ ಘಟನೆಗಳು ನಿರಂತರವಾಗುತ್ತಿದೆ. ಕಾಲೇಜು ವಿದ್ಯಾರ್ಥಿನಿಯೊಬ್ಬಳು ಕಾಡಾನೆ ದಾಳಿಗೆ ಆಸು ನೀಗಿದ ಮನಕಲಕುವ ಘಟನೆ ಇಲ್ಲಿಗೆ ಸಮೀಪದ ಬೆಟ್ಟತ್ತೂರು ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ. ಕಾಲೇಜ್ ಬಿಟ್ಟು ಮನೆಗೆ ಮರಳುತ್ತಿದ್ದ, ಬೆಟ್ಟತ್ತೂರು ಗ್ರಾಮದ ಗಿರೀಶ್ ಎಂಬವರ ಪುತ್ರಿ, ಮಡಿಕೇರಿಯ ಸಂತ ಜೋಸೆಫರ ಶಾಲೆಯ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪೂಜಾ (16) ಎಂಬಾಕೆಯೇ ಸಾವಿಗೀಡಾದ ಬಾಲಕಿ.



ಶನಿವಾರ ಸಂಜೆ 5.30ರ ವೇಳೆಗೆ ಬಸ್‌ನಿಂದಿಳಿದು ಬೆಟ್ಟತ್ತೂರಿನ ತನ್ನ ಮನೆಗೆ ನಡೆದುಕೊಂಡು ಹೋಗುವ ವೇಳೆ ಏಕಾಏಕಿ ಕಾಡಾನೆ ದಾಳಿ ನಡೆಸಿದೆ. ದಾಳಿಯಿಂದ ತೀವ್ರವಾಗಿ ಗಾಯಗೊಂಡ ಪೂಜಾ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆ. ಘಟನೆಯ ಮಾಹಿತಿ ತಿಳಿದು ಸ್ಥಳೀಯರು ಹಾಗೂ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮಡಿಕೇರಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಯಿತು.

ಸುಪ್ರೀಂ ಲೀಡರ್ ಖಮೇನಿ ಖತಂ

ಪುಟ ೧ರ → ಕಳೆದ ಕೆಲವು ತಿಂಗಳುಗಳಿಂದ ಭಾರೀ ಪ್ರತಿಭಟನೆಗಳಿಗೆ ಕಾರಣವಾಗಿದ್ದ ಇರಾನ್‌ನಲ್ಲಿ ಹಿಂಸಾಚಾರವೂ ಆಗಿತ್ತು. ಜನ ಖಮೇನಿ ವಿರುದ್ಧವೇ ತಿರುಗಿಬಿದ್ದಿದ್ದರು. ಇದರಿಂದಾಗಿ ಸಂಭ್ರಮಾಚರಣೆ ಮಾಡಿದ್ದಾರೆ ಎಂದು ಕೆಲವು ಸುದ್ದಿಸಂಸ್ಥೆಗಳು ವರದಿ ಮಾಡಿವೆ. ಜತೆಗೆ ಮಗಳು, ಅಳಿಯ, ಸೊಸೆ ಮತ್ತು ಮೊಮ್ಮಗ ಸೇರಿದಂತೆ ಖಮೇನಿಯ ಹಲವಾರು ಸಂಬಂಧಿಕರು ಸಹ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ದುಬೈ, ರಿಯಾದ್ ಮೇಲೆ ದಾಳಿ

ಅತ್ತ ತನ್ನ ಸರ್ವೋಚ್ಚನಾಯಕ ಖಮೇನಿ ಮೃತಪಟ್ಟಿದ್ದರೂ, ಇರಾನ್ ಕಡೆಯಿಂದ ದಾಳಿ ಮಾತ್ರ ನಿಂತಿಲ್ಲ. ಭಾನುವಾರ ಮಧ್ಯಾಹ್ನದ ಬಳಿಕ ಇಸ್ರೇಲ್ ರಾಜಧಾನಿ ಟೆಲ್ ಅವಿವ್ ಜತೆಗೆ, ದುಬೈ, ದೋಹಾ, ರಿಯಾದ್, ಅಬುದಾಬಿ ನಗರಗಳ ಮೇಲೆ ಇರಾನ್ ದಾಳಿ ಮುಂದುವರಿಸಿದೆ. ಖಮೇನಿ ಸಾವಿನ ಬಳಿಕ ಇರಾನ್‌ನ ರೆವೊಲ್ಯುಷನರಿ ಗಾರ್ಡ್ ಪ್ರತೀಕಾರ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ ಭಾರೀ ಪ್ರಮಾಣದ ದಾಳಿ ನಡೆಸಿದೆ. ಇಸ್ರೇಲ್‌ನಲ್ಲಿ ಐದು ಮಂದಿ, ದುಬೈನಲ್ಲಿ ಪಾಕ್, ನೇಪಾಳ ಮತ್ತು ಬಾಂಗ್ಲಾದ ತಲಾ ಒಬ್ಬರು ಸತ್ತಿದ್ದಾರೆ. ದುಬೈ ಕಡೆಗೆ 165 ಕ್ಷಿಪಣಿಗಳು ಬಂದಿದ್ದು ಇದರಲ್ಲಿ 152 ಅನ್ನು ಧ್ವಂಸಗೊಳಿಸಲಾಗಿದೆ. ಹಾಗೆಯೇ, 541 ಡ್ರೋನ್‌ಗಳು ಬಂದಿದ್ದು, ಇವುಗಳಲ್ಲಿ 506 ಅನ್ನು ಗುರುತಿಸಿ ನಾಶ ಮಾಡಲಾಗಿದೆ. ಕುವೈತ್‌ನಲ್ಲೂ ಒಬ್ಬರು ಸತ್ತಿದ್ದಾರೆ.

ಇರಾನ್ ಪ್ರತೀಕಾರದ ಎಚ್ಚರಿಕೆ

ಪುಟ ೧ರ → ಈ ಮಧ್ಯೆ, ಇರಾನ್‌ನಲ್ಲೂ ಅಮೆರಿಕ ಮತ್ತು ಇಸ್ರೇಲ್ ದಾಳಿಯಿಂದಾಗಿ 200ಕ್ಕೂ ಹೆಚ್ಚು ಮಂದಿ ಮೃತರಾಗಿದ್ದಾರೆ ಮತ್ತು ಸಾವಿರಾರು ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್‌ನ ರಾಜತಾಂತ್ರಿಕರು ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಮಾಹಿತಿ ನೀಡಿದ್ದಾರೆ. ಉತ್ತರ ಟೆಹ್ರಾನ್‌ನ ಗುಪ್ತಚರ ಸಚಿವಾಲಯದ ಕಟ್ಟಡದ ಬಳಿ ಶನಿವಾರ ಸಂಜೆ ಕನಿಷ್ಠ ಮೂರು ಸ್ಫೋಟಗಳು ಕೇಳಿಬಂದಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮಧ್ಯ ಇರಾನ್‌ನಲ್ಲಿ ಕ್ಷಿಪಣಿ ಲಾಂಚರ್‌ಗಳು ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳ ವಿರುದ್ಧ ಹೊಸ ದಾಳಿಗಳನ್ನು ಪ್ರಾರಂಭಿಸಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ದಕ್ಷಿಣ ಇರಾನ್‌ನಲ್ಲಿ, ಬಾಲಕಿಯರ ಶಾಲೆ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 115 ಜನರು ಮೃತಪಟ್ಟಿದ್ದಾರೆ. ಖಮೇನಿ ಅವರ ಸಾವಿನ ನೆನಪಿಗಾಗಿ ಇರಾನ್ ಸರ್ಕಾರ 40 ದಿನಗಳ ಸಾರ್ವಜನಿಕ ಶೋಕಾಚರಣೆ ಮತ್ತು ಏಳು ದಿನಗಳ ರಾಷ್ಟ್ರವ್ಯಾಪಿ ಸಾರ್ವಜನಿಕ ರಜಾದಿನವನ್ನು ಘೋಷಿಸಿದೆ.

ನನ್ನ ಧರ್ಮ ಸರಿ, ನಿನ್ನ ಧರ್ಮ ತಪ್ಪು ಎನ್ನುವ ಕಲ್ಪನೆ ಇಲ್ಲ

ಚಿಕ್ಕಮಗಳೂರು: ಧರ್ಮ, ಪೂಜೆ, ಭಕ್ತಿ ಇವು ಪ್ರದರ್ಶನಕ್ಕೆ ಇರುವಂತಹ ಸಂಗತಿಗಳಲ್ಲ, ಇವು ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚಿಸಲು ಇರುವ ಸಾಧನಗಳು. ನನ್ನ ಧರ್ಮ ಸರಿ, ನಿನ್ನ ಧರ್ಮ ತಪ್ಪು ಎನ್ನುವ ಕಲ್ಪನೆ ಎಲ್ಲಿಯೂ ಇಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಭಿಪ್ರಾಯಪಟ್ಟರು.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರಿನಲ್ಲಿ ಜಗದ್ಗುರು ರಂಭಾಪುರಿ ಪೀಠದ ಆವರಣದಲ್ಲಿ 51 ಅಡಿ ಎತ್ತರದ ಜಗದ್ಗುರು ಶ್ರೀ ರೇಣುಕಾಚಾರ್ಯರ ಪ್ರತಿಮೆ ಪ್ರತಿಷ್ಠಾಪನೆ ಶಿಲಾನ್ಯಾಸ ಕಾರ್ಯಕ್ರಮ ಹಾಗೂ ಮೇಲ್ಸಾರ್ ರಸ್ತೆಯ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಮ್ ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ. ಅಂದರೆ ಎಷ್ಟೇ ದೇವರಿಗೆ ನಮಸ್ಕಾರ ಮಾಡಿದರೂ ಸಹ ಅದು ಒಂದೇ ದೇವರಿಗೆ ತಲುಪುತ್ತದೆ, ಎಷ್ಟೇ ನದಿಗಳಿದ್ದರೂ ಅವು ಸೇರುವುದು ಒಂದೇ ಸಾಗರಕ್ಕೆ. ಶಿವನ ಲಿಂಗಕ್ಕೆ ಇದೇ ಆಕಾರ ಎಂಬುದು ಇಲ್ಲ, ಇಲ್ಲಿ ಇರುವುದು ನಮ್ಮ ಭಕ್ತಿ ಎಂದು ಹೇಳಿದರು. ಒಕ್ಕಲಿಗನಾಗಿ ಗಂಗಾಧರ ಅಜ್ಜಯ್ಯ ಅವರ ಹೆಸರಿನಲ್ಲಿ ನೀನು ಏಕೆ ಪ್ರಮಾಣ ವಚನ ಸ್ವೀಕಾರ ಮಾಡಿದೆ ಎಂದು ಕೇಳಿದರು. ಆದಕ್ಕೆ ನಾನು ಇದು ನನ್ನ ನಂಬಿಕೆ ಎಂದು ಹೇಳಿದೆ. ಅವರು ನನಗೆ ಆತ್ಮಬಲವನ್ನು ತುಂಬಿದ್ದಾರೆ. ರಂಭಾಪುರಿ ಶ್ರೀಗಳು ನನಗೆ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ ಎಂದರು. ಅಜ್ಜಯ್ಯ ಅವರು ನನಗೆ ನೀಡಿದ ಸಾಕ್ಷಾತ್ಕಾರವನ್ನ ಬಹಿರಂಗ ಮಾಡಲು ಆಗುವುದಿಲ್ಲ, ಸಮಯ ಬಂದಾಗ ಪುಸ್ತಕ ರೂಪದಲ್ಲಿ ಹೊರತರುತ್ತೇನೆ ಎಂದರು. ಎನ್ನ ಪರಮಗುರು ನೀವೇ, ಎನ್ನ ಗತಿ ಮತಿ ನೀವೇ, ಎನ್ನ ಅರಿವಿನ ಜ್ಯೋತಿ ನೀವೇ, ಎನ್ನ ಅಂತರಂಗ ಬಹಿರಂಗ ನೀವೇ ಕೂಡಲಸಂಗಮದೇವಾ ಎಂದು ಬಸವಣ್ಣ ಹೇಳುತ್ತಾರೆ. ಅಂದರೆ ಗುರುವಿಲ್ಲದೇ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದರು.



ರಂಭಾಪುರಿ ಮಠದ ಭವನಕ್ಕೆ 5 ಕೋಟಿ ರೂಪಾಯಿ: ರಂಭಾಪುರಿ ಶ್ರೀಗಳು ನಿಂತು ಹೋಗಿದ್ದ ಭವನಕ್ಕೆ ನೀವು ಸಹಾಯ ಮಾಡಬೇಕು ಎಂದು ಹೇಳಿದ್ದರು. ನಾನು ಈ ಹಿಂದೆ ಸ್ವಲ್ಪ ಅಡಚಣೆಗಳಿವೆ ಎಂದು ತಡೆಯಲು ಹೇಳಿದ್ದೆ. ಈಗ ಸಮಯ ಒದಗಿ ಬಂದಿದೆ. 5 ಕೋಟಿ ರೂಪಾಯಿಗಳನ್ನು ನೀಡಲಾಗುವುದು. ನಾನೇ ಖುದ್ದಾಗಿ ಬಂದು ಅದನ್ನು ಉದ್ಘಾಟನೆ ಮಾಡುತ್ತೇನೆ ಎಂದು ಹೇಳಿದರು.

ದುಷ್ಟ ಶಕ್ತಿಗಳ ವಿರುದ್ಧ ಸಮಾಜ ಒಂದಾಗಬೇಕು : ವಿಜಯೇಂದ್ರ

ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವೀರಶೈವ ಲಿಂಗಾಯತ ಸಮಾಜ ಜಾಗೃತಿಯಾಗಬೇಕಾದ ಅಗತ್ಯವಿದೆ, ಕೆಲವು ದುಷ್ಟ ಶಕ್ತಿಗಳು ಸಮಾಜವನ್ನು ಒಡೆದು ಆಳುವ ನೀತಿಯನ್ನ ಅನುಸರಿಸುತ್ತಿವೆ. ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳು ವ್ಯತ್ಯಾಸಗಳನ್ನು ಮರೆತು ಒಟ್ಟಾಗಿ, ಒಂದಾಗಿ ಒಟ್ಟುಗೂಡಿ ಕಾರ್ಯ ನಿರ್ವಹಿಸಬೇಕಾದ ಅನಿವಾರ್ಯವಿದೆ. ಎಲ್ಲಾ ಸಮಾಜಗಳಿಗೆ ನೆರಳು ಹಾಗೂ ಆಶ್ರಯ ನೀಡುವ ಶಕ್ತಿ ವೀರಶೈವ ಲಿಂಗಾಯತ ಸಮಾಜಕ್ಕಿದೆ ಎಂದರು. ಬಿ.ಎಸ್ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ವೀರಶೈವ ಲಿಂಗಾಯತ ಮಠಗಳಲ್ಲದೆ ರಾಜ್ಯದಲ್ಲಿರುವ ಎಲ್ಲಾ ಸಮಾಜದ ಮಠಮಾನ್ಯಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿದರು, ಕಾರಣ ಎಲ್ಲಾ ಮಠಮಾನ್ಯಗಳು ಸಮಾಜದ ಮಕ್ಕಳಿಗೆ ಅಕ್ಷರದಾಸೋಹ, ಅನ್ನದಾಸೋಹ ಹಾಗು ಜ್ಞಾನ ದಾಸೋಹ ನೀಡುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿವೆ ಎಂದು ಶ್ಲಾಘಿಸಿದರು.

ಹಿಂದೂ ಸಮ್ಮೇಳನ | ರಘುನಂದನ ಹೇಳಿಕೆ

ಸಹಿಷ್ಣುತೆ ಹಿಂದೂಗಳ ದೌರ್ಬಲ್ಯ ಅಲ್ಲ



• **ಧಾರವಾಡ:** ಹಿಂದೂ ಸಮಾಜ ಒಡೆಯಲು ದುಷ್ಟಶಕ್ತಿಗಳು ಪ್ರಯತ್ನಿಸುತ್ತಿವೆ. ಈ ಕಾರಣಕ್ಕೆ ಹಿಂದೂ ಸಮಾಜವು ಜಾತಿ ವ್ಯವಸ್ಥೆ ಮೀರಿ ಸಂಘಟನೆಗೊಳ್ಳಬೇಕಿದೆ ಎಂದು ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ ಹೇಳಿದರು.

ನಗರದ ಮಾಳಮಡ್ಡಿಯ ಕೆ.ಇ.ಬೋರ್ಡ್ ಶಾಲೆ ಆವರಣದಲ್ಲಿ ಭಾನುವಾರ ನಡೆದ ಹಿಂದೂ ಸಮ್ಮೇಳನದ ವಕ್ತಾರರಾಗಿ ಮಾತನಾಡಿ, ಹಿಂದೂ ಸಮಾಜದಲ್ಲಿ ಹಲವು ಭಿನ್ನತೆಗಳಿದ್ದರೂ, ನಾವೆಲ್ಲ ಒಂದೇ ತಾಯಿ ಮಕ್ಕಳು ಎಂಬುದು ಮರೆಯಬಾರದು ಎಂದರು.

ಹಿಂದೂ ಧರ್ಮ ಶಾಂತಿ ಬಯಸುತ್ತದೆ. ಆದರೆ, ಅಧರ್ಮ ಸಹಿಸುವುದಿಲ್ಲ, ನಾವು ಅನ್ಯ ಧರ್ಮೀಯರನ್ನು ದ್ವೇಷಿಸುವುದಿಲ್ಲ, ಆದರೆ, ನಮ್ಮ ಧರ್ಮದ ಮೇಲೆಯೇ ಪ್ರಹಾರವಾದಾಗ ಮೌನವಾಗಿ ಕೂರವುದು ವೀರತ್ವವೂ ಸಹ ಅಲ್ಲವೆಂದು ಸಮಾಜ ಎಚ್ಚರಿಸಿದರು.

ಇಂದಿನ ಸಂಕ್ರಮಣ ಕಾಲದಲ್ಲಿ ಹಿಂದೂ ಸಮಾಜ ತನ್ನಲ್ಲಿನ ನ್ಯೂನ್ಯತೆಗಳನ್ನು ಹಾಗೂ ದೌರ್ಬಲ್ಯಗಳನ್ನು ತಿದ್ದುಕೊಂಡು, ಬಾಹ್ಯ ಮತ್ತು ಆಂತರಿಕ ಶಕ್ತಿಗಳು ಎದುರಿಸಲು ಹಿಂದೂ ಸಮಾಜ ಒಗ್ಗೂಡುವುದು ತುರ್ತು ಅಗತ್ಯವಿದೆ ಎಂದು ಹೇಳಿದರು.

ಭಾರತ ಪ್ರಾಚೀನ ದೇವ ನಿರ್ಮಿತ ಹಿಂದೂ ರಾಷ್ಟ್ರ. ಹೀಗಾಗಿ ನಮ್ಮ ಪರಂಪರೆಯ ಜೊತೆ ಸಂಸ್ಕೃತಿ, ಧರ್ಮ ಉಳಿಸಲು ಜಾತಿ-ಬೇಧ ಮರೆತು ಹಿಂದೂ ಸಮಾಜ ಸಂಘಟನೆಯ ಮೂಲಕವೇ ರಾಷ್ಟ್ರದ ಪ್ರಗತಿಗೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

> ಯುವಕರ ಕೈಯಲ್ಲಿ ಸ್ಮಾರ್ಟ್‌ಫೋನ್ ಇರಲಿ. ಆದರೆ. ಹೃದಯದಲ್ಲಿ ಸನಾತನ ಸಂಸ್ಕೃತಿಯ ಸಂಸ್ಕಾರವಿರಲಿ. ಇತಿಹಾಸದ ವೀರರಾದ ಶಿವಾಜಿ ಮಹಾರಾಜರು, ವಿವೇಕಾನಂದರ ಆದರ್ಶ ಮೈಗೂಡಿಸಿಕೊಂಡು, ಸಮಾಜದ ಏಳಿಗೆ ಸಮಯ ಮೀಸಲಿಡಿ.
>
> ■ ಪರಮಾತ್ಮ ಮಹಾರಾಜ, ಪೀಠಾಧ್ಯಕ್ಷರು ಪರಮಾತ್ಮ ಸಂಸ್ಥಾನಮಠ-ದ್ವಾರಪುರ

> ಹಿಂದೂ ಸಮಾಜದ ಶಕ್ತಿ ಮತ್ತು ಭಕ್ತಿಗೆ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವೇ ಸಾಕ್ಷಿ. ಶ್ರದ್ಧಾ ಕೇಂದ್ರಗಳ ಉಳುವಿಗೆ ಹಿಂದೂ ಸಮಾಜ ಇನ್ನಷ್ಟು ದೃಢವಾದ ಹೆಜ್ಜೆ ಇರಿಸಬೇಕಿದೆ. ಈ ಮೂಲಕ ಸಮಾಜದ ಜತೆ ರಾಷ್ಟ್ರ ಧರ್ಮವೂ ಕಾಪಾಡಬೇಕು.
>
> ■ ರಘುನಂದನ ಜೀ, ಸಹ ಸಂಯೋಜಕರು, ಅಖಿಲ ಭಾರತೀಯ ಪ್ರಜ್ಞಾ ಪ್ರವಾಹ

ಶೋಭಾಯಾತ್ರೆ ಮೆರಗು

ಸಮ್ಮೇಳನದ ಅಂಗವಾಗಿ ಡೊಳ್ಳು ಕುಣಿತ, ವೀರಗಾಸೆ, ವಿವಿಧ ವಾದ್ಯಮೇಳದ ಜೊತೆಗೆ ವೆಂಕಟೇಶ್ವರ ದೇವಸ್ಥಾನ ಮಾರ್ಗ, ಕೇಳಕರ ಮಾರುತಿ ದೇವಸ್ಥಾನ ಮಾರ್ಗ ಹಾಗೂ ಉಳವಿ ಚನ್ನಬಸವೇಶ್ವರ ದೇವಸ್ಥಾನ ಮಾರ್ಗವಾಗಿ ನಡೆದ ಮೂರು ಶೋಭಾಯಾತ್ರೆ ಮೆರಗು ತಂದವು.

ಸಾನ್ನಿಧ್ಯ ವಹಿಸಿದ್ದ ದ್ವಾರಪುರ ಕ್ಷೇತ್ರದ ಪರಮಾತ್ಮ ಮಹಾರಾಜ, ಸಮಾಜದಲ್ಲಿ ಹಿಂದುಗಳು ಕೇವಲ ಜಾಗೃತರಾದರೆ ಸಾಲದು, ಪರಿವರ್ತನೆ ಸಹ ಆಗಬೇಕಿದೆ. ನಮ್ಮ ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಒಳಗಾಗದಂತೆ ಎಚ್ಚರ ವಹಿಸಲು ಕರೆ ನೀಡಿದರು.

ವೇದಿಕೆಯಲ್ಲಿ ಸಮಿತಿ ಅಧ್ಯಕ್ಷೆ ಡಾ.ಸೌಭಾಗ್ಯ ಕುಲಕರ್ಣಿ, ಉಪಾಧ್ಯಕ್ಷ ಗೋಪಾಲ ಲಮಾಣಿ ಇದ್ದರು. ರವಿ ದೇಶಪಾಂಡೆ, ಲೋಕನಾಥ ಮಲ್ಲಿಗವಾಡ, ವಿನಾಯಕ ಜೋಶಿ, ಸುಮಂಗಲಾ ದಾಂಡೇವಾಲೆ, ರಾಜಶೇಖರ ಹಿರೇಗೌಡರ ಸೇರಿ ಅನೇಕರು ಪಾಲ್ಗೊಂಡಿದ್ದರು.

ಸಂತರು ನಿರ್ಮಿಸಿದ್ದ ಶಕ್ತಿ ಮರು ಸ್ಥಾಪನೆಗೊಳ್ಳಲಿ

ಶ್ರೀಧರ ನಾಡಗೇರ ಹೇಳಿಕೆ



• **ಬಾಗಲಕೋಟೆ:** ಮಿಲಿಟರಿ ಕಾರ್ಯಾಚರಣೆ, ಆರ್ಥಿಕತೆ, ಅಧಿಕಾರದ ಬಲದ ಮೂಲಕ ಅಮೆರಿಕಾ, ಚೀನಾ ವಿಶ್ವವನ್ನು ಮುನ್ನಡೆಸುತ್ತೀವೆ. ಈ ಅಗತ್ಯಕ್ಕಿಂತ ಆಧ್ಯಾತ್ಮಿಕ, ಸಾಂಸ್ಕೃತಿಕ ಶಕ್ತಿ ಮೂಲಕ ವಿಶ್ವಕ್ಕೆ ಮಾರ್ಗದರ್ಶನ ಮಾಡುವ ಬಲಾಢ್ಯವಾದ ಶಕ್ತಿ ಭಾರತ ಹೊಂದಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಗೇರ ಹೇಳಿದರು.

ನಗರದ ಬಿವಿವಿ ಸಂಘದ ಕಾಲೇಜು ಮೈದಾನದಲ್ಲಿ ಭಾನುವಾರ ಸಂಜೆ ಹಮ್ಮಿಕೊಂಡಿದ್ದ ವಿರಾಟ ಹಿಂದೂ ಸಮ್ಮೇಳನದ ಬಹಿರಂಗ ಸಾರ್ವಜನಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಳೆದ 75 ವರ್ಷದಲ್ಲಿ ಭಾರತದ ಸಾಮರ್ಥ್ಯ ವಿಶ್ವಕ್ಕೆ ಪರಿಚಯಿಸುವ ಕೆಲಸ ಆಗಿರಲಿಲ್ಲ. ಆದರೆ, ಇಂದು ಭಾರತ ತನ್ನ ಸ್ವಂತ ಬಲದ ಮೇಲೆ ನಿಲ್ಲುತ್ತಿದೆ. ಭಾರತ ಜಗದ್ಗುರು ಆಗುವ ಕಾಲ ಸನ್ನಿಹಿತವಾಗಿದೆ. ರಾಕ್ಷಸತನದಿಂದ ಅಲ್ಲ, ಒಂದು ಹನಿ ರಕ್ತ ಚೆಲ್ಲದೇ ಜಗದ್ಗುರುವಾಗಬೇಕು. ಎಲ್ಲರಿಗೂ ಏಕ ರೂಪ ಕಾನೂನು ಜಾರಿಗೊಳ್ಳಬೇಕು ಎಂದು ತಿಳಿಸಿದರು.

ಚರಂತಿಮಠದ ಪ್ರಭು ಸ್ವಾಮೀಜಿ ಮಾತನಾಡಿ, ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ ಮಾತ್ರ ಎಲ್ಲವು ನಮಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಶತಮಾನಗಳ ಹಿಂದೆ ತೀರ್ಥಯಾತ್ರೆ ನಡೆಯುತ್ತಿದ್ದವು. ಜಗದ್ಗುರು ಆದಿ ಶಂಕರಾಚಾರ್ಯರು ಎಂಟನೇ ಶತಮಾನದಲ್ಲಿ 20 ಸಾವಿರ ಕಿ.ಮೀ ಕಾಲ್ನಡಿಗೆ ಮೂಲಕ ಸಂಚರಿಸಿ ಧರ್ಮ ಸ್ಥಾಪನೆ ಮಾಡಿದರು. ಹಿಂದು ಸಂಸ್ಕೃತಿಗೆ ಮರು ಜನುಮ ನೀಡಿದರು. ನಂತರ ಚೈತನ್ಯ ಸ್ವಾಮೀಜಿ, ತುಳಸಿ ದಾಸರು, ತುಕಾರಂ, ಗುರು ನಾನಕರು, ಸಮರ್ಥ ರಾಮದಾಸರು ಸೇರಿದಂತೆ ಅನೇಕ ಸಂತರು ದೇಶದಲ್ಲಿ ಭಿಕ್ಷೆ ಬೇಡಿ ಧರ್ಮ ಕಟ್ಟಿದರು ಎಂದರು.

ಡಾ.ಪಿ.ಚಂದ್ರಿಕಾ ಮಾತನಾಡಿ, ಜ್ಞಾನ ಹುಡುಕಿಕೊಂಡು ಹೋಗುವವರು ಭಾರತೀಯರು. ದೇಶದಲ್ಲಿ ಸ್ತ್ರೀ ಕುಲಕ್ಕೆ ಅಪಾರ ಗೌರವ ನೀಡಲಾಗಿದೆ. ಸೀತೆಯ ಆದರ್ಶ ನಮಗೆ ಮಾದರಿ. ರಾಮಾಯಣ, ಮಹಾ ಭಾರತ ನಮ್ಮ ಅಸ್ಮಿತೆಗಳು. ತೈಮೂರು ಖಾನ್ ಎನ್ನುವ ರಕ್ಷನಿಗೆ ತಕ್ಕ ಪಾಠ ಕಲಿಸಿದ ಪುಣ್ಯ ಭೂಮಿಯಿದು. ಎರಡು ಮಕ್ಕಳು ಸಾಕು ಎನ್ನುವುದು ನಮಗೆ ಮಾತ್ರನಾ?. ಇಂದು ನಮ್ಮವೇ ಮಕ್ಕಳು ಬೇಡ ಎನ್ನುವ ಮಟ್ಟಕ್ಕೆ ಮನಸ್ಥಿತಿ ಬಂದಿರುವುದು ಆತಂಕಕಾರಿ ಎಂದು ಖೇದ ವ್ಯಕ್ತಪಡಿಸಿದರು.

ಕೊಣ್ಣೂರು ಮಠದ ವಿಶ್ವರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿ.ಪ ಸದಸ್ಯ ಎಚ್.ಆರ್.ನಿರಾಣಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ರಾಜಶೇಖರ ಶೀಲವಂತ, ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್.ಪಾಟೀಲ, ಜಿ.ಪಂ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ ಸೇರಿದಂತೆ ಇತರರು ಇದ್ದರು.

ನಮ್ಮತನ ಕಳೆದುಕೊಳ್ಳದಿರಿ

ವಿರೋಧಿಗಳನ್ನು ಹಿಂದೂ ಸಂಸ್ಕೃತಿ ಪ್ರೀತಿಸುತ್ತದೆ. ನದಿ, ದೇವಸ್ಥಾನ ಪಾವಿತ್ರತೆ ಕಾಪಾಡಿಕೊಳ್ಳಬೇಕು. ಜ್ಞಾನ ಜಾಗೃತಿಗೊಳಿಸುವ ಕೆಲಸ ಸಂತರು ಮಾಡಿದ್ದಾರೆ. ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲೆ ಇದೆ. ಯಾವುದೇ ಕಾರಣಕ್ಕೂ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಿ ನಮ್ಮತನ ಕಳೆದುಕೊಳ್ಳಬಾರದು ಎಂದು ಚರಂತಿಮಠದ ಪ್ರಭು ಸ್ವಾಮೀಜಿ ಸಲಹೆ ನೀಡಿದರು.

ರಾಘವೇಂದ್ರ ಸ್ವಾಮಿ ವರ್ಧಂತಿ ಮಹೋತ್ಸವ



• **ಧಾರವಾಡ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಮಾಧ್ವ ವಿದ್ಯಾಪೀಠದಲ್ಲಿ ಶೈಕ್ಷಣಿಕವಾಗಿ ಅನೇಕ ಹೊಸ ಯೋಜನೆಗಳು ರೂಪಿಸಿದ್ದಾಗಿ ಸಂಸ್ಥೆಯ ನಿರ್ದೇಶಕ ಡಾ. ವೆಂಕಟೇಶ ಆಚಾರ್ಯ ಹೇಳಿದರು.

ನಗರದಲ್ಲಿ ಹಮ್ಮಿಕೊಂಡ ರಾಘವೇಂದ್ರ ಸ್ವಾಮಿಗಳ ವರ್ಧಂತಿ ಮಹೋತ್ಸವದಲ್ಲಿ ದಾಸ ಸಾಹಿತ್ಯ ಗೋಷ್ಠಿಯಲ್ಲಿ ಅವರು ಮಾತನಾಡಿ, ವಿವಿಧ ಕೋರ್ಸ್‌ಗಳು ನಡೆಸಲು ಸರ್ಕಾರದಿಂದ ಅನುಮತಿ ಪಡೆದಿದೆ ಎಂದು ತಿಳಿಸಿದರು. ಮಾಧ್ವ ವಿದ್ಯಾಪೀಠದಲ್ಲಿ ಸಂಸ್ಕೃತ ಪಾಠಶಾಲೆಯೂ ಆರಂಭಿಸಿದೆ. ಧಾರವಾಡದ ಅಧ್ಯಯನ ಪ್ರಿಯರು ಈ ಕೋರ್ಸ್‌ಗಳು ಹಾಗೂ ಪರೀಕ್ಷಾ ಯೋಜನೆ ಲಾಭ ಪಡೆದರೆ, ಅನುಷ್ಠಾನಗೊಳಿಸಿರುವುದು ಸಾರ್ಥಕವಾಗಲಿದೆ ಎಂದರು. ತತ್ತುಸಮನ್ವಯಾತ್ ಸೂತ್ರದ ಭಾವದೀಪದ ಕುರಿತು ಪಂ. ಪುಷ್ಕರಾಚಾರ್ಯ ಶಿರಹಟ್ಟಿ ಅವರು ವಿಶೇಷ ಅನುವಾದ ನಡೆಸಿದರು. ಪಂ. ವಾದಿರಾಜಾಚಾರ್ಯ ತಡಕೋಡ, ಪಂ. ಪ್ರಹ್ಲಾದಾಚಾರ್ಯ ಗಲಗಲಿ ಮಾತನಾಡಿದರು.

ವರ್ಧಂತಿ ಮಹೋತ್ಸವ ನಿಮಿತ್ತ ಮಾಧ್ವ ವಿದ್ಯಾಪೀಠದಿಂದ ಪರಿಸರ ಸಂರಕ್ಷಣೆಗೆ ತುಳಸಿ ಗಿಡಗಳು ಬೆಳೆಸುವ ಕಾರ್ಯಕ್ರಮ, ಸ್ತ್ರೀಯರಿಗೆ ರಾಘವೇಂದ್ರ ಸ್ವಾಮಿಗಳ ಜೀವನಾಧಾರಿತ ರಸಪ್ರಶ್ನೆ ಕಾರ್ಯಕ್ರಮ ಜರುಗಿದವು. ಇದಕ್ಕೂ ಮೊದಲು ರಾಘವೇಂದ್ರ ಸ್ತೋತ್ರ ಪಾರಾಯಣ ಜರುಗಿತು. ಈ ವೇಳೆ ವಿದ್ವಾಂಸರಾದ ಪಂ. ಜಯತೀರ್ಥ ಆಚಾರ್ಯ ಹುಂಡೇಕಾರ, ಪಂ. ಬಿ.ಆರ್. ವೆಂಕಟೇಶ ಆಚಾರ್ಯ ಪಂ. ಕಪಿಲಾಚಾರ್ಯ ಗಲಗಲಿ ಇದ್ದರು.

» ಮಾಧ್ವಪೀಠದಲ್ಲಿ ಹೊಸ ಕೋರ್ಸ್
» ಡಾ. ವೆಂಕಟೇಶ ಆಚಾರ್ಯ ಮಾಹಿತಿ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ

ಕಾರ್ಖಾನೆ ವಿಸ್ತರಣೆಗೆ ಕಾಂಗ್ರೆಸ್ ಕಾರಣ



• **ಕೊಪ್ಪಳ:** ಕಾರ್ಖಾನೆ ವಿಸ್ತರಣೆಯಿಂದ ಜನರ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಆಗುತ್ತಿದೆ ಕೇಂದ್ರ ಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಕಡೆ ಕೈ ತೋರಿಸುತ್ತಿದ್ದಾರೆ. ಆದರೆ, ಇಲ್ಲಿನ ಕಾರ್ಖಾನೆ ಹಾಗೂ ಕುಮಾರಸ್ವಾಮಿ ಅವರಿಗೆ ಸಂಬಂಧ ಇಲ್ಲ. ರಾಜ್ಯ ಸರಕಾರದ ಕೈಯಲ್ಲೇ ಕೀಲಿ ಇದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದ ಶಿವಶಾಂತವೀರ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಜನರೊಂದಿಗೆ ಜನತಾದಳ- ಜೆಡಿಎಸ್ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಭಾನುವಾರ ಮಾತನಾಡಿದ ಅವರು, ಕಾರ್ಖಾನೆ ಬರದಂತೆ ತಡೆಯುವ ಸಂಪೂರ್ಣ ಶಕ್ತಿ ರಾಜ್ಯ ಸರಕಾರದ ಕೈಯಲ್ಲಿ ಇದೆ. ಆದರೆ, ಇಲ್ಲಿ ಕಾರ್ಖಾನೆ ನಡೆಸುವ ಮಾಲೀಕರು ಮತ್ತು ಇಲ್ಲಿನ ಜನ ಪ್ರತಿನಿಧಿಗಳಿಗೆ ಜನರ ಆರೋಗ್ಯದ ಬಗ್ಗೆ ಕಾಳಜಿ, ಬದ್ಧತೆ ಇಲ್ಲ ಎಂದು ಆರೋಪಿಸಿದರು.

ರಾಜ್ಯ ಸರಕಾರ ತುಂಗಭದ್ರ ಡ್ಯಾಂನ ಕ್ರಸ್ಟ್ ಗೇಟ್ ಕೆಲಸ ಮಾಡಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಸರಕಾರಕ್ಕೆ ದೊಡ್ಡದಲ್ಲ. ಆದರೆ, ರೈತರು ಬಗ್ಗೆ ಕಾಳಜಿ ಇಲ್ಲದ್ದರಿಂದ ಅನುದಾನ ಬಿಡುಗಡೆ ಮಾಡಿಲ್ಲ. ಇಂಥ ಕೆಟ್ಟ ಸರಕಾರ ನಮ್ಮ ರಾಜ್ಯದಲ್ಲಿ ಆಡಳಿತ ಮಾಡಿದ್ದನ್ನು ನಾನು ಎಂದೂ ಕಂಡಿರಲಿಲ್ಲ ಎಂದರು.

ಪಕ್ಷದ ಜಿಲ್ಲಾಧ್ಯಕ್ಷ ಸುರೇಶ ಭೂಮರಡ್ಡಿ ಮಾತನಾಡಿದರು.

ಪಕ್ಷದ ಜಿಲ್ಲಾ ವಕ್ತಾರಮಲ್ಲನಗೌಡ ಕೋನನಗೌಡ್ರು, ತಾಲೂಕು ಗೌರವಾಧ್ಯಕ್ಷ ಈಶಪ್ಪ ಮಾದನೂರ, ಜಿಲ್ಲಾ ಗೌರವಾಧ್ಯಕ್ಷದೇವಪ್ಪ ಕಟ್ಟಿಮನಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

> 12 ವರ್ಷಗಳಿಂದ ವನವಾಸ ಅನುಭವಿಸಿದ್ದೇನೆ. ಇನ್ನೆರಡು ವರ್ಷಗಳಲ್ಲಿ ವನವಾಸ ಅಂತ್ಯವಾಗಲಿದೆ. ಕಣ್ಣು, ಕಿವಿ ಇಲ್ಲದ ಸತ್ತು ಹೋಗಿರುವ ರಾಜ್ಯ ಸರ್ಕಾರವನ್ನು ಕಿತ್ತು ಹಾಕಬೇಕು.
>
> ■ ಸಿ. ವಿ. ಚಂದ್ರಶೇಖರ, ಜೆಡಿಎಸ್ ಪರಾಜಿತ ಅಭ್ಯರ್ಥಿ

593 ಕೋಟಿ ಜಿಎಸ್‌ಟಿ ವಂಚನೆ: ಸೂತ್ರಧಾರಿ ಮೊಹಮ್ಮದ್ ಸೈಫುಲ್ಲಾ ಸೆರೆ

• **ಬೆಳಗಾವಿ:** ಸರಕು ಮತ್ತು ಸೇವಾ ತೆರಿಗೆ ವಂಚನೆ ವಿರುದ್ಧ ದೊಡ್ಡ ಮಟ್ಟದ ಕ್ರಮ ಕೈಗೊಂಡಿರುವ ಸರಕು ಮತ್ತು ಸೇವಾ ತೆರಿಗೆ ಗುಪ್ತಚರ ಮಹಾನಿರ್ದೇಶನಾಲಯದ ಬೆಳಗಾವಿ ವಲಯ ಘಟಕ ಸುಮಾರು 593 ಕೋಟಿ ಮೌಲ್ಯದ ನಕಲಿ ಬಿಲ್ ಆಧಾರಿತ ಇನ್ಪುಟ್ ತೆರಿಗೆ ಕ್ರೆಡಿಟ್ ಹಗರಣವನ್ನು ಭೇದಿಸಿದೆ.

ಸಂಶಯಾಸ್ಪದ ಜಿಎಸ್ಟಿ ನೋಂದಣಿ ಕುರಿತು ತನಿಖೆ ಆರಂಭಿಸಿದ ಅಧಿಕಾರಿಗಳು, ಬೆಂಗಳೂರಿನ ಸ್ಟಾರ್ ಟ್ಯಾಕ್ಸ್ ಕನ್ಸಲ್ಟೆಂಟ್ ಸಂಸ್ಥೆಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದರು. ಈ ವೇಳೆ ಯಾವುದೇ ವಸ್ತು ಅಥವಾ ಸೇವೆಗಳ ನೈಜ ಪೂರೈಕೆ ಇಲ್ಲದೇ ನಕಲಿ ಬಿಲ್ ಜಾರಿಗೊಳಿಸಿ ಸುಮಾರು 235 ಕೋಟಿ ಮೌಲ್ಯದ ಇನ್ಪುಟ್ ತೆರಿಗೆ ಕ್ರೆಡಿಟ್ ಅಕ್ರಮವಾಗಿ ಪಡೆದು ಹಸ್ತಾಂತರಿಸಿರುವುದು ಪತ್ತೆಯಾಗಿದೆ.

ತನಿಖೆ ವೇಳೆ ಬಯಲಾದ ವಂಚನೆ ಪ್ರಕರಣ: ಪ್ರಾಥಮಿಕ ತನಿಖೆಯಲ್ಲಿ ಹಲವು ಜಿಎಸ್‌ಟಿ ನೋಂದಣಿಗಳನ್ನು ಕೇವಲ ನಕಲಿ ಬಿಲ್ ಮತ್ತು ಇವೇ ಬಿಲ್ ಸೃಷ್ಟಿಸಲು ಮಾತ್ರ ಬಳಸಲಾಗುತ್ತಿತ್ತು ಎಂಬುದು ಬೆಳಕಿಗೆ ಬಂದಿದೆ. ಅಂತಿಮ ಲಾಭಾಂಶದಾರರಿಗೆ ಅಕ್ರಮ ತೆರಿಗೆ ಕ್ರೆಡಿಟ್ ಸೌಲಭ್ಯ ಒದಗಿಸಲು ಶೆಲ್ ಸಂಸ್ಥೆಗಳ ಮೂಲಕ ವಹಿವಾಟು ನಡೆಸಲಾಗುತ್ತಿತ್ತು. ಯಾವುದೇ ನೈಜ ವ್ಯವಹಾರ ಚಟುವಟಿಕೆಗಳಿಲ್ಲದೇ ಆನ್ಲೈನ್ ಲೆಕ್ಕಪತ್ರ ವ್ಯವಸ್ಥೆ ಬಳಸಿ ವಹಿವಾಟುಗಳನ್ನು ದಾಖಲಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಬಂಧನ

ಈ ಹಗರಣದ ಸೂತ್ರಧಾರನಾಗಿ ಗುರುತಿಸಲ್ಪಟ್ಟಿರುವ ಮೊಹಮ್ಮದ್ ಸೈಫುಲ್ಲಾ ಎಂಬ ನೋಂದಾಯಿತ ಜಿಎಸ್ಟಿ ಪ್ರಾಕ್ಟಿಷನರ್ ಹಲವಾರು ಅಸ್ತಿತ್ವದಲ್ಲೇ ಇಲ್ಲದ ಜಿಎಸ್ಟಿ ಸಂಖ್ಯೆ ನಿರ್ವಹಿಸಿ ನಕಲಿ ಬಿಲ್ ಹಾಗೂ ಇ ವೇ ಬಿಲ್‌ಗಳನ್ನು ಕಮಿಷನ್ ಆಧಾರದ ಮೇಲೆ ಜಾರಿಗೊಳಿಸುತ್ತಿದ್ದನು ಎಂದು ತನಿಖೆಯಲ್ಲಿ ಬಹಿರಂಗವಾಗಿದೆ. ಅಧಿಕಾರಿಗಳು ಸಾಕ್ಷ್ಯಾಧಾರಗಳೊಂದಿಗೆ ಪ್ರಶ್ನಿಸಿದಾಗ ಆತ ತನ್ನ ಪಾತ್ರ ಒಪ್ಪಿಕೊಂಡಿದ್ದಾನೆ ಎಂದು ತಿಳಿಸಿದೆ. ಮೊಹಮ್ಮದ್ ಸೈಫುಲ್ಲಾನನ್ನು ಫೆ.24ರಂದು ಬೆಂಗಳೂರಿನಲ್ಲಿ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಕಲಂ 69ರ ಅಡಿಯಲ್ಲಿ ಬಂಧಿಸಲಾಗಿದೆ. ಬಳಿಕ, ಅವರನ್ನು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಬೆಳಗಾವಿಗೆ ತರಲು ಅನುಮತಿ ಪಡೆಯಲಾಯಿತು. ನಂತರ ಅವರನ್ನು ಬೆಳಗಾವಿಯ ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಹಗರಣದ ಸಂಪೂರ್ಣ ವ್ಯಾಪ್ತಿ ಹಾಗೂ ಇತರೆ ಲಾಭಾಂಶದಾರರನ್ನು ಪತ್ತೆಹಚ್ಚುವ ಕಾರ್ಯ ಮುಂದುವರಿದಿದೆ ಎಂದು ಸರಕು ಮತ್ತು ಸೇವಾ ತೆರಿಗೆ ಗುಪ್ತಚರ ಮಹಾನಿರ್ದೇಶನಾಲಯದ ಬೆಳಗಾವಿ ವಲಯ ಘಟಕ ಅಧಿಕಾರಿಗಳು ತಿಳಿಸಿದ್ದಾರೆ.

ಕುಟುಂಬ ಕಲಹ: ಯುವಕನ ಕೊಲೆ

• **ಮುಂಡರಗಿ:** ಕೌಟುಂಬಿಕ ಕಾರಣದಿಂದ ಉಂಟಾದ ಜಗಳದಲ್ಲಿ ಯುವಕನೋರ್ವ ಕೊಲೆಗೀಡಾಗಿರುವ ಘಟನೆ ಪಟ್ಟಣದ ಎಸ್.ಎಸ್.ಪಾಟೀಲ ನಗರದಲ್ಲಿ ಭಾನುವಾರ ಸಂಭವಿಸಿದೆ. ಮೃತನನ್ನು ವಸಂತ ಭಜಂತ್ರಿ (26) ಎಂದು ಗುರುತಿಸಲಾಗಿದೆ. ಮೃತನು ಮದ್ಯವ್ಯಸನಿಯಾಗಿದ್ದು, ನಿತ್ಯ ಕುಟುಂಬದ ಸದಸ್ಯರೊಂದಿಗೆ ಜಗಳವಾಡುತ್ತಿದ್ದನು ಎಂದು ತಿಳಿದುಬಂದಿದೆ. ಇದೇ ಕಾರಣಕ್ಕೆ ಭಾನುವಾರ ಜಗಳ ಆರಂಭವಾಗಿದ್ದು, ಅಂತಿಮವಾಗಿ ವಸಂತನ ಕೊಲೆಯಲ್ಲಿ ಅಂತ್ಯಗೊಂಡಿದೆ. ಕೊಲೆ ಆರೋಪದ ಮೇಲೆ ಮೃತನ ಸಹೋದರಿ ಹಾಗೂ ಆಕೆಯ ಮಗನನ್ನು ಪೊಲೀಸರು ಬಂಧಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಡಿವೈಎಸ್‌ಪಿ ಪ್ರಭುಗೌಡರ ಕಿರೇದಳ್ಳಿ, ಸಿಪಿಐ ಯಶವಂತ ಬಿಸನಳ್ಳಿ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

IN THE COURT OF CIVIL JUDGE (JN DVN) AND J.M.F.C. AT SIRUGUPPA
O.S. NO 5/2025.
Between:-Smt veeramma & others ....Plaintiffs
-V/S-
Smt. Nagamma & others ....Defendants
Summonsed To Defendant No3
To
Defendant No 3
D.3) H. Basavaraja s/o late Bajjappa, aged about 34 years R/O 64-Halekota village, Siruguppa Taluk, Ballari Dist.
whereas the plaintiff instituted a Petition in the court on the against defendant No 1 To 7 for Partition & separate possession. You are hereby summoned to attend in this court on the 7th day of- April- 2026 at 11 AM. To defend the said suit, in default of your appearance on the day specified, the said suit will be heard and determined in your absence.
Given under my hand and the seal of the court, this 27th Day of Feb-2026
BOC
CHIEF MINISTRIAL OFFICER,
C.J. & J.M.F.C. COURT
SIRUGUPPA
Hemalatha (H.B.M)
Advocate for Plaintiff

CHANGE OF NAME
I, **DEEPA SUPRASANNA HEGDE** (old name) Resident of Plot No 2, Jain Plot, Behind Venkateshwar Temple, Gokul Road, Hubballi - Dharwad City - 580030, Karnataka, India, have changed my name as **DEEPA HEGDE** (new name) henceforth I will be called and recognized by new name for all future purposes, dated: 28/02/2026.

CHANGE OF NAME
I, **IFRA BUKHARI** (old name) Resident of H No: 29 Nava Ayodhya Nagar 3rd Cross Old Hubli 580024 (address), have changed my name as **IFRA SAKEEBMOHMAD BALLARI** (new name) henceforth I will be called and recognized by new name for all future purposes, dated: 27/02/2026.

CHANGE OF NAME
I, **SHANTA KARALINGANNAVAR** (old name) Resident of H No 32, Sainagar, Hanuman Temple, Sai Colony, Unkal, Hubballi - Dharwad City - 580031, Karnataka, India, have changed my name as **SHANTA HANAMANTAPPA KARALINGANNAVAR** (new name) henceforth I will be called and recognized by new name for all future purposes, dated: 28/02/2026.

CHANGE OF NAME
I, **SHIVAPPA GANIGER** (Old Name) R/o. Hosur Street, Ganjigatti, Tq: Kalghatgi - 581212, Dist: Dharwad, have changed my name as **SHIVAPPA M GANIGER** (New Name) for all purposes Affidavit Dtd.: 26-02-2026 sworn before Notary **T. G. BALANNAVAR**.

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 150 /2026
ಅರ್ಜಿದಾರರು : ಓಬಕ್ಕ ತಂದೆ ಓಬಯ್ಯ, ವಯಸ್ಸು: 38 ವರ್ಷ ವಾಸ: ವಡೇರಹಳ್ಳಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ವಿರುದ್ಧ
ಎದುರುದಾರರು :ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು.
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಗಂಡನಾದ ಕೊನಪ್ಪ ತಂದೆ ಕೊಕ್ಕಲು ಮಾರಪ್ಪ ಇವರು ದಿನಾಂಕ: 03-05-2021ರಂದು ವಡೇರಹಳ್ಳಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 07-04-2026 ಬೆಳಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.
ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 25-02-2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಪರಶುರಾಮ ಪೂಜಾರ್
ಅರ್ಜಿದಾರರ ಪರ ವಕೀಲರು ಸಂಡೂರು

CHANGE OF NAME
I, **HEMANT KULKARNI** (old name) Resident of 682, Kulkarni Galli, Tq: Chikodi - 591215, have changed my name as **HEMANT PRABHAKAR KULKARNI** (new name) henceforth I will be called and recognized by new name for all future purposes, dated: 01/03/2026.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **ISUFALI** (old name) Resident of At Post Malebennur, Tq: Harihar, Dist: Davangere - 577530, State of Karnataka (address), have changed my name as **TIPPEGUNDI YUSUF ALI** (new name) henceforth I will be called and recognized by new name for all future purposes, dated: 01/03/2026.

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 151 /2026
ಅರ್ಜಿದಾರರು :1) ಹಣಮಂತ ಪತ್ತಾರ ತಂದೆ ಆನಂದಪ್ಪ ಪತ್ತಾರ, ವಯಸ್ಸು: 55 ವರ್ಷ ವಾಸ: ಹೊಸದರೋಜಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
2) ಈರಮ್ಮ ಗಂಡ ಆನಂದಪ್ಪ ಪತ್ತಾರ, ವಯಸ್ಸು: 71 ವರ್ಷ, ವಾಸ: ದೇವರ ಹಿಪ್ಪರಗಿ ಗ್ರಾಮ, ಸಿಂದಗಿ ತಾಲೂಕು, ವಿಜಯಪುರ ಜಿಲ್ಲೆ.
3) ಲಕ್ಷ್ಮೀದೇವಿ ತಂದೆ ಯಲ್ಲಪ್ಪ, ವಯಸ್ಸು: 38 ವರ್ಷ, ವಾಸ: ಮಲೆಬೆನ್ನೂರ ಗ್ರಾಮ, ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ
ವಿರುದ್ಧ
ಎದುರುದಾರರು :ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು,
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1ರ ತಂದೆ, ಅರ್ಜಿದಾರ 2ರ ಗಂಡ ಮತ್ತು ಅರ್ಜಿದಾರ 3ರ ಮಾವನಾದ ಆನಂದಪ್ಪ ತಂದೆ ಹುಸೇನಪ್ಪ ಇವರು ದಿನಾಂಕ: 06-04-1984ರಂದು ಹೊಸದರೋಜಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 07-04-2026 ಬೆಳಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.
ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 25-02-2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಪರಶುರಾಮ ಪೂಜಾರ್
ಅರ್ಜಿದಾರರ ಪರ ವಕೀಲರು ಸಂಡೂರು

ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ
ಅಸಲು ದಾವಾ ನಂ. 62/2023
ವಾದಿ: 1) ಮಾನಪ್ಪ ತಂ. ಚಂದ್ರಪ್ಪ ಬಡಿಗೇರ
ವಿರುದ್ಧ
ಪ್ರತಿವಾದಿಯರು :1) ಮುತ್ತಪ್ಪ ಚಂದ್ರಪ್ಪ ಬಡಿಗೇರ ಹಾಗೂ ಇತರರು
ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20(ಎ) ಅಡಿಯಲ್ಲಿ
ಗೆ,
ಪ್ರತಿವಾದಿ ನಂ. 8 ಮತ್ತು 10 :1) ಈರವ್ವ ಗಂ. ಕಾಳಪ್ಪ ಬಡಿಗೇರ ವಯಾ: 40 ವರ್ಷ, ಉ: ಮನೆಗೆಲಸ ಸಾ॥ ಕಾಜ್ರೋಳ, ತಾ: ಬಬಲೇಶ್ವರ, ಜಿ: ವಿಜಯಪೂರ
2) ಶಾಂತವ್ವ ಗಂ, ಕಾಳಪ್ಪ ಬಡಿಗೇರ ಉರ್ಫ ಪತ್ತಾರ ವಯಾ: 38 ವರ್ಷ, ಉ: ಮನೆಗೆಲಸ ಸಾ॥ ಸೆಕ್ಟರ ನಂ. 34, ಕೆನರಾ ಬ್ಯಾಂಕ ಎದುರುಗಡೆ, ನವನಗರ ಬಾಗಲಕೋಟ
ಈ ಕೋರ್ಟಿನ ಸಮನ್ಸ ಮೂಲಕ ನಿಮಗೆ ತಿಳಿಯಪಡಿಸುವದೇನೆಂದರೆ, ಸದರಿ ದಾವೆಯ ವಾದಿಯು ನಿಮ್ಮ ಅಂದರೆ ಪ್ರತಿವಾದಿಯರ ವಿರುದ್ಧ ಮೆ॥ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 62/2023 ಅಂತಾ ಪಾಲುವಾಟ್ನಿ ಕೋರಿ ದಾವೆ ಸಲ್ಲಿಸಿದ್ದು ಇರುತ್ತದೆ. ಈ ಸದರಿ ದಾವೆಯು ದಿನಾಂಕ: 24/3/2026 ರಂದು ನಿಮ್ಮ ಹಾಜರಾತಿಗಾಗಿ ಮುಂಜಾನೆ 11-00 ಘಂಟೆಗೆ ಇರುತ್ತದೆ. ಅವತ್ತಿನ ದಿವಸ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲಿ ಮೆ॥ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮದ್ದು ಯಾವುದಾದರು ತಂಟೆ ತಕರಾರು ಇದ್ದಲ್ಲಿ ಸಲ್ಲಿಸಬೇಕು. ನಿಮ್ಮ ಹೇಳಿಕೆ ವ ತಕರಾರು ಇದ್ದಲ್ಲಿ ಸಲ್ಲಿಸಬೇಕು. ಒಂದು ವೇಳೆ ತಪ್ಪಿದ್ದಲ್ಲಿ ನಿಮ್ಮನ್ನು ಗೈರು ಹಾಜರಿ ಅಂತಾ ಪರಿಗಣಿಸಿ ಏಕತರ್ಫಿ ಆದೇಶ ಮಾಡಲಾಗುವದು.
ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ಪ್ರಕಟಿಸಲಾಗಿದೆ ಅಂತಾ ಈ ಮೂಲಕ ಕೊಟ್ಟ ಕೋರ್ಟ ನೋಟಿಸ್,
ಸ್ಥಳ : ಬಾಗಲಕೋಟ
ದಿನಾಂಕ: 27/02/2026
ನ್ಯಾಯಾಲಯದ ಆದೇಶದ ಮೆರೆಗೆ
ಸಹಿ/-ಶಿರಸ್ತೇದಾರರು,
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ
ಸಹಿ/-(ಎಸ್. ಬಿ. ಗೌಡರ) ವಾದಿಯ ಪರ ವಕೀಲರು

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 19/2026
Between : KAREKALLU MALLAIAH and another .... **Petitioners**
And
The Tahasildar cum Register of Births and Deaths, Taluk Office, Ballari ...Respondent
NOTICE
TO WHOM SO EVER IT MAY CONCERNED
To
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners mother death certificate by name GANGAMMA W/o Late. THIPPAIAH, who died on 20-06-2010 at Petitioners resident at KAREKALLU VILLAGE, BALLARI TALUK AND DISTRICT
You are here by directed to appear in this court in person or by a pleader duly instructed on 06/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 28th day of FEB-2026
By order of the court.
Chief Ministerial officer
IV A.C.J & J.M.F.C. Court Ballari.
Laliya Naik
Advocate, Ballari

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 21/2026
Between : BOYA HANUMANTHA and others ....Petitioners
And
The Tahasildar cum Register of Births and Deaths, Taluk Office, Ballari ...**Respondent**
NOTICE
TO WHOM SO EVER IT MAY CONCERNED
To
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners mother death certificate by name MAREKKA W/o Late. DANAPPA, who died on 24-05-2011 at Petitioners resident at KAREKALLU VILLAGE, BALLARI TALUK AND DISTRICT
You are here by directed to appear in this court in person or by a pleader duly instructed on 06/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 28th day of FEB-2026
By order of the court.
Chief Ministerial officer
IV A.C.J & J.M.F.C. Court Ballari.
Laliya Naik
Advocate, Ballari

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 22/2026
Between : KAREKALLU MALLAIAH and another ... **Petitioners**
And
The Tahasildar cum Register of Births and Deaths, Taluk Office, Ballari ...**Respondent**
NOTICE
TO WHOM SO EVER IT MAY CONCERNED
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name THIPPAIAH S/o Late HONNURAPPA, who died on 12-04-2001 at Petitioners resident at KAREKALLU VILLAGE, BALLARI TALUK AND DISTRICT
You are here by directed to appear in this court in person or by a pleader duly instructed on 06/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 28th day of FEB-2026
By order of the court.
Chief Ministerial officer
IV A.C.J & J.M.F.C. Court Ballari.
Laliya Naik
Advocate, Ballari

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 23/2026
Between : VANDRAPPA and others ...**Petitioners**
And
The Tahasildar cum Register of Births and Deaths, Taluk Office, Ballari...Respondent
NOTICE
TO WHOM SO EVER IT MAY CONCERNED
To
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners grandfather/father-in-law death certificate by name MOKA HONNURAPPA S/o Late MALLAIAH, who died on 15-10-1999 at Petitioners resident at KAREKALLU VILLAGE, BALLARI TALUK AND DISTRICT
You are here by directed to appear in this court in person or by a pleader duly instructed on 06/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 28th day of FEB-2026
By order of the court.
Chief Ministerial officer
IV A.C.J & J.M.F.C. Court Ballari.
Laliya Naik
Advocate, Ballari

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 20/2026
Between : VANDRAPPA and others ....**Petitioners**
And
The Tahasildar cum Register of Births and Deaths, Taluk Office, Ballari ...Respondent
NOTICE
TO WHOM SO EVER IT MAY CONCERNED
To
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners grandmother/mother-in-law death certificate by name PEDDAKKA W/o Late. MOKA HONNURAPPA who died on 06-06-2000 at Petitioners resident at KAREKALLU VILLAGE, BALLARI TALUK AND DISTRICT
You are here by directed to appear in this court in person or by a pleader duly instructed on 06/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 28th day of FEB-2026
By order of the court.
Chief Ministerial officer
IV A.C.J & J.M.F.C. Court Ballari.
Laliya Naik
Advocate, Ballari

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 149 /2026
ಅರ್ಜಿದಾರರು : 1) ಗಂಗಾರೆಡ್ಡಿ ತಂದೆ ತಿಪ್ಪಯ್ಯ @ ಅರ್ಜುನಪ್ಪ, ವಯಸ್ಸು: 62 ವರ್ಷ,
2) ಗಂಗಾಧರ ತಂದೆ ತಿಪ್ಪಯ್ಯ @ ಅರ್ಜುನಪ್ಪ, ವಯಸ್ಸು: 58 ವರ್ಷ ಇಬ್ಬರ ವಾಸ: 3ನೇ ವಾರ್ಡ, ಚಪ್ಪರದಹಳ್ಳಿ, ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ವಿರುದ್ಧ
ಎದುರುದಾರರು:ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು.
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ ತಿಪ್ಪಯ್ಯ @ ಅರ್ಜುನಪ್ಪ ತಂದೆ ಗುಡಸಲಿ ನಿಂಗಪ್ಪ ಇವರು ದಿನಾಂಕ: 20-08-1966 ರಂದು ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ:07-04-2026 ಬೆಳಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.
ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ:25-02-2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಡಿ.ನಾಗರಾಜ
ಅರ್ಜಿದಾರರ ಪರ ವಕೀಲರು ಸಂಡೂರು

ಸಂಪಾದಕೀಯ

ಜರಾಸಂಧನಂತೆ ಖಮೇನಿಯ ವಧೆ ಅನಿವಾರ್ಯ

ಮಧ್ಯಪ್ರಾಚ್ಯದಲ್ಲಿ ಮತ್ತೆ ಕಿಚ್ಚು ಹತ್ತಿದೆ. ಹಾಗೆ ನೋಡಿದರೆ ಮಧ್ಯಪ್ರಾಚ್ಯದಲ್ಲಿ ಯಾವಾಗ ನೆಮ್ಮದಿ ನೆಲೆಸಿತ್ತು ಎಂಬ ಪ್ರಶ್ನೆಯೇ ಉದ್ಭವವಾಗದು! ಜಗತ್ತಿನ ಹುಣ್ಣು ಅಥವಾ ಜಗತ್ತಿನ ಸಕಲ ಅಶಾಂತಿಗೆ ಕಾರಣ ಎಂಬ ಜಾಗತಿಕ ನಾಣ್ನುಡಿ ಅತಿಶಯೋಕ್ತಿಯೇ ಇರಬಹುದು. ಆದರೆ ಅದನ್ನು ಸಂಪೂರ್ಣ ತಳ್ಳಿಹಾಕಲಂತೂ ಸಾಧ್ಯವಿಲ್ಲ. ಜಗತ್ತಿನ ಎಲ್ಲಾ ಸಂಗತಿಗಳು ಸುಸೂತ್ರವಾಗಿ ಸಾಗುತ್ತಿರುವಾಗ, ಜಗತ್ತಿನಲ್ಲಿ ಹೊಸ ಹೊಸ ವಿಚಾರಧಾರೆಗಳು ಹುಟ್ಟುತ್ತಿರುವಾಗ ಮಧ್ಯಪ್ರಾಚ್ಯ ಮಾತ್ರ ತಾವರೆಯ ಎಲೆಯ ಮೇಲಿನ ನೀರಿನಂತೆ ಅಂಟಿಕೊಳ್ಳದೆ ಇರುತ್ತಿತ್ತು. ತೈಲದ ಶ್ರೀಮಂತಿಕೆಯಿಂದ ಮಧ್ಯಪ್ರಾಚ್ಯ ನೆಮ್ಮದಿಯ ಜೀವನವನ್ನು ನಡೆಸಬಹುದಾಗಿತ್ತಾದರೂ ತಮ್ಮ ಮತೀಯ ಅಸಹನೆಯ ಕಾರಣಕ್ಕೆ ಮತ್ತು ಆಧುನಿಕ ಸಿದ್ಧಾಂತಗಳಿಗೆ ಒಗ್ಗಿಕೊಳ್ಳದ ಜಿಗುಟುತನಕ್ಕೆ ಸದಾ ಹಿಂಸೆಯ ತಾಣವಾಗಿದೆ.

ಮಧ್ಯಪ್ರಾಚ್ಯಕ್ಕಿಂತ ಅಪಾಯಕಾರಿಯಾದ ಅನೇಕ ದೇಶಗಳು ಜಗತ್ತಿನಲ್ಲಿವೆ. ಆದರೆ ಅಲ್ಲೆಲ್ಲಾ ಇಲ್ಲದ ವಿಕ್ಷಿಪ್ತಗಳು ಮಧ್ಯಪ್ರಾಚ್ಯದಲ್ಲಿ ಕಂಡುಬರುತ್ತವೆ. ಇದಕ್ಕೇನು ಕಾರಣ ಎಂದು ಹುಡುಕಿದರೆ ಇಡೀ ಮಧ್ಯಪ್ರಾಚ್ಯದ್ದೇ ಒಂದು ರಾಷ್ಟ್ರೀಯತೆ ಎಂಬ ಒಂದು ಸಾಲಿನ ಉತ್ತರಸಿಗುತ್ತದೆ. ಮಧ್ಯಪ್ರಾಚ್ಯದ ದೇಶಗಳೆಲ್ಲವೂ ಹಿಂದಿನಿಂದಲೂ ಒಂದೇ ರೀತಿ ಬೆಳೆದಿವೆ. ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ಅವು ಒಂದೇ ರೀತಿ ಯೋಚಿಸಿವೆ. ಕಟ್ಟರ್ ಸಂಪ್ರದಾಯಸ್ಥ ದೇಶಗಳಾಗಿದ್ದರೂ ಆಧುನಿಕತೆಯನ್ನು ಅವು ಎಡಗಾಲಲ್ಲಿ ಒದ್ದಿಲ್ಲ. ಪ್ರಮುಖ ಜಾಗತಿಕ ಪರಿಸ್ಥಿತಿಗಳಲ್ಲಿ ಮಧ್ಯಪ್ರಾಚ್ಯದ ರಾಷ್ಟ್ರಗಳು ಅತ್ಯಂತ ಪ್ರಮುಖ, ಅನಿವಾರ್ಯ ಎಂದಿಲ್ಲದಿದ್ದರೂ ಜಗತ್ತಿನ ಪ್ರಮುಖ ರಾಜಕೀಯ ಬೆಳವಣಿಗೆಗಳಲ್ಲಿ ಅವುಗಳು ಗಮನಾರ್ಹ ಪಾತ್ರ ವಹಿಸಿವೆ.

ಪ್ರಸ್ತುತ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿರುವ ದಾಳಿಯ ಹಿನ್ನೆಲೆ ಕೂಡ ಅದುವೆ. ಇರಾನ್ ಹಿಂದಿನಿಂದಲೂ ಇಸ್ರೇಲನ್ನು ನಖಶಿಖಾಂತ ದ್ವೇಷಿಸುತ್ತಾ ಬಂದಿದೆ. ಇಸ್ರೇಲ್ ಹುಟ್ಟನ್ನೇ ವಿರೋಧಿಸುವ ಇರಾನಿಗೆ ಇಸ್ರೇಲಿನೊಂದಿಗೆ ಆರ್ಥಿಕ ದ್ವೇಷವಿಲ್ಲ. ಅದಕ್ಕೂ ಮಿಗಿಲಾದ ಅಸ್ತಿತ್ವದ ದ್ವೇಷ ಇದೆ. ಸದಾ ಪ್ಯಾಲೆಸ್ಟೀನ್‌ಗೆ ಬೆಂಬಲವನ್ನು ನೀಡುತ್ತಾ ಬಂದ ಇರಾನಿಗೆ ಇಸ್ರೇಲಿನೊಡನೆ ಇರುವ ಶತ್ರುತ್ವಕ್ಕೆ ಕಾರಣ ಮತ. ಮಧ್ಯಪ್ರಾಚ್ಯದ ಇಸ್ಲಾಮಿಕ್ ದೇಶಗಳಿಗೆ ಇಸ್ರೇಲ್ ಮತ್ತು ಯಹೂದ್ಯ ದ್ವೇಷ ಮಾಮೂಲಾದರೂ ಇರಾನಿನಷ್ಟು ಶತ್ರುತ್ವವನ್ನು ಕಾಪಿಟ್ಟುಕೊಂಡ ದೇಶ ಬೇರಿಲ್ಲ. ಇಸ್ರೇಲ್ ವಿರುದ್ಧ ಅರಬ್ ಒಕ್ಕೂಟವನ್ನು ಕಟ್ಟಿದ್ದಲ್ಲಿಂದ ಹಿಡಿದು ಆರುದಿನಗಳ ಯುದ್ಧ, ಇತ್ತೀಚಿನ ಗಾಜಾ ದಾಳಿಯವರೆಗೂ ಇರಾನ್ ಇಸ್ರೇಲ್ ಆಕ್ರಮಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇನ್ನೊಂದೆಡೆ ಅಮೆರಿಕಾಕ್ಕೆ ಇರಾನ್ ಮೇಲೇಕೆ ದ್ವೇಷ ಎನ್ನುವುದಕ್ಕೆ ನಾನಾ ಕಾರಣಗಳನ್ನೇನೋ ನೀಡಬಹುದು. ಆದರೆ ಈ ದಾಳಿಯಲ್ಲಿ ಸೆಳೆಯುತ್ತಿರುವುದು ಇಸ್ರೇಲ್. ಭಾರತದಂತೆ ಇಸ್ರೇಲ್ ಮತ್ತೊಬ್ಬರ ಮೇಲೆ ಆಕ್ರಮಣ ಮಾಡುವ ಮನಸ್ಥಿತಿಯ ದೇಶವಲ್ಲ. ಅಲ್ಲದೆ ಇರಾನಿನಲ್ಲಿರುವವನು ಇಡೀ ಜಗತ್ತಿನ ಇಸ್ಲಾಮ್ ಮತಾಂಧತೆಯ ಕಟ್ಟರ್ ಅನುಯಾಯಿ ಎಂಬ ಕುಖ್ಯಾತಿಗೆ ಪಾತ್ರನಾದ ಖಮೇನಿ. ಖಮೇನಿಯ ನಾಶ ಜರಾಸಂಧನ ನಾಶದಂತೆ ಜಗತ್ತಿಗೆ ಅನಿವಾರ್ಯ. ಜರಾಸಂಧನ ವಧೆಗೆ ಕೃಷ್ಣ–ಭೀಮರ ಜಂಟಿ ಶಕ್ತಿ ಒಗ್ಗೂಡಬೇಕಾಯಿತು. ಈಗ ಖಮೇನಿಯ ವಧೆಗೆ ಎರಡು ಶಕ್ತಿಗಳು ಜೊತೆಯಾಗಿವೆ. ಇದು ಜಗತ್ತಿನ ಶಾಂತಿಗಾಗಿ ನಡೆಯುತ್ತಿರುವ ಯುದ್ಧವೇ ಹೊರತು, ಹಿಂಸೆಯಲ್ಲ.

ಭಕ್ತಿಮಾರ್ಗದ ಹೊಂಬೆಳಕು: ಶ್ರೀ ಚೈತನ್ಯ ಮಹಾಪ್ರಭು

ಚೈತನ್ಯರು ಆಧ್ಯಾತ್ಮಿಕ ಒರತೆಯನ್ನು ಚಿಮ್ಮಿಸಿದ ಶ್ರೇಷ್ಠ ದಾರ್ಶನಿಕರು. ಮಾರ್ಚ್ 3 ಚೈತನ್ಯ ಪ್ರಭುಗಳ ಜಯಂತಿ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಜಗತ್ತಿನಲ್ಲಿ ಮನುಷ್ಯನ ಸ್ವಾರ್ಥಲಾಲಸೆಯಿಂದಾಗಿ ಶಾಂತಿ, ನೆಮ್ಮದಿಯ ಸಮೀಕರಣ ಬದಲಾಗಿದೆ. ಸಾಮ್ರಾಜ್ಯ ವಿಸ್ತರಣಾ ದಾಹ, ಇತರರನ್ನು ನೆಮ್ಮದಿಯಿಂದ ಬದುಕಲು ಬಿಡಕೂಡದೆಂಬ ಹಠ, ಎಲ್ಲದಕ್ಕೂ ಮಿಗಿಲಾಗಿ ದುರಹಂಕಾರ, ಸ್ವಾರ್ಥಲಾಲಸೆಗಳು ಇಂತಹ ಸನ್ನಿವೇಶವನ್ನು ಅನಗತ್ಯವಾಗಿ ಸೃಷ್ಟಿಸುತ್ತವೆಂಬುದು ಎಲ್ಲ ಕಾಲಕ್ಕೂ ಸತ್ಯ.

ಪರಕೀಯರ ಆಕ್ರಮಣ, ರಾಜಕೀಯ ಮತ್ತು ಸಾಮಾಜಿಕ ದೌರ್ಜನ್ಯ ಮತ್ತು ಸಂಘರ್ಷ ಭಾರತಕ್ಕೂ ಹೊಸತೇನಲ್ಲ. ಇಂದಿನ ಭಯೋತ್ಪಾದನೆ, ಆಂತರಿಕ ಮತ್ತು ಬಾಹ್ಯ ಬೆದರಿಕೆಗಳು ಹಿಂದೆಯೂ ಇರಲಿಲ್ಲವೆಂದಲ್ಲ. ಕಾಲಕಾಲಕ್ಕೆ ಅವುಗಳ ಸ್ವರೂಪ, ಅವುಗಳನ್ನೆದುರಿಸಿದ ರೀತಿ ಮಾತ್ರ ಭಿನ್ನವಾಗಿತ್ತು, ಅಷ್ಟೆ. ಆದರೆ ಭರತಭೂಮಿ ಅವುಗಳನ್ನೆಲ್ಲ ಎದುರಿಸಿ ಅಜೇಯವಾಗಿ ಮುನ್ನಡೆದಿರುವುದಕ್ಕೆ ಈ ನೆಲದ ಸತ್ವ, ಸ್ವತ್ವ ಮತ್ತು ಸ್ವಾಭಿಮಾನಗಳೇ ಕಾರಣ.

ಹದಿನೈದನೇ ಶತಮಾನದಲ್ಲೂ ಪರಕೀಯರ ಆಕ್ರಮಣ, ರಾಜಕೀಯ ಮತ್ತು ಸಾಮಾಜಿಕ ದೌರ್ಜನ್ಯ, ದಬ್ಬಾಳಿಕೆ ಭಾರತೀಯ ಸಮಾಜವನ್ನು ನಲುಗಿಸಿಬಿಟ್ಟಿತ್ತು. ಭಾರತದಲ್ಲಿ ಧರ್ಮಗ್ಲಾನಿಯಾದಾಗಲೆಲ್ಲ ನಾನು ಅದರ ಉದ್ಧಾರಕ್ಕಾಗಿ ಅವತರಿಸುವೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಸಾರಿರುವುದು ಸುಳ್ಳಾಗಲಿಲ್ಲ. ಇನ್ನೇನು ದೇಶ ಸರ್ವನಾಶದ ಅಂಚಿಗೆ ತಲುಪಿತೆನ್ನುವಾಗ ಆಯಾ ಕಾಲಘಟ್ಟದಲ್ಲಿ ಒಬ್ಬರಲ್ಲ ಒಬ್ಬರು ವೀರಪುರುಷರು, ಸಂತರು, ಮಹಾನುಭಾವರು ಮೇಲೆದ್ದು ಬಂದು ಭಾರತದ ಗೌರವವನ್ನು, ಸನಾತನ ಧರ್ಮಸಂಸ್ಕೃತಿಯನ್ನು ಪೊರೆದ ನಿದರ್ಶನಗಳು ಸಾಕಷ್ಟು ಇವೆ.

ಚೈತನ್ಯ ಮಹಾಪ್ರಭುಗಳ ಅವತಾರ ನಿಜಕ್ಕೂ ಭಗವಂತನ ಉದ್ದೇಶಿತ ಕಾರ್ಯವಾಗಿತ್ತು. ಏಕೆಂದರೆ ಕೃಷ್ಣಭಕ್ತಿಯ ಸಂಕೀರ್ತನೆಯ ಮೂಲಕ ಅವರು ಭಯದಿಂದ ಕಂಗಾಲಾಗಿದ್ದ ಜನಮಾನಸದಲ್ಲಿ ಭರವಸೆಯ ಬೆಳಕನ್ನು ಚೆಲ್ಲಿದರು. ಚೈತನ್ಯರು ಆಧ್ಯಾತ್ಮಿಕ ಒರತೆಯನ್ನು ಚಿಮ್ಮಿಸಿದ ಶ್ರೇಷ್ಠ ದಾರ್ಶನಿಕರು. ಮಧ್ಯಕಾಲೀನ ಭಾರತದಲ್ಲಿ ಭಕ್ತಿಮಾರ್ಗವನ್ನು ಸಮರ್ಥವಾಗಿ ಮುನ್ನಡೆಸಿದ ಹಿರಿಮೆಯೂ ಚೈತನ್ಯ ಮಹಾಪ್ರಭುಗಳದ್ದೇ. ಹಾಗೆಂದೇ ಅವರನ್ನು ಶ್ರೀಕೃಷ್ಣನ ಅವತಾರವೆಂದು ಆಗಿನ ಕಾಲದಲ್ಲಿ ಅವರ ಅನುಯಾಯಿಗಳು ತಿಳಿದಿದ್ದರು.

ಚೈತನ್ಯ ಮಹಾಪ್ರಭುಗಳು (1486–1534) ಜನಿಸಿದ್ದು ಬಂಗಾಳದ ನವದ್ವೀಪದಲ್ಲಿ. ಜಗನ್ನಾಥ ಮಿಶ್ರಾ ಮತ್ತು ಶಚೀದೇವಿ ದಂಪತಿಯ ಮಗನಾಗಿ ಅವರು ಕಹಿಬೇವಿನ ಮರದ ಬುಡದಲ್ಲಿ ಜನಿಸಿದ್ದರಿಂದ ಅವರನ್ನು ಪ್ರೀತಿಯಿಂದ "ನಿಮಾಯಿ" ಎಂದೂ ಕರೆಯಲಾಗುತ್ತಿತ್ತು. ಫಾಲ್ಗುಣ ಪೌರ್ಣಿಮೆಯಂದು ಜನಿಸಿದ್ದರಿಂದ ಹಾಗೂ ಬೆಳ್ಳಗೆ ಸುಂದರ ತ್ವಚೆಯವನಾಗಿದ್ದುದರಿಂದ ಅವರನ್ನು "ಗೌರಾಂಗ" ಎಂದೂ ಕರೆಯಲಾಗುತ್ತಿತ್ತು. ತಂದೆತಾಯಿಗೆ ಹತ್ತನೆಯ ಮಗನಾದ ವಿಶ್ವಂಭರ ಮುಂದೆ ನಿಮಾಯಿ ಪಂಡಿತನಾಗಿ, ಸಂನ್ಯಾಸಾಶ್ರಮ ಸ್ವೀಕರಿಸಿದ ಬಳಿಕ ಭಗವಾನ್ ಶ್ರೀ ಚೈತನ್ಯ ಮಹಾಪ್ರಭುವಾಗಿ ವಿಖ್ಯಾತರಾದದ್ದು ಒಂದು ರೋಚಕ ಕಥೆ.

48 ವರ್ಷಗಳ ತಮ್ಮ ಅಲ್ಪ ಜೀವಿತಾವಧಿಯಲ್ಲಿ ಚೈತನ್ಯ ಮಹಾಪ್ರಭುಗಳು ಕಂಡ ಏರಿಳಿತಗಳು ಬೆರಗು ಹುಟ್ಟಿಸುವಂತಹುದು. ತಮ್ಮ ಜೀವನದ 24 ವರ್ಷಗಳವರೆಗೆ ವಿದ್ಯಾರ್ಥಿಯಾಗಿ ಮತ್ತು ಗೃಹಸ್ಥರಾಗಿ ಚೈತನ್ಯರು ವಾಸವಾಗಿ ದ್ದಿದ್ದು ನವದ್ವೀಪದಲ್ಲಿ. ಮೊದಲ ಪತ್ನಿ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಾಗ ತಾಯಿಯ ಅಪೇಕ್ಷೆಯಂತೆ ಎರಡನೇ ವಿವಾಹವಾದರು. ಆದರೆ ಎರಡನೇ ಪತ್ನಿಗೆ ಇನ್ನೂ ಹದಿನಾರರ ಪ್ರಾಯವಿದ್ದಾಗಲೇ ಚೈತನ್ಯರು ಸಂನ್ಯಾಸಾಶ್ರಮ ಸ್ವೀಕರಿಸಿದರು. ಅದಾದ ಬಳಿಕ ಅವರ ಕಾರ್ಯಕ್ಷೇತ್ರದ ಕೇಂದ್ರ, ಒಡಿಸ್ಸಾದ ಜಗನ್ನಾಥಪುರಿಗೆ ಸ್ಥಳಾಂತರಗೊಂಡಿತು. ಈ ಅವಧಿಯಲ್ಲಿ ಆರು ವರ್ಷಗಳ ಕಾಲ ಸತತವಾಗಿ ಶ್ರೀಮದ್ಭಾಗವತವನ್ನು ಬೋಧಿಸುತ್ತಾ ಭಾರತದಾದ್ಯಂತ – ವಿಶೇಷವಾಗಿ ದಕ್ಷಿಣ ಭಾರತದಲ್ಲಿ – ಸಂಚರಿಸಿದ್ದರು. ದಕ್ಷಿಣ ಭಾರತದಲ್ಲಿ ತಮಿಳುನಾಡಿನ ಶ್ರೀರಂಗ, ಕರ್ನಾಟಕದ ಉಡುಪಿ ಮತ್ತು ಕನ್ಯಾಕುಮಾರಿಯ ವರೆಗೂ ಪಯಣಿಸಿ ಕೃಷ್ಣಪ್ರಜ್ಞೆಯ ಬೋಧನೆಯನ್ನು ಮಾಡಿದರು.

ಚೈತನ್ಯ ಪ್ರಭುಗಳು ಯಾವುದೇ ಜಾತಿ, ಮತ, ಧರ್ಮಗಳ ಚೌಕಟ್ಟಿಗೆ ಅಂಟಿಕೊಂಡಿರಲಿಲ್ಲ. ಅವರು ನೋಡುತ್ತಿದ್ದುದು–ವ್ಯಕ್ತಿಯ ಅಂತರಂಗದಲ್ಲಿ ದೇವರ ಬಗೆಗಿರುವ ಗಾಢವಾದ ತುಡಿತ ಮತ್ತು ಭಕ್ತಿಯನ್ನು ಮಾತ್ರ. ಹಾಗಾಗಿ ಆಗಿನ ಕಾಲಘಟ್ಟದಲ್ಲಿ ಇದೊಂದು ಸಾಮಾಜಿಕ ಸಮಾನತೆ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ರಾಂತಿಯಾಗಿತ್ತೆಂದರೆ ಉತ್ಪ್ರೇಕ್ಷೆಯಲ್ಲ. ಅನ್ಯಧರ್ಮದ ಅನೇಕ ಭಕ್ತರು ಇವರ ಅನುಯಾಯಿಗಳಾಗಿದ್ದರು. ಮಹಮ್ಮದೀಯ ಕುಟುಂಬದಿಂದ ಬಂದ ಹರಿದಾಸ್–ಠಾಕುರ್ ಅವರು ಪ್ರಭುಗಳ ಭಕ್ತಿಮಾರ್ಗದ ಸಾಂಗತ್ಯದಿಂದ "ನಾಮಾಚಾರ್ಯ" ಎಂಬ ಹೆಸರಿನಿಂದ ಜನಪ್ರಿಯರಾಗಿದ್ದರು.

ಚೈತನ್ಯರು ವೃಂದಾವನವನ್ನು ಸಂದರ್ಶಿಸಿ, ಪ್ರಯಾಗಕ್ಕೆ ಬಂದ ಸಂದರ್ಭದಲ್ಲಿ ಧರ್ಮಾಂಧ ಮುಸ್ಲಿಂ ಸೈನಿಕರು ಎದುರಾದಾಗ ಅವರು ಧೃತಿಗೆಡಲಿಲ್ಲ. ಅವರಿಗೆಲ್ಲ ಇಸ್ಲಾಂ ಧರ್ಮಗ್ರಂಥ ಕುರ್‌ಆನ್ ಬಗ್ಗೆ ಪ್ರವಚನ ನೀಡಿ, ಅದರಲ್ಲಿನ ನ್ಯೂನತೆಗಳನ್ನು ಎತ್ತಿಹಿಡಿದು ಅಪಾರ ಸಂಖ್ಯೆಯ ಧರ್ಮಾಂಧ ಮುಸ್ಲಿಮರನ್ನು ವೈಷ್ಣವ ಪಂಥಕ್ಕೆ ಬರಮಾಡಿಕೊಂಡರು. ಇಂದಿಗೂ ಅವರ ವಂಶಸ್ಥರು ತಮ್ಮನ್ನು "ಪಠಾಣ ವೈಷ್ಣವರು" ಎಂದು ಗುರುತಿಸಿಕೊಳ್ಳುತ್ತಾರೆ.

ಭಗವಂತನ ಪುಣ್ಯ ನಾಮಸ್ಮರಣೆಯನ್ನು ಎಂತಹ ಮನಃಸ್ಥಿತಿಯಲ್ಲಿ ಮಾಡಲು ಸಾಧ್ಯ? ಚೈತನ್ಯರೇ ರಚಿಸಿರುವ ಶಿಕ್ಷಾಷ್ಟಕ ಶ್ಲೋಕವೊಂದರಲ್ಲಿ ಸುಂದರವಾಗಿ ಇದನ್ನು ವ್ಯಾಖ್ಯಾನಿಸಲಾಗಿದೆ. "ತೃಣಾದಪಿ ಸುನೀಚೇನ ತರೋರಪಿ ಸಹಿಷ್ಣುನಾ। ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ॥" (ಪ್ರತಿಯೊಬ್ಬನೂ ತಾನು ಬೀದಿಯಲ್ಲಿನ ಒಂದು ಹುಲ್ಲುಕಡ್ಡಿಗಿಂತಲೂ ಕನಿಷ್ಠನೆಂಬ ಭಾವನೆಯಿಂದ, ವಿನಯಶೀಲನಾಗಿ ಭಗವಂತನ ಪವಿತ್ರನಾಮವನ್ನು ಪಠಿಸಬೇಕು. ಎಲ್ಲ ಸುಳ್ಳು ಪ್ರತಿಷ್ಠೆಗಳನ್ನು ಬದಿಗಿಟ್ಟು ಮರಕ್ಕಿಂತಲೂ ಹೆಚ್ಚು ಸಹನಾಶೀಲನಾಗಬೇಕು. ಇಂತಹ ಮನಃಸ್ಥಿತಿಯಲ್ಲಿ ಭಗವಂತನ ಪುಣ್ಯ ನಾಮಸ್ಮರಣೆಯನ್ನು ಸತತವಾಗಿ ಮಾಡಲು ಸಾಧ್ಯ). ಶಿಕ್ಷಾಷ್ಟಕದ ಇನ್ನೊಂದು ಶ್ಲೋಕದಲ್ಲಿ "ನ ಧನಂ ನ ಜನಂ ನ ಸುಂದರೀಮ್" ನನಗೆ ಸಂಪತ್ತನ್ನು ಸಂಗ್ರಹಿಸುವ ಲಾಲಸೆಯಿಲ್ಲ, ಚೆಲುವೆಯರ ಬಯಕೆಯಿಲ್ಲ, ಅಥವಾ ಅನೇಕ ಮಂದಿ ಶಿಷ್ಯರೂ ಬೇಕಾಗಿಲ್ಲ. ನನಗೆ ಬೇಕಾಗಿರುವುದು–ಜನ್ಮ ಜನ್ಮಗಳಲ್ಲೂ ನಿನ್ನ ನಿಷ್ಕಾರಣ ಭಕ್ತಿಸೇವೆ ಮಾತ್ರ ಎಂದು ಚೈತನ್ಯರು ವ್ಯಾಖ್ಯಾನಿಸಿದ್ದಾರೆ.

ಮೋಕ್ಷ ಸಂಪಾದನೆಗೆ ಜ್ಞಾನ ಮಾರ್ಗ, ಭಕ್ತಿಮಾರ್ಗ ಮತ್ತು ಕರ್ಮ ಮಾರ್ಗ– ಹೀಗೆ ಮೂರು ಮಾರ್ಗಗಳನ್ನು ಭಾರತೀಯ ದಾರ್ಶನಿಕರು ಸೂಚಿಸಿದ್ದಾರೆ. ಆದಿಶಂಕರರು ಜ್ಞಾನ ಮಾರ್ಗ, ಬಸವಣ್ಣನವರು ಕರ್ಮ ಮಾರ್ಗಕ್ಕೆ ಸಂಕೇತವಾಗಿದ್ದರೆ ಚೈತನ್ಯರು ಭಕ್ತಿ ಮಾರ್ಗದ ಹರಿಕಾರರಾಗಿ ಗುರುತಿಸಲ್ಪಡುತ್ತಾರೆ. ಹೊಡೆದಾಟ, ಜಗಳ, ಅಂತಃಕಲಹ, ಕಟಿಪಿಟಿ, ಕಿರಿಕಿರಿ, ಸಣ್ಣಪುಟ್ಟ ವಿಚಾರಗಳಿಗೂ ಕಾಲುಕೆರೆದು ಜಗಳ ತೆಗೆವ ಈ ಕಲಿಯುಗದಲ್ಲಿ ಅಂತಹ ಉಪದ್ವ್ಯಾಪಗಳಿಂದ ಜನರನ್ನು ವಿಮುಖರನ್ನಾಗಿಸಿ ದೈವೀಚಿಂತನೆಯಲ್ಲಿ ಮನಸ್ಸು ಕೇಂದ್ರೀಕರಿಸುವಂತಾಗಬೇಕಾದರೆ ಭಜನೆ, ಸಂಕೀರ್ತನೆ ಮಾತ್ರ ವಿಹಿತವಾದ ಹಾದಿ ಎನಿಸುತ್ತದೆ. ಇದನ್ನರಿತೇ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘಟನೆಯ (ಇಸ್ಕಾನ್) ಸಂಸ್ಥಾಪಕರಾದ ಶ್ರೀಲ ಪ್ರಭುಪಾದರು ಚೈತನ್ಯರ ತತ್ವಾದರ್ಶಗಳಿಂದ ಪ್ರಭಾವಿತರಾಗಿ, ಪ್ರೇರಣೆ ಪಡೆದು ಭಕ್ತಿಮಾರ್ಗದ ಮೂಲಕ ಪ್ರಾಪಂಚಿಕರ ಹೃದಯ ಕಲ್ಮಷ ತೊಳೆಯುವ ಮಹತ್ತರ ಕಾರ್ಯಕ್ಕೆ ನಾಂದಿ ಹಾಡಿದ್ದು. ಅದೇ ಈಗ ಇಸ್ಕಾನ್ ಸಂಸ್ಥೆಯ ಮೂಲಕ ಜಗತ್ತಿನಾದ್ಯಂತ ಒಂದು ಮಹಾನ್ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನವಾಗಿ ಜನರನ್ನಾಕರ್ಷಿಸುತ್ತಿದೆ.

ಐನೂರು ವರ್ಷಗಳ ಹಿಂದೆ ಚೈತನ್ಯರು ಬಿತ್ತಿದ ಬೀಜ ಗಿಡವಾಗಿ, ಮರವಾಗಿ ಈಗ ಫಲಭರಿತವಾಗಿದೆ.

ಪ್ರತಿಯೊಬ್ಬನ ಮನದಲ್ಲಡಗಿರುವ ದುಷ್ಟತನದ ನಾನಾರೂಪಗಳನ್ನು ಕ್ರಮಶಃ ಮನಸ್ಸಿನಿಂದ ಹೊರಹಾಕಲು ಭಕ್ತಿಯೊಂದೇ ಸಾಧನ ಎಂಬ ಸಂದೇಶವನ್ನು ಚೈತನ್ಯರು ತಮ್ಮ ಶ್ರೇಷ್ಠ ಬದುಕಿನ ಮೂಲಕ ರವಾನಿಸಿದ್ದಾರೆ. ಚೈತನ್ಯರು ಅಂತಹ ಮಹಾನ್ ವ್ಯಕ್ತಿ ಆಗಿದ್ದರೆಂದೇ ಕುವೆಂಪು ರಚಿಸಿದ ನಾಡಗೀತೆಯಲ್ಲೂ ಚೈತನ್ಯರ ಹೆಸರು ಪ್ರಸ್ತಾಪಿಸಲ್ಪಟ್ಟಿದೆ. ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆ ಅವರು 'ವಿಶ್ವಂಭರ' ಎಂಬ 640 ಪುಟಗಳ ಬೃಹತ್ ಕಾದಂಬರಿಯನ್ನೇ ರಚಿಸಿದ್ದಾರೆ. ಬೆಂಗಳೂರಿನ ಟಚ್ ಸ್ಟೋನ್ ಫೌಂಡೇಷನ್ ಅದನ್ನು ಪ್ರಕಟಿಸಿದೆ.


ಚೈತನ್ಯರ ಭಕ್ತಿ ಪ್ರವಾಹದ ಆಂದೋಲನಕ್ಕೆ ಜಾತಿ ಮತಗಳ ಅಂತರವಿಲ್ಲ, ಬಡವ–ಬಲ್ಲಿದರೆಂಬ ಚೌಕಟ್ಟಿಲ್ಲ. ಸಮಸ್ತರನ್ನೂ ಈ ಚಳವಳಿ ತನ್ನ ತೆಕ್ಕೆಗೆ ತೆಗೆದುಕೊಂಡಿರುವುದರಿಂದ ಅದು ಗಡಿದಾಟಿ ಜಾಗತಿಕವಾಗಿ ವ್ಯಾಪಕವಾಗುತ್ತಿದೆ. ಚೈತನ್ಯರ ಬದುಕು–ಬೋಧನೆ ದೊಡ್ಡ ದೊಡ್ಡ ಸಾಫ್ಟ್‌ವೇರ್ ಕಂಪನಿಗಳ ಕೈತುಂಬ ವೇತನ ಪಡೆಯುವ ಟೆಕ್ಕಿಗಳನ್ನೂ ಪ್ರೇರೇಪಿಸಿದೆ. ಎಲ್ಲರ ಮನಸ್ಸುಗಳ ಮೇಲೆ ಅಲೌಕಿಕ ಬೆಳಕು ಬೀರಿದೆ. ಸಂಘರ್ಷವಿಲ್ಲದೆ ಸಾಮಾಜಿಕ ಸಾಮರಸ್ಯ ಸಾಧಿಸುವ ತಂತ್ರಗಾರಿಕೆಯನ್ನು ತೆರೆದಿಟ್ಟಿದೆ. ಯುದ್ಧವಿಲ್ಲದ, ಸ್ನೇಹದ ಬದ್ಧತೆ ಸಾರುವ ಸಂದೇಶ ರವಾನಿಸಿದೆ. "ಬಂಗಾಳ ಇಂದು ಯೋಚಿಸಿದ್ದನ್ನು ಭಾರತ ನಾಳೆ ಯೋಚಿಸಲಿದೆ" ಎಂದು ಹಿಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೇಳಲಾಗುತ್ತಿತ್ತು. ಬಂಗಾಳದ ಚೈತನ್ಯರು ಹದಿನೈದನೇ ಶತಮಾನದಲ್ಲಿ ಯೋಚಿಸಿದ್ದನ್ನು ಇಡೀ ಜಗತ್ತು ಇಪ್ಪತ್ತೊಂದನೇ ಶತಮಾನದಲ್ಲಿ ಕೃತಿರೂಪಕ್ಕಿಳಿಸುತ್ತಿದೆ ಎಂದರೆ ಚೈತನ್ಯರ ವಿಚಾರಧಾರೆಯ ತಾಕತ್ತು ಎಂತಹುದು ಎಂಬುದು 'ಯಾರಿಗಾದರೂ' ವೇದ್ಯವಾಗಬಹುದು.

ಭಕ್ತಿ ಚಳವಳಿಯ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಇಂದಿನ ಯುವಪೀಳಿಗೆಯ ಹೊಣೆಗಾರಿಕೆಯಾಗಿದೆ.

ತಾರುಣ್ಯದ ತಲ್ಲಣಗಳು-1


ಹರೆಯದಲ್ಲಿ ಜರುಗುವ ಬದಲಾವಣೆಗಳು, ಗಂಡು ಮಕ್ಕಳಲ್ಲಿ ಐದು ಹಂತಗಳಲ್ಲಿ ಮತ್ತು ಹೆಣ್ಣು ಮಕ್ಕಳಲ್ಲಿ ನಾಲ್ಕು ಹಂತಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಪೋಷಕರಿಗೆ ಮಕ್ಕಳ ಬದಲಾವಣೆ ತುಲನೆ ಮಾಡಲು ಮಾರ್ಗದರ್ಶಿಯಾಗುತ್ತವೆ.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಮನುಷ್ಯನ ಜೀವಿತಾವಧಿಯನ್ನು ಬಾಲ್ಯ, ಹರೆಯ, ಯೌವ್ವನ, ಪ್ರೌಢತ್ವ ವೃದ್ಧಾಪ್ಯ ಎಂದು ಐದು ಹಂತಗಳಾಗಿ ವಿಂಗಡಿಸಬಹುದು. ಜನಿಸಿದಾಗಿನಿಂದ ಹನ್ನೆರಡು ವರ್ಷ ವಯಸ್ಸಿನ ಅವಧಿಗೆ ಬಾಲ್ಯ ಎಂದು ಕರೆಯುತ್ತಾರೆ. ಹದಿಮೂರನೇ ವಯಸ್ಸಿನಿಂದ ಹತ್ತೊಂಭತ್ತನೇ ವಯಸ್ಸಿನ ಅವಧಿಗೆ ತಾರುಣ್ಯ ಅಥವಾ ಹರೆಯ ಎನ್ನುತ್ತಾರೆ. ಇದಕ್ಕೆ ಹದಿವಯಸ್ಸು ಎಂದೂ ಕರೆಯುತ್ತಾರೆ. ಇಪ್ಪತ್ತನೇ ವಯಸ್ಸಿನಿಂದ ಮೂವತ್ತರವರೆಗೆ ಯೌವ್ವನ ಎಂದೂ, ಮೂವತ್ತರಿಂದ ಅರುವತ್ತು ವಯಸ್ಸಿನ ವರೆಗೆ ಪ್ರೌಢತ್ವ ಎಂದು ಕರೆಯುತ್ತಾರೆ. ಅರುವತ್ತು ದಾಟಿದ ನಂತರ ವೃದ್ಧಾಪ್ಯ ಎನ್ನುವುದು ವಾಡಿಕೆ. ವೃದ್ಧಾಪ್ಯ ತಲುಪಿದ್ದಾರೆಂದರೆ ಅದು ಒಂದು ವಿಧದಲ್ಲಿ, ಆ ವ್ಯಕ್ತಿಯಲ್ಲಿ ಋಣಾತ್ಮಕ ಭಾವನೆ ಉಂಟಾಗಬಹುದೆಂದು ಭಾವಿಸಿ, ಅವರನ್ನು ಗೌರವಯುತವಾಗಿ 'ಹಿರಿಯ ನಾಗರಿಕರು' ಎಂದು ಕರೆಯುತ್ತಾರೆ. ಇದನ್ನು ಬೇರೆ ವಿಧಗಳಲ್ಲಿ ವಿಂಗಡಿಸುವ ಪರಿಪಾಠವಿದೆ. ಆದರೆ, ಓದುಗರಿಗೆ ಸರಳವಾಗಿ ಅರ್ಥವಾಗಬಹು ದೆಂಬ ಭಾವನೆಯಿಂದ ಈ ವಿಧವಾಗಿ ವಿಂಗಡಿಸಿದ್ದೇನೆ.

ಮೇಲೆ ತಿಳಿಸಿದ ಆಯಾಯ ಹಂತಗಳನ್ನಾಧರಿಸಿ, ಹರೆಯದಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ ಹಲವಾರು ಬದಲಾವಣೆಗಳು ಉಂಟಾಗುತ್ತವೆ. ಶರವೇಗದಲ್ಲಿ ಜರುಗುವ ಈ ಬದಲಾವಣೆಗಳು ಹರೆಯದವರನ್ನು ಇನ್ನಿಲ್ಲದ



ಒತ್ತಡಕ್ಕೀಡು ಮಾಡಿ, ಅದರ ಸುಳಿಯಲ್ಲಿ ಅವರ ಮನಸ್ಸು ಅಲ್ಲೋಲ ಕಲ್ಲೋಲಗೊಳ್ಳಬಹುದು. ಇದರೊಂದಿಗೆ, ಈ ಬದಲಾವಣೆ ಗಳು ಹರೆಯದವರಿಗೆ ಹಲವಾರು ಸವಾಲುಗಳನ್ನು ತಂದೊಡ್ಡುತ್ತವೆ. ಇದಕ್ಕೆ ಕಾರಣ ಹರೆಯವು ಪರಾವಲಂಬಿತನದ ಬಾಲ್ಯವನ್ನು ತೊರೆದು ಸ್ವತಂತ್ರತೆಯನ್ನು ಸಾಧಿಸದೇ ಇರುವ ಸಂಕ್ರಮಣದ ಅವಧಿ. ಹರೆಯದ ಬದಲಾವಣೆಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಯೋಣ.

ಹರೆಯ ತಲುಪಿದ್ದಂತೆ ಗಂಡು ಮಕ್ಕಳಲ್ಲಿ ದೇಹದ ಎತ್ತರ ಹೆಚ್ಚಾಗುತ್ತದೆ. ಭುಜಗಳು ಅಗಲವಾಗುತ್ತವೆ. ಶರೀರದ ಗಾತ್ರ ಹಿಗ್ಗುತ್ತದೆ. ದೇಹದ ಸ್ನಾಯುಗಳು ಗಡಸಾಗುತ್ತವೆ. ಗಂಟಲಿನಲ್ಲಿ ಧ್ವನಿ ಗಡಸಾಗುತ್ತದೆ. ಸ್ನಾಯುಗಳ ಸಾಂದ್ರತೆ ಹೆಚ್ಚುತ್ತದೆ. ಮೂಳೆಗಳ ಗಾತ್ರ ಹೆಚ್ಚುತ್ತದೆ. ಹೃದಯ ಮತ್ತು ಶ್ವಾಸಕೋಶಗಳ ಗಾತ್ರ ದೊಡ್ಡದಾಗುತ್ತದೆ. ಶಿಶ್ನುವಿನ ಮೇಲ್ಭಾಗ, ಕಂಕುಳಲ್ಲಿ ಕೂದಲುಗಳು ಕಾಣಿಸಿಕೊಳ್ಳುತ್ತವೆ. ಹರೆಯದಲ್ಲಿ ಪ್ರಾರಂಭವಾಗುವ ರಸದೂತಗಳ (Hormones) ಸುರಿತದಿಂದ ಚರ್ಮದಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತದೆ. ಹರೆಯದ ಹಂತದಲ್ಲಿ ಗೊನಾಡೋಟ್ರೋಫಿನ್ (Gonadotropin) ಬಿಡುಗಡೆಯ ರಸದೂತ ಹೈಪೋಥಾಲಮಸ್ (Hypothalamus) ಎಂಬ ಗ್ರಂಥಿಯು ಮಿದುಳಿನಲ್ಲಿರುವ ಪಿಟ್ಯುಟರಿ (Pituitary) ಎಂಬ ಗ್ರಂಥಿಗೆ ಸುರಿಸಲು ನಿರ್ದೇಶನ ನೀಡುತ್ತದೆ. ಈ ನಿರ್ದೇಶನದನುಸಾರ ಪಿಟ್ಯುಟರಿ ಗ್ರಂಥಿಯು ಗೊನಾಡೋಟ್ರೋಪಿನ್ (Gonadotropin) ಎಂಬ ರಸದೂತವನ್ನು ಸುರಿಸುತ್ತದೆ. ಗಂಡು ಮಕ್ಕಳಲ್ಲಿ ಶಿಶ್ನ ಮತ್ತು ವೃಷಣಗಳು ವೃದ್ಧಿಯಾಗಿ ಗಾತ್ರವು ಹೆಚ್ಚುತ್ತದೆ. ಸುಮಾರು ಹದಿಮೂರನೇ ಅಥವಾ ಹದಿನಾಲ್ಕನೇ ವಯಸ್ಸಿಗೆ ವೃಷಣಗಳಿಂದ ವೀರ್ಯೋತ್ಪತ್ತಿಯು ಪ್ರಾರಂಭವಾಗುತ್ತದೆ. ವೀರ್ಯೋತ್ಪತ್ತಿಗೆ ಟೆಸ್ಟೋಸ್ಟಿರಾನ್ (Testostirone) ಎಂಬ ರಸದೂತವು ಅವಶ್ಯ. ಟೆಸ್ಟೋಸ್ಟಿರಾನ್ ಸ್ರವಿಸುವಿಕೆಯು ಪ್ರಾರಂಭವಾಗುವುದು ಹರೆಯದ ಈ ಅವಧಿಯಲ್ಲಿ.

ಹೆಣ್ಣು ಮಕ್ಕಳಲ್ಲಿ ದೈಹಿಕವಾಗಿ ಪೃಷ್ಠಗಳು (Hips) ಅಗಲ ವಾಗುತ್ತವೆ. ತೊಡೆ ಮತ್ತು ಪೃಷ್ಠಗಳು ತುಂಬಿಕೊಂಡು ಶರೀರದ ಉಬ್ಬುತಗ್ಗುಗಳು ರೂಪುಗೊಳ್ಳುತ್ತವೆ. ದೇಹದ ಬೊಜ್ಜು ತುಂಬಿಕೊಳ್ಳುತ್ತದೆ. ಪ್ರೊಜೆಸ್ಟೆರೋನ್ (Progestoron) ಮತ್ತು ಗೊನಾಡೋಟ್ರೋಫಿನ್ ಎಂಬ ರಸದೂತಗಳ ಸ್ರವಿಸುವಿಕೆಯಿಂದ ಸ್ತನಗಳು ದಪ್ಪವಾಗಿ ಜನನಾಂಗದ ಮೇಲ್ಭಾಗ ಮತ್ತು ಕಂಕುಳು ಗಳಲ್ಲಿ ರೋಮಗಳು ಕಾಣಿಸಿಕೊಳ್ಳುತ್ತವೆ. ಹೆಣ್ಣು ಮಕ್ಕಳಲ್ಲಿ ಮುಖ್ಯವಾದ ಮತ್ತೊಂದು ಪ್ರಕ್ರಿಯೆ ಋತುವಾಗುವಿಕೆ (Menarche). ಈಸ್ಟ್ರೋಜನ್ (Estrogen) ಎಂಬ ರಸದೂತದ ಸ್ರವಿಸುವಿಕೆಯಿಂದ ಋತುಸ್ರಾವ ಉಂಟಾಗುತ್ತದೆ.

ಮೇಲೆ ತಿಳಿಸಿದ ಬದಲಾವಣೆಗಳು ಎಲ್ಲರಲ್ಲಿಯೂ ಏಕಕಾಲಕ್ಕೆ ಆಗಬೇಕೆಂದೇನೂ ಇಲ್ಲ. ಗಂಡು ಮಕ್ಕಳಾಗಲೀ, ಹೆಣ್ಣು ಮಕ್ಕಳಾಗಲೀ ಇವು ಕೆಲವರಿಗೆ ಒಂದೆರಡು ವರ್ಷಗಳು ಅಂದರೆ ಹನ್ನೊಂದನೇ ವಯಸ್ಸಿನಿಂದ ಹನ್ನೆರಡು ಅಥವಾ ಹದಿಮೂರನೇ ವಯಸ್ಸಿನಲ್ಲಿ ಜರುಗಬಹುದು. ಕೆಲವರಲ್ಲಿ ಒಂದೆರಡು ವರ್ಷಗಳು ತಡವಾಗಿಯಾದರೂ ಆಗಬಹುದು.

ಟ್ಯಾನರ್ (Tanner) ಎಂಬ ಮನೋಶಾಸ್ತ್ರಜ್ಞ ಹರೆಯ ವನ್ನು ಕೆಲವು ಹಂತಗಳಾಗಿ ವಿಂಗಡಿಸಿ, ಪ್ರತಿ ಹಂತದಲ್ಲೂ ಜರುಗುವ ಬದಲಾವಣೆಗಳನ್ನು ವಿವರಿಸಿದ್ದಾರೆ. ಟ್ಯಾನರ್ ಪ್ರಕಾರ ಹರೆಯದಲ್ಲಿ ಜರುಗುವ ಬದಲಾವಣೆಗಳು, ಗಂಡು ಮಕ್ಕಳಲ್ಲಿ ಐದು ಹಂತಗಳಲ್ಲಿ ಮತ್ತು ಹೆಣ್ಣು ಮಕ್ಕಳಲ್ಲಿ ನಾಲ್ಕು ಹಂತಗಳಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ವಿವರಿಸುತ್ತಾರೆ. ಈ ಹಂತಗಳು ಒಂದು ವಿಧದಲ್ಲಿ ಪೋಷಕರು ತಮ್ಮ ಮಗುವಿನ ಹರೆಯದ ಬದಲಾವಣೆಗಳನ್ನು ತುಲನೆ ಮಾಡುವ ಮಾರ್ಗದರ್ಶಿಯಾಗುತ್ತದೆ ಎಂಬುದು ಟ್ಯಾನರ್ ಅವರ ಅಭಿಪ್ರಾಯ.

ಗಂಡು ಮಕ್ಕಳಲ್ಲಿ ಮೊದಲ ಹಂತದಲ್ಲಿ ಅಡ್ರೀನಲ್ ಗ್ರಂಥಿಗಳು ಬೆಳೆಯುವುದನ್ನುಳಿದು ಬೇರೆ ಏನೂ ಬದಲಾವಣೆಗಳು ಕಾಣಿಸಿಕೊಳ್ಳುವುದಿಲ್ಲ. ಇದಕ್ಕೆ ಹರೆಯದ ಮುನ್ನಾ ಹಂತ ಅಥವಾ (Prepubertal stage) ಎಂದು ಕರೆಯುತ್ತಾರೆ. ಎರಡನೇ ಹಂತದಲ್ಲಿ ಮೊದಲೇ ತಿಳಿಸಿದ ದೈಹಿಕ ಬದಲಾವಣೆಗಳು ಕಾಣಸಿಕೊಳ್ಳುತ್ತವೆ. ಹನ್ನೆರಡರಿಂದ ಹದಿನಾರನೆಯ ವಯಸ್ಸಿನ ಅವಧಿಯನ್ನು ಮೂರನೇ ಹಂತ ಎಂದು ಕರೆದರು. ಮೊದಲೇ ತಿಳಿಸಿದಂತೆ ಈ ಹಂತದಲ್ಲಿ ಜರುಗುವ ಬದಲಾವಣೆಗಳೊಂದಿಗೆ ಧ್ವನಿ ಗಡಸಾಗುತ್ತದೆ. ಮೈಯಲ್ಲಿ ಬೆವರು ಕಾಣಿಸಿಕೊಂಡು, ಬೆವರಿನ ವಾಸನೆ ಬರಬಹುದು. ನಾಲ್ಕನೇ ಹಂತದಲ್ಲಿ ಮೇಲೆ ತಿಳಿಸಿದ ಬದಲಾವಣೆಗಳು ಇನ್ನೂ ಹೆಚ್ಚಿನ ಶೀಘ್ರ ಗತಿಯಲ್ಲಿ ಸಾಗುತ್ತವೆ. ಈ ಹಂತವು ಹದಿಮೂರರಿಂದ ಸುಮಾರು ಹದಿನೆಂಟು ವರ್ಷದವರೆಗೆ ವಿಸ್ತರಿಸುತ್ತದೆ. ಈ ಹಂತದಲ್ಲಿ ಮುಖದ ಮೇಲೆ ಮೊಡವೆಗಳು ಕಾಣಿಸಿಕೊಳ್ಳಬಹುದು. ಐದನೇ ಹಂತದಲ್ಲಿ ಹರೆಯದ ಬದಲಾವಣೆಗಳು ಪೂರ್ಣಗೊಳ್ಳುತ್ತವೆ ಎಂದು ಟ್ಯಾನರ್ ತಿಳಿಸುತ್ತಾರೆ.

ಹರೆಯದ ಹೆಣ್ಣು ಮಕ್ಕಳಲ್ಲಿ ಐದು ಹಂತಗಳಲ್ಲಿ ಜರುಗುವ ದೈಹಿಕ ಬದಲಾವಣೆಗಳು ಪೋಷಕರಿಗೆ ತಮ್ಮ ಮಕ್ಕಳಲ್ಲಿ ಜರುಗುವ ಬದಲಾವಣೆಗಳನ್ನು ಗುರುತಿಸಿ, ತುಲನೆ ಮಾಡಿ ಅದಕ್ಕೆ ತಕ್ಕಂತೆ ಕ್ರಮ ತೆಗೆದುಕೊಳ್ಳಲು ಮಾರ್ಗದರ್ಶಿಯಾಗುತ್ತದೆ ಎಂಬುದು ಟ್ಯಾನರ್ ಅವರ ಅಭಿಪ್ರಾಯ. ಒಂಭತ್ತು ವರ್ಷದ ಒಳಗೆ ಮುನ್ನಾ ಹರೆಯ ಎಂದು ಕರೆದ ಟ್ಯಾನರ್ ಅಡ್ರಿನಲ್ ಗ್ರಂಥಿಗಳು ಮತ್ತು ಗರ್ಭಕೋಶವು ದೊಡ್ಡದಾಗುತ್ತವೆ ಎನ್ನುತ್ತಾರೆ. ಇದನ್ನುಳಿದು ಬೇರೆ ಅಂಗಾಂಗಗಳಲ್ಲಿ ಯಾವ ಬದಲಾವಣೆಗಳೂ ಕಾಣಿಸಿಕೊಳ್ಳುವುದಿಲ್ಲ. ಒಂಭತ್ತನೇ ವಯಸ್ಸಿನಿಂದ ಹದಿಮೂರು ವಯಸ್ಸಿನ ಅವಧಿಯನ್ನು ಎರಡನೇ ಹಂತ ಎಂದು ಟ್ಯಾನರ್ ಕರೆದರು.

ಈ ಹಂತದಲ್ಲಿ ಮೊದಲೇ ತಿಳಿಸಿದ ದೈಹಿಕ ಬದಲಾವಣೆಗಳೊಂದಿಗೆ, ಸ್ತನದ ಮೊಲೆ ತೊಟ್ಟಿನ ಸುತ್ತ ಕಪ್ಪು ಬಣ್ಣದ ವರ್ಣ ದ್ರವ್ಯ (Pigment)ದ ವೃತ್ತಾಕಾರದ ಚರ್ಮ ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಬೆವರಿನಿಂದ ಒಂದು ವಿಧದ ವಾಸನೆ ಬರಲು ಪ್ರಾರಂಭವಾಗುತ್ತದೆ. ಮುಖದ ಮೇಲೆ ಮೊಡವೆಗಳು ಕಾಣಿಸಿಕೊಳ್ಳಬಹುದು. ನಾಲ್ಕನೇ ಹಂತದಲ್ಲಿ ಋತುಸ್ರಾವ ಪ್ರಾರಂಭವಾಗುತ್ತದೆ. ಈ ಅವಧಿಯಲ್ಲಿ ಹೆಣ್ಣುಮಕ್ಕಳಲ್ಲಿ ಗರ್ಭಕೋಶಕ್ಕೆ ಅಂಟಿಕೊಂಡಂತೆ ಅಂಡಾಶಯಗಳು (Overies) ವೃದ್ಧಿಗೊಂಡು ಅಂಡಾಣುಗಳ (Ovum) ಉತ್ಪತ್ತಿ ಪ್ರಾರಂಭವಾಗುತ್ತದೆ.

ಹೀಗೆ ಸುಮಾರು ಇಪ್ಪತ್ತು ವರ್ಷಕ್ಕೆ ಐದನೇ ಹಂತವು ಪೂರ್ಣಗೊಂಡು, ಒಂದು ವಿಧದಲ್ಲಿ ಹರೆಯದಲ್ಲಾಗುವ ದೈಹಿಕ ಬದಲಾವಣೆಗಳು ಪೂರ್ಣಗೊಳ್ಳುತ್ತವೆ ಎಂಬುದು ಟ್ಯಾನರ್‌ರವರ ಅಭಿಪ್ರಾಯ.

(ಮುಂದುವರಿಯುವುದು)

ಪ್ರಶಸ್ತಿ ಪ್ರದಾನ ಪ್ರಸಂಗ!


ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಬರುವ ವಾರ ನಮ್ಮದೊಂದು ಕಾರ್ಯಕ್ರಮ ನಡೆಯಲಿಕ್ಕಿದೆ. ನೀವು ಚೆನ್ನಾಗಿ ಮಾತಾಡ್ತೀರಿ ಅಂತೆ. ಎಲ್ಲರೂ ಹೇಳ್ತಿದ್ರು. ನೀವೊಂದು ಅದರ ನಿರೂಪಣೆ ನಡೆಸಿಕೊಡಬೇಕು' ಎಂಬ ಆಹ್ವಾನವೊಂದು ಪರಿಚಿತರ ಮೂಲಕ ಪರಮೇಶಿಗೆ ಬಂದಿತ್ತು. ಇಂಥ ಅವಕಾಶಗಳಿಗಾಗಿ ಕಾಯುತ್ತಿದ್ದ ಪರಮೇಶಿ ಹೆಚ್ಚೇನೂ ಆಲೋಚಿಸದೇ ಒಪ್ಪಿಗೆಯ ಹಸಿರು ನಿಶಾನೆ ತೋರಿಸಿದ್ದ. ಪೂರ್ವಸಿದ್ಧತೆಗೆ ಅನುಕೂಲ ಆಗಲೆಂದು ಏನು ಕಾರ್ಯಕ್ರಮ, ಯಾವಾಗ, ಎಲ್ಲಿ, ಎಷ್ಟೊತ್ತಿಗೆ ಎಂದೆಲ್ಲ ವಿವರಗಳನ್ನು ಆಹ್ವಾನವಿತ್ತವರಲ್ಲಿ ಕೇಳಿ ತಿಳಿದುಕೊಂಡ ಪರಮೇಶಿಗೆ ಅದೊಂದು ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಎನ್ನುವುದು ತಿಳಿಯಿತು. ಜೊತೆಗೇ ಕೆಲವು ಜನರಿಗೆ ಗೌರವ ಸಮರ್ಪಣೆಯೂ ಇದೆಯಂತೆ.

ನಿರೂಪಣೆ ಎಂದರೆ ಚೂರು ಹೆಚ್ಚೇ ಉಮೇದಿನ ಪರಮೇಶಿ, ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿದ. ಕಾರ್ಯಕ್ರಮದ ಪಟ್ಟಿ, ಅದಕ್ಕೆ ತಕ್ಕಂತೆ ಆಡಬೇಕಾದ ಮಾತುಗಳ ತಾಲೀಮು ಒಂದೇ ಸಮನೆ ನಡೆಯುತ್ತಲಿತ್ತು. ವಿಶೇಷ ಸಂದರ್ಭಗಳಲ್ಲಿ ಬಳಸಲೆಂದು ಒಳಗೆ ಎತ್ತಿಟ್ಟಿದ್ದ ಜುಬ್ಬಾ, ಕೋಟು ಅದಕ್ಕೆ ಹೊಂದುವ ಬೂಟು ಎಲ್ಲವನ್ನೂ ಹೊರತೆಗೆದು ಜೋಡಿಸಿಟ್ಟುಕೊಂಡ. ತಡರಾತ್ರಿಯವರೆಗೂ ನಿರೂಪಣಾ ಸಾಹಿತ್ಯವನ್ನು ಹೊಸೆಯುತ್ತಾ ಕುಳಿತಿರುತ್ತಿದ್ದ. ಯಾವುದೋ ಕವಿತೆಯ ಸಾಲು, ಮತ್ತಾವುದೋ ವಿವರಣೆ, ಮತ್ತಾರದೋ ಕೋಟ್, ಇನ್ನಾವುದೋ ಹೋಲಿಕೆಗಳನ್ನೆಲ್ಲಾ ಟೇಬಲ್ ಮೇಲೆ ಹರವಿಕೊಂಡು ಒಂದಕ್ಕೊಂದು ಬೆಸೆಯುವ ಕಾಯಕದಲ್ಲಿ ತೊಡಗಿದ್ದ. ಈ ನಿರೂಪಣೆಯ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂಬ ಉತ್ಸಾಹ ಆತನಲ್ಲಿ ಒಂದೇ ಸಮನೆ ಪುಟಿದೇಳುತ್ತಲೇ ಇತ್ತು.

ಅಂತೂ ಇಂತೂ ಕಾರ್ಯಕ್ರಮದ ದಿನವೇ ಬಂತು, ಮೊದಲೇ ನಿರ್ಧರಿಸಿಟ್ಟುಕೊಂಡ ಉಡುಗೆ–ತೊಡುಗೆ, ಕೈಯ್ಯಲ್ಲೊಂದು ಪ್ಯಾಡ್, ಕಿಸೆಯಲ್ಲಿ ಒಂದೆರಡು ಪೆನ್, ಹೆಗಲಿಗೊಂದು ಬ್ಯಾಗ್ ಎಲ್ಲಾ ಹಾಕಿಕೊಂಡು ಸಜ್ಜಾಗಿ, ಕಾರ್ಯಕ್ರಮ ನಡೆಯುವ ದಿನದಂದು ಸ್ಥಳಕ್ಕೆ ಹೋದ. ಆತನೊಳಗಿನ ನಿರೂಪಕ ಎದ್ದೆದ್ದು ಹೆಜ್ಜೆ ಎತ್ತಿಟ್ಟಂತೆ ಆತನಿಗೆ ಭಾಸವಾಗುತ್ತಿತ್ತು. ನೋಡಲು ಅದೊಂದು ಭಾರೀ ಭರ್ಜರಿ ವೇದಿಕೆ. ಹೂವು–ಹಣ್ಣಿನ ಅಲಂಕಾರ, ಸಾಕಷ್ಟು ಜನ ಕುಳಿತುಕೊಳ್ಳಬಹುದಾದ ತುಂಬಾ ದೊಡ್ಡದೇ ಎನ್ನಬಹುದಾದ ಸಭಾಂಗಣ. ಆದರೆ... ಅದರ ಮೂಲೆಯಲ್ಲೆಲ್ಲೋ, ಅಲ್ಲೋ ಇಲ್ಲೋ ಎಂಬಂತೆ ಸ್ವಲ್ಪವೇ ಸ್ವಲ್ಪ ಜನ ಸಣ್ಣ ಸಣ್ಣ ಗುಂಪುಗಳಂತೆ ನೆರೆದು ಕುಳಿತು ತಮ್ಮದೇ ಲೋಕಾಭಿರಾಮದ ಮಾತುಕತೆ, ಹರಟೆಗಳಲ್ಲಿ ಮುಳುಗಿ ಹೋಗಿದ್ದರು. ಪರಮೇಶಿಯ ಉತ್ಸಾಹ, ಹುರುಪುಗಳೆಲ್ಲವೂ ಸಣ್ಣಗೆ ಕಂಪಿಸಿದವು.



ವೇದಿಕೆಯ ಮೇಲಿನ ದೊಡ್ಡದಾದ ಝುಗಮಗಿಸುವ ಬ್ಯಾನರ್ ನೋಡಿದ. ಅದರಲ್ಲಿ ಬೇರೆ ಏನೇನೋ ವಿವರಗಳಿದ್ದವು. ಅವುಗಳಲ್ಲಿ ಈತ ಹುಡುಕುತ್ತಿದ್ದ ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಎಂದು ಎಲ್ಲೋ ಸಣ್ಣಗೆ ಬರೆದಿದ್ದು ಕಾಣಿಸಿತು. ಮತ್ತೆ ಆ ಬ್ಯಾನರ್‌ನಲ್ಲಿ ದೊಡ್ಡದಾಗಿ ಏನು ಬರೆದಿದ್ರು ಅಂತ ಕೇಳ್ತೀರಾ? ಮತ್ತೇನೂ ಅಲ್ಲ, 'ಪ್ರಶಸ್ತಿ ಪ್ರದಾನ' ಎಂದು. ಈ ಬಗ್ಗೆ ಏನೂ ಹೇಳಿರಲಿಲ್ಲವಲ್ಲ ಎಂಬ ಯೋಚನೆಯಲ್ಲಿ ಮುಳುಗಿಹೋದ. ಆಯೋಜಕರು ಬಂದು ಪರಮೇಶಿಯನ್ನು ಅಲ್ಲಿಂದ ಮೇಲೆತ್ತಿ, 'ಸರ್ ಬನ್ನಿ ಕಾರ್ಯಕ್ರಮ ಇನ್ನೇನು ಆರಂಭಿಸಿಯೇ ಬಿಡೋಣ' ಅಂತ ಗ್ರೀನ್ ರೂಮ್‌ಗೇ ಕರೆದುಕೊಂಡು ಹೋಗಲು ಅನುವಾದರು.

ಆ ರೂಮ್‌ಗೆ ಹೋಗೋಣ ಎಂದರೆ ಅಲ್ಲಿ ಕಾಲಿರಿಸಲೂ ಜಾಗವಿಲ್ಲ. ಹೋ ಏನು..? ಕಾರ್ಯಕ್ರಮದ ಆಯೋಜಕ ವರ್ಗದವರು, ಕಲಾವಿದರು, ಸ್ವಯಂಸೇವಕರೆಲ್ಲ ಅಲ್ಲಿ ತುಂಬಿಕೊಂಡಿದ್ದೇ ಅದಕ್ಕೆ ಕಾರಣ ಎಂದುಕೊಂಡಿರಾ? ಇಲ್ಲ..ಇಲ್ಲ.. ಆರೂಮು ಶಾಲು, ಹಾರ, ಸ್ಮರಣಿಕೆ, ಬುಟ್ಟಿ, ಚಟ್ಟಿ ಇನ್ನೂ ಏನೇನೋ ವಸ್ತುಗಳಿಂದ ತುಂಬಿ ತುಳುಕುತ್ತಿತ್ತು. ಯಾರಿಗೇ ಆದರೂ ಅದರ ಒಳಹೊಕ್ಕು ಕುಳಿತುಕೊಳ್ಳುವುದು ಕಷ್ಟವೇ ಇತ್ತು. ಆಯೋಜಕರು ಅಸಹಾಯಕತೆಯ ನೋಟ ಬೀರಿದರು. ಪರಮೇಶಿ ಅದನ್ನು ಅರ್ಥೈಸಿಕೊಂಡಂತೆ ವೇದಿಕೆ ಹಾಗೂ ರೂಮಿನ ನಡುವೆ ಇರುವ ಮಂದ ಬೆಳಕಿನ ಸಣ್ಣದಾದ ಸಂಧಿಯಲ್ಲೇ ಒಂದು ಕುರ್ಚಿ ಎಳೆದುಕೊಂಡು ಕುಳಿತುಕೊಂಡ. ಎಲ್ಲವನ್ನೂ ಕೊಂಚ ತಹಬಂಧಿಗೆ ತರಲು ಯತ್ನಿಸುತ್ತಾ ದೀರ್ಘ ಉಸಿರೆಳೆದುಕೊಂಡ, ಧೂಳಿನ ಘಾಟು ಮೂಗಿಗೆ ಬಡಿಯಿತು. ತಕ್ಷಣ ಏನೋ ಹೊಳೆದವನಂತೆ, ಎದ್ದು ಹೋಗಿ ವೇದಿಕೆ ಹಿಂದೆ ಅಳವಡಿಸಿದ್ದ ಬ್ಯಾನರ್‌ನ್ನು ಗಮನಿಸಿದ. ಪ್ರಶಸ್ತಿ ಪ್ರದಾನ ಅಂತೆಲ್ಲ ಏನೇನೋ ಬರೆದಿತ್ತಲ್ಲ ಅದನ್ನೇ ದಿಟ್ಟಿಸುತ್ತಾ, ಇಲ್ಲಿನ ಪರಿಸ್ಥಿತಿ ನೋಡಿದರೆ, ಅಲ್ಲಿ ಪ್ರಶಸ್ತಿ 'ಪ್ರಧಾನ' ಎಂದೇ ಬರೆದಿದ್ದರೆ ಒಳ್ಳೆಯದಿತ್ತು ಅಂದುಕೊಂಡ. ಇಲ್ಲಿ 'ಪ್ರಶಸ್ತಿಯೇ ಪ್ರಧಾನ' ಎಂದು ಯಾರಿಗಾದರೂ ಗೊತ್ತಾಗುತ್ತಿತ್ತು. ಆದರೂ ಆ ಬಗ್ಗೆ ಆ ಕ್ಷಣಕ್ಕೆ ಏನೂ ಹೇಳುವುದು ಔಚಿತ್ಯವಲ್ಲವೆನಿಸಿ, ಒಪ್ಪಿಕೊಂಡ ತಪ್ಪಿಗೆ ನಿರೂಪಣೆಗೆ ಸಿದ್ಧನಾದ.

ನೋಡಿದರೆ ಆ ಪುಣ್ಯಾತ್ಮ ಆಯೋಜಕ, ಬಂದವರಿಗೆಲ್ಲ ಪ್ರಶಸ್ತಿ ಪ್ರದಾನ ಮಾಡುವ ಭಾರೀ ಹುಮ್ಮಸ್ಸಿನಲ್ಲಿದ್ದ. ಆದರೆ ಅಲ್ಲಿರುವ ಪ್ರಶಸ್ತಿ ಸಂಬಂಧದ ಸಲಕರಣೆಗಳ ಒಟ್ಟು ಸಂಖ್ಯೆಗೂ ಹಾಗೂ ಅಲ್ಲಿ ನೆರೆದ ಸಭಿಕರ ಸಂಖ್ಯೆಗೂ ಬಹಳ ವ್ಯತ್ಯಾಸವಿತ್ತು. ಅಲ್ಲಿ ಜನರಿಗಿಂತಲೂ ಅವುಗಳೇ ಹೆಚ್ಚಿದ್ದವು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎಂದುಕೊಳ್ಳುತ್ತೇನೆ. ಮತ್ತೆ ಗೊತ್ತಾಯಿತು, ಬಂದವರು ಬಂದ ಬಂದಂತೆ ಅದನ್ನು ಖರೀದಿಸಿ ಅಲ್ಲಲ್ಲ ಸ್ವೀಕರಿಸಿ ಅಲ್ಲಿಂದ ಕಾಲ್ಕೀಳುವ ವ್ಯವಸ್ಥೆಯೂ ಇತ್ತು. ಅಷ್ಟರಲ್ಲಿ ಆಯೋಜಕರು ಬಂದು ಉದ್ದನೆಯ ಪಟ್ಟಿಯಂಥ ಹಾಳೆಯನ್ನು ಕೈಗಿತ್ತು, ನಿಮ್ಮ ನಿರೂಪಣೆಯಲ್ಲಿ ಇದನ್ನೂ ಸ್ವಲ್ಪ ಸೇರಿಸಿಕೊಳ್ಳಬೇಕು ಎಂದು ಮನವಿಯ ದನಿಯಲ್ಲಿ ಹೇಳಿ, ಅದೃಶ್ಯರಾದರು. ಆ ಪಟ್ಟಿ ತೆರೆದು ನೋಡಿದ ಪರಮೇಶಿಗೋ ಬವಳಿ ಬರುವುದೊಂದು ಬಾಕಿಯಿತ್ತಷ್ಟೇ! ಅದರಲ್ಲಿ ಅಷ್ಟೊಂದು ವಿವಿಧ ಪ್ರಶಸ್ತಿಗಳು ಹಾಗೂ ಅವುಗಳ ಮುಂದೆ ದಂಡಿಯಾಗಿ ಪುರಸ್ಕೃತರ ಹೆಸರುಗಳೂ ಬರೆಯಲ್ಪಟ್ಟಿದ್ದವು. 'ಕರ್ನಾಟಕ ರತ್ನ'ವೇನೋ ಎಂದೆನಿಸುವಂತೆ 'ಕರ್ನಾಟಕ ರತ್ನಮಣಿ' ಪ್ರಶಸ್ತಿ, ಇದು ಪದ್ಮಭೂಷಣ ಅಲ್ಲವೇ ಎನಿಸುವಂಥ 'ಪದ್ಯಭೂಷಣ', ಜ್ಞಾನಪೀಠವಾ ಅಂದರೆ ಅಲ್ಲ 'ಸುಜ್ಞಾನ ಪೇಟ', ವಿದ್ಯಾವರಿಧಿ, ವಾಚಸ್ಪತಿ, ಪೇಚಸ್ಪತಿ ಇಂಥ ಏನೇನೋ ವಿಲಕ್ಷಣ, ವಿರೋಧಾಭಾಸ ಎನಿಸುವ ಹೆಸರಿನ ಪ್ರಶಸ್ತಿಗಳೆಲ್ಲವೂ ಆ ಪಟ್ಟಿಯಲ್ಲಿದ್ದವು. ಪರಮೇಶಿಗಂತೂ ತಾನು ಯಾವುದೋ ಪ್ರಶಸ್ತಿ ಮಾರಾಟದ ಕೇಂದ್ರೀಯ ಮಾರುಕಟ್ಟೆಯಲ್ಲೋ, ವ್ಯಾಪಾರ ಮಳಿಗೆಯಲ್ಲೋ ಇದ್ದಂತೆ ಅನಿಸಲಾರಂಭಿಸಿತು. ಅತ್ತಲಿಂದ ದೇಣಿಗೆ ದಾನಿಗಳ ಹೆಸರನ್ನು ಬರೆಸಿಕೊಳ್ಳಲು ಸಜ್ಜಾಗಿ ಖಾಲಿ ರಸೀದಿಗಳು ಫ್ಯಾನ್‌ನ ಗಾಳಿಗೆ ಪಟಪಟಸಿ ಕುಣಿದಾಡುತ್ತಿದ್ದವು.

ಅಂತೂ ಇಂತೂ ಕಾರ್ಯಕ್ರಮ ಶುರುವಿಟ್ಟುಕೊಂಡಿತು. ಇನ್ನೂ ಅತಿಥಿಗಳಿಗೆ ಸ್ವಾಗತವನ್ನೇ ಕೋರಿರಲಿಲ್ಲ, ಆಗಲೇ ಯಾರಿಗೋ ಅರ್ಜೆಂಟ್ ಆಗಿ ಹೊರಡಬೇಕಿತ್ತು ಎಂಬ ಕಾರಣದಿಂದ, ಅವರಿಗೊಂದು ಪ್ರಶಸ್ತಿಯನ್ನು ಕೊಟ್ಟು ಕಳುಹಿಸಿಕೊಡಲಾಯಿತು. ಹೀಗೆ ವೇದಿಕೆ ಮೇಲೆಲ್ಲಾ ಈ ಪ್ರಶಸ್ತಿ ಪುರಸ್ಕೃತರು, ಅವರ ಬಂಧು–ಬಾಂಧವರು ಓಡಾಡಿಕೊಂಡಿದ್ದರೆ, ಸಂಗೀತ ಕಲಾವಿದರ ದಂಡು, ವೇದಿಕೆಯ ಒಂದು ಮೂಲೆಗೆ ತಳ್ಳಲ್ಪಟ್ಟಿದ್ದರು. ಅವರು ಆಗಾಗ ಒಂದೊಂದು ಹಾಡನ್ನು ಹಾಡುತ್ತಾ ತಮ್ಮ ಅಸ್ತಿತ್ವವನ್ನು ಎಲ್ಲರ ಮುಂದೆ ತೋರಿಸಲು ಹವಣಿಸುತ್ತಿದ್ದರು. ಕೆಲವೊಮ್ಮೆ ಆರಂಭಿಸಿದ ಒಂದು ಹಾಡು ಮುಗಿಯುವ ಮುನ್ನವೇ, ಆಯೋಜಕರಲ್ಲಿ ಪ್ರಶಸ್ತಿ ಪ್ರದಾನದ ಉನ್ಮಾದ ಕೇಕೇ ಹಾಕಲಾರಂಭಿಸುತ್ತಿತ್ತು. ಒಟ್ಟಾರೆ ಸಂಗೀತ ಕಾರ್ಯಕ್ರಮದೊಳಗೆ ಪ್ರಶಸ್ತಿ ಪ್ರದಾನವೋ ಅಥವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದೊಳಗೆ ಸಂಗೀತ ಕಾರ್ಯಕ್ರಮವೋ ಒಂದೂ ತಿಳಿಯದೇ ನಿರೂಪಕ ಪರಮೇಶಿ ಬೇಸ್ತು ಬಿದ್ದವನಂತೆ ಕುಳಿತಿದ್ದ. ಮೇಲಾಗಿ ಹೆಚ್ಚು ಹಣದ ದೇಣಿಗೆ ಕೊಟ್ಟವರೂ ಇದ್ದಾರೆನಿಸುತ್ತೆ, ಆಯೋಜಕರು ನಿರೂಪಣೆಯಲ್ಲಿ ಅವರ ಬಗ್ಗೆ ಇನ್ನೂ ಹೆಚ್ಚಿನ, ತೂಕದ ವಿಶೇಷಣ ಸೇರಿಸುವಂತೆ ಆಗಾಗ ಬಂದು ಪರಮೇಶಿಯ ಕಿವಿಯಲ್ಲಿ ಪಿಸುಗುಡುವ ಮೂಲಕ ಆತನ ಮೇಲೆ ಒತ್ತಡ ಹೇರುತ್ತಲೇ ಇದ್ದರು.

ಕಾರ್ಯಕ್ರಮ ಆರಂಭವಾಗಿ ಎರಡು ಮೂರು ಗಂಟೆ ಕಳೆದರೂ ಕೇವಲ ಅರ್ಧದಷ್ಟು ಫಲಕಗಳು ಖಾಲಿಯಾಗಿವೆ ಅಷ್ಟೇ! ಹಾಡುಗಾರಿಕೆ ನಡೆಯುತ್ತಲೇ ಇತ್ತು ನಡು ನಡುವೆ, ಸನ್ಮಾನ ಉರುಫ್ ಪ್ರಶಸ್ತಿ ಪ್ರದಾನ ಉರುಫ್ ಗೌರವ ಸಲ್ಲಿಕೆಯೂ ಮುಂದುವರಿದಿತ್ತು. ಪರಮೇಶಿಗೆ ಮತ್ತೆ ತಡೆಯಲಾಗಲಿಲ್ಲ. ಏನೋ ನೆಪ ಹೇಳಿ, ಅರ್ಜೆಂಟ್ ಹೊರಡಬೇಕೆಂದು ಅಲ್ಲಿಂದ ಕಾಲ್ಕೀಳಲು ತಾನು ಅನುವಾದ. ಆತನಿಗೂ ಒಂದು ಫಲಕ ಕೊಟ್ಟು, ಸಸ್ತಾ ಶಾಲು ಹೊದೆಸಿ, ಕುತ್ತಿಗೆಗೊಂದು ಮಾಲೆ ಹಾಕಿ ಕಳಿಸಿದರು. ಜನರು ಇನ್ನೂ ಬರುತ್ತಲೇ ಇದ್ದರು, ಜೊತೆಗೆ ಆ ಕೊಠಡಿಯಿಂದ ಶಾಲು, ಹಾರಗಳೂ! ಆಯೋಜಕರೇ ಭಾರೀ ಪದ ಪ್ರಯೋಗಕ್ಕೆ ಮುಂದಾಗಿ ನಿರೂಪಕ ಸ್ಥಾನಕ್ಕೆ ಬಡ್ತಿ ಪಡೆದುಕೊಂಡರೆ, ಪರಮೇಶಿ ಅಲ್ಲಿಂದ ಎದ್ದೋ ಬಿದ್ದೋ ಎಂದು ಹೊರಬಿದ್ದ. ಸದ್ಯ ತನಗೂ ಒಂದು 'ನಿರೂಪಣಾ ರತ್ನ' ಪ್ರಶಸ್ತಿ ಕೊಡಲಿಲ್ಲ ಬಚಾವ್ ಎಂದುಕೊಳ್ಳುತ್ತಾ ಮನೆಕಡೆ ದೌಡಾಯಿಸಿದ!


ಓವರ್‌ಡೋಸ್: 'ಓಹ್ ಪ್ರಶಸ್ತಿ ಬಂತಾ?!' ಎಂದು ಮುಂಚೆಲ್ಲ ಅಚ್ಚರಿಯಿಂದ ಕೇಳುತ್ತಿದ್ದರು, ಈಗಲೂ ಹಾಗೇ ಕೇಳುತ್ತಾರೆ ಆದರೆ ಗುಮಾನಿಯಿಂದ!

ಖಮೇನಿ ಸಾವಿನ ಬಳಿಕ ಆಪ್ತ ಸಹಚರ ಅರಾಫಿ ಆಯ್ಕೆ | ಖಮೇನಿ ಸಾವಿಗೆ ಸಂಭ್ರಮಿಸಿದ ಇರಾನ್ | ಅಮೆರಿಕ, ಇಸ್ರೇಲ್ ದಾಳಿಗೆ ಇರಾನಿ ರಾಜಕುಮಾರನ ಪ್ರಶಂಸೆ | ಇರಾನ್ ಸೇನೆಗೆ ಕೈಕೊಟ್ಟ ಚೀನಾ ರಾಡಾರ್ | ಖಮೇನಿ ಹತ್ಯೆ ಖಂಡಿಸಿದ ಪುಟಿನ್

ಅರಾಫಿ ತಾತ್ಕಾಲಿಕ ಸರ್ವೋಚ್ಚ ನಾಯಕ

ಟೆಹ್ರಾನ್: ಅಮೆರಿಕದ ದಾಳಿಯಲ್ಲಿ ಆಯತೊಲ್ಲಾ ಅಲಿ ಖಮೇನಿ ಅವರ ನಿಧನ ದೃಢಪಟ್ಟ ಕೆಲವೇ ಗಂಟೆಗಳ ಬಳಿಕ, ಅನುಭವಿ ಇಸ್ಲಾಮಿಕ್ ನಾಯಕ ಮತ್ತು ಖಮೇನಿ ಆಪ್ತ ಸಹಚರರಾಗಿದ್ದ ಆಯತೊಲ್ಲಾ ಅರಾಫಿ ಅವರನ್ನು ತಾತ್ಕಾಲಿಕವಾಗಿ ಇರಾನ್‌ನ ಸರ್ವೋಚ್ಚ ನಾಯಕರನ್ನಾಗಿ ನೇಮಿಸಲಾಗಿದೆ. ಅರಾಫಿ ಅವರನ್ನು ನೇತೃತ್ವ ಮಂಡಳಿಯ ನ್ಯಾಯಶಾಸ್ತ್ರಜ್ಞ ಸದಸ್ಯರನ್ನಾಗಿ ನೇಮಿಸಲಾಗಿದ್ದು, ಜೊತೆಗೆ ತಾತ್ಕಾಲಿಕ ಸರ್ವೋಚ್ಚ ನಾಯಕರಾಗಿ ಜವಾಬ್ದಾರಿ ವಹಿಸಲಿದ್ದಾರೆ ಎಂದು ವರದಿಯಾಗಿದೆ.

ಅಲಿರೆಜಾ ಅರಾಫಿ ಯಾರು?



ಅರಾಫಿ ಅವರು ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಆಯ್ಕೆಯಾಗುವ ಸ್ಪರ್ಧೆಯಲ್ಲಿ ಪ್ರಮುಖ ಮುಂಚೂಣಿ ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದರು. 67 ವರ್ಷದ ಅರಾಫಿ ಅನುಭವಿ ಇಸ್ಲಾಂ ಧಾರ್ಮಿಕ ನಾಯಕ ಹಾಗೂ ಖಮೇನಿ ಅವರ ಆಪ್ತ ಸಹಚರರು. ಅವರು ಪ್ರಸ್ತುತ ಸರ್ವೋಚ್ಚ ನಾಯಕರನ್ನು ನೇಮಿಸುವ ಅಸೆಂಬ್ಲಿ ಆಫ್ ಎಕ್ಸ್‌ಪರ್ಟ್ಸ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಿಂದಿನ ಹುದ್ದೆಗಳಲ್ಲಿ ಚುನಾವಣಾ ಅಭ್ಯರ್ಥಿಗಳ ಪರಿಶೀಲನೆ ಹಾಗೂ ಸಂಸತ್ತಿನಲ್ಲಿ ಅಂಗೀಕೃತವಾದ ಕಾನೂನುಗಳ ಪರಿಶೀಲನೆಗೆ ಜವಾಬ್ದಾರಿಯಾದ ಪ್ರಭಾವಶಾಲಿ ಗಾರ್ಡಿಯನ್ ಕೌನ್ಸಿಲ್ ಸದಸ್ಯತ್ವವೂ ಸೇರಿದೆ. ಅದರ ಜೊತೆಗೆ, ಅವರು ಇರಾನ್ ಧಾರ್ಮಿಕ ಶಿಕ್ಷಣ(ಸೆಮಿನರಿ) ವ್ಯವಸ್ಥೆಯ ಮುಖ್ಯಸ್ಥರಾಗಿದ್ದಾರೆ. ಧಾರ್ಮಿಕವಾಗಿ ಬಹಳ ಸ್ಥಾಪಿತ ವ್ಯಕ್ತಿಯಾಗಿದ್ದರೂ, ಅವರನ್ನು ಪ್ರಮುಖ ರಾಜಕೀಯ ಶಕ್ತಿಯಾಗಿ ವ್ಯಾಪಕವಾಗಿ ಪರಿಗಣಿಸಲಾಗುವುದಿಲ್ಲ ಮತ್ತು ಭದ್ರತಾ ವ್ಯವಸ್ಥೆಯೊಂದಿಗೆ ಗಟ್ಟಿಯಾದ ಸಂಪರ್ಕಗಳಿರುವ ವ್ಯಕ್ತಿಯಾಗಿ ಅವರು ಪ್ರಸಿದ್ಧರಾಗಿಲ್ಲ.

ಸುಪ್ರೀಂ ಲೀಡರ್ ಆಯ್ಕೆ ಹೇಗಿರುತ್ತೆ?

ತಾತ್ಕಾಲಿಕ ನಾಯಕತ್ವ ಮಂಡಳಿ: ಹೊಸ ಸರ್ವೋಚ್ಚ ನಾಯಕನನ್ನು ಅಧಿಕೃತ ಆಯ್ಕೆ ಮಾಡುವವರೆಗೆ, ದೇಶದ ಉನ್ನತ ಜವಾಬ್ದಾರಿಗಳನ್ನು ಇರಾನ್ ರಚಿಸಲ್ಪಟ್ಟ ತಾತ್ಕಾಲಿಕ ನಾಯಕತ್ವ ಮಂಡಳಿ ವಹಿಸಿಕೊಳ್ಳುತ್ತದೆ. ಇರಾನ್ ರಾಷ್ಟ್ರಪತಿ, ಮುಖ್ಯ ನ್ಯಾಯಮೂರ್ತಿ ಹಾಗೂ ಗಾರ್ಡಿಯನ್ ಕೌನ್ಸಿಲ್‌ನಿಂದ ಆಯ್ಕೆಯಾದ ಹಿರಿಯ ಧಾರ್ಮಿಕ ನಾಯಕ ಸೇರಿ ಚರ್ಚೆ ನಡೆಸಿ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡುತ್ತಾರೆ. ತಜ್ಞರ ಸಭೆಯಲ್ಲಿ ಹೊಸ ನಾಯಕನ ಆಯ್ಕೆ: ಇರಾನ್ ಸಂವಿಧಾನದ ಪ್ರಕಾರ, ಮುಂದಿನ ಸರ್ವೋಚ್ಚ ನಾಯಕನನ್ನು ತಜ್ಞರ ಸಭೆ ಆಯ್ಕೆ ಮಾಡಬೇಕು. ಈ ಸಭೆ, 88 ಹಿರಿಯ ಶಿಯಾ ಧಾರ್ಮಿಕ ಪಂಡಿತರ ಮಂಡಳಿ, ಪ್ರತಿ 8 ವರ್ಷಕ್ಕೊಮ್ಮೆ ಜನ ಆಯ್ಕೆ ಮಾಡುವ ಸದಸ್ಯರು, ತಜ್ಞರನ್ನು ಗಾರ್ಡಿಯನ್ ಕೌನ್ಸಿಲ್ ಆಯ್ಕೆ ಮಾಡುತ್ತದೆ. ಪದವಿ ಖಾಲಿಯಾದ ತಕ್ಷಣ ಸಭೆ ಸೇರಿ ಹೊಸ ನಾಯಕನ ಆಯ್ಕೆ ಮಾಡುತ್ತಾರೆ.
ಯಾರ ಆಯ್ಕೆ ಮಾಡಬಹುದು?: ಇರಾನ್ ಸಂವಿಧಾನದ ನಿಯಮಗಳ ಪ್ರಕಾರ, ಸರ್ವೋಚ್ಚ ನಾಯಕನು ಶಿಯಾ ಕಾನೂನು ಮತ್ತು ರಾಜಕೀಯದಲ್ಲಿ ಆಳವಾದ ಜ್ಞಾನವಿರುವ ಹಿರಿಯ ಇಸ್ಲಾಮಿಕ್ ನ್ಯಾಯಶಾಸ್ತ್ರಜ್ಞನಾಗಿರಬೇಕು. ಅಭ್ಯರ್ಥಿಯು ಧಾರ್ಮಿಕ ಪ್ರಾಧಿಕಾರ, ರಾಜಕೀಯ ವಿವೇಕ ಮತ್ತು ನಾಯಕತ್ವ ಸಾಮರ್ಥ್ಯ ಹೊಂದಿರಬೇಕು. ತಜ್ಞರ ಸಭೆಯಲ್ಲಿನ ಆಯ್ಕೆ ಪ್ರಕ್ರಿಯೆ ಪೋಪ್ ಆಯ್ಕೆಯಂತೆ ಗೌಪ್ಯವಾಗಿ ನಡೆಯುತ್ತದೆ. ಸದಸ್ಯರು ಮತ ಚಲಾಯಿಸಿ ಹೊಸ ನಾಯಕನನ್ನು ಆಯ್ಕೆ ಮಾಡುತ್ತಾರೆ. ಆಯ್ಕೆಗೆ ನಿಗದಿತ ಗಡುವಿಲ್ಲ: ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ಇರಾನ್ ಸಂವಿಧಾನದಲ್ಲಿ ನಿಗದಿತ ಗಡುವಿಲ್ಲ, ಸಾಧ್ಯವಾದಷ್ಟು ಬೇಗ ಸಭೆ ಅದನ್ನು ಪೂರ್ಣಗೊಳಿಸಬೇಕು ಎಂದು ಹೇಳಲಾಗಿದೆ. ಅಷ್ಟರೊಳಗೆ ಆಂತರಿಕ ನಾಯಕತ್ವ ಮಂಡಳಿ ಅಧಿಕಾರದಲ್ಲೇ ಇರುತ್ತದೆ. ಸರ್ವೋಚ್ಚ ನಾಯಕನ ಆಯ್ಕೆಗೆ ಯಾವುದೇ ನೇರ ಚುನಾವಣೆ ಇರುವುದಿಲ್ಲ.

ವಿಶ್ವ ಶಾಂತಿಗೆ ಇರಾನ್ ಅಪಾಯಕಾರಿ

ಇಸ್ರೇಲ್ ಹೇಳುವಂತೆ ಇರಾನ್ ತನ್ನ ಪ್ರತಿದಾಳಿಗಳಲ್ಲಿ ಉದ್ದೇಶಪೂರ್ವಕವಾಗಿ ಪಕ್ಕದ ದೇಶಗಳ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿದೆ. ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಇಸ್ರೇಲಿ ಅಧಿಕಾರಿಗಳು, ಮಧ್ಯಪ್ರಾಚ್ಯ ಮತ್ತು ವಿಶ್ವ ಶಾಂತಿಗೆ ಇರಾನ್ ನಂ.1 ಬೆದರಿಕೆ. ಫೆ.28ರಂದು, ಇರಾನ್ ತನ್ನ ನೆರೆಯ ರಾಷ್ಟ್ರಗಳಲ್ಲಿ ನಾಗರಿಕ ಗುರಿಗಳನ್ನು ಉದ್ದೇಶಪೂರ್ವಕವಾಗಿ ಹೊಡೆದಿದೆ ಎಂದು ತಿಳಿಸಿದ್ದಾರೆ.



ಸುದೀರ್ಘಾವಧಿ ಸುಪ್ರೀಂ ನಾಯಕರಾಗಿದ್ದ ಖಮೇನಿ



ಇರಾನ್‌ನ ಸರ್ವೋಚ್ಚ ನಾಯಕನಾಗಿ ದಶಕಗಳಿಂದ ದೇವಪ್ರಭುತ್ವದ ಅಧಿಕಾರವನ್ನು ಒಟ್ಟುಗೂಡಿಸಿದ ಮತ್ತು ಅದನ್ನು ಪ್ರಾದೇಶಿಕ ಶಕ್ತಿ ಕೇಂದ್ರವನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದ 86 ವರ್ಷದ ಆಯತೊಲ್ಲಾ ಅಲಿ ಖಮೇನಿ ನಿಧನರಾಗಿದ್ದಾರೆ. 1989ರಲ್ಲಿ ಆಯತೊಲ್ಲಾ ರುಹೊಲ್ಲಾ ಖೊಮೇನಿ ಅವರ ಮರಣದ ನಂತರ ಅಧಿಕಾರ ವಹಿಸಿಕೊಂಡ ನಂತರ ಖಮೇನಿ ಇಸ್ಲಾಮಿಕ್ ರಿಪಬ್ಲಿಕ್ ಅನ್ನು ನಾಟಕೀಯವಾಗಿ ಪುನಃಸ್ಥಾಪಿಸಿದರು. ಖೊಮೇನಿ ಶಾಹನನ್ನು ಉರುಳಿಸಲು ಮತ್ತು ಧಾರ್ಮಿಕ ಶುದ್ಧತೆಯನ್ನು ಹರಡುವ ಜವಾಬ್ದಾರಿಯನ್ನು ಹೊತ್ತ ಶಿಯಾ ಮುಸ್ಲಿಂ ಮೌಲ್ವಿಗಳಿಂದ ಆಡಳಿತವನ್ನು ಸ್ಥಾಪಿಸಲು ಕಾರಣವಾದ ಕ್ರಾಂತಿಕಾರಿ. ವಿಶೇಷವೆಂದರೆ, ಶಾಹ ಆಳ್ವಿಕೆ ಕೊನೆಗಾಣಿಸಿದ ಖೊಮೇನಿ ಆಳಿದ್ದು 10 ವರ್ಷ. ಆದರೆ, ಖಮೇನಿ ಸುದೀರ್ಘ ಅವಧಿ ವರೆಗೆ ಇರಾನ್ ಸುಪ್ರೀಂ ನಾಯಕರಾಗಿ ಆಡಳಿತ ನಡೆಸಿದರು. ಶಿಯಾ ಪಾದ್ರಿಯಾಗಿ, ಅರೆಸೈನಿಕ ರೆವಲ್ಯೂಷನರಿ ಗಾರ್ಡ್ ಅನ್ನು ಅವರ ಆಡಳಿತಕ್ಕೆ ಆಧಾರವಾಗಿರುವ ಪ್ರಮುಖ ಸಂಸ್ಥೆಯಾಗಿ ನಿರ್ಮಿಸಿದರು. ಗಾರ್ಡ್ ಮಿಲಿಟರಿ ಮತ್ತು ವ್ಯಾಪಾರ ದೈತ್ಯದಂತಾಯಿತು. ದೇಶದ ಅತ್ಯಂತ ಗಣ್ಯ ಶಕ್ತಿ ಮತ್ತು ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಶಸ್ತ್ರಾಸ್ತ್ರದ ಮುಖ್ಯಸ್ಥರು, ಇರಾನ್‌ನ ಆರ್ಥಿಕ ಕ್ಷೇತ್ರಗಳಲ್ಲಿ ಪ್ರಭಾವ ಹೊಂದಿದ್ದರು. ಆದರೆ, ಅಧಿಕಾರದುದ್ದಕ್ಕೂ ಹಲವಾರು ಪ್ರತಿಭಟನೆ ಕಂಡ ಖಮೇನಿ, 2022 ಮತ್ತು ಈಗ 2025ರ ಅಂತ್ಯದ ವೇಳೆಗೆ ಕಾಣಿಸಿದ ಪ್ರತಿಭಟನೆಗಳಿಂದ ಹೆಚ್ಚು ಆಘಾತಗೊಂಡರು. ಈ ಸಂದರ್ಭದಲ್ಲಿ ಜನ ತೀರಾ ಖಮೇನಿಯವರೇ ಬೇಡ ಎಂಬುವಷ್ಟರ ಮಟ್ಟಿಗೆ ಮುಂದಕ್ಕೆ ಹೋಗಿದ್ದರು. ಜತೆಗೆ, ಪ್ರತಿಭಟನೆ ನಡೆಸುತ್ತಿದ್ದವರ ನಿಯಂತ್ರಣಕ್ಕಾಗಿ ಸಾವಿರಾರು ಮಂದಿಯನ್ನು ಹತ್ಯೆ ಮಾಡಿದ ಆರೋಪವನ್ನೂ ಹೊತ್ತರು. ಕಠಿಣ ಸಂಪ್ರದಾಯಗಳು ಜನರನ್ನು ಇನ್ನಷ್ಟು ಸಿಟ್ಟಿಗೆ ನೂಕಿತು

ಖಮೇನಿ ಹತ್ಯೆಗೆ ಪುಟಿನ್ ಖಂಡನೆ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾನುವಾರ, ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲ ಅಲಿ ಖಮೇನಿ ಹತ್ಯೆಯಾಗಿರುವುದನ್ನು ನೈತಿಕ ಮತ್ತು ಕಾನೂನಿನ ನಿಂದನೀಯ ಉಲ್ಲಂಘನೆ ಎಂದು ಬಲವಾದ ಖಂಡಿಸಿದ್ದಾರೆ. ನೈತಿಕತೆಯ ಎಲ್ಲಾ ಮಾನದಂಡಗಳು ಹಾಗೂ ಅಂತಾರಾಷ್ಟ್ರೀಯ ಕಾನೂನಿನ ನಿಂದನೀಯ ಉಲ್ಲಂಘನೆ ಎಂದು ಹೇಳಿದ್ದಾರೆ. ಉಕ್ರೇನ್ ವಿರುದ್ಧ ಮಾಸ್ಕೋ ನಡೆಸುತ್ತಿರುವ ದಾಳಿಯ ಅವಧಿಯಲ್ಲಿ ಇರಾನ್, ರಷ್ಯಾದ ಅತ್ಯಂತ ಆಪ್ತ ಮಿತ್ರ ರಾಷ್ಟ್ರಗಳಲ್ಲಿ ಒಂದಾಗಿ ನಿಂತಿದೆ. ಇರಾನ್ ಮೇಲಿನ ಅಮೆರಿಕಾ-ಇಸ್ರೇಲ್ ದಾಳಿಗೆ ಮುನ್ನ ರಷ್ಯಾ ತಾಳ್ಮೆ ವಹಿಸುವಂತೆ ಕರೆ ನೀಡಿತ್ತು. ಭಾನುವಾರ, ರಷ್ಯಾ ಪ್ರಕಟಿಸಿದ ಪತ್ರದಲ್ಲಿ ಪುಟಿನ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಅವರಿಗೆ ಕಳುಹಿಸಿದ ಸಂದೇಶದಲ್ಲಿ ಖಮೇನಿಯವರ ಹತ್ಯೆ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಇತಿಹಾಸದಲ್ಲೇ ದುಷ್ಟ ವ್ಯಕ್ತಿ ಸತ್ತ: ಟ್ರಂಪ್

ವಾಷಿಂಗ್ಟನ್: ಇತಿಹಾಸದಲ್ಲೇ ಅತ್ಯಂತ ದುಷ್ಟ ವ್ಯಕ್ತಿಗಳಲ್ಲೊಬ್ಬನಾದ ಖಮೇನಿ ಸತ್ತಿದ್ದಾನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಘೋಷಣೆ ಮಾಡಿದ್ದಾರೆ. ಖಮೇನಿ ಸಾವು, ಇರಾನ್ ಜನತೆಗೆ ಸಿಕ್ಕ ನ್ಯಾಯವಷ್ಟೇ ಮಾತ್ರವಲ್ಲ, ಮಹಾನ್ ಅಮೆರಿಕನ್ನರಿಗೆ, ಖಮೇನಿ ಹಾಗೂ ಅವನ ರಕ್ತಪಿಪಾಸು ಗುಂಪಿನ ಕ್ರೂರತೆಯಿಂದ ಕೊಲ್ಲಲ್ಪಟ್ಟ ಅಥವಾ ಅಂಗವಿಕಲರಾದ ವಿಶ್ವದ ಅನೇಕ ದೇಶಗಳ ಜನರಿಗೆ ಸಂದ ನ್ಯಾಯ. ನಮ್ಮ ಗುಪ್ತಚರ ಮತ್ತು ಅತ್ಯಾಧುನಿಕ ಟ್ರ್ಯಾಕಿಂಗ್ ವ್ಯವಸ್ಥೆಗಳನ್ನು ತಪ್ಪಿಸಲು ಅವನಿಂದ ಸಾಧ್ಯವಾಗಲಿಲ್ಲ ಎಂದರು.

ಅಮೆರಿಕ-ಇಸ್ರೇಲ್ ಸೇನಾ ದಾಳಿ ಶ್ಲಾಘಿಸಿದ ಇರಾನಿ ರಾಜಕುಮಾರ




ಟೆಹರಾನ್: ಅಮೆರಿಕ-ಇಸ್ರೇಲಿ ಜಂಟಿ ಸೇನಾ ದಾಳಿಗೆ ಇರಾನಿನ ಸರ್ವೋಚ್ಚ ನಾಯಕ ಆಲಿ ಆಯತೊಲ್ಲಾ ಖಮೇನಿ ಸಾವಿಗೀಡಾಗಿರುವುದನ್ನು ಇರಾನ್ ದೃಢಪಡಿಸಿದ ಬಳಿಕ, ದೇಶಭ್ರಷ್ಟ ಇರಾನಿ ರಾಜಕುಮಾರ ರೇಜಾ ಪಹ್ಲವಿ ಈ ಕಾರ್ಯಾಚರಣೆಯನ್ನು ಸ್ವಾಗತಿಸಿದ್ದು, ದೃಢ ಕ್ರಮಕ್ಕಾಗಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಶ್ಲಾಘಿಸಿದರು.

'ಎಕ್ಸ್' ಪೋಸ್ಟ್ ಮೂಲಕ ನೇರವಾಗಿ ಇರಾನಿ ಜನತೆಯನ್ನು ಉದ್ದೇಶಿಸಿ ಸಂದೇಶ ನೀಡಿದ ಪಹ್ಲವಿ, ''ನಮ್ಮ ಕಾಲದ ರಕ್ತಪಿಪಾಸು ದಬ್ಬಾಳಿಕೆಯ ಆಲಿ ಖಮೇನಿ ಇತಿಹಾಸ ಪುಟದಿಂದ ಅಳಿಸಲ್ಪಟ್ಟಿದ್ದಾರೆ. ಖಮೇನಿ ಸಾವಿನೊಂದಿಗೆ ಇಸ್ಲಾಮಿಕ್ ಗಣರಾಜ್ಯ ವಾಸ್ತವಿಕವಾಗಿ ಅಂತ್ಯಗೊಂಡಂತಾಗಿದೆ.ಶೀಘ್ರವೇ ಇತಿಹಾಸದ ಕಸದಬುಟ್ಟಿ ಸೇರಲಿದೆ ''ಎಂದು ಹೇಳಿದ್ದಾರೆ.

ಇರಾನಿನಉಜ್ವಲಭವಿಷ್ಯ ರೂಪಿಸಲು 'ಇರಾನ್‌ಸಮೃದ್ಧಿ ಯೋಜನೆ'ಯೊಂದಕ್ಕಾಗಿ ಮಾರ್ಗಸೂಚಿಯೊಂದನ್ನು ಪ್ರಕಟಿಸಿದ ಅವರು, ಇದರಡಿ ಹೊಸಸಂವಿಧಾನವೊಂದನ್ನು ರೂಪಿಸಲು ಮತ್ತು ಅಂಗೀಕರಿಸಲು ಜನಮತ ಸಂಗ್ರಹಣೆಯ ಪ್ರಸ್ತಾವಿಸಲಾಗಿದೆ.ಇದರ ಬಳಿಕ ಅಂತಾರಾಷ್ಟ್ರೀಯ ಮೇಲ್ವಿಚಾರಣೆಯಡಿ ಚುನಾವಣೆಗಳು ನಡೆದು ಪರಿವರ್ತನಾ ಸರ್ಕಾರವನ್ನು ವಿಸರ್ಜಿಸಲಾಗುವುದು ಎಂದಿದ್ದಾರೆ.

ಈಗ ಖಮೇನಿ ಆಡಳಿತದಲ್ಲಿನ ಅಳಿದುಳಿದವರು ಉತ್ತರಾಧಿಕಾರಿಯ ನೇಮಕಕ್ಕೆ ಮುಂದಾದರೆ ಅದು ವಿಫಲಗೊಳ್ಳಲಿದೆ. ಯಾವುದೇ ಹೊಸ ನಾಯಕನಿಗೆ ಕಾನೂನು ಸಮ್ಮತತೆಯ ಕೊರತೆ ಇರುತ್ತದೆ, ನಿರ್ಗಮಿತ ಆಡಳಿತದ ಅಪರಾಧಗಳು ವಂಶವಾಹಿಯಾಗಿ ಮುಂದುವರಿಸಲು ಅವಕಾಶ ನೀಡುತ್ತದೆ ಎಂದು ಎಚ್ಚರಿಸಿದ ಅವರು, ಮುಕ್ತ ಮತ್ತು ಸಮೃದ್ಧ ಇರಾನ್ ನಿರ್ಮಾಣಕ್ಕಾಗಿ ಸುಸ್ಥಿರ ಅಧಿಕಾರ ವರ್ಗಾವಣೆಯೊಂದಕ್ಕೆ ಸಹಕರಿಸಬೇಕೆಂದು ಅವರು ಸೇನೆ, ಕಾನೂನು ಅನುಷ್ಠಾನ ವಿಭಾಗ ಮತ್ತು ಭದ್ರತಾ ಪಡೆಗಳನ್ನು ಆಗ್ರಹಿಸಿದರು.

ಖಮೇನಿ ಸಾವು: ಭಾರತದಲ್ಲಿ ಪ್ರತಿಭಟನೆ, ಶೋಕಾಚರಣೆ




ಶ್ರೀನಗರ/ಲಕ್ನೋ: ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ಅಮೆರಿಕ-ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹತರಾದ ಸುದ್ದಿ ತಿಳಿಯುತ್ತಿದ್ದಂತೆಯೇ, ಭಾನುವಾರ ಭಾರತದ ಹಲವು ರಾಜ್ಯಗಳಲ್ಲಿ ಭಾರಿ ಪ್ರತಿಭಟನೆ ಮತ್ತು ಶೋಕಾಚರಣೆಗಳು ನಡೆದಿವೆ. ಇರಾನ್ ಅಧಿಕೃತವಾಗಿ ಈ ಸುದ್ದಿಯನ್ನು ಖಚಿತಪಡಿಸಿದ ಬೆನ್ನಲ್ಲೇ ಆಕ್ರೋಶದ ಅಲೆ ಎದ್ದಿದೆ.
ದೇಶಾದ್ಯಂತ ಪ್ರತಿಭಟನೆಯ ಬಿಸಿ: ಲಕ್ನೋದಲ್ಲಿ ಶಿಯಾ ಸಮುದಾಯದ ನೂರಾರು ಜನರು ಬಾರಾ ಇಮಾಂಬರಾ ಬಳಿ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದರು. ಸೋಮವಾರ ಅಮೆರಿಕ ಮತ್ತು ಇಸ್ರೇಲ್ ನಾಯಕರ ಪ್ರತಿಕೃತಿ ದಹಿಸಲು ಅಲ್ಲಿನ ಸಂಘಟನೆಗಳು ನಿರ್ಧರಿಸಿವೆ. ದೆಹಲಿ, ಬಿಹಾರ ಮತ್ತು ತೆಲಂಗಾಣದಲ್ಲಿಯೂ ಪ್ರತಿಭಟನೆಗಳು ನಡೆದಿವೆ.
ಜಮ್ಮು ಮತ್ತು ಕಾಶ್ಮೀರದಲ್ಲಿ ಅಶಾಂತಿ: ಕಾಶ್ಮೀರದ ಲಾಲ್ ಚೌಕ್ ಮತ್ತು ಬದ್ಗಾಮ್ ಸೇರಿ ಹಲವೆಡೆಗಳಲ್ಲಿ ಸಾವಿರಾರು ಜನರು ಬೀದಿಗೆ ಇಳಿದು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯದಲ್ಲಿ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದ್ದು, ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರು ಜನರಲ್ಲಿ ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ. ಇರಾನ್‌ನಲ್ಲಿ ಸಿಲುಕಿರುವ ಕಾಶ್ಮೀರಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸುತ್ತಿರುವುದಾಗಿ ಹೇಳಿದ್ದಾರೆ.

ಖಮೇನಿ ಹತ್ಯೆಗೆ ಇರಾನಿಗಳ ನೃತ್ಯ!

ಟೆಹ್ರಾನ್: ಖಮೇನಿ ಕೆಲವು ಇರಾನಿಯರು ಶೋಕ ವ್ಯಕ್ತಪಡಿಸಿದರೆ, ಇನ್ನೂ ಹಲವರು ಸರ್ವೋಚ್ಚ ನಾಯಕ ಖಮೇನಿ ಸಾವನ್ನು ಬೀದಿಗಿಳಿದು ನೃತ್ಯ ಮಾಡುವುದರೊಂದಿಗೆಸಂಭ್ರಮಿಸಿದರು. 36 ವರ್ಷಗಳಿಂದ ಸರ್ವಾಧಿಕಾರಿ ಆಡಳಿತ ನಡೆಸಿದ ವ್ಯಕ್ತಿಯ ಹತ್ಯೆಯಿಂದ ಬೆಚ್ಚಿಬಿದ್ದ ದೇಶದಲ್ಲಿ ಆಳವಾದ ಭಿನ್ನಾಭಿಪ್ರಾಯ ಇರುವುದು ಜಗಜ್ಜಾಹೀರಾಗಿದೆ.

ಇರಾನ್ ಸರ್ಕಾರದ ರಾಜ್ಯ ಟಿವಿ ಭಾನುವಾರದ ಮುಂಜಾನೆ ಅವರ ಸಾವನ್ನು ಘೋಷಿಸಿತು. ಖಮೇನಿ ಸಾವಿನ ಸುದ್ದಿ ಪ್ರಸಾರ ಮಾಡುತ್ತಿದ್ದಾಗ ಪ್ರಸಾರಕನ ಧ್ವನಿ ಭಾವುಕತೆಯಿಂದ ಕಂಪಿಸುತ್ತಿತ್ತು. ಟೆಹ್ರಾನ್‌ನ ದೃಶ್ಯಗಳಲ್ಲಿ ಕಪ್ಪು ಬಟ್ಟೆ ತೊಟ್ಟು ಕೆಲವು ಇರಾನಿಯನ್ನರು ಖಮೇನಿ ಚಿತ್ರಗಳನ್ನು ಹಿಡಿದು ಕಣ್ಣೀರಿಟ್ಟರು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಖಮೇನಿ ಸಾವಿಗೆ ಇರಾನಿಯನ್ನರು ಸಂಭ್ರಮ ಆಚರಿಸಿದರು.
ವೈರಲ್ ಸಿಗರೇಟ್ ಮಹಿಳೆಯ ನೃತ್ಯ: 2026ರ ಜನವರಿ ಆರಂಭದಲ್ಲಿ, ಕೆನಡಾದಲ್ಲಿ ನಡೆದಿದ್ದ ಪ್ರತಿಭಟನಾ ರ್‍ಯಾಲಿ ವೇಳೆ ಸರ್ವೋಚ್ಚ ನಾಯಕ ಖಮೇನಿ ಫೋಟೋಗೆ ಬೆಂಕಿ ಹಚ್ಚಿ ಅದರಿಂದ ಸಿಗರೇಟ್ ಹಚ್ಚುತ್ತಿರುವ ಯುವತಿಯೊಬ್ಬಳ ವಿಡಿಯೋ ತುಣುಕೊಂದು ವೈರಲ್ ಆಗಿತ್ತು. ಈ ವಿಡಿಯೋದಲ್ಲಿದ್ದ ಮಹಿಳೆ ಖಮೇನಿ ಸಾವಿನ ಬಳಿಕ ಹೊಸ ವಿಡಿಯೋ ಪೋಸ್ಟ್ ಮಾಡಿದ್ದು, ನಿನ್ನ ಸಮಾಧಿಯ ಮೇಲೆ ನಾವು ನೃತ್ಯ ಮಾಡುತ್ತೇವೆಂದು ಹೇಳಿದ್ದೆನಲ್ಲವೇ? ಎಂದು ಹೇಳಿ ನೃತ್ಯ ಮಾಡಿದ್ದಾರೆ.



ಚೀನಾದಿಂದ ಖರೀದಿಸಿದ ಎಚ್‌ಕ್ಯು-9ಬಿ ವಿಫಲ?

ತೈಲದ ಬದಲಿಗೆ ಶಸ್ತ್ರಾಸ್ತ್ರ ಒಪ್ಪಂದದ ಭಾಗವಾಗಿ ಇರಾನ್ ಚೀನಾದಿಂದ ಖರೀದಿಸಿದ್ದ ಎಚ್‌ಕ್ಯು-9ಬಿ ವಾಯು ರಕ್ಷಣಾ ವ್ಯವಸ್ಥೆ ಇದೀಗ ಪ್ರಶ್ನೆಯ ಕೇಂದ್ರಬಿಂದುವಾಗಿದೆ. ಅಮೆರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ವಾಯುದಾಳಿಗಳಿಂದ ಇರಾನ್ ನಗರಗಳಲ್ಲಿ ಭಾರೀ ವಿನಾಶ ಉಂಟಾದ ಹಿನ್ನೆಲೆ, ಒಳಬರುವ ಕ್ಷಿಪಣಿಗಳನ್ನು ತಡೆಹಿಡಿಯಲು ಇರಾನ್ ವಾಯು ರಕ್ಷಣಾ ವ್ಯವಸ್ಥೆ ವಿಫಲವಾಯಿತೇ ಎಂಬ ಚರ್ಚೆ ನಡೆಯುತ್ತಿದೆ. ಇತ್ತೀಚೆಗೆ ಚೀನಾದಿಂದ ಖರೀದಿಸಿದ ಎಚ್‌ಕ್ಯು-9ಬಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗಿರುವ ಶಂಕೆ ವ್ಯಕ್ತವಾಗಿದೆ.
ಸಿಂದೂರ ವೇಳೆಯೂ ಚೀನಾ ರಾಡಾರ್ ವಿಫಲ: ಇದಕ್ಕೂ ಮೊದಲು, ಭಾರತವು ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಆಪರೇಷನ್ ಸಿಂದೂರ ಆರಂಭಿಸಿದಾಗ ಪಾಕಿಸ್ತಾನದಲ್ಲಿನ ಗುರಿಗಳನ್ನು ಸಮರ್ಪಕವಾಗಿ ರಕ್ಷಿಸುವಲ್ಲಿ ಎಚ್‌ಕ್ಯು-9ಬಿ ವಿಫಲವಾಗಿದೆ ಎಂಬ ವರದಿಗಳು ಬಂದಿವೆ.
ಶೀಘ್ರ ಅತಿ ಭೀಕರ ದಾಳಿ: ಇರಾನ್: ಆಯತೊಲ್ಲಾ ಅಲಿ ಖಮೇನಿ ಸಾವಿನ ಪ್ರತೀಕಾರ ತೀರಿಸಲು ಇತಿಹಾಸದಲ್ಲೇ ಅತಿ ಭೀಕರ ದಾಳಿ ನಡೆಸುವುದಾಗಿ ಟೆಹ್ರಾನ್ ಪ್ರತಿಜ್ಞೆಗೈದಿದೆ.

ಇರಾನ್ ರಕ್ಷಣಾ ಸಚಿವರೂ ಸೇರಿ ಏಳು ಉನ್ನತ ಸೇನಾ ನಾಯಕರು ಹತ್ಯೆ

ಅಮೆರಿಕ-ಇಸ್ರೇಲ್ ದಾಳಿ ವೇಳೆ ಇರಾನ್ ರಕ್ಷಣಾ ಸಚಿವ ಅಜೀಜ್ ನಸೀರ್ ಜಾದೆ ಸೇರಿದಂತೆ ಏಳು ಹಿರಿಯ ಸೇನಾ ಕಮಾಂಡರ್‌ಗಳು ಸಾವನ್ನಪ್ಪಿರುವುದಾಗಿ ಇಸ್ರೇಲ್ ರಕ್ಷಣಾ ಪಡೆಗಳು(ಐಡಿಎಫ್) ಭಾನುವಾರ ಘೋಷಿಸಿವೆ. ಟೆಹ್ರಾನ್‌ನ ಎರಡು ಪ್ರತ್ಯೇಕ ಭದ್ರತಾ ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ವಾಯುಪಡೆ (ಐಎಎಫ್) ನಿಖರ ದಾಳಿ ನಡೆಸಲಾಗಿದೆ. ಸಾವನ್ನಪ್ಪಿದವರಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಮುಖ್ಯಸ್ಥ ಮೊಹಮ್ಮದ್ ಪಾಕ್‌ಪೂರ್, ಸುಪ್ರೀಂ ಲೀಡರ್ ಆಯತೊಲ್ಲಾ ಅಲಿ ಖಾಮೆನೇಯಿ ಅವರ ಆಪ್ತ ಸಲಹೆಗಾರ ಅಲಿ ಶಾಮ್ಖಾನಿ ಸೇರಿ ಹಲವರು ಸೇರಿದ್ದಾರೆ ಎಂದು ಹೇಳಿದೆ.

ಮಹಾರಾಷ್ಟ್ರ ಕಾರ್ಖಾನೆ ಅಗ್ನಿ ದುರಂತ 17 ಜನ ಸಜೀವ ದಹನ



ನಾಗ್ಪುರ: ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಸ್ಫೋಟಕ ತಯಾರಿಕಾ ಕಾರ್ಖಾನೆಯೊಂದರಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 17 ಜನರು ಮೃತಪಟ್ಟಿದ್ದು, 18 ಮಂದಿ ಗಾಯಗೊಂಡಿದ್ದಾರೆ. ನಾಗ್ಪುರದಿಂದ ಸುಮಾರು 50 ಕಿಮೀ ದೂರದಲ್ಲಿರುವ ಕಾಟೋಲ್ ತಹಸಿಲ್‌ನ ಎಸ್‌ಬಿಎಲ್ ಎನರ್ಜಿ ಲಿಮಿಟೆಡ್ ಘಟಕದಲ್ಲಿ ಈ ದುರಂತ ನಡೆದಿದೆ.

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಸ್ಫೋಟದ ತೀವ್ರತೆಗೆ ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟುಹೋಗಿದ್ದು, ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತಿದೆ. ಶನಿವಾರ ಆಂಧ್ರಪ್ರದೇಶದ ಕಾಕಿನಾಡದಲ್ಲಿ ಇಂತಹದ್ದೇ ಪಟಾಕಿ ಕಾರ್ಖಾನೆ ಸ್ಫೋಟದಲ್ಲಿ 21 ಜನರು ಮೃತಪಟ್ಟಿದ್ದರು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದಾರೆ. ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರ 5 ಲಕ್ಷ ರೂ. ಮತ್ತು ಪ್ರಧಾನ ಮಂತ್ರಿ ಕಾರ್ಯಾಲಯ 2 ಲಕ್ಷ ರೂ. ಪರಿಹಾರ ಘೋಷಿಸಿವೆ. ಗಾಯಗೊಂಡವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಜಿಎಸ್‌ಟಿ ಸಂಗ್ರಹ 1.83 ಲಕ್ಷ ಕೋಟಿ ರೂ.ಗೆ ಏರಿಕೆ

ಹೊಸದಿಲ್ಲಿ: ದೇಶದ ಒಟ್ಟು ಜಿಎಸ್‌ಟಿ ಸಂಗ್ರಹ ಫೆಬ್ರವರಿ ತಿಂಗಳಿನಲ್ಲಿ ಕಳೆದ ವಿತ್ತೀಯ ವರ್ಷಕ್ಕಿಂತ ಶೇ.8.1ರಷ್ಟು ಏರಿಕೆಯಾಗಿದ್ದು, 1.83 ಲಕ್ಷ ಕೋಟಿ ರೂಪಾಯಿ ದಾಟಿದೆ. ಆಮದುಗಳ ಮೇಲಿನ ಆದಾಯದಲ್ಲಿನ ಹೆಚ್ಚಳ ಮತ್ತು ಸುಧಾರಿತ ದೇಶೀಯ ಮಾರಾಟ ಈ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ.




ಜಾರಿಗೊಳಿಸಲಾದ ತೆರಿಗೆ ಮರುಪಾವತಿಗಳ ನಂತರ, ಒಟ್ಟು ನಿವ್ವಳ ಸಂಗ್ರಹ 1.61 ಲಕ್ಷ ಕೋಟಿ ರೂಪಾಯಿಯಾಗಿದೆ. 2025ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದ ತೆರಿಗೆ ದರ ಕಡಿತದ ಹೊರತಾಗಿಯೂ, ಗ್ರಾಹಕರ ಖರೀದಿ ಸಾಮರ್ಥ್ಯ ಹೆಚ್ಚಿರುವುದು ಈ ಆದಾಯ ವೃದ್ಧಿಗೆ ಕಾರಣ, ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆರ್ಥಿಕ ಸುಧಾರಣೆಗಳ ಭಾಗವಾಗಿ ಹಲವು ತೆರಿಗೆ ಸ್ಲ್ಯಾಬ್‌ಗಳನ್ನು ವಿಲೀನಗೊಳಿಸಿ, 375ಕ್ಕೂ ಹೆಚ್ಚು ವಸ್ತುಗಳ ಮೇಲಿನ ದರ ಇಳಿಸಲಾಗಿತ್ತು. ನವೆಂಬರ್‌ನಲ್ಲಿ ತೆರಿಗೆ ಇಳಿಕೆಯಿಂದಾಗಿ ಸಂಗ್ರಹ ಸ್ವಲ್ಪ ಕಡಿಮೆಯಾಗಿದ್ದರೂ, ಕಳೆದ ಮೂರು ತಿಂಗಳಿನಿಂದ ನಿರಂತರ ಚೇತರಿಕೆ ಕಾಣುತ್ತಿದೆ.

ವಾಣಿಜ್ಯ ಬಳಕೆಯ ಅಡುಗೆ ಅನಿಲ ಬೆಲೆ 31ರೂ. ಇಳಿಕೆ

ಹೊಸದಿಲ್ಲಿ: ಇರಾನ್-ಇಸ್ರೇಲ್-ಅಮೆರಿಕ ಯುದ್ಧ ನಡುವೆಯೇ ಭಾರತದಲ್ಲಿ ಮಹತ್ವದ ಬೆಳವಣಿಗೆಯೊಂದರಲ್ಲಿ ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ಇಳಿಕೆಯಾಗಿದೆ.



ತೈಲ ಕಂಪನಿಗಳು ವಾಣಿಜ್ಯ ಬಳಕೆಯ 19 ಕಿಲೋ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ 18ರಿಂದ 31ರೂ.ಗಳಷ್ಟು ಇಳಿಕೆ ಮಾಡಿದ್ದು, ದಿಲ್ಲಿ, ಕೋಲ್ಕತ್ತಾ, ಮುಂಬೈ, ಮತ್ತು ಚೆನ್ನೈನಂತಹ ಪ್ರಮುಖ ನಗರಗಳಲ್ಲಿ ದರಗಳು ಕಡಿಮೆಯಾಗಿದ್ದು, ಇದು ದೇಶಾದ್ಯಂತ ಜಾರಿಗೆ ಬರುತ್ತಿವೆ. ಹೊಸದರಗಳುಭಾನುವಾರದಿಂದಲೇ ಜಾರಿಗೆ ಬಂದಿವೆ. ಗೃಹ ಬಳಕೆ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ.

ರಾಷ್ಟ್ರ ರಾಜಧಾನಿ ದಿಲ್ಲಿಯಲ್ಲಿ 19 ಕೆ.ಜಿ ಸಿಲಿಂಡರ್ ಬೆಲೆಯಲ್ಲಿ 28 ರೂ.ಗಳಷ್ಟು ಕಡಿಮೆಯಾಗಿ, 1768.5 ರೂ.ಗಳಷ್ಟಿದ್ದ ವಾಣಿಜ್ಯ ಸಿಲಿಂಡರ್ ಬೆಲೆ 1740.5 ರೂ.ಗಳಿಗೆ ಇಳಿಕೆಯಾಗಿದೆ. ಕೋಲ್ಕತ್ತಾದಲ್ಲಿ ಇದು 31 ರೂ. ಇಳಿಕೆಯಾಗಿದ್ದು, 1875.5 ರೂ.ಗಳಿಗೆ ಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್ 1844.5 ರೂ.ಗೆ ಲಭ್ಯವಾಗಲಿದೆ. ಮುಂಬೈ ಮತ್ತು ಚೆನ್ನೈನಲ್ಲಿ ಕ್ರಮವಾಗಿ 28.5 ಮತ್ತು 29.5 ರೂ. ಇಳಿಕೆಯಾಗಿದೆ. ಬೆಂಗಳೂರಿನಲ್ಲೂ ಎಲ್‌ಪಿಜಿ ಸಿಲಿಂಡರ್ ಬೆಲೆ ಕಡಿಮೆಯಾಗಿದ್ದು, ಗೃಹ ಬಳಕೆಯ 14.2 ಕೆಜಿ ಸಿಲಿಂಡರ್ ಬೆಲೆ 855 ರೂ.ಗಳಿದ್ದು, ವಾಣಿಜ್ಯ ಬಳಕೆಯ 19 ಕೆಜಿ ಸಿಲಿಂಡರ್ ಬೆಲೆ 1841 ರೂ.ಗೆ ಇಳಿಕೆಯಾಗಿದೆ.

ಕರಾಚಿ ಘರ್ಷಣೆ: 21 ಸಾವು

ಕರಾಚಿ: ಇಲ್ಲಿನ ಅಮೆರಿಕ ರಾಯಭಾರಿ ಕಚೇರಿಯ ಹೊರಗೆ ಭಾನುವಾರ ನಡೆದ ಭೀಕರ ಹಿಂಸಾಚಾರದಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇರಾನ್‌ನ ಪರಮೋಚ್ಚ ನಾಯಕ ಖಮೇನಿ ಹತರಾದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳು ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆ ಹಿಂಸೆಗೆ ತಿರುಗಿ ಈ ದುರಂತ ಸಂಭವಿಸಿದೆ. ಹಿಂಸಾಚಾರಕ್ಕೆ ಕಾರಣ: ನಗರದ ಸಿವಿಲ್ ಆಸ್ಪತ್ರೆಯ ವೈದ್ಯರು ಸಾವಿನ ಸಂಖ್ಯೆಯನ್ನು ಖಚಿತಪಡಿಸಿದ್ದು, ಮೃತರಲ್ಲಿ ಕೆಲವರು ಗುಂಡೇಟಿನಿಂದ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯು ಮತ್ತು ರಬ್ಬರ್ ಗುಂಡುಗಳನ್ನು ಬಳಸಿದ್ದಾರೆ. ಆದರೆ, ಪೊಲೀಸರು ನೇರವಾಗಿ ಗುಂಡು ಹಾರಿಸಿದ್ದಾರೆ, ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.

ಎಐ ಬಳಸಿ ಇರಾನ್‌ಗೆ ಪೆಟ್ಟು!

ಪೆಂಟಗನ್: ಆಂಥ್ರೋಪಿಕ್ ಸಂಸ್ಥೆಯ ಕ್ಲಾಡ್ ಎಐ ಬಳಕೆಯನ್ನು ನಿಲ್ಲಿಸುವಂತೆ ತಮ್ಮ ಫೆಡರಲ್ ತನಿಖಾ ಏಜೆನ್ಸಿಗಳಿಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ದೇಶಿಸಿದ ಕೆಲವೇ ಗಂಟೆಗಳಲ್ಲಿ ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಸೇನೆ ಅದೇ ಕ್ಲಾಡ್ ಎಐ ಬಳಸಿಕೊಂಡ ಸ್ವಾರಸ್ಯಕರ ಘಟನೆ ನಡೆದಿದೆ. ಅಮೆರಿಕ ಸೇನೆ, ಸ್ಯಾನ್ ಫ್ರಾನ್ಸಿಸ್ಕೋ ಮೂಲದ ಎಐ ನವೋದ್ಯಮ ಆಂಥ್ರೋಪಿಕ್‌ನ ಕೃತಕ ಬುದ್ಧಿಮತ್ತೆ(ಎಐ) ಸಾಫ್ಟ್‌ವೇರ್ ಕ್ಲಾಡ್‌ಯನ್ನು ಇರಾನ್ ವಿರುದ್ಧದ ಪ್ರಮುಖ ವಾಯು ದಾಳಿಯಲ್ಲಿ ಬಳಸಿತು. ಗುಪ್ತಚರ ಮೌಲ್ಯಮಾಪನ, ನಿಖರ ಗುರಿ ನಿರ್ಧರಿಸಲು ಮತ್ತು ಯುದ್ಧಭೂಮಿಯ ಪರಿಸ್ಥಿತಿಯ ಅವಲೋಕಿಸಲು ಇದನ್ನು ಬಳಸಲಾಗುತ್ತಿದೆ.

ಕಿರುಸುದ್ದಿ

ಸೌಮ್ಯಾಗೆ ರಾಜ್ಯ ಪ್ರಶಸ್ತಿ



ಧಾರವಾಡ: ತಾಲೂಕಿನ ಗುಮ್ಮಗೋಳದ ಸೌಮ್ಯಾ ಚನ್ನಪ್ಪ ಪ್ಯಾಟಿ ಅವರಿಗೆ ದಾವಣಗೆರೆ ಕಲಾಕುಂಚ ಸಂಸ್ಥೆಯ ಕೊಡಮಾಡುವ ಕರ್ನಾಟಕ ಸಿರಿಗನ್ನಡ ರಾಜ್ಯ ಪ್ರಶಸ್ತಿ ಲಭಿಸಿದೆ. ಪ್ಯಾಲ್ಯಾಳ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಸೌಮ್ಯಾಗೆ ಕನ್ನಡ ಕಂದ ಪ್ರಶಸ್ತಿ ಕೂಡ ಸಂದಿದೆ.

ರಾಧಿಕಾಗೆ ಪಿಎಚ್‌ಡಿ



ಧಾರವಾಡ: ಅಣ್ವಯಿಕ ಅನುವಂಶಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ರಾಧಿಕಾ ಕಿಶೋರ ಮಾಡಲಗಿ ಮಂಡಿಸಿದ ಮೊಲಿಕ್ಯುಲರ್ ಕ್ಯಾರೆಕ್ಟರೈಜೇಶನ್ ಅ್ಯಂಡ್ ಅಪ್ಲೈಡ್ ಸೆಲೆಕ್ಷನ್ ಫಾರ್ ಐಡೆಂಟಿಫಿಕೇಶನ್ ಆಫ್ ಅಸಿನೆಟೊಬ್ಯಾಕ್ಟರ್ ಬೌಮನಿ ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕ ಡಾ. ಸುರೇಶ ಅರಕೇರಾ ಮಾರ್ಗದರ್ಶಕರಾಗಿದ್ದರು.

ವೀರಪ್ಪ ದತ್ತಿ ಪ್ರಶಸ್ತಿಗೆ ಆಯ್ಕೆ





ಧಾರವಾಡ: ಜನತಾ ಶಿಕ್ಷಣ ಸಮಿತಿ ಮಹಾವಿದ್ಯಾಪೀಠ ನೀಡುವ ವಚನಶ್ರೀ ರತ್ನಾ ಪಿತಾಮಹ ಎಂ.ವೀರಪ್ಪ ದತ್ತಿ ಪ್ರಶಸ್ತಿಗೆ ಶಿವಪುತ್ರಪ್ಪ ಬಡಿಗೇರ (2024) ಹಾಗೂ ಚ.ಭೀ. ಸೋಮಶೆಟ್ಟಿ (2025) ಅವರು ಆಯ್ಕೆಯಾಗಿದ್ದಾರೆ.

ಮೂಲತಃ ಹುಬ್ಬಳ್ಳಿ ತಾಲೂಕಿನ ಅಂಚಟಗೇರಿ ಗ್ರಾಮದ ಶಿವಪುತ್ರಪ್ಪ ಬಡಿಗೇರ ಅವರು, ದೇವತೆಗಳು ಹಾಗೂ ಅಲಂಕಾರಿಕ ಮೂರ್ತಿಗಳ ತಯಾರಿಕೆ, ಮರದ ರಥಗಳ ನಿರ್ಮಾಣ, ಕೆತ್ತನೆ ಕೆಲಸದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಸುಮಾರು 40 ವರ್ಷಕ್ಕೂ ಅಧಿಕ ಮರದ ಕೆತ್ತನೆಯಲ್ಲಿ ಅನುಭವ ಹೊಂದಿರುವ ಶಿವಪುತ್ರಪ್ಪ, ಮಣ್ಣು ಹಾಗೂ ಪ್ಲಾಸ್ಟರ್ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರಿಂದ ಕಲ್ಪಿತ್ತ ಮೂರ್ತಿಗಳು ದೇವಸ್ಥಾನದಲ್ಲಿ ಪೂಜೆಗೊಳ್ಳುತ್ತಿರುವುದು ವಿಶೇಷ. ತೆಲಂಗಾಣದ ಜಹಿರಾಬಾದನಲ್ಲಿ ಜನಿಸಿ, ಬಿದರ್‌ನಲ್ಲಿ ನೆಲೆಸಿರುವ ಚ.ಭೀ. ಸೋಮಶೆಟ್ಟಿ ಅವರು, 33 33 ವರ್ಷಗಳು ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, 200ಕ್ಕೂ ಹೆಚ್ಚು ರೇಖಾಚಿತ್ರ ಹಾಗೂ ಪುಸ್ತಕ ರಚಿಸಿದ್ದಾರೆ. ಉಭಯ ಗಣ್ಯರ ಸಾಧನೆ ಗುರುತಿಸಿ, ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ತಲಾ ರೂ. 68 ಸಾವಿರ ನಗದು, ಸ್ಮರಣಿಕೆ, ಫಲಕ, ಫಲಪುಷ್ಪಗಳೊಂದಿಗೆ ಪ್ರಶಸ್ತಿ ನೀಡಿ ಗೌರವಿಸಲಿದೆ ಜೆಎಸ್ಎಸ್ ಮಹಾವಿದ್ಯಾಪೀಠ ಪ್ರಕಟಣೆ ತಿಳಿಸಿದೆ.

ರಾಜು ನರೇಗಲ್‌ಗೆ ಪಿಎಚ್‌ಡಿ



ಧಾರವಾಡ: ಸಂಶೋಧನಾ ವಿದ್ಯಾರ್ಥಿ ರಾಜು ನರೇಗಲ್ ಮಂಡಿಸಿದ ಸವದತ್ತಿ ಪರಿಸರ ಮತ್ತು ಎಲ್ಲಮ್ಮ: ಚಾರಿತ್ರಿಕ ಅಧ್ಯಯನ ಎಂಬ ಪ್ರೌಢ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ರಾಜು ಅವರಿಗೆ ಪ್ರಾಧ್ಯಾಪಕ ಡಾ. ಎಚ್.ಇ.ಬಸವರಾಜಪ್ಪ ಮಾರ್ಗದರ್ಶಕರಾಗಿದ್ದರು.

ಓಕಳಿ ಆಡದಂತೆ ಮನವಿ

ಧಾರವಾಡ: ಇಲ್ಲಿನ ಹಾವೇರಿಪೇಟೆಯ ದ್ಯಾಮವ್ವ-ದುರ್ಗವ್ವ ದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ಹೋಳಿ ಹಬ್ಬದಲ್ಲಿ ಬಣ್ಣದಾಟದಿಂದ ದೂರವಿರಲು ತೀರ್ಮಾನಿಸಲಾಗಿದೆ. ಕಳೆದ 30 ವರ್ಷಗಳ ಬಳಿಕ ಇಲ್ಲಿನ ಹಾವೇರಿಪೇಟೆ ಉಭಯ ದೇವಿಯರ ಜಾತ್ರಾ ಮಹೋತ್ಸವ ನಡೆಯುತ್ತಿದೆ. ಜಾತ್ರೆಯ ಕಾರಣದಿಂದ ದೇವಿಯರ ಮೂರ್ತಿಗಳನ್ನು ಬಣ್ಣಕ್ಕೆ ಕಳಿಸಲಾಗಿದೆ. ಸಂಪ್ರದಾಯದಂತೆ ಈ ವರ್ಷ ಮೃತ್ಯುಂಜಯ ನಗರದ ಹಾವೇರಿ ಪೇಟೆ ವ್ಯಾಪ್ತಿಯ ಎಲ್ಲ ಬಡಾವಣೆಗಳ ಜನರು ಬಣ್ಣ ಆಡಬಾರದು ಎಂದು ದೇವಸ್ಥಾನದ ಪಂಚ ಕಮಿಟಿಯ ಅಧ್ಯಕ್ಷ ಕೆ.ಎಸ್. ಭೀಮಣ್ಣವರ ಮತ್ತು ಕಾರ್ಯದರ್ಶಿ ವಿಜಯ ಭೋಸ್ಲೆ ತಿಳಿಸಿದ್ದಾರೆ.

ಉ.ಕ ಅಭಿವೃದ್ಧಿಗೆ ನೆರವು



ಹುಬ್ಬಳ್ಳಿ: ಜನತೆ ಹಾಗೂ ಪಕ್ಷ ಇಟ್ಟಿರುವ ನಂಬಿಕೆ ವಿಶ್ವಾಸದಿಂದ ನನಗೆ ಮುಖ್ಯಮಂತ್ರಿ ಅವಕಾಶ ಸಿಕ್ಕಾಗ ನಾನು ಉತ್ತರಕರ್ನಾಟಕದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿರುವ ತೃಪ್ತಿ ನನಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಉಣಕಲ್ಲ ಸಿದ್ದಪ್ಪಜ್ಜನ ಬೃಹತ್ ಶಿಲಾಮಂಟಪ ಉದ್ಘಾಟನೆಯಂಗವಾಗಿ ಪೂರ್ವಭಾವಿ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ಅವಧಿಯಲ್ಲಿ ಆಗಿರುವ ಬಹಳಷ್ಟು ಕೆಲಸ ಕಾರ್ಯಗಳನ್ನು ತಾವು ಮಾಡಿರುವುದಾಗಿ ಬಿಂಬಿಸುವ ಯತ್ನ ನಡೆದಿದೆ. ಆದರೆ ಜನರಿಗೆ ಗೊತ್ತಿದೆ ಯಾರು ಏನು ಮಾಡಿದರೆಂಬುದು ಎಂದರು. ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿದರು. ಸಿದ್ದಪ್ಪಜ್ಜನ ಯೂಟ್ಯೂಬ್ ಬಿಡುಗಡೆ ಮಾಡಲಾಯಿತು. ಕಮಿಟಿ ಅಧ್ಯಕ್ಷ ರಾಜಣ್ಣ ಕೊರವಿ ಪ್ರಾಸ್ತಾವಿಸಿದರು.



ಕುಂದಗೋಳ: ಇಲ್ಲಿನ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಭಾನುವಾರ ಭಕ್ತಿಭಾವದಿಂದ ಜಗದ್ಗುರು ರೇಣುಕಾಚಾರ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿಡಿಬಿಡಿ ವ್ಯಾಪಾರಸ್ಥರ ಸದಸ್ಯರಾದ ಲಕ್ಷ್ಮೀ ಹಿರೇಮಠ, ಶಂಕರ ಝೋಂಡೆ, ಕೃಷ್ಣಾ ಲಮಾಣಿ, ಪಪಂ ಸಿಬ್ಬಂದಿ ಕಲ್ಲಯ್ಯ ಕಲ್ಲಪ್ಪನಮಠ, ವಿ.ಎಸ್. ನಾರಾಯಣಕರ, ರಮೇಶ ಚಲವಾದಿ, ಸಿಬ್ಬಂದಿ ಪೌರಕಾರ್ಮಿಕರು ಸೇರಿದಂತೆ ಅನೇಕರಿದ್ದರು.

ಕಾಮಣ್ಣನ ದರ್ಶನಕ್ಕೆ ಹರಿದು ಬಂದ ಭಕ್ತಗಣ

ನವಲಗುಂದ: ಪಟ್ಟಣದ ಶ್ರೀ ರಾಮಲಿಂಗ ಕಾಮದೇವರ ದರ್ಶನಕ್ಕೆ ಭಾನುವಾರವೂ ಸಹ ಭಕ್ತ ಸಾಗರ ಹರಿದುಬಂದಿತು. ಎರಡನೇ ದಿನವೂ ದೇವಸ್ಥಾನ ಆವರಣದಲ್ಲಿ ಭಕ್ತರ ದೀರ್ಘ ಸಾಲು ಕಂಡು ಬಂದಿದ್ದು, ಶಿಸ್ತಿನ ದರ್ಶನ ವ್ಯವಸ್ಥೆಯನ್ನು ದೇವಸ್ಥಾನ ಕಮಿಟಿಯವರು ಮಾಡಿದ್ದು . ಹಿರಿಯರು, ಮಹಿಳೆಯರು ಹಾಗೂ ದೂರದ ಊರಿನಿಂದ ಬಂದ ಭಕ್ತರು ಭಕ್ತಿ ಭಾವದಿಂದ ದರ್ಶನ ಪಡೆದರು. ಭಕ್ತರು ಶ್ರೀ ರಾಮಲಿಂಗ ಕಾಮದೇವರ ಆಶೀರ್ವಾದ ಸದಾ ನಮ್ಮೊಂದಿಗೆ ಇರಲಿ ಎಂದು ಪ್ರಾರ್ಥಿಸಿದರು, ಇಷ್ಟಾರ್ಥಗಳನ್ನು ಈಡೇರಿಸುವ ಶ್ರೀ ರಾಮಲಿಂಗ ಕಾಮದೇವರು ಭಕ್ತರ ಪಾಲಿನ ಕರುಣಾ ಮೂರ್ತಿಯಾಗಿದ್ದಾರೆ. ನವಲಗುಂದ ಪಟ್ಟಣದಲ್ಲಿ ಸರ್ವ ಧರ್ಮ ದವರು ಕೂಡಿಕೊಂಡು ಜಾತಿ, ಭೇದ, ಮತ-ಪಂಥ ಎನ್ನದೆ ಎಲ್ಲರೂ ಒಗ್ಗಟಾಗಿ ಹೋಳಿ ಹಬ್ಬವನ್ನು ಆಚರಣೆ ಮಾಡುತ್ತಾರೆ. ಶ್ರೀ ರಾಮಲಿಂಗ ಕಾಮಣ್ಣನ ದರ್ಶನಕ್ಕೆ ಬಂದ ಭಕ್ತರಿಗೆ ಟ್ರಸ್ಟ್ ವತಿಯಿಂದ ಪ್ರಸಾದದ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು ಸರತಿ ಸಾಲಿನಲ್ಲಿ ನಿಲ್ಲುವಂತಹ ಭಕ್ತರಿಗೆ ಪೆಂಡಾಲ್ ವ್ಯವಸ್ಥೆ ಮಾಡಲಾಗಿದೆ.

ನವಲಗುಂದ ಪಟ್ಟಣದಲ್ಲಿ ನಡೆಯುವಂತಹ ಹೋಳಿ ಹಬ್ಬ ಪ್ರಸಿದ್ಧವಾಗಿದೆ. ರಾಜ್ಯ ಮತ್ತು ಹೊರ ರಾಜ್ಯದಿಂದ ಲಕ್ಷಾಂತರ ಭಕ್ತರು ಶ್ರೀ ಕಾಮಣ್ಣನ ದರ್ಶನಕ್ಕೆ ಬರುತ್ತಾರೆ. ಕಲಿಯುಗದಲ್ಲಿ ಭಕ್ತರು ಬೇಡಿದ ವರ ದಯಪಾಲಿಸುವಂತಹ ಕಾಮದೇವನು ಶ್ರೀ ರಾಮಲಿಂಗ ಕಾಮಣ್ಣನು ಪ್ರಸಿದ್ಧಿಯನ್ನು ಹೊಂದಿದ್ದು ಇದು ಭಕ್ತಿ ಭಾವೈಕ್ಯತೆಯ ಸಂಕೇತವಾಗಿದೆ ಎಂದು ನವಲಗುಂದದ ಸಮಾಜ ಸೇವಕ ಮಾಬುಸಾಬ ಯರಗುಪ್ಪಿ ಹೇಳಿದ್ದಾರೆ.



ನವಲಗುಂದ: ಶ್ರೀ ರಾಮಲಿಂಗ ಕಾಮಣ್ಣನ ದೇವಸ್ಥಾನಕ್ಕೆ ತಹಶೀಲ್ದಾರ್ ಸುಧೀರ್ ಸಾವುಕಾರ ಅವರು ಭಾನುವಾರ ದಿವಸ ಸಹಕುಟುಂಬ- ಪರಿವಾರದೊಡನೆ ಆಗಮಿಸಿ ದರ್ಶನ ಆಶೀರ್ವಾದ ಪಡೆದರು.ಇದೇ ವೇಳೆ ರಾಮಲಿಂಗ ಕಾಮಣ್ಣ ದೇವಸ್ಥಾನ ಟ್ರಸ್ಟ್ ನ ಕಾರ್ಯದರ್ಶಿ ಯಲ್ಲಪ್ಪ ಭೋವಿ ಅವರು ಸನ್ಮಾನಿಸಿದರು.

ಹು-ಧಾ ಪತ್ರಕರ್ತರಿಗೆ ಬಜೆಟ್‌ನಲ್ಲಿ ಆರೋಗ್ಯ ವಿಮೆ ಘೋಷಣೆ: ಮೇಯರ್



ಹೊಸತನ ಒಳಗೊಂಡಿರಲಿ

ಮಹಿಳಾ ದಿನಾಚರಣೆ ಕಾರ್ಯಕ್ರಮ ಹೊಸತನ ಒಳಗೊಂಡಿರಬೇಕು. ಎಲ್ಲರೂ ಅಚ್ಚುಕಟ್ಟಾಗಿ ರಂಗೋಲಿ ಹಾಕಿದ್ದಾರೆ. ತಮ್ಮ ಮನೆ ಯಜಮಾನರ ಮೇಲಿನ ಪ್ರೀತಿ ಬಿಂಬಿಸುವ ರೀತಿ ರಂಗೋಲಿಗಳು ಮೂಡಿ ಬಂದಿವೆ. ಹೆಣ್ಣು ಮನೆಯಲ್ಲಿ ಕೆಲಸ ಮಾಡಿ, ಮಕ್ಕಳನ್ನು ಸಂಬಾಳಿಸಿ ಮನೆಯನ್ನು ನಿಭಾಯಿಸುತ್ತಾಳೆ. ಪತ್ರಕರ್ತರು ಸದಾ ಕಾರ್ಯನಿರತವಾಗಿರುವವರು. ಅವರನ್ನು ನಗುಮೊಗದಿಂದ ಮನೆಗೆ ಸ್ವಾಗತಿಸುವವರು ಮಹಿಳೆಯರು ಎಂದು ಮೇಯರ್ ಜ್ಯೋತಿ ಹೇಳಿದರು.

ಹುಬ್ಬಳ್ಳಿ: ಸಮಾಜದಲ್ಲಿ ಸಾಕಷ್ಟು ವಿರೋಧಗಳನ್ನು ಎದುರಿಸಿ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯವನ್ನು ಪತ್ರಕರ್ತರು ಮಾಡುತ್ತಾರೆ. ಪತ್ರಕರ್ತರಿಗೆ ಸಾಕಷ್ಟು ಸೌಲಭ್ಯಗಳಿಲ್ಲ. ಶೀಘ್ರದಲ್ಲಿಯೇ ಪತ್ರಕರ್ತರಿಗೆ ಹು-ಧಾ ಮಹಾನಗರ ಪಾಲಿಕೆ ವತಿಯಿಂದ ಆರೋಗ್ಯ ವಿಮೆಯನ್ನು ಬಜೆಟ್ ನಲ್ಲಿ ಘೋಷಿಸಲಾಗುವುದು. ಮಹಾನಗರ ಪಾಲಿಕೆಯಿಂದ ಪತ್ರಕರ್ತರಿಗೆ ಸೌಲಭ್ಯಗಳನ್ನು ಒದಗಿಸಲು ಸದಾ ಬದ್ಧವಿದೆ ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.

ಇಲ್ಲಿನ ಮೂರುಸಾವಿರ ಮಠ ಸಭಾಂಗಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಧಾರವಾಡ ಜಿಲ್ಲಾ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಮಹಿಳೆಯರಿಗೆ ರಂಗೋಲಿ ಹಾಗೂ ಅಡುಗೆ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಜೇಥಿಯಾ ಫೌಂಡೇಶನ್ ಅಧ್ಯಕ್ಷೆ ನಂದಿನಿ ಕಶ್ಯಪ ಮಾತನಾಡಿ, ಮಹಿಳೆ ನಾಲ್ಕು ಗೋಡೆಗೆ ಮಾತ್ರ ಸೀಮಿತವಾಗಿರದೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಇನ್ನಿತರ ಎಲ್ಲ ಕ್ಷೇತ್ರಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಅವರ ಸಾಧನೆಯನ್ನು ಗುರುತಿಸಿ ಗೌರವಿಸಲು ಹಾಗೂ ಇತರರಿಗೆ ಮಾದರಿಯಾಗಲು ಮಹಿಳಾ ದಿನಾಚರಣೆ ಸಹಕಾರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಖಜಾಂಚಿ ತನುಜಾ ನಾಯಕ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ವೇಳೆ ರಂಗೋಲಿ ಸ್ಪರ್ಧೆ ಹಾಗೂ ಅಡುಗೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು. ರಂಗೋಲಿ ಸ್ಪರ್ಧೆ ನಿರ್ಣಾಯಕರಾಗಿ ಜಾನಪದ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ಗೋಟಿಯವರ, ಸವಿತಾ ಬೆಣಗಿ ಹಾಗೂ ಅಡುಗೆ ಸ್ಪರ್ಧೆ ನಿರ್ಣಾಯಕರಾಗಿ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಕಾಶಿಬಾಯಿ ಕ್ಯಾಡಗಿ ಹಾಗೂ ಅಕ್ಕಮ್ಮ ಒಡಕಪ್ಪನವರ ಪಾಲ್ಗೊಂಡಿದ್ದರು.

> ಮಹಿಳೆಯರಲ್ಲಿ ಅಡಗಿರುವ ಪ್ರತಿಭೆ ಇಂದಿನ ರಂಗೋಲಿ ಹಾಗೂ ಅಡುಗೆ ಸ್ಪರ್ಧೆಯಲ್ಲಿ ಕಂಡುಬಂದಿದೆ. ಮಹಿಳಾ ದಿನವನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸಬಾರದು. ಪ್ರತಿದಿನವನ್ನು ಮಹಿಳಾ ದಿನವನ್ನಾಗಿ ಆಚರಿಸುವ ಮೂಲಕ ಮಹಿಳೆಯರನ್ನು ಗೌರವಯುತವಾಗಿ ಕಾಣಬೇಕು.
> ■ ನಂದಿನಿ ಕಶ್ಯಪ, ಮಜೇಥಿಯಾ ಫೌಂಡೇಶನ್ ಅಧ್ಯಕ್ಷೆ

- ರಂಗೋಲಿ ಸ್ಪರ್ಧೆಯಲ್ಲಿ ವೀಣಾ ಚಳಗೇರಿ (ಪ್ರಥಮ), ಅನುಷಾ ಕಮತರ (ದ್ವಿತೀಯ), ಚೈತನ್ಯಾದೇವಿ ಗುದಗಯ್ಯನವರಮಠ (ತೃತೀಯ), ವಿಜಯಲಕ್ಷ್ಮೀ ಪತ್ತಾರ, ವೀಣಾ ಕುಂಬಾರ, ರೋಹಿಣಿ ಅಂಗಡಿ, ಲಲಿತಾ ಹೂಗಾರ ಹಾಗೂ ರೂಪಾ ಗೊಂಬಿ ಅವರಿಗೆ ಸಮಾಧಾನಕರ ಬಹುಮಾನ
- ಅಡುಗೆ ಸ್ಪರ್ಧೆಯಲ್ಲಿ ಶುಭಾ ಹೆಗಡೆ (ಪ್ರಥಮ), ಸುನಂದಾ ಮೆಣಸಿನಕಾಯಿ (ದ್ವಿತೀಯ), ಲಲಿತಾ ಹೂಗಾರ (ತೃತೀಯ), ರೂಪಾ ಕಣವಿ, ಸಾವಿತ್ರಿ ಶಿವಪೂರ, ವೇದಾ ಕಮತರ, ಮಂಜುಳಾ ಹುಲಕೊಪ್ಪ, ಕವಿತಾ ಬಡಿಗೇರ ಅವರಿಗೆ ಸಮಾಧಾನಕರ ಪ್ರಶಸ್ತಿ

ಹೋಳಿಗೆ ರಂಗು ತುಂಬಿದ ಹಲಿಗೆ ಹಬ್ಬ

ಧಾರವಾಡ: ಸ್ಥಳೀಯ ಹೋಳಿ ಹುಣ್ಣಿಮೆ ಆಚರಣಾ ಸಮಿತಿ ವತಿಯಿಂದ ಬೃಹತ್ ಹಲಿಗೆ ಹಬ್ಬಕ್ಕೆ ಮಾಜಿ ಶಾಸಕ ಅಮೃತ ದೇಸಾಯಿ ಹಾಗೂ ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅಮೃತ ದೇಸಾಯಿ, ಒಂದಾನೊಂದುಕಾಲದಲ್ಲಿಅತ್ಯಂತವೈಭವದಲ್ಲಿ ಹಲಿಗೆ ಹಬ್ಬ ಇಂದು ಆಧುನಿಕ ಹೊಡೆತಕ್ಕೆ ಸಿಲುಕಿ ನಲುಗಿದೆ. ಹಲಿಗೆ ತಯಾರಕರ ಬದುಕೂ ಸಹ ಬೀದಿಗೆ ಬಿದ್ದಿದೆ. ಯುವ ಪೀಳಿಗೆ ಹಲಿಗೆ ಬಾರಿಸುವುದು, ಕಬಡ್ಡಿ, ಖೋಖೋ, ಗಿಲ್ಲಿ ದಂಡು ಹೀಗೆ ಗ್ರಾಮೀಣ ಕ್ರೀಡೆಗಳನ್ನೇ ಮರೆತಿದೆ. ಈ ನಮ್ಮ ಯುವಜನತೆ ಇದರ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು. ಹಲಿಗೆ ಹಬ್ಬ ಆಚರಣಾ ಸಮಿತಿ ಅಧ್ಯಕ್ಷ ಶಂಕರ ಶೇಳಕೆ, ಮಾಜಿ ಶಾಸಕ ಸೀಮಾ ಮಸೂತಿ, ಈರೇಶ ಅಂಚಟಗೇರಿ, ರಾಕೇಶ ನಾಝರೆ, ಶಂಭು ಸಾಲಮನಿ, ಗಣೇಶ ಮುಧೋಳ, ಮೋಹನ ರಾಮದುರ್ಗ, ಸುನೀಲ ಮೋರೆ ಇದ್ದರು.



ರಾಮರಾಜ್ಯ ನಿರ್ಮಾಣಕ್ಕೆ ಕೈಜೋಡಿಸಿ: ಉಮರ್ಜಿ

ಧಾರವಾಡ: ಇಂದಿನ ಸಂಕ್ರಮಣ ಕಾಲಘಟ್ಟದಲ್ಲಿ ಶ್ರೀರಾಮನ ಆದರ್ಶಗಳೊಂದಿಗೆ ರಾಮರಾಜ್ಯ ಕಟ್ಟಲು ಹಿಂದೂ ಸಮಾವೇಶಗಳು, ಸಮ್ಮೇಳನಗಳು ನಡೆಯಬೇಕು ಎಂದು ಅಖಿಲ ಭಾರತ ಸಾಹಿತ್ಯ ಪರಿಷದ್ ರಾಜ್ಯ ಕಾರ್ಯದರ್ಶಿ ಜನಮೇಜಯ ಉಮರ್ಜಿ ಹೇಳಿದರು.

ಸಪ್ತಾಪೂರ ಹಿಂದೂ ಸಮ್ಮೇಳನ ಸಮಿತಿ ನಗರದ ಕೆಲಗೇರಿಯ ಕೆ.ಇ.ಬೋರ್ಡ್ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ಹಿಂದೂ ಸಮ್ಮೇಳನ ಉದ್ಘಾಟಿಸಿ, ಹಿಂದುಗಳಲ್ಲಿ ಹಿಂದುತ್ವದ ಬಗ್ಗೆ ಗೌರವ ಭಾವನೆ ಬರಲಿ ಎಂದರು.

ರಾಮಕೃಷ್ಣ ವಿವೇಕ ಆಶ್ರಮದ ವಿಜಯಾನಂದ ಸರಸ್ವತಿ ಶ್ರೀ ಸಾನ್ನಿಧ್ಯ ವಹಿಸಿದ್ದರು. ಸಮ್ಮೇಳನ ಸಮಿತಿ ಅಧ್ಯಕ್ಷ ಡಾ. ಎಸ್.ಟಿ.ನಂದಿಬೇವೂರ, ಗೌರವಾಧ್ಯಕ್ಷ ಬಿ.ಡಿ.ಪಾಟೀಲ, ಉಪಾಧ್ಯಕ್ಷ ಸುನೀಲ ಬಾಗೇವಾಡಿ, ಸುಭಾಷ ಗೌಡರ, ಡಾ. ಪಿ.ಎಸ್. ಹಳ್ಯಾಳ, ಮೃತ್ಯುಂಜಯ ಮಲ್ಲಾಪೂರ, ವಿನೋದಾ, ಸುಂಕಮ್ಮನವರ ಅನೇಕರು ಇದ್ದರು.

ಶಿಕ್ಷಣದ ಜ್ಞಾನ ಮಕ್ಕಳ ಬಾಳು ಬೆಳಗಲಿ

ಧಾರವಾಡ: ವಿದ್ಯಾಕಾಶಿ ಧಾರವಾಡದ ಸಾಧನಕೇರಿಯಲ್ಲಿ ಆರಂಭಗೊಂಡಿರುವ ಮೈಂಡ್‌ವೇವ್ ಎಜು ಹಬ್ ಶಿಕ್ಷಕರ ತರಬೇತಿ ಸಂಸ್ಥೆಗೆ ಇಸ್ರೋದ ಮಾಜಿ ಅಧ್ಯಕ್ಷ ಹಾಗೂ ಖ್ಯಾತ ವಿಜ್ಞಾನಿ ಎ.ಎಸ್.ಕಿರಣಕುಮಾರ್ ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ವಿಜ್ಞಾನಿ ಎ.ಎಸ್. ಕಿರಣಕುಮಾರ್, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪಠ್ಯದ ಜ್ಞಾನವಷ್ಟೇ ಸಾಲದು, ಬದಲಿಗೆ ತಾರ್ಕಿಕ ಆಲೋಚನೆ ಜೊತೆಗೆ ಸೃಜನಶೀಲತೆ ಬೆಳೆಸುವುದು ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಇಂದಿನ ಕೃತಕ ಬುದ್ಧಿಮತ್ತೆ ಕಾಲದಲ್ಲಿ ಇಂದು ಶಿಕ್ಷಣ ವ್ಯಾಪಾರೀಕರಣಗೊಂಡಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲವೇ ಅಲ್ಲ. ಮಕ್ಕಳಿಗೆ ನಾವು ನೀಡುವ ಜ್ಞಾನ ದಾರಿದೀಪವಾಗಬೇಕು. ಅಲ್ಲದೇ ಸಮಸ್ಯೆ ಪರಿಹರಿಸುವ ಸಾಮರ್ಥ್ಯ ಬೆಳೆಸಬೇಕು ಎಂದರು.

ತಂತ್ರಜ್ಞಾನ ತ್ವರಿತವಾಗಿ ಬದಲಾಗುತ್ತಿದ್ದು, ಇದಕ್ಕೆ ಮನುಷ್ಯ ಹೊಂದಿಕೊಳ್ಳುವುದು ಕಷ್ಟವಾಗುತ್ತಿದೆ. ನವೀನ ತಂತ್ರಜ್ಞಾನ ಮನುಷ್ಯನ ಕ್ಷಮತೆಯ ಜೊತೆಗೆ ಸಾಮರ್ಥ್ಯ ಹೆಚ್ಚಿಸಬೇಕು. ಮಕ್ಕಳ ಕುತೂಹಲವೂ ತಣಿಸಿ, ಜ್ಞಾನವೂ ವೃದ್ಧಿಸಬೇಕು ಎಂದರು.

ದೇಶದ ಅಭಿವೃದ್ಧಿಯಲ್ಲಿ ತಂತ್ರಜ್ಞಾನ ಮತ್ತು ವಿಜ್ಞಾನದ ಪಾತ್ರ ದೊಡ್ಡದು. ಇಂತಹ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಚಿಕ್ಕ ವಯಸ್ಸಿನಲ್ಲೇ ವೈಜ್ಞಾನಿಕ ಕುತೂಹಲ ಮೂಡಿಸಬೇಕು ಎಂದರು. ನವೀನ ಆಲೋಚನೆಗಳು ಮತ್ತು ನಿರಂತರ ಪ್ರಯತ್ನಗಳು ಯಶಸ್ಸಿನ ಗುಟ್ಟಾಗಿವೆ. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಜೊತೆ ಕೌಶಲ್ಯಗಳು, ಪ್ರಶ್ನಿಸುವ ಪ್ರವೃತ್ತಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು ಎಂದರು.

ಪ್ರಸ್ತುತ ಶಿಕ್ಷಣ ಮತ್ತು ಮೌಲ್ಯಗಳ ಬಗ್ಗೆ ಮಾತನಾಡಿದ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಮಾತನಾಡಿ, ಮೆದಳಿಗೆ ಜ್ಞಾನ ತುಂಬುವ ಜೊತೆ ಹೃದಯಕ್ಕೆ ಸಂಸ್ಕಾರ ನೀಡುವುದು ಕೂಡ ಇಂದಿನ ಅಗತ್ಯವಾಗಿದೆ ಎಂದರು. ಭಾರತ ರತ್ನ ಸಿ.ಎನ್.ಆರ್. ರಾವ್ ಹಾಗೂ ಡಾ. ಇಂದುಮತಿ ರಾವ್ ವರ್ಚುವಲ್ ಮಾತನಾಡಿದರು. ವಿಜ್ಞಾನಿ ಡಾ. ಎಸ್.ಎಂ.ಶಿವಪ್ರಸಾದ, ಐಐಟಿ ನಿರ್ದೇಶಕ ಡಾ.ವೆಂಕಪ್ಪಯ್ಯ ದೇಸಾಯಿಮತ್ತು ಪರಿಸರವಾದಿ ಪಿ.ವಿ.ಹಿರೇಮಠ ಇದ್ದರು. ಸೃಷ್ಟಿ ಸುರೇಶ ಹಾಗೂ ತಂಡ ಸಿತಾರ ವಾದನ ನಡೆಸಿಕೊಟ್ಟರು. ಡಾ. ಮಹೇಶ ಮಾಶಾಳ ನಿರೂಪಿಸಿದರು. ಸುಭಾಷ ಪಾಟೀಲ ಸ್ವಾಗತಿಸಿದರು. ಉದಯಕುಮಾರ ವಂದಿಸಿದರು.




ಶಶಾಂಕ್ ಭಟ್‌ಗೆ ಸನ್ಮಾನ



ಹುಬ್ಬಳ್ಳಿ: ಸಿವಿಲ್ ನ್ಯಾಯಾಧೀಶ ಹುದ್ದೆಗೆ ಆಯ್ಕೆಯಾದ ಶಶಾಂಕ್ ನಾಗೇಂದ್ರ ಭಟ್ ಅವರನ್ನು ವಿಶ್ವನಾಥ ಬಿಚಗತ್ತಿ ಅಡ್ವೋಕೇಟ್ ಮತ್ತು ಅಸೋಸಿಯೇಟ್ಸ್ ಹಾಗೂ ವಕೀಲರ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಹುಬ್ಬಳ್ಳಿ ವಕೀಲರ ಸಂಘದ ಅಧ್ಯಕ್ಷ ಆರ್. ಜಿ. ಮಟ್ಟಿ, ಕಾರ್ಯದರ್ಶಿ ಮಂಜುನಾಥ್ ದಾಟನಾಳ್, ವಕೀಲರಾದ ಮೂರ್ತಿ ಹೆಗಡೆ, ಮುತ್ತು ತಹಶೀಲ್ದಾರ್, ನವೀನ್ ಕಟಗಿ, ಕೆ.ಆರ್. ಅಜ್ಜಣ್ಣವರ್, ಗಣಪತಿ ಜೋಶಿ, ಗುರು ಮಾಯಣ್ಣವರ್, ಶಿವರುದ್ರ ಧನಿಗೊಂಡ ಮತ್ತಿತರರಿದ್ದರು.

ವಿವಿಧ ಪ್ರದೇಶಗಳಲ್ಲಿ ಸ್ವಚ್ಛತೆ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯ ನಂ 67 ರಲ್ಲಿ ಸ್ವಚ್ಛ ಸಂಡೆ ಅಭಿಯಾನದ ಅಂಗವಾಗಿ ಭಾನುವಾರ 2ನೇ ಬಾರಿ ವಾರ್ಡ್‌ನ ವ್ಯಾಪ್ತಿಯ ಬಮ್ಮಾಪುರ ಓಣಿಯ ವೀರಭದ್ರೇಶ್ವರ ದೇವಸ್ಥಾನದ ಆವರಣ, ಚಿಂದಿ ಓಣಿ, ಗೌಡರ ಓಣಿ, ಪ್ರಥಮ ಶೆಟ್ಟಿ ಓಣಿ ಹಾಗೂ ಇತರ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡು ಫಾಗಿಂಗ್ ಮಾಡಿಸಲಾಯಿತು. ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ವಲಯ ಸಹಾಯಕ ಆಯುಕ್ತ ಜಗದೀಶ ದೊಡ್ಡಮನಿ,ಆರೋಗ್ಯ ನಿರೀಕ್ಷಕ ನೂರಂದಪ್ಪ ಭಜಂತ್ರಿ ಇತರರಿದ್ದರು.

ಹೋರಾಟ ಜಾತಿ ಸಂಘರ್ಷಕ್ಕೆ ಕಾರಣವಾಗದಿರಲಿ

ಅಣ್ಣಿಗೇರಿ: ಸಾಮಾಜಿಕ ಹೋರಾಟ ಚಳುವಳಿಯೇ ನನ್ನ ಬದುಕಿನ ದಾರಿ, ಹೋರಾಟವೆಂದರೆ ಕೋಮು-ಸೌಹಾರ್ದತೆಯಿಂದ ಸಮಾಜದ ಏಳ್ಗೆ ಬಯಸಿ, ಮೂಲಭೂತ ಹಕ್ಕು ಪಡೆಯಲು ಒಗ್ಗೂಡಬೇಕು. ಆದರೆ ಇಂದಿನ ಹೋರಾಟಗಳು ರಾಜಕೀಯ ಪ್ರೇರಿತವಾಗಿದ್ದರಿಂದ ಜಾತಿ-ಜಾತಿಗಳ ಸಂಘರ್ಷಕ್ಕೆ ಕಾರಣವಾಗುತ್ತಿರುವುದು ವಿಷಾದನೀಯ ಎಂದು ಡಾ. ತೋಂಟದ ಸಿದ್ಧಲಿಂಗ ಶ್ರೀಗಳ ಪ್ರಶಸ್ತಿ ಪುರಸ್ಕೃತ ಡಾ. ಸಿದ್ದನಗೌಡ ಪಾಟೀಲ ಹೇಳಿದರು.

ಪಟ್ಟಣದ ನಿಂಗಮ್ಮ ಎಸ್.ಹೂಗಾರ ಸಮೂಹ ವಿದ್ಯಾಲಯದಲ್ಲಿ ಆಯೋಜಿಸಿದ್ದ ಡಾ. ತೋಂಟದ ಸಿದ್ಧಲಿಂಗ ಶ್ರೀಗಳ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಬದುಕಿನುದ್ದಕ್ಕೂ ಸಾಮಾಜಿಕ ಕಳಕಳಿ ಚಿಂತನೆ, ನ್ಯಾಯಕ್ಕೆ ಕನ್ನಡ ನೆಲ, ಜಲ, ಭಾಷೆ, ಕನ್ನಡಪರ ಸಂಘಟನೆಗಳಿಗೆ ಕಾರ್ಮಿಕರ ವರ್ಗಕ್ಕೆ ಧ್ವನಿಯಾಗಿ ಚಳವಳಿ ಮಾಡಿದ್ದೇನೆ ಎಂದರು.

ಶ್ರೀಗಳ ರಾಜ್ಯ ಪ್ರಶಸ್ತಿಯ ಆಯ್ಕೆ ಸಮಿತಿ ಸದಸ್ಯ ಚಂದ್ರಶೇಖರ ವಸ್ತ್ರದ ಮಾತನಾಡಿ, ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ಕೈಗೊಳ್ಳುವ ಪ್ರತಿ ನಿರ್ಧಾರದ ಹಿಂದೆ ಲೋಕ ಕಲ್ಯಾಣದ ಕನಸು ಕಾಣುವ ಹೋಲಿಕೆ. ಡಾ. ಸಿದ್ದನಗೌಡ ಪಾಟೀಲ ಅವರಲ್ಲಿತ್ತು. ಪುಸ್ತಕ ಓದುವ ಹವ್ಯಾಸ, ಸಾಮಾಜಿಕ ನ್ಯಾಯಕ್ಕೆ ಪ್ರತಿಭಟಿಸುವ ಮನೋಭಾವ, ಸಂಪಾದಕರಾಗಿ ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ನಿಷ್ಠುರವಾಗಿ ಪತ್ರಿಕೆ ಮೂಲಕ ಪ್ರಕಟಿಸಿ ಸರ್ಕಾರದ ಕಣ್ಣು ತೆರೆಸುವ ಕೆಲಸವನ್ನು ಮಾಡಿದ್ದಾರೆ ಎಂದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ಕಳೆದ 4-5 ದಶಕಗಳ ನಮ್ಮ ಗೆಳತನದಲ್ಲಿ ಡಾ. ಸಿದ್ದನಗೌಡ ಪಾಟೀಲ ಸಾಮಾಜಿಕ ನ್ಯಾಯಕ್ಕೆ ಹೋರಾಟ ಮೂಲಕವೇ ನಾಡಿನ ಜನತೆಗೆ ಪರಿಚಯವಾಗಿದ್ದು, ಅವರ ಅಲೋಚನೆ, ಚಿಂತನೆ, ಇಚ್ಛಾಶಕ್ತಿಯ ಮನೋಬಲ, ನ್ಯಾಯದ ಕಿಚ್ಚು ಹಚ್ಚಿ ಹತ್ತು ಹಲವಾರ ಕ್ಷೇತ್ರಗಳಲ್ಲಿ ಸೂಕ್ತ ನ್ಯಾಯ ದೊರಕಿಸುವಲ್ಲಿ ಪ್ರಮುಖ ಪಾತ್ರವಾಗಿದೆ ಎಂದರು.

ಸಾನಿಧ್ಯ ವಹಿಸಿದ್ದ ಡಾ. ತೋಂಟದ ಸಿದ್ಧರಾಮ ಶ್ರೀಗಳು ಮಾತನಾಡಿ, ಡಾ. ಸಿದ್ದನಗೌಡ ಪಾಟೀಲ ಅವರು ಶ್ರೀಗಳ ಆಪ್ತ ಶಿಷ್ಯರಾಗಿ ಅವರ ವಿಚಾರ ಚಿಂತನೆಯಲ್ಲಿ ಸೂಕ್ತ ನಿರ್ಧಾರಕ್ಕೆ ಬೆಂಬಲಿಸುವ ವ್ಯಕ್ತಿ ಶಕ್ತಿಯಾಗಿ ಬದುಕಿನುದ್ದಕ್ಕೂ ಹೋರಾಟಕ್ಕೆ ಮುಂಚಣಿಯಲ್ಲಿ ಜನಬೆಂಬಲದೊಂದಿಗೆ ಭಾಗಿಯಾಗಿ ಸೇವೆ ಸಲ್ಲಿಸಿದ್ದಕ್ಕೆ ಶ್ರೀಗಳ ರಾಜ್ಯ ಪ್ರಶಸ್ತಿ ಸಂದಿದೆ ಎಂದರು. ಡಾ ಸಿದ್ದನಗೌಡ ಪಾಟೀಲ ಅವರಿಗೆ 25 ಸಾವಿರ ನಗದು ಪ್ರಶಸ್ತಿ ಫಲಕ ನೀಡಿ ಶ್ರೀಗಳ ಸ್ಮರಣೆಯ ರಾಜ್ಯ ಪ್ರಶಸ್ತಿ ನೀಡಿ ಆಯ್ಕೆ ಸಮಿತಿ ಸನ್ಮಾನಿಸಿದರು. ಪ್ರೊ. ಎಸ್. ಎಸ್.ಹರ್ಲಾಪೂರ ಪ್ರಾಸ್ತಾವಿಸಿದರು. ಡಾ. ಸುಧಾ ಕೌಜಗೇರಿ, ಡಾ. ಶಶಿಧರ ತೋಡಕರ, ಮೃತ್ಯುಂಜಯ ನವಲಗುಂದ, ಚಂದ್ರಶೇಖರ ವಸ್ತ್ರದ, ಶಿವಯೋಗಿ ಹುಬ್ಬಳ್ಳಿ, ಮುತ್ತಣ್ಣ ಹಾಳದೋಟರ, ಮಲ್ಲಿಕಾರ್ಜುನ ಸುರಕೋಡ, ಅನ್ವರ ಹುಬ್ಬಳ್ಳಿ ನಿರೂಪಿಸಿದರು. ಕೃಷ್ಣಾ ಜಿಂಗಾಡಿ ವಂದಿಸಿದರು.



ಆಧ್ಯಾತ್ಮಿಕ ದಾರಿ ತೋರಿದ ರೇಣುಕಾದಿ ಪಂಚಾಚಾರ್ಯರು

ಕುಂದಗೋಳ: ಜಂಗಮರ ಪಾದಪೂಜೆ ಮಹತ್ವದ್ದಾಗಿದ್ದು, ರೇಣುಕಾದಿ ಪಂಚಾಚಾರ್ಯರು ಪರಮಶಿವನ ಅವತಾರವಾಗಿ ಸಿದ್ಧಾಂತ ಶಿಖಾಮಣಿ ಮೂಲಕ ವಿಶ್ವಕ್ಕೆ ಆಧ್ಯಾತ್ಮಿಕ ದಾರಿ ತೋರಿದ ಮಹಾನುಭಾವರು ಎಂದು ಕಲ್ಯಾಣಪುರದ ಅಭಿನವ ಬಸವಣ್ಣಜ್ಜನವರು ಅಭಿಪ್ರಾಯಪಟ್ಟರು.

ಪಟ್ಟಣದ ಸವಾಯಿ ಗಂಧರ್ವ ಸ್ಮಾರಕ ಭವನದಲ್ಲಿ ಭಾನುವಾರ ತಾಲೂಕು ಆಡಳಿತ, ವೀರಶೈವ ಮಹಾಸಭೆ ಹಾಗೂ ತಾಲೂಕು ಜಂಗಮ ವೇದಿಕೆ ಸಹಯೋಗದಲ್ಲಿ ನಡೆದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಜಂಗಮರು ಭಕ್ತರ ಆಧ್ಯಾತ್ಮಿಕ ಮಾರ್ಗದರ್ಶಕರಾಗಿದ್ದು, ಲಿಂಗತ್ವದ ಸಾರವನ್ನು ಸಮಾಜಕ್ಕೆ ಸಾರಿದ್ದಾರೆ ಎಂದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಎಂ.ಆರ್. ಪಾಟೀಲ ಮಾತನಾಡಿ, ರೇಣುಕಾಚಾರ್ಯರು ಸಮಾನತೆ, ಸೌಹಾರ್ದ ಮತ್ತು ಧರ್ಮಪ್ರಚಾರದ ಮೂಲಕ ಸಮಾಜದಲ್ಲಿ ಶಾಂತಿ ಸಂದೇಶ ಸಾರಿದರು ಎಂದರು. ವೇ. ಮೂ. ದಯಾನಂದ ಕಂಬಾಳಿಮಠ, ಗುರುಸ್ವಾಮಿ ಬಾಳಿಹಳ್ಳಿಮಠ, ಬಸವರಾಜ ಕುಂದಗೋಳಮಠ ಮಾತನಾಡಿ, ಸ್ವತಃ ಪರಶಿವನೇ ದರ್ಮ ರಕ್ಷಣೆಗಾಗಿ ರೇಣುಕರನ್ನು ಧರೆಗಿಳಿಸಿದ್ದಾರೆ. ವೀರಶೈವ ಧರ್ಮದ ಜೊತೆಗೆ ಇತರೆ ಧರ್ಮಗಳಿಗೆ ನುಡಿ ಸಂದೇಶವನ್ನು ಕೊಟ್ಟವರು. ಪಂಚಪೀಠಗಳು ಇವರ ಆಚಾರ, ವಿಚಾರ, ಸಂಸ್ಕೃತಿಯನ್ನು ಎಲ್ಲಾ ಕಾಲಕ್ಕೂ ಪಸರಿಸಲು ಕಾರಣರಾದರು ಎಂಬುದನ್ನು ಹೇಳಲು ಸಂತಸವೆನಿಸುತ್ತದೆ. ಸಿದ್ಧಾಂತ ಶಿಖಾಮಣಿಯ ಮೂಲಕ ಇಡೀ ಜಗತ್ತಿಗೆ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಬಗ್ಗೆ ವಿವರಣೆ ನೀಡಿದ ಮಹಾತ್ಮರು ಎಂದು ಬಣ್ಣಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಡಾ. ರಾಮೂ ಮೂಲಗಿ ರಚಿಸಿದ ಭಕ್ತಿಗೀತೆ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು. ಫಕೀರಯ್ಯ ಬಾಳಿಹಳ್ಳಿಮಠ, ಪಪಂ ಮಾಜಿ ಉಪಾಧ್ಯಕ್ಷ ಮಂಜುನಾಥ ಹಿರೇಮಠ, ಮುತ್ತಣ್ಣ ಅಣ್ಣೀಗೇರಿ, ಕಲ್ಲಪ್ಪ ಹರಕುಣಿ,ಪ್ರಕಾಶ ಕೂಬಿಹಾಳ, ಪಂಚಾಕ್ಷರಯ್ಯ ಹಿರೇಮಠ,ಗುರು ಪಾಟೀಲ,ವಾಗೀಶ ಗಂಗಾಯಿ, ಪಕ್ಕೀರಯ್ಯ ನಾವಳ್ಳಿಮಠ, ಈಶ್ವರಯ್ಯ ಮಣಕಟ್ಟಿಮಠ, ಪಂಚಯ್ಯ ಹಿರೇಮಠ,ಅಡಿವೆಯ್ಯ ಕೂಬಿಹಾಳಮಠ, ಮಲ್ಲಯ್ಯ ವಸ್ತ್ರದ ಸಹಿತ ಇನ್ನಿತರರಿದ್ದರು. ಶ್ರೀದೇವಿ ಹಿರೇಮಠ ಪ್ರಾರ್ಥಿಸಿದರು. ವೀರೇಶ ಪ್ರಳಯಕಲ್ಮಠ ಸ್ವಾಗತಿಸಿದರು. ರೇವತಿ ಬೀಳಗಿಮಠ ನಿರೂಪಿಸಿದರು.

ಕೃಷಿ ಮಾರುಕಟ್ಟೆ ಸ್ವಚ್ಛತೆಗೆ ಆದ್ಯತೆ

ಹುಬ್ಬಳ್ಳಿ: ಹುಬ್ಬಳ್ಳಿ -ಧಾರವಾಡ ಸೆಂಟ್ರಲ್ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರತಿ ತಿಂಗಳು ಮೊದಲನೇ ಭಾನುವಾರ ಮತ್ತು ಮೂರನೇ ಭಾನುವಾರ ದಿವಸ ಎರಡು ದಿನ ಬೆಳಗ್ಗೆಯಿಂದ ಕ್ಷೇತ್ರದ ವಾರ್ಡಗಳಲ್ಲಿ ಸ್ವಚ್ಛದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು.



ಹುಬ್ಬಳ್ಳಿ ಕೃಷಿ ಎಪಿಎಂಸಿ ಮಾರುಕಟ್ಟೆಯಲ್ಲಿ ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಪಾಲ್ಗೊಂಡು ಮಾತನಾಡುತ್ತಿದ್ದರು. ಹುಬ್ಬಳ್ಳಿಯಲ್ಲಿ ಸ್ವಚ್ಛತೆ ಹಾಗೂ ಗಿಡಮರಗಳನ್ನು ಬೆಳೆಸಿ ನಗರ ಸೌಂದರ್ಯವನ್ನು ಕಾಪಾಡುವುದು ಸೇರಿದಂತೆ ಕಸ ಮುಕ್ತವನ್ನಾಗಿಸುವುದು ಮೂಲ ಉದ್ದೇಶವಾಗಿದೆ ಎಂದರು.

ಪಾಲಿಗೆಯ ಸದಸ್ಯ ಮಲ್ಲಿಕಾರ್ಜುನ ಗುಂಡೂರ, ಎಪಿಎಂಸಿ ಸದಸ್ಯ ರಾಜಕಿರಣ ಮೆಣಸಿನಕಾಯಿ, ಚನ್ನು ಹೊಸಮನಿ, ಯುವ ಮೋರ್ಚಾ ಅಧ್ಯಕ್ಷ ಮುತ್ತು ಹೆಬ್ಬಳ್ಳಿ ಅಶೋಕ್ ವಾಲ್ಮೀಕಿ ರಾಮನಗೌಡ ಶೆಟ್ಟನಗೌಡ್ರ, ಮಂಜುನಾಥ್ ಊಟ ವಾಲೆ ಸಂತೋಷ ಹೇಬಳಿ, ಸಿದ್ದರಾಮ ಅಂಗಡಿ, ರವಿ ಅಥರ್ವಲೆ, ರಾಜೇಶ್ ಸಾಬ್ ನದಾಫ್, ಮಂಜುನಾಥ್ ಅಥರ್ವಲೆ, ಪ್ರಸನ್ನ ಕಿಲ್ಲೆದಾರ್, ಅರ್ಜುನ್, ಸಾಯಿ ಕಿರಣ್, ಗಣೇಶ ಗಣಮುಖಿ, ರೋಹಿತ್ ಪಟೇಲ, ಪಂಚಯ್ಯ ಪಂಚಾಕ್ಷರಿ ಮಠ ಮೊದಲಾದವರಿದ್ದರು.

ಗೃಹಲಕ್ಷ್ಮೀ ಯೋಜನೆಯಿಂದ ಮಹಿಳೆಯರು ಸಬಲ

ಹುಬ್ಬಳ್ಳಿ: ಅಶೋಕ್ ನಗರದ ಕನ್ನಡ ಭವನದಲ್ಲಿ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 46ನೇ ವಾರ್ಡಿನ ಪಂಚ ಗ್ಯಾರೆಂಟಿ ಯೋಜನೆಗಳ ಫಲಾನುಭಾವಿಗಳ ಶಿಬಿರವನ್ನು ಪರಿಷತ್ ಸದಸ್ಯ ಎಫ್.ಹೆಚ್. ಜಕ್ಕಪ್ಪನವರ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ಪಕ್ಷಭೇದವಿಲ್ಲದೆ ಎಲ್ಲರಿಗೂ ಗ್ಯಾರಂಟಿ ಯೋಜನೆಗಳನ್ನು ತಲುಪಿಸಲಾಗುತ್ತಿದೆ. ಗೃಹಲಕ್ಷ್ಮೀ ಯೋಜನೆಯ ಫಲಾನುಭಾವಿಗಳ ಮುಖದ ಮಂದಹಾಸದಲ್ಲಿ ನನ್ನ ತಾಯಿಯನ್ನು ಕಾಣುತ್ತೇನೆ. ಕರ್ನಾಟಕದ (ಜಿಡಿಪಿ) ಒಟ್ಟು ದೇಶೀಯ ಉತ್ಪನ್ನ ಅನ್ಯ ರಾಜ್ಯಗಳಿಂದ ಜಾಸ್ತಿ ಪ್ರಮಾಣ ಇರಲು 5 ಗ್ಯಾರಂಟಿಗಳು ಕಾರಣ ಎಂದರು.

ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಗೃಹಲಕ್ಷ್ಮೀ ಯೋಜನೆಯಿಂದ ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿದೆ. ಗ್ಯಾರಂಟಿ ಯೋಜನೆಗಳು ಕೇವಲ ಹಣದ ಸಹಾಯವಲ್ಲ, ಗೌರವದ ಭರವಸೆ ಎಂದರು.

ಪಾಲಿಕೆ ವಲಯ ಅಧಿಕಾರಿ ಡಾ. ಚಂದ್ರಶೇಖರಗೌಡ ಮಾಲಿಪಾಟೀಲ್ ಸ್ವಾಗತಿಸಿದರು. ಹುಧಾಮಪ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಕಾಶ್ ಹಳಿಯಾಳ ಮಾತನಾಡಿದರು. ಮಾಜಿ ಸಂಸದ ಐ.ಜಿ. ಸನದಿ, ಹುಧಾಮಪ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ವೀರೇಶ್ ಕಡಕೊಳಮಠ, ಸಂಗಮೇಶ್ ಗೌರಕ್ಕನವರ್, ಹು-ಡಾ ಅಧ್ಯಕ್ಷ ಶಾಕಿರ್ ಸನದಿ, ಅಲ್ತಾಫ ಹಳ್ಳೂರ್, ಅನಿಲ್ ಪಾಟೀಲ್, ಸದಾನಂದ ಡಂಗನವರ್, ಸಿಡಿಪಿಒ ಸುನೀತಾ ಪಾಟೀಲ್, ಆಹಾರ ಇಲಾಕೆಯ ಕೇಶವ ರಾಯಕರ್, ವಾಕರಸಾ ಅಧಿಕಾರಿ ವಿನಾಯಕಸ್ವಾಮಿ ಸಾಲಿಮಠ, ಬಾಳಮ್ಮ ಜಂಗನವರ, ಕಲಾವತಿ ದತ್ತವಾಡ, ಉಮೇಶ್ ಕೊಟ್ಟರನವರ್, ಸಂತೋಷ್ ನಾಯಕ, ಸೈಫ್ ಯರ್ಗಟ್ಟಿ, ಮಾದರ ಮಕಾಂದರ, ಜ್ಯೋತಿ ವಾಲಿಕರ್ ಸೇರಿದಂತೆ ಶಿಬಿರದಲ್ಲಿ 46ನೇ ವಾರ್ಡಿನ ವಿಜಯನಗರ, ಚಂದ್ರನಾಥ ನಗರ ಸುತ್ತಮುತ್ತಲ್ಲಿನ ಸುಮಾರು 600 ಫಲಾನುಭವಿಗಳು ಇದ್ದರು.

ಕಿರುಸುದ್ದಿ

ಜಯಂತ್ಯುತ್ಸವ ನಾಳೆ



◆ **ಗದಗ:** ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಮಾ.3ರಂದು ದಿ.ಕೆ.ಎಚ್.ಪಾಟೀಲ ಅಭಿಮಾನಿ ಬಳಗದಿಂದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೆ.ಎಚ್.ಪಾಟೀಲ ಅಭಿಮಾನಿ ಬಳಗದ ಅಧ್ಯಕ್ಷ ಪೀರಸಾಬ ಕೌತಾಳ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ವಧರ್ಮಗಳ 22 ಜೋಡಿಗಳ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮದುವೆಯಾಗುವ 22 ಜೋಡಿಗಳಿಗೆ ಬಂಗಾರದ ತಾಳಿ, ಬಟ್ಟೆಗಳನ್ನು ಉಚಿತವಾಗಿ ನೀಡಲಾಗುತ್ತದೆ. 15 ಸಾವಿರ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ಮಾರ್ಚ್ 2 ರಂದು ಬರುವ ಭಕ್ತರಿಗೆ ವಸತಿ ಹಾಗೂ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಜಯಂತ್ಯುತ್ಸವದ ದಿನ ಬೆಳಗ್ಗೆ 9 ಕ್ಕೆ ನಗರದಲ್ಲಿ 1012 ಕುಂಭೋತ್ಸವ ಕಾರ್ಯಕ್ರಮ ನಡೆಯಲಿದ್ದು, ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಗುತ್ತದೆ. ಮಧ್ಯಾಹ್ನ 12 ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿವೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸುವರು. ಮಾಜಿ ಶಾಸಕ ಡಿ.ಆರ್.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಆನಂದಸ್ವಾಮಿ ಗಡ್ಡದೇವರಮಠ, ಸಿ.ಎಸ್.ಶ್ರೀಧರ, ನಂದಾ ಹಣಬರಟ್ಟಿ, ಶೇಖಣ್ಣ ಗದ್ದಿಕೇರಿ, ಡಾ.ಬಸವರಾಜ ಬಳ್ಳಾರಿ, ರಘೋತ್ತಮ ಕೊಪ್ಪರ ಸೇರಿದಂತೆ ಇತರರು ಭಾಗವಹಿಸುತ್ತಾರೆ ಎಂದರು. ಮಾ.2 ರಂದು ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಜೆ 6.30ಕ್ಕೆ ಸಾಂಸ್ಕೃತಿಕ ರಸಮಂಜರಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸತ್ಕಾರ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಈ ವೇಳೆ ರಮೇಶ್ ಮುಳಗುಂದ, ಚಂದ್ರು ಕಡಕೋಳ, ವಿನೋದ ಶಿದ್ಲಿಂಗ, ಆನಂದ ಸಾಲಿಗ್ರಾಮ ಉಪಸ್ಥಿತರಿದ್ದರು.

ಅಭಿವೃದ್ಧಿಗೆ ತೀವ್ರ ಹಿನ್ನಡೆ



◆ **ಗದಗ:** ರಾಜ್ಯ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳಿಂದ ರಾಜ್ಯದ ಅಭಿವೃದ್ಧಿಗೆ ತೀವ್ರ ಹಿನ್ನಡೆಯಾಗಿದೆ ಎಂದು ಜಿಲ್ಲಾ ಬಿಜೆಪಿ ವಕ್ತಾರ ಎಂ.ಎಂ.ಹಿರೇಮಠ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ ಮಾತನಾಡಿ, ಯಾವುದೇ ಹೊಸ ಕಾಮಗಾರಿ ಮಾಡಲು ದುಡ್ಡಿಲ್ಲದೆ ಅಭಿವೃದ್ಧಿ ಕಾಮಗಾರಿಗಳು ನಿಂತಿವೆ. ಶಕ್ತಿ ಯೋಜನೆಯ ಅಡಿಯಲ್ಲಿ ಲಕ್ಷಾಂತರ ರೂಪಾಯಿ ಸಂಬಳ ಪಡೆಯುವ ಮಹಿಳೆಯರಿಗೂ ಹಾಗೂ ಸಾವಿರಾರು ರೂಪಾಯಿ ಸಂಬಳ ಪಡೆಯುವ ಮಹಿಳೆಯರಿಗೆ, ಆದಾಯ ತೆರಿಗೆ ಪಾವತಿಸುವ ಮಹಿಳೆಯರಿಗೂ ಕೂಡಾ ಉಚಿತವಾಗಿ ಬಸ್‌ನಲ್ಲಿ ಸಂಚರಿಸಲು ಅನುಮತಿ ನೀಡಿದ್ದರಿಂದ ಇಂದು ಸಾರಿಗೆ ಸಂಸ್ಥೆ ದಿವಾಳಿಯಾಗಿದೆ. ಸಾರಿಗೆ ನೌಕರರ ಸರಿಯಾದ ಸಮಯಕ್ಕೆ ಸಂಬಳ ಕೊಡಲು ಕೂಡ ತೀವ್ರವಾದ ತೊಂದರೆಯಲ್ಲಿ ಸಾರಿಗೆ ಇಲಾಖೆ ತೊಳಲಾಡುತ್ತಿದೆ. ಹೊಸ ಬಸ್ ಖರೀದಿ ಮಾಡಲು ಇದ್ದ ಬಸ್‌ಗಳ ಬಿಡಿ ಭಾಗ ಖರೀದಿಸಲು, ಡಿಸೈಲ್ ಕೊಳ್ಳಲು, ಸಾರಿಗೆ ನಿಗಮಕ್ಕೆ ತೀವ್ರವಾದ ತೊಂದರೆಯಾಗಿದೆ. ಯುವಕರಿಗೆ ನೌಕರಿಗಳನ್ನು ಹಾಗು ಹೊಸ ಉದ್ಯೋಗಗಳನ್ನು ಕೊಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ದೂರಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ



◆ **ಗದಗ:** ನಾಲ್ವಾಡಗಲ್ಲಿಯ ಕಾಮರತಿ ಉತ್ಸವಕ್ಕೆ ಇದೀಗ 101 ವರ್ಷದ ಸಂಭ್ರಮಾಚರಣೆಯಿದ್ದು ತನ್ನಿಮಿತ್ತವಾಗಿ ಹಲವಾರು ವೈವಿಧ್ಯಮಯ ಕಾರ್ಯಗಳನ್ನು ಹಮ್ಮಿಕೊಳ್ಳಲು ಉತ್ಸವ ಸಮಿತಿ ನಿರ್ಧರಿಸಿದೆ. ನಾಲ್ವಾಡಗಲ್ಲಿಯ ಅಂಗನವಾಡಿ ಶಾಲೆಯ ಪ್ರಾಂಗಣದಲ್ಲಿ ಇತ್ತೀಚೆಗೆ ನಾಲ್ವಾಡ ಓಣಿಯ ಗುರುಹಿರಿಯರ, ಯುವಕರ ಉಪಸ್ಥಿತಿಯಲ್ಲಿ ಜರುಗಿದ ಉತ್ಸವ ಸಮಿತಿಯ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಯಿತು. ಮಾ.5ರಂದು ಸಂಜೆ 6.30ಕ್ಕೆ ಉತ್ಸವದ ಸಭಾ ಮಂಟಪದಲ್ಲಿ 101 ವರ್ಷದ ಸಂಭ್ರಮಕ್ಕಾಗಿ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ನಿರ್ಧರಿಸಲಾಯಿತು. ಮಾ.7ರಂದು ಬೆಳಗ್ಗೆ 10.30ಕ್ಕೆ ಜಗ್ಗಲಗಿಯ ಮೇಳದೊಂದಿಗೆ ಬೃಹತ್ ಮೆರವಣಿಗೆ ಜರುಗಲಿದೆ. ನಾಲ್ವಾಡಗಲ್ಲಿಯಲ್ಲಿ ಕಾಮರತಿ ಉತ್ಸವ ಆಚರಿಸಿಕೊಂಡು ಬಂದ ಪರಂಪರೆಯನ್ನು ವಿವರಿಸಿ ಯುವಕರು ಒಗ್ಗಟ್ಟಿನೊಂದಿಗೆ, ಯಾವುದೇ ತಂಟೆ ತಕರಾರು ಬರದಂತೆ ಶಾಂತಿ ಸಮಾಧಾನದಿಂದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಸಭೆಯಲ್ಲಿ ಉಪಸ್ಥಿತರಿದ್ದ ಹಿರಿಯರು ಸೂಚನೆ ನೀಡಿದರು. ಯುವಕರೆಲ್ಲರೂ ಸೇರಿ ಒಗ್ಗಟ್ಟಿನಿಂದ ಕೆಲಸ ಕಾರ್ಯಗಳನ್ನು ಹಂಚಿಕೊಂಡು ಶಿಸ್ತಿನಿಂದ ಕೆಲಸ ಮಾಡಬೇಕೆಂದು ಹಿರಿಯರು ಮಾರ್ಗದರ್ಶನ ಮಾಡಿದರು.



ಮುಂಡರಗಿ: ಇಲ್ಲಿಯ ಜ.ಅ.ಪದವಿ ಪೂರ್ವ ಕಾಲೇಜಿನಲ್ಲಿ ಭಾನುವಾರ ನಡೆದ ಕರ್ನಾಟಕ ವಸತಿ ಶಾಲೆಗಳ ಪ್ರವೇಶ ಪರೀಕ್ಷೆ ಕೇಂದ್ರ ಸಂಖ್ಯೆ-387ಗೆ ಜಿಲ್ಲಾಧಿಕಾರಿ ಶ್ರೀಧರ ಭೇಟಿ ನೀಡಿ ಪರೀಕ್ಷೆಯನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ವೇಳೆ ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್., ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ, ಪ್ರಾ.ಪಿ.ಎಂ.ಕಲ್ಲನಗೌಡ್ರ ಉಪಸ್ಥಿತರಿದ್ದರು. ಕೇಂದ್ರಕ್ಕೆ ನಿಗದಿಯಾದ ಮಕ್ಕಳ ಸಂಖ್ಯೆ-318. ಹಾಜರಾದವರು 315 ಮತ್ತು 3 ಮಕ್ಕಳು ಗೈರಾಗಿದ್ದರು.

ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ಸಾಗಲಿ

◆ **ಲಕ್ಷ್ಮೇಶ್ವರ:** ವಿದ್ಯಾರ್ಥಿಗಳು ಗುರು ಹಿರಿಯರ ಮಾತುಗಳನ್ನು ಕೇಳಿ ಬದುಕಿನಲ್ಲಿ ಸನ್ಮಾರ್ಗದಲ್ಲಿ ಸಾಗಿ ಜೀವನದಲ್ಲಿ ಸಾಧನೆ ಮಾಡುವ ನಿಟ್ಟಿನಲ್ಲಿ ಸಾಗಬೇಕು ಎಂದು ತಾಯಿ ಪಾರ್ವತಿ ಮಕ್ಕಳ ಬಳಗ ಸಂಸ್ಥೆಯ ಉಪಾಧ್ಯಕ್ಷೆ ಜಯಲಕ್ಷ್ಮೀ ಮಹಾಂತಶೆಟ್ಟರ ಹಾಗೂ ಕಾರ್ಯದರ್ಶಿ ಜಯಲಕ್ಷ್ಮೀ ಗಡ್ಡದೇವರಮಠ ಹೇಳಿದರು. ಅವರು ಪಟ್ಟಣದ ಎಸ್‌ಟಿ ಪಿಎಂಬಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ 21ನೇ ವರ್ಷದ ವಾರ್ಷಿಕೋತ್ಸವ ಏಕವಂಶೀಯತ: ಫೋಲ್ಡ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಿಕ್ಷಣದಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸಿಕೊಂಡು ಮುಂದೆ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಳ್ಳಬಹುದು ಎಂದರು. ಪಾಲಕ ಪ್ರತಿನಿಧಿಯಾಗಿ ವಿಜಯಾ ಕೆಂಚನಗೌಡ ಮಾತನಾಡಿದರು. ಮುಖ್ಯೋಪಾಧ್ಯಾಯ ಪ್ರಭುಗೌಡ ಯಕಿಕೊಪ್ಪ ಪ್ರಾಸ್ತಾವಿಸಿದರು. ಶಾಲಾ ಮುಖ್ಯಸ್ಥೆ ಶಿಕ್ಷಕಿ ಸ್ವಾತಿ ಉದಯ ಪೈ ವರದಿ ವಾಚನ ಮಂಡಿಸಿದರು. ಸಂಸ್ಥೆಯ ಅಧ್ಯಕ್ಷೆ ಸುವರ್ಣ ಬಾಯಿಬಹದ್ದೂರ ದೇಸಾಯಿ, ಶಾರಕ್ಕಾ ಮಹಾಂತಶೆಟ್ಟರ ರೋಹಿಣಿಬಾಯಿ ಬಹದ್ದೂರ ದೇಸಾಯಿ, ಈಸಿಓ ರಾಘವೇಂದ್ರ ಜೋಶಿ, ಸಿಆರ್‌ಪಿ ಶ್ರೀನಿವಾಸ ಮತ್ತೂರ ಇತರರಿದ್ದರು. ಶಾಲಾ ವಿದ್ಯಾರ್ಥಿಗಳಿಂದ ಶಿವನ ಭಕ್ತಿಯ ಪರಿ,ಯಕ್ಷಗಾನ, ಮೋಹಿನಿ ಅಟ್ಟಮ, ಭರತನಾಟ್ಯದಂತಹ ಉತ್ತಮ ನೃತ್ಯ ಪ್ರದರ್ಶನ ನೀಡಿದರು. ವಿಜಯಲಕ್ಷ್ಮೀ ದೇಸಾಯಿ, ರೂಪಾ ನವಲೆ, ವೀಣಾ ಜಾಮನೂರ, ಲೀಲಾವತಿ ಬೆಳಗಟ್ಟಿ, ಸಿಮ್ರಾನ ನಾಡಗೇರ, ಆಶಾ ಜಾದವ ಪವಿತ್ರಾ ಕಾರಬಾರಿ, ಶಿವಯೋಗಿ ವಾಲಿಶೆಟ್ಟರ ,ಶ್ವೇತಾ ಅರಳಿ ಶಿಕ್ಷಕಿಯರು ಸಿಬ್ಬಂದಿ, ಪಾಲಕರು ಉಪಸ್ಥಿತರಿದ್ದರು. ವಿಜಯಲಕ್ಷ್ಮೀ ಮಹಾರಾಜಪೇಟ ಸ್ವಾಗತಿಸಿದರು ಮಂಜುಳಾ ಪಾಟೀಲ ನಿರೂಪಿಸಿದರು. ವಿನಾಯಕ ದೊಡ್ಡಮನಿ ವಂದಿಸಿದರು.



ಲಕ್ಷ್ಮೇಶ್ವರ: ಪಟ್ಟಣದ ಎಸ್‌ಟಿ ಪಿಎಂಬಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ 21ನೇ ವರ್ಷದ ವಾರ್ಷಿಕೋತ್ಸವ ಏಕವಂಶೀಯತ: ಫೋಲ್ಡ್ ಕಾರ್ಯಕ್ರಮವನ್ನು ತಾಯಿ ಪಾರ್ವತಿ ಮಕ್ಕಳ ಬಳಗ ಸಂಸ್ಥೆಯ ಉಪಾಧ್ಯಕ್ಷೆ ಜಯಲಕ್ಷ್ಮೀ ಮಹಾಂತಶೆಟ್ಟರ ಹಾಗೂ ಕಾರ್ಯದರ್ಶಿ ಜಯಲಕ್ಷ್ಮೀ ಗಡ್ಡದೇವರಮಠ ಉದ್ಘಾಟಿಸಿದರು.

ನಿರೀಕ್ಷಿತ ಪ್ರಮಾಣದಲ್ಲಿ ಬಾರದ ಫಸಲು | ಗ್ರಾಹಕರು ಕಂಗಾಲು

ಮೆಣಸಿನಕಾಯಿ ದರ ಏರಿಕೆ

▸ ರುದ್ರಗೌಡ ಪಾಟೀಲ

◆ **ಗದಗ:** ಗಿಡ್ಡ ತಳಿಯ ಮೆಣಸಿನಕಾಯಿ ರುಚಿಯಲ್ಲಿ ಮಾತ್ರವಲ್ಲದೆ ಬೆಲೆಯಲ್ಲೂ ಖಾರವಾಗಿ ಪರಿಣಮಿಸಿದ್ದು, ಕೆಜಿಗೆ 240 ರೂ.ತಲುಪಿದೆ. ಬೀನ್ಸ್, ಮೆಂತೆ ಸೊಪ್ಪು ಸೇರಿದಂತೆ ಬಹುತೇಕ ಎಲ್ಲ ತರಕಾರಿಗಳ ಬೆಲೆಯೂ ಏರಿಕೆಯಾಗಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ನಾನಾ ರೀತಿಯ ಪಲ್ಲೆ ಹಾಗೂ ಚಟ್ನಿಗೆ ಬಳಸುವ ಗಿಡ್ಡ ತಳಿಯ ಹಸಿ ಮೆಣಸಿನಕಾಯಿ ದರ ಏರಿಕೆ ಗ್ರಾಹಕರನ್ನು ಕಂಗೆಡಿಸಿದೆ.



ಮನೆಗಳಲ್ಲಿ ಮಾತ್ರವಲ್ಲದೆ ಈ ಭಾಗದ ಖಾನಾವಳಿ ಹಾಗೂ ಹೊಟೇಲ್‌ಗಳಲ್ಲಿ ಮಾಡುವ ಖಾದ್ಯಗಳಲ್ಲಿ ಹೆಚ್ಚಾಗಿ ಈ ಗಿಡ್ಡ ಜಾತಿಯ ಮೆಣಸಿನಕಾಯಿ ಬಳಸಲಾಗುತ್ತದೆ. ನೀರಾವರಿ ಸೌಲಭ್ಯ ಹೊಂದಿರುವ ಉತ್ತರ ಕರ್ನಾಟಕದ ಬೆರಳೆಣಿಕೆಯಷ್ಟು ಪ್ರದೇಶಗಳಲ್ಲಿ ಮಾತ್ರ ಬೆಳೆಯುವ ಈ ಗಿಡ್ಡ ಮೆಣಸಿನಕಾಯಿ, ಇದೀಗ ಹೆಚ್ಚು ಬೇಡಿಕೆ ಪಡೆದುಕೊಂಡಿದೆ. ಕೆಲವೇ ದಿನಗಳಲ್ಲಿ ಬೆಲೆ 100 ರೂ.ಗಳಷ್ಟು ಹೆಚ್ಚಳವಾಗಿದ್ದು, ನಿರೀಕ್ಷಿತ ಪ್ರಮಾಣದ ಫಸಲು ಇಲ್ಲದ್ದರಿಂದ ಬೆಲೆ ಗಗನಕ್ಕೇರಿದೆ. ಮೆಣಸಿನಕಾಯಿ ತಿನ್ನಲು ಖಾರವಾದರೂ, ಜಿಲ್ಲೆಯ ರೈತರ ಬಾಳಲ್ಲಿ ಈ ಬಾರಿ ಸಿಹಿ ನೀಡಿದೆ. ಪ್ರತಿ ವರ್ಷ ನಾನಾ ಕಾರಣಗಳಿಂದ ಹಸಿ ಮೆಣಸಿನಕಾಯಿ ಬೆಳೆದ ರೈತರು ಮಾರುಕಟ್ಟೆಯಲ್ಲಿ ಬೆಲೆ ಸಿಗದೇ ಕಂಗಾಲಾಗುತ್ತಿದ್ದರು. ಆದರೆ, ಈ ಬಾರಿ ಕೊಂಚ ಏರಿಕೆ ಕಂಡಿದ್ದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ದಿಗಂತ ವಿಶೇಷ



» ಮನೆಗಳಲ್ಲಿ ಹಿಂದಿನಿಂದಲೂ ಹಲವು ಬಗೆಯ ಪಲ್ಲೆ ಮತ್ತು ಚಟ್ನಿಗೆ ಹಸಿ ಮೆಣಸಿನಕಾಯಿ ಬಳಕೆ ಇದೆ. ಆದರೆ ಸಂತೆಯಲ್ಲಿ ದರ ಕೇಳಿ ಬೆಚ್ಚಿ ಬೀಳುವಂತಾಗಿದೆ ಎನ್ನುತ್ತಾರೆ ಗ್ರಾಹಕರು

» ಹಸಿ ಮೆಣಸಿನಕಾಯಿ ಇಲ್ಲದಿದ್ದರೆ ಪಲ್ಲೆ, ಚಟ್ನಿಗಳಲ್ಲಿ ರುಚಿಯೂ ಇರದು, ಖಾರವೂ ನಾಲಿಗೆಗೆ ಹತ್ತದು ಎನ್ನುತ್ತಿದ್ದಾರೆ ಜನರು

» ಮೊದಲು ಹೆಚ್ಚಾಗಿ ಹಿಂಗಾರಿನಲ್ಲಿ ರೈತರು ಈ ಗಿಡ್ಡ ಮೆಣಸಿನಕಾಯಿ ಬೆಳೆಯುತ್ತಿದ್ದರು. ಈಗ ಬೆಳೆಯುವ ಬ್ಯಾಡಗಿ ತಳಿ ಮೆಣಸಿನಕಾಯಿ ಒಣಗಿಸಿ (ಕೆಂಪಾಗಿಸಿ) ಮಾರ್ಕೆಟ್‌ನಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಇರಾದೆಯಲ್ಲಿ ಗಿಡ್ಡ ಮೆಣಸಿನಕಾಯಿ ಬೆಳೆಯುವುದನ್ನು ನಿಲ್ಲಿಸಿರುವ ಬಹುತೇಕರು

ಸಗಟು ದರ ಹೆಚ್ಚಳ

ಗದಗ, ನರಗುಂದ ರೋಣ, ಗಜೇಂದ್ರಗಡ, ನರೇಗಲ್ ಪಟ್ಟಣಗಳಲ್ಲಿ ನಡೆಯುವ ಸಂತೆಗಳ ಸವಾಲು ಮಾಡಲು ಕಳೆದ ತಿಂಗಳಿಂದ ಜವಾರಿ ಮೆಣಸಿನಕಾಯಿ ಬೇಡಿಕೆಗೆ ತಕ್ಕಂತೆ ಸಿಗುತ್ತಿಲ್ಲ. ನೆರೆಯ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿಯಿಂದ ತರಿಸುತ್ತಿದ್ದಾರೆ. ಸದ್ಯ ಸಗಟು ದರವೇ ಕೆಜಿಗೆ 190 ರಿಂದ 200 ರೂ. ದಾಟಿದೆ. ಹೀಗಾಗಿ ಬೆಲೆ ಏರಿಕೆ ಕಂಡಿದೆ. ಹಿಂಗಾರು ಹಂಗಾಮಿನಲ್ಲಿ ಗಿಡ್ಡ ಮೆಣಸಿನಕಾಯಿ ಮತ್ತಷ್ಟು ದುಬಾರಿಯಾದರೂ ಆಶ್ಚರ್ಯವಿಲ್ಲ ಎನ್ನುತ್ತಾರೆ ವ್ಯಾಪಾರಸ್ಥರು.



ವಾಣಿಜ್ಯ ಬೆಳೆಯತ್ತ ಒಲವು

ಈ ಭಾಗದಲ್ಲಿ ನೀರಾವರಿ ಯೋಜನೆ ಕಾಲುವೆಗಳಿದ್ದರೂ ನೀರು ಬರುತ್ತಿಲ್ಲ. ಹೀಗಾಗಿ ಕೊಳವೆಬಾವಿ ಹೊಂದಿರುವ ಬಹುಪಾಲು ಕೃಷಿಕರು ವಾಣಿಜ್ಯ ಬೆಳೆ ಕಬ್ಬು ಬೆಳೆಗೆ ಒತ್ತು ನೀಡಿದ್ದಾರೆ. ಈ ಕಾರಣಗಳಿಂದ ಜವಾರಿ ಮೆಣಸಿನಕಾಯಿ ಆವಕ ಕ್ಷೀಣಿಸಿದೆ. ಹೆಚ್ಚಿನ ಪ್ರಮಾಣದಲ್ಲಿ ರೈತರು ಕಬ್ಬು ಬೆಳೆಯುತ್ತಾರೆ.

> ಮನೆಗಳಲ್ಲಿ ಹಲವು ಬಗೆಯ ಪಲ್ಲೆ ಮತ್ತು ಚಟ್ನಿಗೆ ಹಸಿ ಮೆಣಸಿನಕಾಯಿ ಬಳಕೆ ವ್ಯಾಪಕವಾಗಿದೆ. ಆದರೆ ಸಂತೆಯಲ್ಲಿ ದರ ಏರಿಕೆ ಶಾಕ್ ನೀಡಿದೆ.
> ■ **ರಾಜು ಪಾಟೀಲ**, ಗ್ರಾಹಕ

> ಸುಮಾರು ದಿನಗಳಿಂದ ಹಸಿ ಮೆಣಸಿನಕಾಯಿ ಕೆಜಿಗೆ 200 ರೂಪಾಯಿ ದಾಟಿದೆ. ಅದರಲ್ಲೂ ಗಿಡ್ಡ ಮೆಣಸಿನಕಾಯಿಗೆ ಹೆಚ್ಚಿನ ಬೇಡಿಕೆಯಿದೆ. ಆದರೆ ಪೂರೈಕೆ ಕಡಿಮೆ ಇದೆ. ಹೀಗಾಗಿ ಸಹಜವಾಗಿ ದರ ಏರಿದೆ.
> ■ **ಮುನ್ನಾ ಬಾಗಲಕೋಟೆ**, ತರಕಾರಿ ವ್ಯಾಪಾರಿ

ಕಾಮದಹನವಿಲ್ಲ, ಹೋಳಿಯೂ ನಿಷಿದ್ಧ!

▸ ಸಿ.ಎಸ್.ಅರಸನಾಳ

◆ **ಮುಂಡರಗಿ:** ಮುಂಡರಗಿ ಪಟ್ಟಣ ಮತ್ತು ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಹೋಳಿ ಹಬ್ಬದ ಆಚರಣೆಯಿದೆ. ಆದರೆ ಹೋಳಿ ಮತ್ತು ಕಾಮದಹನ ಇಲ್ಲವೇ ಇಲ್ಲ. ಬಾಯಿಗೆ ಕೈಒಯ್ಯುದಂತೂ ಎಲ್ಲಿಯೂ ಕಾಣಸಿಗುವುದಿಲ್ಲ, ಕಾಮದಹನ ಇಲ್ಲ ಎಂದ ಮೇಲೆ ಕುಳ್ಳು-ಕಟ್ಟಿಗೆ ಕದಿಯುವುದು ,ರಾತ್ರಿಯಲ್ಲಾ ಅವುಗಳನ್ನು ದಹನಮಾಡಿ ಕಾಮಣ್ಣನ ಹಬ್ಬ ಆಚರಿಸುವುದು ಎಲ್ಲಿಯೂ ಕಂಡುಬರುವುದಿಲ್ಲ, ಹೋಳಿ ಆಡುವುದು ನಿಷಿದ್ಧ.

ಸ್ವಾತಂತ್ರ್ಯ ಪೂರ್ವದಿಂದಲೂ ಈ ನಡೆ ಇಲ್ಲಿ ನಡೆದುಕೊಂಡು ಬಂದಿದೆ. ಪಟ್ಟಣದ ಕನಕರಾಯನ ಗುಡ್ಡದ ಮೇಲೆ ಇರುವ ಲಕ್ಷ್ಮೀಕನಕನರಸಿಂಹ ದೇವರ ಜಾತ್ರಾಮಹೋತ್ಸವವು ಹೋಳಿ ಹುಣ್ಣಿಮೆ ದಿನದಿಂದ ಪ್ರಾರಂಭವಾಗಿ 8 ದಿನಗಳವರೆಗೆ ನಡೆದುಕೊಂಡು ಬಂದಿದೆ. ಈ ಜಾತ್ರಾಮಹೋತ್ಸವ ಉಸ್ತುವಾರಿಯನ್ನು ಸ್ವಾತಂತ್ರ್ಯ ಹೋರಾಟಗಾರ ಮುಂಡರಗಿ ಭೀಮರಾಯರ ವಂಶಸ್ಥ ವಿ.ಎಲ್ .ನಾಡಗೌಡ್ರ ನಡೆಸಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ಲಕ್ಷ್ಮೀಕನಕನರಸಿಂಹ ದೇವರ ಕಲ್ಯಾಣಮಹೋತ್ಸವ ನಡೆಯುತ್ತಿರುವುದರಿಂದ ಹೋಳಿ ಮತ್ತು ಕಾಮದಹನ ನಡೆದುಕೊಂಡು ಬಂದಿಲ್ಲ ಅನ್ನುವುದು ಇಲ್ಲಿಯ ಹಿರಿಯರ ಅಂಬೋಣ. ಮುಂಡರಗಿ ಪಟ್ಟಣ ಸೇರಿದಂತೆ ತಾಲೂಕಿನ ಬರದೂರು, ಕೊರ್ಲಹಳ್ಳಿ, ಬೆಣ್ಣಿಹಳ್ಳಿ, ಮುಕ್ತಂಪೂರ,ರಾಮೇನಹಳ್ಳಿ, ನಾಗರಹಳ್ಳಿ ಮುಂತಾದ ಹಳ್ಳಿಗಳಲ್ಲಿ ಹೋಳಿ ಹಬ್ಬದ ಆಚರಣೆಯಿದೆ. ಆದರೆ ಹೋಳಿ ಇಲ್ಲ, ಕಾಮದಹನ ಇಲ್ಲ, ಮುಂಡರಗಿ ಭೀಮರಾಯನ ತಂದೆ ರಂಗರಾವ್ ಕನಕಗಿರಿಯ ಲಕ್ಷ್ಮೀಕನಕನರಸಿಂಹ ದೇವರ ಭಕ್ತನಾಗಿದ್ದರು. ಪ್ರತಿವಾರ ಕನಕಗಿರಿಗೆ ಹೋಗಿ ದೇವರ ದರ್ಶನ ಪಡೆದು ಬರುತ್ತಿದ್ದರು. ಆದರೆ ಮುಪ್ಪಾವಸ್ಥೆಯಲ್ಲಿ ಕನಕಗಿರಿಗೆ ಹೋಗಲು ಆಗದಿರುವುದರಿಂದ ಲಕ್ಷ್ಮೀಕನಕನರಸಿಂಹ ದೇವರ ರಂಗರಾವ್ ಅವರ ಕನಸಿನಲ್ಲಿ ಬಂದು ನೀನು ಇರುವಲ್ಲಿಗೆ ನಾನೇ ಬಂದು ನೆಲೆಸುತ್ತೇನೆ ಎಂದು ಹೇಳಿದ ಪರಿಣಾಮ ಇಲ್ಲಿಯ ಗುಡ್ಡದ ಮೇಲೆ ಶ್ರೀ ಲಕ್ಷ್ಮೀಕನಕನರಸಿಂಹ ದೇವರ ದೇವಸ್ಥಾನ ಪ್ರಾರಂಭವಾಯಿತು ಎನ್ನಲಾಗುತ್ತಿದೆ. ಅಂದಿನಿಂದ ಪ್ರತಿ ಹೋಳಿ ಹುಣ್ಣಿಮೆಯಿಂದ ಜಾತ್ರಾಮಹೋತ್ಸವವು ಪ್ರಾರಂಭವಾಗಿ ದೇವರ ಕಲ್ಯಾಣಮಹೋತ್ಸವ ನಡೆಯುತ್ತಿರುವುದರಿಂದ ಈ ಹೋಳಿ ಆಡುವುದು ಮತ್ತು ಕಾಮದಹನದಂತ ಕಾರ್ಯಕ್ರಮಗಳು ಇಲ್ಲಿ ನಡೆದುಬಂದಿಲ್ಲ, ಕಲಕೇರಿಯ ಮಲ್ಲಪ್ಪ ದೇಸಾಯಿಯವರ ಕಾಲದಿಂದಲೂ ಮುಂಡರಗಿ ಮತ್ತು ತಾಲೂಕಿನ ಹಲವಾರು ಹಳ್ಳಿಗಳಲ್ಲಿ ಹೋಳಿ ಆಚರಣೆ, ಕಾಮದಹನ ಮತ್ತು ರಂಗಪಂಚಮಿಯಂತಹ ಆಚರಣೆಗಳು ಕಾಣಸಿಗುವುದಿಲ್ಲ.

> ಕ್ರಿ.ಶ 1833 ರಲ್ಲಿ ಕಲಕೇರಿ ಸಂಸ್ಥಾನವು ಬ್ರಿಟಿಷರ ಆಧೀನಕ್ಕೆ ಒಳಪಟ್ಟು ಸುಮಾರು 36 ಹಳ್ಳಿಗಳನ್ನು ಹೊಂದಿದ ಸಂಸ್ಥಾನವಾಯಿತು. ನಂತರದಲ್ಲಿ ಈ ಹಳ್ಳಿಗಳಲ್ಲಿ ಹೋಳಿ ಆಚರಣೆ ನಿಲ್ಲಿಸಲಾಯಿತು. ಅದಕ್ಕೆ ಸರಿಯಾದ ಕಾರಣ ಹುಡುಕಬೇಕಿದೆ.
> ■ **ರವಿರಾಜ ದೇಸಾಯಿ**, ಕಲಕೇರಿ ದೇಶಗತಿ ವಂಶಸ್ಥ

ರೇಣುಕಾಚಾರ್ಯರ ಸಂದೇಶ ಇಂದು ಅವಶ್ಯ

◆ **ಗದಗ:** ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಜಗದ್ಗುರು ರೇಣುಕಾಚಾರ್ಯರ ಸಂದೇಶವು ಇಂದಿನ ಅಶಾಂತಿಯ ಜಗತ್ತಿಗೆ ಅತ್ಯಂತ ಅವಶ್ಯಕವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಅಡಿಟೋರಿಯಂ ಸಭಾಂಗಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ - 2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೇಣುಕಾಚಾರ್ಯರು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ. ದಯೆ, ಕರುಣೆ, ಅಹಿಂಸೆ ಮತ್ತು ಸತ್ಯದ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದರು.

ಇಂದಿನ ದಿನಗಳಲ್ಲಿ ಶ್ರೀಮಂತ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧ ಮತ್ತು ಹಿಂಸೆಯ ವಾತಾವರಣವು ಆತಂಕಕಾರಿಯಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಶಾಂತಿ ಮಂತ್ರ ಮತ್ತು ರೇಣುಕಾಚಾರ್ಯರ ತತ್ವಗಳು ಜಗತ್ತಿಗೆ ದಾರಿದೀಪವಾಗಲಿ ಎಂದರು.

ಉಪನ್ಯಾಸಕಿ ಡಾ.ಜಯಶ್ರೀ ಹೊಸಮನಿ ಮಾತನಾಡಿ, ಮನುಷ್ಯ ಜನ್ಮವು ಅತ್ಯಂತ ದುರ್ಲಭವಾದುದು. ಜೀವನದಲ್ಲಿ ಸಾರ್ಥಕತೆ ಪಡೆಯಲು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಪೂಜೆ, ಜಪ ಮತ್ತು ಧ್ಯಾನ ಎಂಬ ಹತ್ತು ಧರ್ಮ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು. ರೇಣುಕಾಚಾರ್ಯರು ಅಂದಿನ ಕಾಲದಲ್ಲೇ ಮಹಿಳೆಯರಿಗೆ ಸಮಾನ ಗೌರವ ನೀಡಿದ್ದರು. ಲಿಂಗಧಾರಣೆ ಮಾಡಿದವರೆಲ್ಲರೂ ಸಮಾನರು ಎಂಬ ತತ್ವದ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನು ಮಾಡಿದ್ದರು ಎಂದು ಉಪನ್ಯಾಸ ನೀಡಿದರು.

ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ.ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ಶ್ರೀನಿವಾಸ ಮೂರ್ತಿ, ಎಸ್.ಎನ್. ಬಳ್ಳಾರಿ, ಮುಖಂಡರುಗಳು, ಸಾರ್ವಜನಿಕರು ಉಪಸ್ಥಿತರಿದ್ದರು. ಅಕ್ಷತಾ ಹಿರೇಮಠ ಹಾಗೂ ಸಂಗಡಿಗರು ನಾಡಗೀತೆ ಪ್ರಸ್ತುತ ಪಡಿಸಿದರು. ಪ್ರೊ.ಬಾಹುಬಲಿ ಜೈನರ ನಿರೂಪಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರಿಗೆ ಸನ್ಮಾನಿಸಲಾಯಿತು.



ಶಿವಾಜಿ ಮಹಾರಾಜರ ಇತಿಹಾಸ ಸರ್ವರೂ ಅರಿಯಲಿ: ಮಹಾಂತಶೆಟ್ಟರ

◆ **ಲಕ್ಷ್ಮೇಶ್ವರ:** ಹಿಂದೂ ಧರ್ಮ, ದೇಶದ ಸಂಸ್ಕೃತಿಯನ್ನು ರಕ್ಷಣೆ ಮಾಡಿದ ಅದಮ್ಯ ದೇಶಪ್ರೇಮಿ ಛತ್ರಪತಿ ಶಿವಾಜಿ ಮಹಾರಾಜರ ಇತಿಹಾಸವನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು ಎಂದು ಬಿಜೆಪಿ ಶಿರಹಟ್ಟಿ ಮಂಡಲ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ ಹೇಳಿದರು.

ಅವರು ಪಟ್ಟಣದ ಅಖಂಡ ಭಾರತ ಯುವಸೇನೆ ಲಕ್ಷ್ಮೇಶ್ವರ ಇವರ ವತಿಯಿಂದ ನಡೆದ ಛತ್ರಪತಿ ಶಿವಾಜಿ ಮಹಾರಾಜ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭವ್ಯಮೂರ್ತಿ ಮೆರವಣಿಗೆ ಚಾಲನೆ ನೀಡಿ ಮಾತನಾಡಿ, ಶಿವಾಜಿ ಮಹಾರಾಜರ ಧೈರ್ಯ ಮತ್ತು ಸ್ಪೂರ್ತಿದಾಯಕ ಕಾರ್ಯಗಳು ಯುವಕರಿಗೆ ಪ್ರೇರಣೆ ಆಗಬೇಕು. ಅವರ ತತ್ವಾದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.



ಶಿವಾಜಿ ಮಹಾರಾಜರ ಭವ್ಯಮೂರ್ತಿ ಶೋಭಾಯಾತ್ರೆ ಪಂಪ್ ವೃತ್ತದಿಂದ ಪ್ರಾರಂಭಗೊಂಡು, ಬಸ್ತಿಕೇರಿ ವಿದ್ಯಾರಣ್ಯ ವೃತ್ತ, ಹಾವಳಿ ಆಂಜನೇಯ ದೇವಸ್ಥಾನ, ಪಾದ ಗಟ್ಟಿ, ಪುರಸಭೆ, ಸರ್ಕಾರಿ ಆಸ್ಪತ್ರೆ ಹಳೆ ಬಸ್ ಸ್ಟ್ಯಾಂಡ್ ಮುಂಭಾಗ ದಿಂದ ಪರ್ವತ ಮಲ್ಲಯ್ಯನ ದೇವಸ್ಥಾನಕ್ಕೆ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಅಮರೀಶ ಗಾಂಜಿ, ಶ್ರೇಯಾಂಕ ಹಿರೇಮಠ, ಪ್ರತಾಪ ಅಂಕಲಿ, ಎಂ.ಆರ್. ಪಾಟೀಲ, ಗಂಗಾಧರ ಮೆಣಸಿನಕಾಯಿ, ವಿವೇಕ ಖದಮ, ಚಂದ್ರಗೌಳಿ, ಶಕ್ತಿ ಕತ್ತಿ, ಈಶ್ವರ ಗದಗ, ಶಂಕರ ಶಳಕೆ,ಶರಣಬಸಪ್ಪ ಗಾಂಜಿ, ಪ್ರವೀಣ ದಶಮನಿ, ಚಂದ್ರು ಬಾರ್ಕಿ, ನವೀನ ಗಾಯಕವಾಡ, ಪ್ರಕಾಶ ಗುತ್ತಲ, ನವೀನ ಗುರಿಕಾರ, ಶಿವು ಆರೇರ, ಖಂಡಪ್ಪ ಅಣ್ಣಿಗೇರಿ, ಮಂಜುನಾಥ ಗಾಂಜಿ, ಆಕಾಶ ಸೌದತ್ತಿ, ಗೋವಿಂದ ಗೋಸಾವಿ,ಅನೇಕ ಹಿಂದೂ ಯುವಕರು ಇದ್ದರು.

ದಾನ, ಧರ್ಮದ ದಾರಿ ತೋರಿದ ರೇಣುಕಾಚಾರ್ಯರು: ರಾಘವೇಂದ್ರ ರಾವ್

◆ **ಶಿರಹಟ್ಟಿ :** ಎಲ್ಲ ಧರ್ಮಗಳಿಗಿಂತ ಮಾನವ ಧರ್ಮ ದೊಡ್ಡದು. ಮಾನವನ ಕರ್ಮವನ್ನು ಕಳೆದು ಮನಸ್ಸಲ್ಲಿ ಧರ್ಮದ ಬೀಜ ಬಿತ್ತಿ ಬದುಕನ್ನು ಬಂಗಾರಗೊಳಿಸಿದ ಕೀರ್ತಿ ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದು ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ರೇಣುಕಾಚಾರ್ಯ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ರೇಣುಕಾಚಾರ್ಯರ ತತ್ವಗಳು, ಮನೋಭಾವನೆಗಳು, ಸಂದೇಶಗಳನ್ನು ಅರ್ಥಮಾಡಿಕೊಂಡಾಗ ಮಾತ್ರ ಅವರ ಜಯಂತಿಯ ಆಚರಣೆ ಸಾರ್ಥಕವಾಗುತ್ತದೆ. ಸಮಾಜದಲ್ಲಿದ್ದ ಹಲವಾರು ಕಟ್ಟು ಪಾಡುಗಳ ವಿರುದ್ಧ ಅವರು ಧ್ವನಿ ಎತ್ತಿದ್ದರು. ಜಾತಿ ವ್ಯವಸ್ಥೆ, ಪುರುಷ-ಸ್ತ್ರೀ ಎಂಬ ಸಮಾಜದ ಭಿನ್ನತೆಯನ್ನು ಹೋಗಲಾಡಿಸಲು ಅಂದಿನ ಕಾಲದಲ್ಲಿಯೇ ಹೋರಾಡಿದ್ದರು ಎಂದರು.



ಗ್ಯಾರಂಟಿ ಸಮಿತಿ ಅಧ್ಯಕ್ಷ ವೀರಯ್ಯ ಮಠಪತಿ ಮಾತನಾಡಿ, ಕಾಯಕ ಮತ್ತು ದಾಸೋಹದ ಮೂಲಕ ಜೀವನ ಶ್ರೇಯಸ್ಸಿಗೆ ದಾರಿ ತೋರಿದ ಮೂಲ ಪುರುಷರು ರೇಣುಕಾಚಾರ್ಯರು. ಅಹಿಂಸೆ, ಸತ್ಯ, ದಯಾ, ಕ್ಷಮಾ, ದಾನ, ಪೂಜಾ, ಜಪ ಧ್ಯಾನ ಎಂಬ ಧರ್ಮದ ದಶಸೂತ್ರಗಳನ್ನು ಬೋಧಿಸಿ ಜೀವನ ಉನ್ನತಿಗೆ ಬೆಳಕು ತೋರಿದವರು. ಸತ್ಯ ಮತ್ತು ಶಾಂತಿಯ ತಳಹದಿಯ ಮೇಲೆ ಸುಸಂಸ್ಕೃತ ಸಮಾಜ ನಿರ್ಮಿಸಲು ನಿರಂತರ ಶ್ರಮಿಸಿದ್ದಾರೆ ಎಂದರು.

ಈ ವೇಳೆ ಶಸಾಪ ತಾಲೂಕಾಧ್ಯಕ್ಷ ಎಂ.ಕೆ. ಲಮಾಣಿ, ಕ್ಷೇತ್ರ ಶಿಕ್ಷಣಾಧಿಕಾರಿ ನಾಣಕಿ ನಾಯ್ಕ, ಬಾಬಾಜಾನ ಮಕಾಂದರ ಸೇರಿ ಕಚೇರಿ ಸಿಬ್ಬಂದಿ ಇದ್ದರು.

ಸಮಾಜದ ಅಂಕುಡೊಂಕು ತಿದ್ದಲು ಜಂಗಮರ ಕೊಡುಗೆ ಅಪಾರ

◆ **ನರಗುಂದ:** ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಜಂಗಮರ ಕೊಡುಗೆ ಅಪಾರವಿದೆ. ಸಂಘಟನೆಯಿಂದ ಸಮಾಜವನ್ನು ಬಲಪಡಿಸಬಹುದು. ಪಂಚಮಸಾಲಿ ಸಮಾಜ ಹಾಗೂ ಜಂಗಮ ಸಮಾಜಗಳ ನಡುವೆ ಅವಿನಾಭಾವ ಸಂಬಂಧವಿದೆ. ಗುರುವಿನ ಸನ್ಮಾರ್ಗದಲ್ಲಿ ಜೀವನ ನಡೆಸಿದರೆ ಮುಕ್ತಿ ಕಾಣಲು ಸಾಧ್ಯವಿದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಭಾರತವು ವಿಶ್ವಕ್ಕೆ ಆದರ್ಶಪ್ರಾಯವಾಗಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಭಾನುವಾರ ಪಟ್ಟಣದ ಶ್ರೀ ಆರೂಢ ಜ್ಯೋತಿ ಭವನದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಪುರಸಭೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ರೇಣುಕಾಚಾರ್ಯ ಜಯಂತ್ಯುತ್ಸವದಲ್ಲಿ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದರು. ಸ್ವಾಮೀಜಿಗಳ ಪಾದಮುಟ್ಟಿ ನಮಸ್ಕರಿಸುವುದು ಮತ್ತು ದೇವಸ್ಥಾನಕ್ಕೆ ಹೋಗುವುದು ಕಾಟಾಚಾರಕ್ಕೆ ಆಗಬಾರದು. ಮನಸ್ಸಿನಂತೆ ಮಹಾದೇವ ಎಂಬಂತೆ ನಮ್ಮ ಆಚರಣೆಗಳು ಶುದ್ಧವಾಗಿರಬೇಕು. ಈಗಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಸಂಸ್ಕಾರ ಮುಖ್ಯವಾಗಿದೆ. ಧರ್ಮದಿಂದಲೇ ವಿಶ್ವದಲ್ಲಿ ಶಾಂತಿ ನೆಲೆಸಬೇಕಾದರೆ, ಮಾನವನು ಮೊದಲು ಧರ್ಮ ಮಾರ್ಗದಲ್ಲಿ ನಡೆಯಬೇಕು ಎಂದರು.



ಹಿರೇಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಕಲ ಸಮಾಜದ ಭಕ್ತರು ಜಂಗಮರನ್ನು ಗೌರವದಿಂದ ಕಾಣುತ್ತಿರುವಾಗ ನಮ್ಮಗಳ ಇರುವಿಕೆ ಬಹಳ ಮಹತ್ವವನ್ನು ಪಡೆದಿದೆ. ಜನತೆಗೆ ಸಂಸ್ಕಾರ ಕಲಿಸಿಕೊಡುವುದು ಅಷ್ಟೇ ಮುಖ್ಯವಾಗಿದೆ ಎಂದರು.

ಗುರುಸಿದ್ದವೀರ ಶಿವಾಚಾರ್ಯ ಸ್ವಾಮೀಜಿ, ಸಮಾಜದ ಮುಖಂಡ ನಂದೀಶ ಮಠದ ಮಾತನಾಡಿದರು. ದೀಪಾ ಗವಿಮಠ ಉಪನ್ಯಾಸ ನೀಡಿದರು. ತಹಶೀಲ್ದಾರ್ ಶ್ರೀಶೈಲ ತಳವಾರ ಮಾತನಾಡಿ, ಹಿಂದೂ ಧರ್ಮದಲ್ಲಿನ ಆಚರಣೆಗಳು ವೈಜ್ಞಾನಿಕವಾಗಿವೆ. ನಮ್ಮೆಲ್ಲರ ಬದುಕನ್ನು ರೂಪಿಸಲಿವೆ ಎಂದರು.

ರೇಣುಕಾಚಾರ್ಯರ ಭಾವಚಿತ್ರದ ಭವ್ಯವಾದ ಮೆರವಣಿಗೆಯು ಬಾಬಾಸಾಹೇಬ ಭಾವೆ ಅರಮನೆ ಆವರಣದಿಂದ ನಗರದ ಪ್ರಮುಖ ಬೀದಿಗಳಲ್ಲಿ ಆಂಜನೇಯ ಕಲಾತಂಡದ ಸಂಪ್ರದಾನಿ ಹಾಗೂ ಗೊಂಬೆ ಕುಣಿತಗಳ ವಾದ್ಯಮೇಳದೊಂದಿಗೆ ಹೊರಟು ಆರೂಢ ಜ್ಯೋತಿ ಭವನದ ವರೆಗೆ ಸಾಗಿಬಂದಿತು. ವೀರಕ್ತಮಠದ ಶಿವಕುಮಾರ ಸ್ವಾಮೀಜಿ, ಕೊಣ್ಣೂರಿನ ಚನ್ನವೀರ ಸ್ವಾಮೀಜಿ, ಬನಹಟ್ಟಿ ರುದ್ರಸ್ವಾಮಿಮಠದ ಸೊಲಬಯ್ಯ ಸ್ವಾಮೀಜಿ, ಬಿಇಒ ಎಚ್.ಎಂ. ಕಂಬಳಿ, ಉಮೇಶ ಶಿರೂಂಧಮಠ, ಚನ್ನು ಗಡ್ಡದೇವರಮಠ, ಜಗದೀಶ ಗವಿಮಠ, ನೀಲಕಂಠ ಅಲ್ಲಮಪ್ರಭುಮಠ, ಆನಂದ ವೀರಕ್ತಮಠ, ಶಂಕ್ರಯ್ಯ ಹಿರೇಮಠ, ಶಿವಕುಮಾರ ಕಾಲವಾಡಮಠ, ವಿಶ್ವನಾಥ ಹಡಗಲಿಮಠ, ಉಮೇಶ ಹಿರೇಮಠ ಇತರರಿದ್ದರು.

ಮೃಗತ್ವ ಹೋಗಿಸಿ ಮಾನವತ್ವ ಬೆಳೆಸುವ ಪುಸ್ತಕಗಳು

◆ **ಗಜೇಂದ್ರಗಡ:** ಸ್ಥಳೀಯ ಶ್ರೀ ಜಗದಂಬಾ ಸಮುದಾಯ ಭವನದಲ್ಲಿ ಭಾನುವಾರ ಸ್ಥಿತಪ್ರಜ್ಞೆ ಕೃತಿ ಲೋಕಾರ್ಪಣೆ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಸಂಭ್ರಮದ ಉದ್ಘಾಟನೆಯನ್ನು ವಿಶ್ರಾಂತ ಉಪನ್ಯಾಸಕ ಕೆ. ಎಸ್. ಗಾರವಾಡಹಿರೇಮಠ್ ನೆರವೇರಿಸಿದರು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎ. ಬಳಿಗೇರ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿ, ಪುಸ್ತಕ ಸಂಸ್ಕೃತಿಯ ಸಂವರ್ಧನೆಗೆ ಪೆಟ್ಟು ಬೀಳುತ್ತಿರುವ ಸಮಯದಲ್ಲಿ ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಉತ್ತೇಜಿಸಬೇಕು ಹಾಗೂ ಪುಸ್ತಕ ಓದುವವರ ಸಂಖ್ಯೆಯನ್ನು ಹೆಚ್ಚಿಸಿ ಪ್ರೋತ್ಸಾಹಿಸಬೇಕು ಎಂಬ ಸದುದ್ದೇಶದಿಂದ 1988-89 ನ ಸಾಲಿನಲ್ಲಿ ಸ್ಥಳೀಯ ಭೂಮರಡ್ಡಿ ಹೈಸ್ಕೂಲಿನಲ್ಲಿ ಅಧ್ಯಯನ ಮಾಡಿದ ಗೆಳೆಯರ ಬಳಗ ಸ್ಥಿತಪ್ರಜ್ಞೆ ಎಂಬ ವಿಶಿಷ್ಟ ಶಿರೋನಾಮೆಯ ಸಂಪಾದಿತ ಕೃತಿ ಗಜೇಂದ್ರಗಡದ ಇತಿಹಾಸದಲ್ಲಿ ಒಂದು ಆಶಾದಾಯಕ ಬೆಳವಣಿಗೆ ಆಗಿದೆ.



ಪುಸ್ತಕಗಳು ಮೃಗತ್ವದಿಂದ ಮಾನವತ್ವದ ಕಡೆಗೆ ನಮ್ಮನ್ನು ಕರೆದೊಯ್ಯುತ್ತವೆ ಎಂದರು.

ಸ್ನೇಹ ಸಮ್ಮಿಲನದ ಅಧ್ಯಕ್ಷ ಬಸವರಾಜ ಕೊಟಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮುಂದಿನ ವರ್ಷ ವಿನೂತನ ಕಾರ್ಯಕ್ರಮ ಮಾಡುವ ಭರವಸೆ ನೀಡಿದರು. ಕೃತಿ ಸಂಪಾದಕರಾದ ಸಾಹಿತಿ ಎಂ. ಎಸ್. ಮಕಾನದಾರ ಹಾಗೂ ಕಮಲಾ ಚೆನ್ನಿ, ಪ್ರಕಾಶಕಿ ಹೊಸಪೇಟೆಯ ವಿಜಯನಗರ ಕಾಲೇಜು ಉಪನ್ಯಾಸಕಿ ಶಾಲಿನಿ ತೈಲಂಗ್, ಬಾಗಲಕೋಟೆಯ ಬ. ವಿ. ವ. ಸಂಘದ ಪಾಲಿಟೆಕ್ನಿಕ್ ಕಾಲೇಜು ಪ್ರಾಧ್ಯಾಪಕ ರಾಜಶೇಖರ್ ಪಟ್ಟೇದ, ಶಿವಲೀಲಾ ವಾಣಿ, ಪಿ. ಎನ್. ಸಾಲಗಾವಕರ್ ಮಾತನಾಡಿದರು. ಸಂದೀಪಾ ಬಾಗಮಾರ, ಎ.ಜಿ. ಬೂದಿಹಾಳ, ಅಬ್ಬಾಸಲಿ ನಿಶಾನದಾರ, ಎಚ್. ಕೆ. ಕೆಂಚಿ, ಹಂಪಮ್ಮಾ ಕುಷ್ಟಗಿ, ಅಶೋಕ ಚಿಲಕಾ ಉಪಸ್ಥಿತರಿದ್ದರು. ಜೆ.ಇ.ಇ. ಪರೀಕ್ಷೆಯ ಮೊದಲ ಸುತ್ತಿನಲ್ಲಿ 99.92 ಪ್ರತಿಶತ ಪಡೆದ ಅದಿತಿ ಸವಣೂರ ಅವರಿಗೆ ವಿಶೇಷ ಪುರಸ್ಕಾರ ನೀಡಿ ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗಜೇಂದ್ರಗಡದ ಕೀರ್ತಿ ಹೆಚ್ಚಿಸಿದ ಶಿವಕುಮಾರ ಎಸ್. ಬಂದಿಹಾಳ (ವಿ.ಟಿ.ರಾಯಬಾಗಿ ಪ್ರೌಢಶಾಲೆ), ವಿನಾಯಕ ಬಿ. ಕರಾಡೆ (ಜ.ತೋಂಟದಾರ್ಯ ಪ್ರೌಢಶಾಲೆ), ಗಣೇಶ ಎನ್. ಪವಾರ. (ಸರ್ಕಾರಿ ಬಾಲಕರ ಪ್ರೌಢಶಾಲೆ), ಸೌಮ್ಯ ಎಸ್. ಹಂಚಾಟೆ (ಸರ್ಕಾರಿ ಬಾಲಕಿಯರ ಪ್ರೌಢಶಾಲೆ), ಜೀನತ್ ಎಂ. ಕೊಪ್ಪಳ (ಸರ್ಕಾರಿ ಉರ್ದು ಪ್ರೌಢಶಾಲೆ), ಪೂಜಾ ಎಲ್. ರೇಣಿ (ಎಸ್. ಎಂ. ಭೂಮರಡ್ಡಿ ಪ್ರೌಢಶಾಲೆ) ಅವರಿಗೆ ಗೌರವ ಪುರಸ್ಕಾರ ನಗದು ನೀಡಿ ಸನ್ಮಾನಿಸಲಾಯಿತು. ನಂತರ ನಡೆದ ಸಾಂಸ್ಕೃತಿಕ ಸಂಭ್ರಮದಲ್ಲಿ ಜಾನಪದ ಹಾಡು ಮಿಮಿಕ್ರಿ ಚುಟುಕುಗಳನ್ನು ಸಹಪಾಠಿಗಳು ಪ್ರಸ್ತುತಪಡಿಸಿದರು.

ಕಿರುಸುದ್ದಿ

ಚೆಸ್: ಗುಕೇಶ್ ಪಂದ್ಯ ಡ್ರಾ



ಹೊಸದಿಲ್ಲಿ: ಪ್ರಾಗ್ ಅಂತಾರಾಷ್ಟ್ರೀಯ ಚೆಸ್ ಫೆಸ್ಟಿವಲ್ ನಲ್ಲಿ ಡೆವಿಡ್ ನಾವರಾ ಅವರೊಂದಿಗೆ ಡ್ರಾ ಸಾಧಿಸಿರುವ ನಂತರ ವಿಶ್ವಚಾಂಪಿಯನ್ ಡಿ. ಗುಕೇಶ್ ತಮ್ಮ ಗೆಲುವಿನ ಹುಡುಕಾಟ ಮುಂದುವರಿಸಿದ್ದಾರೆ. ನಾಲ್ಕನೇ ಸುತ್ತಿನ ಪಂದ್ಯಗಳ ನಂತರ ಭಾರತ ಸಂಭ್ರಮಿಸುವ ಫಲಿತಾಂಶ ಇನ್ನೂ ಮೂಡಿಬಂದಿಲ್ಲ, ಅರ್ವಿಂದ್ ಚಿತಂಬರಂ ತಮ್ಮ ಪಂದ್ಯದಲ್ಲಿ ಸೋಲೊಪ್ಪಿಕೊಂಡಿದ್ದಾರೆ.

ಭಾನುವಾರದ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಡೆವಿಡ್ ನಾವಾರಾ ಅವರನ್ನು ಎದುರಿಸಿದ್ದ ಗುಕೇಶ್ ಮೊದಲಿನಿಂದಲೂ ಸಮತೋಲಿತ ಪ್ರದರ್ಶನ ನೀಡಿದ್ದ ಗುಕೇಶ್ ಗೆಲುವಿನ ನಿರೀಕ್ಷೆಯಲ್ಲಿದ್ದರು. ಮಧ್ಯಮ ಆಟದಲ್ಲಿ ತಮ್ಮ ರಾಕ್‌ನೊಂದಿಗೆ ಎದುರಾಳಿಗೆ ವಿವಿಧ ಸವಾಲುಗಳನ್ನು ನೀಡಿದ ಅವರು, ಗೆಲುವನಂಚೆಗೇರುವ ಹೊತ್ತಿಗೆ ಕಂಬ್ಯಾಕ್ ಮಾಡಿದ ಡೆವಿಡ್ ಗುಕೇಶ್‌ಗೂ ಒತ್ತಡ ಹೇರಿದರು. ಫಲಿತಾಂಶಕ್ಕಾಗಿ ಉಭಯ ಗ್ರ್ಯಾಂಡ್ ಮಾಸ್ಟರ್‌ಗಳು ಅತ್ಯುತ್ತಮ ಪ್ರದರ್ಶನ ನೀಡಿದ ನಂತರ ಪಂದ್ಯವನ್ನು ಡ್ರಾ ಎಂದು ಘೋಷಿಸಲು 72 ನಡೆಗಳ ತನಕ ಪಂದ್ಯ ನಡೆಯಿತು. ಇನ್ನು ಅರ್ವಿಂದ್ ಚಿತಂಬರಂ ಜರ್ಮನಿಯ ಪ್ರತಿಭಾನ್ವಿತ ಗ್ರ್ಯಾಂಡ್‌ಮಾಸ್ಟರ್ ವೈಕೆಂಟ್ ಕೀಮರ್ ಅವರೊಂದಿಗೆ ಸೋತರು. ಆರಂಭದಲ್ಲಿ ತನ್ನ ಚಾಣಾಕ್ಷತೆಯಿಂದ ಭಾರತ ಗ್ರ್ಯಾಂಡ್‌ಮಾಸ್ಟರ್ ಮೇಲೆ ಒತ್ತಡ ಹೇರಿದ ಕೀಮರ್ ಕೊನೆಯತನಕ ತಮ್ಮ ಹಿಡಿತ ಮುಂದುವರಿಸಿದರು. ಪಂದ್ಯ ಗೆದ್ದು ಪ್ರಶಸ್ತಿ ಸ್ಥಾನಕ್ಕಾಗಿ ತಮ್ಮ ಸ್ಪರ್ಧೆಯನ್ನು ಇನ್ನಷ್ಟು ಗಟ್ಟಿಗೊಳಿಸಿದರು.

ಚಾಲೆಂಜರ್ಸ್ ವಿಭಾಗ: ಇನ್ನು ಚಾಲೆಂಜರ್ಸ್ ವಿಭಾಗದಲ್ಲಿ ವಿಶ್ವಕಪ್ ವಿಜೇತೆ, ಭಾರತೀಯ ಗ್ರ್ಯಾಂಡ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಅಗ್ರಸ್ಥಾನಿ ವ್ಯಾಂಕ್ಲಾವ್ ಫಿನೆಕ್ ಅವರೊಂದಿಗೆ ಗೆದ್ದರು. ಸೂರ್ಯ ಶೇಖರ್ ಸ್ಟಿಪನ್ ಹರ್ಬೆಕ್ ಅವರೊಂದಿಗೆ ಡ್ರಾ ಮಾಡಿಕೊಂಡರು. ದಿವ್ಯಾ 1.5 ಅಂಕಗಳನ್ನು ಹೊಂದಿದ್ದಾರೆ. ಸೂರ್ಯ ಒಟ್ಟು ಒಂದು ಅಂಕ ಗಳಿಸಿದ್ದಾರೆ.

ಮಹಾ ಓಪನ್: ಫೆಡರಿಕೊ ಚಾಂಪಿಯನ್

ಮುಂಬೈ: ಆರನೇ ಶ್ರೇಯಾಂಕಿತ ಇಟಲಿಯ ಫೆಡರಿಕೊ ಸಿನಾ ಐದು ಪಂದ್ಯ ಅಂಕಗಳನ್ನು ಉಳಿಸಿಕೊಂಡು ಬ್ರಿಟನ್‌ನ ಫಾಕ್ಸ್ ವಿರುದ್ಧ ರೋಚಕ ಮೂರು ಸೆಟ್‌ಗಳ ಅಂತಿಮ ಹಣಾಹಣಿಯಲ್ಲಿ ಜಯ ಸಾಧಿಸಿ ಮಹಾ ಓಪನ್ ಪ್ರಶಸ್ತಿಯನ್ನು ಕಬಳಿಸಿದರು. ಶಿವ ಛತ್ರಪತಿ ಕ್ರೀಡಾ ಸಂಕೂಲ, ಮಳೂಂಜೆ ಬಾಳೆವಾಡಿ ಕ್ರೀಡಾಂಗಣದಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ಚಿನಾ 6-3, 5-7, 7-6 (1) ಅಂತರದಲ್ಲಿ ಗೆದ್ದು ತಮ್ಮ ಮೊದಲ ಚಾಲೆಂಜರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

2 ಗಂಟೆ 29 ನಿಮಿಷಗಳ ಕಾಲ ನಡೆದ ಕಠಿಣ ಪೈಪೋಟಿಯಲ್ಲಿ ಚಿನಾ ಮೊದಲ ಸೆಟ್‌ನ್ನು 6-3 ಅಂತರದಲ್ಲಿ ಗೆದ್ದು ಆತ್ಮವಿಶ್ವಾಸದಿಂದ ಆರಂಭಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಗಿಲ್ ತಿರುಗೇಟು ನೀಡಿ 5-7 ಅಂತರದಲ್ಲಿ ಜಯಿಸಿ ಪಂದ್ಯವನ್ನು ಸಮಬಲಕ್ಕೆ ತಂದರು.ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಇಬ್ಬರೂ ಆಟಗಾರರು ಸಮಾನ ಮಟ್ಟದ ಪೈಪೋಟಿ ನೀಡಿದರು. 5-6 ಅಂಕದಲ್ಲಿ ಚಿನಾ ತಮ್ಮ ಸರ್ವ್‌ನಲ್ಲಿ ಐದು ಬಾರಿ ಸೋಲಿನ ಅಂಚಿನಲ್ಲಿದ್ದರೂ ಪ್ರತಿಯೊಂದು ಸಂದರ್ಭದಲ್ಲೂ ಧೈರ್ಯದಿಂದ ಪಾರಾಗಿ ಸಮಬಲ ಸಾಧಿಸಿದರು. ಬಳಿಕ ನಡೆದ ಅಂತಿಮ ಸಮಪಾಲು ನಿರ್ಧಾರದಲ್ಲಿ 18 ವರ್ಷದ ಚಿನಾ 7-1 ಅಂತರದಲ್ಲಿ ಮೇಲುಗೈ ಸಾಧಿಸಿ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡರು.



ಭಾನುವಾರ ಮುಕ್ತಾಯಗೊಂಡಿರುವ ಕರ್ನಾಟಕ ಶೂಟಿಂಗ್ ಲೀಗ್‌ನಲ್ಲಿ ಟ್ರಿಗರ್ ಟ್ಯಾಕ್ಟಿಶಿಯನ್ಸ್ ತಂಡ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಭಾನುವಾರದ ಫೈನಲ್‌ನಲ್ಲಿ ಬೆಂಗಳೂರು, ಕ್ಯಾಲಿಬರ್ ಕ್ಯಾಪಿಟಲ್ಸ್ ಕೂಡ ಉತ್ತಮ ಪ್ರದರ್ಶನ ನೀಡಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದುಕೊಂಡವು.

ವೆಸ್ಟ್ ಇಂಡೀಸ್ ಹೊರನೂಕಿದ ಸಂಜು | ಉಪಾಂತ್ಯದಲ್ಲಿ ಸೂರ್ಯ ಪಡೆಗೆ ಇಂಗ್ಲೆಂಡ್ ಸವಾಲು

ಸೆಮಿಗೆ ಕೊಂಡೊಯ್ದ ಸಂಜು ಸ್ಯಾಮ್ಸನ್

ಕೋಲ್ಕತ್ತಾ: ಕಳಪೆ ಲಯದಿಂದಾಗಿ ಟೀಕೆ ಎದುರಿಸಿದ್ದ ಸಂಜು ಸ್ಯಾಮ್ಸನ್ ಭಾರತೀಯರ ಪಾಲಿಗೆ ಸೆಮಿಗೆ ಕೊಂಡೊಯ್ದ ಹೀರೋ ಆಗಿ ಮೆರೆದರು. ವಿಂಡೀಸ್ ವಿರುದ್ಧದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಗೆಲ್ಲಿಸಿದ ಅವರು, ವಿಂಡೀಸ್ ತಂಡಕ್ಕೆ ವಿಶ್ವಕಪ್‌ನಿಂದ ಹೋರನೂಕಿದ್ದು, ಭಾರತ ಇಂಗ್ಲೆಂಡ್‌ನೊಂದಿಗೆ ಸೆಮಿಫೈನಲ್ ಆಡುವುದಕ್ಕೆ ಸಜ್ಜಾಗಿದೆ.

ಭಾನುವಾರದ ಪಂದ್ಯದಲ್ಲಿ ಭಾರತ ವಿಶ್ವಕಪ್ ಇತಿಹಾಸದಲ್ಲಿ ತನ್ನ ಅತ್ಯಧಿಕ ಗುರಿ ಮುಟ್ಟಿದೆ. ಕೊಹ್ಲಿ ಇಲ್ಲದೆ ಮೊದಲ ಬಾರಿಗೆ 150 ರನ್‌ಗೂ ಹೆಚ್ಚು ಗುರಿ ಮುಟ್ಟಿದೆ. ಲೀಲಾಜಾಲವಾಗಿ ಸೆಮಿಫೈನಲ್‌ಗೇರಿದೆ. ಭಾನುವಾರದ ಕ್ವಾರ್ಟರ್ ಫೈನಲ್ ರೋಚಕ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿ ದೊಡ್ಡ ಗುರಿ ನೀಡಿತು. ಗುರಿ ಬೆನ್ನತ್ತಿದ ಭಾರತ 19.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಪಂದ್ಯ ಗೆದ್ದುಕೊಂಡಿತು. ಸಂಜು ಸ್ಯಾಮ್ಸನ್ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿದರು. ಕೊನೆಯವರೆಗೂ ಆಡಿ ಪಂದ್ಯ ಗೆಲ್ಲಿಸಿದ ಹೀರೋ ಎನಿಸಿದರು. ವಿಂಡೀಸ್ ಪಾಲಿಗೆ ದುಸ್ವಪ್ನವಾಗಿದ್ದರು. ಪಂದ್ಯ ಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಜಸ್‌ಪ್ರೀತ್ ಬೂಮ್ರಾ ಪಂದ್ಯದ ಬೆಸ್ಟ್ ಬೌಲರ್ ಎನಿಸಿಕೊಂಡರು.

ಭಾರತಕ್ಕೂ ಆರಂಭಿಕ ಆಘಾತ: ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆದರೂ ಭಾರತಕ್ಕೆ ಆರಂಭಿಕ ಓವರ್‌ಗಳಲ್ಲೇ ಅಭಿಷೇಕ್ ವಿಕೆಟ್ ಆಘಾತ ಎದುರಾಯಿತು. 10 ರನ್ ಗಳಿಸಿದ್ದಾಗ ಅಭಿಷೇಕ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಇಶಾನ್ ಕಿಶನ್ ಕೂಡ ಹೆಚ್ಚು ಹೊತ್ತು ನಿಲ್ಲದೆ ವಿಕೆಟ್ ಒಪ್ಪಿಸಿದರು. ಭಾರತಕ್ಕೆ ಆತಂಕ, ಒತ್ತಡ ಶುರುವಾಯಿತು. ಸೂರ್ಯ ಮತ್ತು ಸಂಜು ಸ್ಯಾಮ್ಸನ್ ಭಾರತ ಅಭಿಮಾನಿಗಳ ನಿರೀಕ್ಷೆ, ಆಸೆ ಮತ್ತು ಭರವಸೆ ಹೊತ್ತಿಕೊಂಡು, ಕೊಂಚ ಹೊತ್ತು ನಿರಾಳ ನೀಡಿದರು. ಅಲ್ಲಲ್ಲಿ ಬೌಂಡರಿಗಳನ್ನು ಬಾರಿಸುತ್ತಾ ಸಿಂಗಲ್‌ಗಳ ಮೂಲಕ ಪಂದ್ಯವನ್ನು ಕಸಿದುಕೊಳ್ಳತೊಡಗಿದರು ಸಂಜು, ಸೂರ್ಯ.

ಸಂಜು ಆಡಿದ್ದೇ ಆಟ: ಇಷ್ಟು ದಿನ ಹಿನ್ನಡೆ ಅನುಭವಿಸಿದ್ದ ಸಂಜು ಸ್ಯಾಮ್ಸನ್ ಈ ಪಂದ್ಯದಲ್ಲಿ ಭಾರತೀಯರ ಪಾಲಿಗೆ ಆಶಾಕಿರಣವಾಗಿದ್ದರು. 26 ಬಾಲ್‌ಗಳಲ್ಲಿ ಅರ್ಧಶತಕ ಪೂರೈಸಿಕೊಂಡ ಅವರು, ಟಿ20 ವಿಶ್ವಕಪ್‌ನಲ್ಲಿ ತಮ್ಮ ಮೊದಲನೇ ಶತಕ ಬಾರಿಸಿದರು. ಸೂರ್ಯ 18 ರನ್‌ಗೆ ಆಟ ನಿಲ್ಲಿಸಿದರು. ತಿಲಕ್ ವರ್ಮಾ ಕೂಡ ಸಂಜು ಸ್ಯಾಮ್ಸನ್ ಅವರೊಂದಿಗೆ ಜತೆಗೂಡಿದರು. ವಿಂಡೀಸ್ ಕಡೆಯಿಂದ ಪಂದ್ಯ ಕಸಿದುಕೊಂಡ ಈ ಜೋಡಿ 42 ರನ್‌ಗಳ ಜೊತೆಯಾಟ ನಿರ್ಮಿಸಿತು. ಪಾಂಡ್ಯ 17, ದುಬೆ 8★ ರನ್ ಗಳಿಸಿದರು. ಸಂಜು ಸ್ಯಾಮ್ಸನ್ ಅಜೇಯ 97 ರನ್ ಬಾರಿಸಿದರು.



ಭಾರತದ ಅತಿ ದೊಡ್ಡ ಚೇಸ್
196 ರನ್ ಗುರಿ ಬೆನ್ನತ್ತಿದ ಭಾರತ ವಿಶ್ವಕಪ್‌ನಲ್ಲಿ ತನ್ನ ಅತಿ ಹೆಚ್ಚು ರನ್ ಪೇರಿಸಿದ ದಾಖಲೆಯೊಂದನ್ನು ಮಾಡಿತು.

ಚೇಸ್-ಹೋಪ್ ಆಸರೆ

ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್‌ಗೆ ನಿಧಾನಗತಿ ಆರಂಭ ಸಿಕ್ಕಿತು. ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಬೇಕೆಂಬ ಶೈ ಹೋಪ್ ಅವರ ಯೋಜನೆ ವಿಫಲವಾಯಿತು. ಹಾರ್ದಿಕ್ ಪಾಂಡ್ಯ ಮತ್ತು ಅರ್ಷದೀಪ್ ಸಿಂಗ್ ಪ್ರಖರ ದಾಳಿ ಸಂಘಟಿಸಿದರು. ನಂತರ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ಚೇಸ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಆರಂಭದಲ್ಲಿ ಉತ್ತಮ ಬೌಲಿಂಗ್ ಮಾಡಿದ್ದರೂ ಭಾರತ ಮೊದಲ ವಿಕೆಟ್ ಪಡೆದುಕೊಳ್ಳು ಹೊತ್ತಿಗಾಗಲೇ 68 ರನ್ ದಂಡಿಸಿಕೊಂಡಿತು. 8.5 ಓವರ್‌ಗಳವರೆಗೆ ಬೌಲಿಂಗ್ ಮಾಡಬೇಕಾಯಿತು. ಹೋಪ್ ವಿಕೆಟ್ ಒಪ್ಪಿಸಿದ ನಂತರ ಹೆಟ್ಮೇರ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಅವರಿಷ್ಟು 27 ರನ್ ಜೋಡಿಸುವಷ್ಟರಲ್ಲಿ ಆರಂಭಿಕ ಚೇಸ್ 40 ರನ್‌ಗಳಿಸಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದರು. 11 ಓವರ್‌ಗಳಲ್ಲಿ 100ರನ್ ದಾಟಿದ್ದ ವಿಂಡೀಸ್ ದೊಡ್ಡ ಮೊತ್ತ ದಾಖಲಿಸುವತ್ತ ಸಾಗಿತ್ತು.

ಬೂಮ್ರಾ ಸ್ಟ್ರೈಕ್

ಅಷ್ಟೊತ್ತಿಗಾಗಲೇ ಬೌಲಿಂಗ್‌ಗೆ ಬಂದ ಬೂಮ್ರಾ ಸರಸರನೇ ಎರಡು ವಿಕೆಟ್ ಪಡೆದು ಸಂಭ್ರಮಿಸಿ ಬಿಟ್ಟರು. ವಿಂಡೀಸ್ ವೇಗಕ್ಕೆ ತಡೆಯೊಡ್ಡಿದರು. ಇಬ್ಬರು ಬಲಿಷ್ಠ ಬ್ಯಾಟಿಗರ ವಿಕೆಟ್ ಪಡೆದು ಬಲವಾದ ಪೆಟ್ಟು ನೀಡಿಬಿಟ್ಟರು. 14ನೇ ಓವರ್‌ನಲ್ಲಿ ರುದರ್‌ಫೋರ್ಡ್ ವಿಕೆಟ್ ಬಿದ್ದ ನಂತರ ವಿಂಡೀಸ್ ಭಾರೀ ಹಿನ್ನಡೆ ಅನುಭವಿಸಿದಂತ್ತಿತ್ತು. ಆದರೆ ಈ ಹಂತದಲ್ಲಿ ಬ್ಯಾಟಿಂಗ್‌ಗಿಳಿದ ಹೋಲ್ಡರ್ ಮತ್ತು ಜೇಸನ್ ಹೋಲ್ಡರ್ ಎಲ್ಲಾ ಲೆಕ್ಕಾಚಾರಕ್ಕೆ ಬ್ರೇಕ್ ಹಾಕಿದರು. ಭಾರತ ತಂಡದ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದ ಈ ಜೋಡಿ, ಕೊನೆಯ 6 ಓವರ್‌ಗಳಲ್ಲಿ 76 ರನ್ ಜೋಡಿಸಿತು. ಮತ ಹಿಗ್ಗಿಸಿತು, ದೊಡ್ಡ ಗುರಿ ನೀಡುವುದಕ್ಕೆ ಆಸರೆಯಾಯಿತು. ಪೋವೆಲ್ ಔಟಾಗದೆ 34, ಹೋಲ್ಡರ್ 37 ರನ್‌ಗಳಿಸಿದರು. ಭಾರತ ಪರ ಬೂಮ್ರಾ 2 ವಿಕೆಟ್ ಕಿತ್ತರು.

ಸಂಕ್ಷಿಪ್ತ ಸ್ಕೋರ್

ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 195/4: ಚೇಸ್ 40, ಹೋಲ್ಡರ್ 37; ಬೂಮ್ರಾ 36/2
ಭಾರತ 19.2 ಓವರ್‌ಗಳಲ್ಲಿ 199/5: ಸ್ಯಾಮ್ಸನ್ 97★, ತಿಲಕ್ 27; ಜೋಸೆಫ್ 42/2

ದ.ಆಫ್ರಿಕಾಗೆ ಭರ್ಜರಿ ಗೆಲುವು

ಔಪಚಾರಿಕ ಪಂದ್ಯದಲ್ಲಿ ದ.ಆಫ್ರಿಕಾ ಜಿಂಬಾಬ್ವೆ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು. ಜಿಂಬಾಬ್ವೆ ತಂಡದ ನಾಯಕ ಸಿಕಂದರ್ ರಜಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಅವರಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ಸಿಕ್ಕರೂ ಪಂದ್ಯ ಗೆದ್ದ ಸಂಭ್ರಮಾಚರಣೆ ಸಿಗಲೇ ಇಲ್ಲ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಗುರಿ ಬೆನ್ನತ್ತಿದ ದ.ಆಫ್ರಿಕಾ 17.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 154 ರನ್‌ಗಳಿಸಿತು. ತಂಡದ ಪರ ಬ್ರೇವಿಸ್ 42, ಮಿಲ್ಲರ್ 22, ರ್ಯಾನ್ 32 ಮತ್ತು ಲಿಂಡೆ 30 ರನ್ ಬಾರಿಸಿದರು.

ಹಾಕಿ: ವಿಶ್ವಕಪ್ ಅರ್ಹತಾ ಸುತ್ತಿಗೆ ಭಾರತ ತಂಡ

ಹೊಸದಿಲ್ಲಿ: ಭಾರತದ ರಾಷ್ಟ್ರೀಯ ಹಾಕಿ ಸಂಸ್ಥೆ ಮಹಿಳೆಯರ ಎಫ್‌ಐಎಚ್ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳಿಗೆ ತಂಡ ಪ್ರಕಟಿಸಿದೆ. ಎಫ್‌ಐಎಚ್‌ನಲ್ಲಿ ಹಿನ್ನಡೆ ಅನುಭವಿಸಿರುವ ನಂತರ ವಿಶ್ವಕಪ್ ಅರ್ಹತೆ ಪಡೆಯುವಲ್ಲಿ ವಿಫಲವಾಗಿರುವ ಭಾರತ ಮಹಿಳೆಯರ ತಂಡಕ್ಕೆ ಇದು ಕೊನೆಯ ಅವಕಾಶವಾಗಿದೆ. ಮಾರ್ಚ್ 8ರಿಂದ ಈ ಪಂದ್ಯಗಳು ಶುರುವಾಗಲಿವೆ. ಮಹಿಳಾ ಹಾಕಿ ತಂಡಕ್ಕೆ ಕೋಚ್ ಆಗಿರುವ ಜೋರ್ಡ್ ಮರಿಜ್ನೆ ಅವರ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಭಾರತ ಕಣಕ್ಕಿಳಿಯಲಿದೆ. ಈ ಕೂಟಕ್ಕೆ ಭಾರತವೇ ಆತಿಥ್ಯ ನೀಡಲಿದ್ದು, ಹೈದರಾಬಾದ್‌ನಲ್ಲಿ ಪಂದ್ಯಗಳು ನಡೆಯಲಿವೆ. ಭಾರತದ ಮಿಡಲ್‌ಫೀಲ್ಡರ್ ಸಲಿಮಾ ಟೆಟೆ ಅವರು ಪಂದ್ಯಾವಳಿಗೆ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ವಿಶ್ವಕಪ್ ಅರ್ಹತಾ ಸುತ್ತಿನ ವಿಚಾರವಲ್ಲದೆ, ಇದೇ ವರ್ಷ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ಈ ಪಂದ್ಯಾವಳಿ ಮುಖ್ಯ ಪಾತ್ರ ವಹಿಸಲಿದೆ. ಆತಿಥ್ಯ ಭಾರತ, ಇಟಲಿ, ಇಂಗ್ಲೆಂಡ್, ಸ್ಕಾಟ್ಲೆಂಡ್, ಕೋರಿಯಾ, ಉರುಗ್ವೆ, ವೇಲ್ಸ್ ಮತ್ತು ಆಸ್ಟ್ರೀಯಾ ತಂಡಗಳು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಭಾಗವಹಿಸಲಿವೆ.

ಭಾರತ ತಂಡ

ಗೋಲ್‌ಕೀಪರ್‌ಗಳು: ಬನ್ಸಾರಿ ಸೋಲಂಕಿ, ಬಿಚು ದೇವಿ ಖರಿಬಮ್.
ಡಿಫೆಂಡರ್ಸ್: ಸುಶೀಲಾ ಚಾನು, ನಿಕ್ಕಿ ಪ್ರಧಾನ್, ಮನಿಶಾ ಚೌಹಾಣ್, ಉದಿತಾ, ಇಶಿಕಾ ಚೌಧರಿ.
ಮಿಡ್‌ಫೀಲ್ಡರ್‌ಗಳು: ನೇಹಾ, ಸಲಿಮಾ ಟೆಟೆ (ಸಿ), ಸುನೆಲಿತಾ ಟೊಪ್ಪೊ, ಸಾಕ್ಷಿ ರಾಣಾ, ವೈಷ್ಣವಿ ಫಾಲ್ಕೆ, ರುತಾಜಾ ಪಿಸಲ್, ದೀಪಿಕಾ ಸೊರೆಂಗ್
ಫಾರ್ವರ್ಡ್‌ಗಳು: ನವನೀತ್ ಕೌರ್, ಇಶಿಕಾ, ಲಾಲ್ರೆಮ್ಸಿಯಾಮಿ, ಬ್ಯೂಟಿ ಡುಂಗ್‌ಡುಂಗ್, ಬಲ್ಜೀತ್ ಕೌರ್, ಅಣ್ಣು.

ಶ್ರೀಲಂಕಾ ಪ್ರಧಾನ ಕೋಚ್ ರಾಜೀನಾಮೆ

ಕೊಲಂಬೋ: ಜಂಟಿ ಆತಿಥ್ಯ ಶ್ರೀಲಂಕಾ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿ ಸೂಪರ್-8 ಹಂತದಲ್ಲೇ ಹೊರಬಿದ್ದ ನಂತರ ಪ್ರಧಾನ ತರಬೇತುದಾರ, ಮಾಜಿ ಕ್ರಿಕೆಟಿಗ ತಮ್ಮ ಕೋಚ್ ಹುದ್ದೆಯಿಂದ ಕೆಳಗಳಿದರು.



ವಿಶ್ವಕಪ್‌ಗೆ ಭಾರತದೊಂದಿಗೆ ಶ್ರೀಲಂಕಾ ಕೂಡ ಆತಿಥ್ಯ ವಹಿಸಿತ್ತು. ತನ್ನೆಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲೇ ಆಡಿರುವ ತಂಡ ಲೀಗ್ ಹಂತದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ದುಸನ್ ಶಣಕ ಪಡೆ ಸೂಪರ್ 8ರ ಹಂತದಲ್ಲಿ ಮೂರೂ ಪಂದ್ಯಗಳನ್ನು ಸೋತಿದೆ. ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳೊಂದಿಗೆ ನಡೆದಿರುವ ಪಂದ್ಯಗಳಲ್ಲಿ ಸೋತು ಹೊರನಡೆದಿದೆ. ಈ ಬೆನ್ನಲ್ಲೇ ಸನತ್ ಜಯಸೂರ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ವಿಚಾರದ ಬಗ್ಗೆ ಮಾತನಾಡಿರುವ ಅವರು, (ಕೋಚ್ ಸ್ಥಾನವನ್ನು ಬೇರೆಯವರಿಗೆ ನೀಡುವ ಸಮಯ ಬಂದಿದೆ. ಇಂಗ್ಲೆಂಡ್ ವಿರುದ್ಧ ನಡೆದಿದ್ದ ಕೂಟದಲ್ಲೇ ನಾನು ಕೋಚ್ ಆಗಿ ಹೆಚ್ಚು ದಿವಸದ ವರೆಗೆ ಇರಲಾರೆ ಎಂದು ಹೇಳಿದ್ದೆ. ವಿಶ್ವಕಪ್ ಮುಗಿದ ನಂತರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕೆಂದು ನಾನು ತೀರ್ಮಾನ ಮಾಡಿದ್ದೆ ಎಂದು ಹೇಳಿದರು. ಅಸಲಿಯತ್ತಾಗಿ ಅವರ ಅವಧಿ ವರ್ಷದ ಜೂನ್ ವರೆಗೂ ಇತ್ತು. ಆದರೆ ವಿಶ್ವಕಪ್ ಸೋಲಿನಿಂದ ಬೇಸರಗೊಂಡು ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಸಹಭಾಗಿತ್ವದೊಂದಿಗೆ ಬೆಂಬಲ ನೀಡುವುದಾಗಿ ಆರ್‌ಸಿಬಿ ಕೇರ್ಸ್ ಘೋಷಣೆ

ಹಾಕಿ, ಅಥ್ಲೆಟಿಕ್ಸ್, ಶೂಟಿಂಗ್ ವೃದ್ಧಿಗೆ ಆರ್‌ಸಿಬಿ ಸನ್ನದ್ಧ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಾಮಾಜಿಕ ಜವಾಬ್ದಾರಿ ಉಪಕ್ರಮವಾದ ಆರ್‌ಸಿಬಿ ಕೇರ್ಸ್ ತನ್ನ ಕ್ರೀಡಾ ಅಭಿವೃದ್ಧಿ ದೃಷ್ಟಿಕೋನವನ್ನು ಮತ್ತಷ್ಟು ವಿಸ್ತರಿಸಿದೆ. ಈಗಾಗಲೇ ಕ್ರಿಕೆಟ್ ಮೂಲಕ ಸಾಮಾಜಿಕ ಬದಲಾವಣೆಗೆ ಕೈಜೋಡಿಸಿದ್ದ ಈ ಕಾರ್ಯಕ್ರಮ, ಇದೀಗ ಹಾಕಿ, ಅಥ್ಲೆಟಿಕ್ಸ್ ಹಾಗೂ ಶೂಟಿಂಗ್ ಕ್ರೀಡೆಗಳತ್ತ ಗಮನಹರಿಸಿದೆ. ಬೆಂಗಳೂರುದಲ್ಲಿ ನಡೆದ ಘೋಷಣೆಯಲ್ಲಿ ಆರ್‌ಸಿಬಿ ಕೇರ್ಸ್, ಯಸ್ ಫಾರ್ ಹಾಕಿ ಮತ್ತು ಅಶ್ವಿನಿ ಸ್ಪೋರ್ಟ್ಸ್ ಫೌಂಡೇಶನ್ ಜೊತೆ ಕೈಜೋಡಿಸಿರುವುದಾಗಿ ತಿಳಿಸಿದೆ. ಈ ಉಪಕ್ರಮವು ಗೋ ಸ್ಪೋರ್ಟ್ಸ್ ಸಹಭಾಗಿತ್ವದಲ್ಲಿ ಜಾರಿಗೆ ಬರಲಿದೆ.

ಯಾವ್ಯಾವ ಬೆಂಬಲ?: ಹಾಕಿ ಕ್ಷೇತ್ರದಲ್ಲಿ, ಯಸ್ ಫಾರ್ ಹಾಕಿ ಮೂಲಕ ಕರ್ನಾಟಕದ ಸರ್ಕಾರಿ ಶಾಲಾ ಮಕ್ಕಳಿಗೆ ಸಮರ್ಪಕ ತರಬೇತಿ, ಕೃತಕ ಟರ್ಫ್ ಮೈದಾನ ಸೌಲಭ್ಯ, ಪೋಷಣಾ ಆಹಾರ, ಕ್ರೀಡಾ ಸಾಮಗ್ರಿ ಹಾಗೂ ಲೀಗ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿಭಾವಂತ ಆಟಗಾರರನ್ನು ಗುರುತಿಸಲು ತಂತ್ರಜ್ಞಾನ ಆಧಾರಿತ ಮಾನಿಟರಿಂಗ್ ವ್ಯವಸ್ಥೆಯನ್ನೂ ರೂಪಿಸಲಾಗುತ್ತಿದೆ. ಅಥ್ಲೆಟಿಕ್ಸ್ ಮತ್ತು ಶೂಟಿಂಗ್ ವಿಭಾಗದಲ್ಲಿ ಅಶ್ವಿನಿ ಸ್ಪೋರ್ಟ್ಸ್ ಜೊತೆಗೆ ಕೈಜೋಡಿಸುವ ಮೂಲಕ ಉನ್ನತ ಮಟ್ಟದ ತರಬೇತಿ, ಕ್ರೀಡಾ ಮನೋವೈದ್ಯಕೀಯ ಸಹಾಯ, ಗುಣಮಟ್ಟದ ಉಪಕರಣಗಳು ಹಾಗೂ ಸ್ಪರ್ಧಾತ್ಮಕ ಅನುಭವ ನೀಡಲಾಗುತ್ತದೆ. ಮಾಜಿ ಅಥ್ಲೀಟ್ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತ ಅಶ್ವಿನಿ ನಾಚಪ್ಪಾ ಈ ಸಹಭಾಗಿತ್ವವನ್ನು ಕ್ರೀಡಾಪಟುಗಳ ಸಮಗ್ರ ಬೆಳವಣಿಗೆಗೆ ಮಹತ್ವದ ಹೆಜ್ಜೆ ಎಂದು ವಿವರಿಸಿದರು. ಆರ್‌ಸಿಬಿ ಸಿಇಒ ರಾಜೇಶ್ ಮೆನನ್ ಭಾರತ ಜಾಗತಿಕ ಕ್ರೀಡಾ ರಾಷ್ಟ್ರವಾಗಬೇಕಾದರೆ ನೆಲಮಟ್ಟದ ವ್ಯವಸ್ಥೆ ಬಲವಾಗಿರಬೇಕು. ಇಂತಹ ಇಟ್ಟಳಿಕ ದೀರ್ಘಕಾಲಿಕ ಹಾಗೂ ಶಾಶ್ವತ ಪ್ರತಿಭಾ ಮಾರ್ಗವನ್ನು ನಿರ್ಮಿಸಲು ಬದ್ಧವಾಗಿದೆ, ಎಂದು ಹೇಳಿದರು.

ಇದೇ ವೇಳೆ, 400ಕ್ಕೂ ಹೆಚ್ಚು ಸಿದ್ದಿ ಸಮುದಾಯದ ಮಕ್ಕಳನ್ನು ಒಳಗೊಂಡ Bridges of Sports ಯೋಜನೆಯೂ ಮುಂದುವರಿಯುತ್ತಿದೆ. ಈ ವಿಸ್ತರಣೆಯೊಂದಿಗೆ RCB Cares ಕರ್ನಾಟಕದಲ್ಲಿ ಸಮಗ್ರ, ಸಮಾನ ಹಾಗೂ ಕಾರ್ಯಕ್ಷಮ ಕ್ರೀಡಾ ಪರಿಸರ ನಿರ್ಮಾಣದತ್ತ ಮತ್ತೊಂದು ಗಟ್ಟಿಯಾದ ಹೆಜ್ಜೆ ಇಟ್ಟಿದೆ.

ಅಂತಿಮ ಪಂದ್ಯದಲ್ಲಿ ಹೀಲೀ ಅನಂತ ಆಟ

ಹಾಬರ್ಟ್: ತಮ್ಮ ಕೊನೆಯ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಸ್ಮರಣೀಯ ಇನ್ನಿಂಗ್ಸ್ ಕಟ್ಟಿದ ಆಸ್ಟ್ರೇಲಿಯಾ ನಾಯಕಿ ಅಲಿಸ್ಸಾ ಹೀಲೀ ತಂಡಕ್ಕೆ ಕ್ಲೀನ್ ಸ್ವೀಪ್ ಉಡುಗೊರೆ ನೀಡಿದರು. ಅದರಂತೆ ಅವರ ಅಗಾಧ ಕೊಡುಗೆಗೆ ಆಸ್ಟ್ರೇಲಿಯಾ ಬಹುಪರಾಕ್ ಎಂಬುವ ಘೋಷಣೆಯೊಂದಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ನೀಡಿ ಬೀಳ್ಕೊಟ್ಟಿತು. ಮೂರೂ ವಿಭಾಗದ ದೊಡ್ಡ ಸರಣಿಯಲ್ಲಿ ಟಿ20ಯನ್ನು ಗೆದ್ದು ಬೀಗಿದ್ದ ಭಾರತಕ್ಕೆ ವೈಟ್‌ವಾಷ್ ಹಿನ್ನಡೆ ನಿಶ್ಯಬ್ದ ಮಾಡಿದೆ. ಎರಡು ಪಂದ್ಯಗಳ ಗೆಲುವಿನ ವಿಶ್ವಾಸದೊಂದಿಗೆ ಬ್ಯಾಟಿಂಗ್ ಗಿಳಿದ ಆಸ್ಟ್ರೇಲಿಯಾ ಬರೋಬ್ಬರಿ 409 ರನ್ ಚಚ್ಚಿತು. ಇದರಲ್ಲಿ ಹೀಲೀ 158, ಬೆಥ್ ಮೂನಿ 101 ರನ್ ಗಳಿಸಿದರು. ದೊಡ್ಡ ಗುರಿ ಬೆನ್ನತ್ತಿದ ಭಾರತ 224 ರನ್ ಗಳಿಸುವಷ್ಟರಲ್ಲೇ ಸುಸ್ತಾಯಿತು. ಸರಣಿ ವೈಟ್‌ವಾಷ್ ಆಯಿತು. ಒಂದೂ ಪಂದ್ಯ ಗೆಲ್ಲದ ಭಾರತ ಏಕದಿನ ಸರಣಿಯನ್ನು 0-3ರಿಂದ ಬಿಟ್ಟುಕೊಟ್ಟಿತು. ನಿವೃತ್ತಿಯ ಪಂದ್ಯದಲ್ಲಿ ದಾಖಲೆಗಳನ್ನು ಮಾಡಿದ ಹೀಲೀ 158 ರನ್‌ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿದರು. ಮೂನಿ ಕೂಡ ಶತಕ ಬಾರಿಸಿ ಮಿಂಚಿದರು. ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಅಲ್ಲಾ ಕಿಂಗ್ 4 ವಿಕೆಟ್ ಕಿತ್ತು ಪಂದ್ಯದ ಬೆಸ್ಟ್ ಬೌಲರ್ ಎನಿಸಿದರು. ಹತ್ತಾರು ಕಪ್‌ಗಳನ್ನು ಗೆಲ್ಲಿಸಿಕೊಟ್ಟ ಹೀಲೀಯವರೇ ಪಂದ್ಯದ ಕೇಂದ್ರಬಿಂದುವಾಗಿದ್ದರು. ಪಂದ್ಯದ ಬಳಿಕ ನಿವೃತ್ತಿ ಹೇಳಿದ ಅವರು, ಭಾವನಾತ್ಮಕ ವಿದಾಯಕ್ಕೆ ಸಾಕ್ಷಿಯಾದರು.

ಹೀಲೀ ಸ್ಮರಣೀಯ ಶತಕ: ತಮ್ಮ ಕೊನೆಯ ಪಂದ್ಯದಲ್ಲಿ ದೊಡ್ಡ ದಾಖಲೆಯನ್ನು ಮಾಡುವ ಯೋಜನೆಯೊಂದನ್ನು ಹಾಕಿಕೊಂಡೇ ಮೈದಾನಕ್ಕಿಳಿದ ಹೀಲೀ ಭಾರತೀಯ ಬೌಲರ್‌ಗಳನ್ನು ಕಾಡಿದರು. ಮನಬಂದಂತೆ ದಂಡಿಸಿ ಮೆರೆದಾಡಿದರು. ಬೌಂಡರಿಗಳ ಸುರಿಮಳೆಯನ್ನೇ ಸುರಿಸಿದರು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸುತ್ತಿದ್ದಂತೆ ದಂಡಿಸಲಾರಂಭಿಸಿದ್ದ ಅವರು ಬಾರಿಸಿದ್ದು ಬರೋಬ್ಬರಿ 27 ಬೌಂಡರಿ! ಲಿಚ್‌ಫೀಲ್ಡ್ ಬೇಗನೇ ವಿಕೆಟ್ ಒಪ್ಪಿಸುತ್ತಿದ್ದಂತೆ ಬ್ಯಾಟಿಂಗ್‌ಗಿಳಿದ ವಾಲ್ ಕೂಡ ಅವರಿಗೆ ಬೇಕಾದ ಸಾಥ್ ನೀಡಿದರು. ಮೊದಲ ಇನ್ನಿಂಗ್ಸ್ ಉದ್ದಕ್ಕೂ ಹೀಲೀ ಆಟಕ್ಕೆ ತಡೆಯೊಡ್ಡುವವರೆ ಇಲ್ಲ ಎಂಬಂತೆ ಭಾಸವಾಗುತ್ತಿತ್ತು. ವಾಲ್ 62ಕ್ಕೆ ವಿಕೆಟ್ ಒಪ್ಪಿಸುತ್ತಿದ್ದಂತೆ ಬೆಥ್ ಮೂನಿ ದಂಡಿಸುವ ಜವಾಬ್ದಾರಿ ಮೈಗೆತ್ತಿಕೊಂಡರು. ಭಾರತ ಪರ ಶ್ರೀ ಚಾರಣಿ ಬರೋಬ್ಬರಿ 106 ರನ್ ದಂಡಿಸಿಕೊಂಡಿದ್ದುಂಟು. ಬೆಥ್‌ಗೂ ನಾಗಾಲೋಟ. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತೀಯ ಬೌಲರ್‌ಗಳನ್ನು ದಂಡಿಸಿದ ಅವರು, 84 ಬಾಲ್‌ಗಳಲ್ಲಿ 106 ರನ್ ಗಳಿಸಿದರು. ಅಜೇಯವಾಗಿ!.



ಕುಸಿದ ಭಾರತ

ಇನ್ನು ಬ್ಯಾಟಿಂಗ್‌ಗಿಳಿದ ಭಾರತದ ಪರ ಯಾರೊಬ್ಬರೂ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಲಿಲ್ಲ, ರಾಡ್ರಿಗ್ಸ್ ಅದೆಲ್ಲಾ 42 ರನ್ ಗಳಿಸಿ ಹೋರಾಡಿದರೂ, ಅವರಿಗೆ ಸಾಥ್ ಸಿಗಲಿಲ್ಲ. ಅಂತಿಮದಲ್ಲಿ ಸ್ನೇಹ ರಾಣಾ 44 ರನ್‌ಗಳಿಸಿ ಅಂತರ ಕುಗ್ಗಿಸಿದರು. ಮಧ್ಯಮ ಕ್ರಮಾಂಕದಲ್ಲಿ ಮೂವರು ಬ್ಯಾಟರ್‌ಗಳು 18-30ರನ್ ಗಳಿಸಿದ ನಿಟ್ಟಿನಲ್ಲಿ ಭಾರತ 224 ರನ್‌ಗಳಿಸಿತು.

ಸಂಕ್ಷಿಪ್ತ ಸ್ಕೋರ್

ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 409/7: ಹೀಲೀ 158, ಮೂನಿ 105★; ಸ್ನೇಹ 66/2
ಭಾರತ 45.1 ಓವರ್‌ಗಳಲ್ಲಿ 224/10: ಸ್ನೇಹ 44, ರಾಡ್ರಿಗ್ಸ್ 42; ಕಿಂಗ್ 33/4

ಭಾರತೀಯ ಆಟಗಾರ್ತಿಯರ ಅದ್ಭುತ ಪ್ರದರ್ಶನ

ಕಲಬುರಗಿ: ನಗರದ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯು 35 ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ದಿನ ಭಾರತೀಯ ಆಟಗಾರ್ತಿಯರು ಭರ್ಜರಿ ಪ್ರದರ್ಶನ ನೀಡಿ ಉತ್ತಮ ಆರಂಭ ಮಾಡಿದ್ದಾರೆ. ಒಟ್ಟು 12 ಭಾರತೀಯ ಆಟಗಾರ್ತಿಯರು 2ನೇ ಹಾಗೂ ಅಂತಿಮ ಅರ್ಹತಾ ಸುತ್ತಿಗೆ ಪ್ರವೇಶಿಸಿ, ದೇಶೀಯ ಆಟಗಾರ್ತಿಯರ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ವಿದೇಶಿ ಶ್ರೇಯಾಂಕಿತ ಆಟಗಾರ್ತಿಯರಲ್ಲಿ ಕೆಲವರು ಸುಲಭವಾಗಿ ಮುಂದಿನ ಸುತ್ತಿಗೆ ಪ್ರವೇಶಿಸಿದರೂ, ದಿನದ ಗಮನ ಭಾರತೀಯ ಆಟಗಾರ್ತಿಯರ ಮೇಲೆಯೇ ನೆಟ್ಟಿತ್ತು. ಆರಂಭಿಕ ಪಂದ್ಯಗಳಲ್ಲಿ 11ನೇ ಶ್ರೇಯಾಂಕಿತ ವಂಶಿತಾ ಪಠಾನಿಯಾ ಅವರು ಅರುಣಕುಮಾರ್ ಲಕ್ಷ್ಮೀ ಪ್ರಭಾ ಅವರನ್ನು 6-3, 6-1 ಅಂತರದಲ್ಲಿ ಸೋಲಿಸಿದರು. ಅಗ್ರ ಶ್ರೇಯಾಂಕಿತ ಮರಿಯಾ ಮಿಖೈಲೋವಾ ಅವರು ಚಂದನಾ ಪೊಟುಗಾರಿಯ ವಿರುದ್ಧ 6-2, 6-1 ಅಂತರದಲ್ಲಿ ಗೆದ್ದು ಮುಂದುವರಿದರು.

ಎರಡನೇ ಶ್ರೇಯಾಂಕಿತ ಸಿಂಗಾಪುರದ ಈವಾ ಮೇರಿ ಡೆಸ್ಟಿಗ್ನೆಸ್ ಅವರು ವೈಲ್ಡ್ ಕಾರ್ಡ್ ಆಟಗಾರ್ತಿ ಓಮ್ನಾ ಯಾದವ್ ದಾವುಣಬೋಯಿನಾ ಅವರನ್ನು 6-1, 6-3 ಅಂತರದಲ್ಲಿ ಮಣಿಸಿದರು. ಸೌಮ್ಯ ರೊಂಡೆ 15ನೇ ಶ್ರೇಯಾಂಕಿತ ದಿಶಾ ಬೆಹೆರಾ ಅವರನ್ನು 7-5, 6-4 ಅಂತರದಲ್ಲಿ ಸೋಲಿಸಿ ಅಚ್ಚರಿ ಫಲಿತಾಂಶ ನೀಡಿದರು.



ಐಟಿಎಫ್ ಡಬ್ಲ್ಯು 35 ಅರ್ಹತಾ ಸುತ್ತಿನ ಮೊದಲ ದಿನ

ಕಾಶಿಶ್ ಭಾಟಿಯಾ ನಾಲ್ಕನೇ ಶ್ರೇಯಾಂಕಿತ ಪೂಜಾ ಇಂಗಲೇಗೆ 6-4, 6-0 ಅಂತರದಲ್ಲಿ ಮಣಿಸಿ ದಿನದ ಅತ್ಯುತ್ತಮ ಪ್ರದರ್ಶನಗಳಲ್ಲಿ ಒಂದನ್ನು ದಾಖಲಿಸಿದರು.

12ನೇ ಶ್ರೇಯಾಂಕಿತ ಆಹಾನ್ ಆಹಾನ್ ಡ್ಯಾನಿಕಾ ಫರ್ನಾಂಡೋ ವಿರುದ್ಧ ತೀವ್ರ ಪೈಪೋಟಿಯಲ್ಲಿ ಮೊದಲ ಸೆಟ್ ಸೋತ ಬಳಿಕ ಮರುಪ್ರವೇಶ ಮಾಡಿ 5-7, 6-4, 11-9 ಅಂತರದಲ್ಲಿ ಜಯಿಸಿದರು. ಐಶ್ವರ್ಯ ಜಾಧವ್ ಐದನೇ ಶ್ರೇಯಾಂಕಿತ ಪ್ರತ್ಯೂಷಾ ರಾಚಮುಡಿ ಅವರನ್ನು 6-3, 6-1 ಅಂತರದಲ್ಲಿ ಸುಲಭವಾಗಿ ಸೋಲಿಸಿದರು.


16ನೇ ಶ್ರೇಯಾಂಕಿತ ಶ್ರೀಮಣ್ಯ ರೆಡ್ಡಿ ಅನುಗೊಂಡ ಸಂಜನಾ ಸಿರಿಮಲ್ಲಾ ವಿರುದ್ಧ 3-6, 6-4, 10-6 ಅಂತರದಲ್ಲಿ ಹೋರಾಟಮಯ ಜಯ ಸಾಧಿಸಿದರು. 13ನೇ ಶ್ರೇಯಾಂಕಿತ ಮಹಿಕಾ ಖನ್ನಾ ವೈಲ್ಡ್ ಕಾರ್ಡ್ ಆಟಗಾರ್ತಿ ಹೃದಯೇಶಿ ಪೈ ಅವರನ್ನು 6-1, 6-3 ಅಂತರದಲ್ಲಿ ಮಣಿಸಿದರು.

ವೈಲ್ಡ್ ಕಾರ್ಡ್ ಆಟಗಾರ್ತಿ ಸ್ನಿಗ್ಧಾ ಕಾಂತಾ ಆರನೇ ಶ್ರೇಯಾಂಕಿತ ಮಲೇಶಿಯಾದ ಎಲ್ಲಾ ವಾನ್ 6-1, 5-7, 10-3 ಅಂತರದಲ್ಲಿ ಸೋಲಿಸಿ ಗಮನ ಸೆಳೆದರು. 9ನೇ ಶ್ರೇಯಾಂಕಿತ ಸಂದೀಪ್ತಿ ಸಿಂಗ್ ರಾವ್ ಸೈಲಿ ಪ್ರಶಾಂತಕುಮಾರ್ ಠಕ್ಕರ್ ವಿರುದ್ಧ 7-5, 6-2 ಅಂತರದಲ್ಲಿ ಗೆದ್ದರು.

10ನೇ ಶ್ರೇಯಾಂಕಿತ ಯಶಸ್ವಿನಿ ಪನ್ವಾರ್ ಅವರು ಆಕೃತಿ ಸೊಂಕುಸಾರೆ ನಾರಾಯಣ ಸೊಂಕುಸಾರೆ ವಿರುದ್ಧ 6-4, 6-4 ಅಂತರದಲ್ಲಿ ಜಯಿಸಿದರು. 8ನೇ ಶ್ರೇಯಾಂಕಿತ ಬೇಲಾ ತಾಮ್ಹಂಕರ ಮತ್ತು 14ನೇ ಶ್ರೇಯಾಂಕಿತ ಲಕ್ಷ್ಮಿಸಿರಿ ದಂಡು ಅವರು ಕ್ರಮವಾಗಿ ಜಿಗ್ನ್ಯಾಸಾ ನರಸಿಂಘಾಣಿ ಮತ್ತು ಜೀತೇಶ್ ಕುಮಾರಿ ವಿರುದ್ಧ ನೇರ ಸೆಟ್‌ಗಳಲ್ಲಿ ಜಯಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5911

5910 ಉತ್ತರ

ಎಡದಿಂದ ಬಲಕ್ಕೆ:
1.ಕದಂಬ 3.ಜಗದೀಶ
5.ದಯಾಮಯ
6.ಲಕ್ಷಾಂತರ 8.ಜನಸುಖ
11.ಪಾಕರಿಪು
14.ಕಳೆಕಟ್ಟು 15.ಕನ್ನಡಿಗ
16.ಕಟ್ಟುಬಿಚ್ಚು 17.ತಕ್ಕಡಿ
ಮೇಲಿನಿಂದ ಕೆಳಕ್ಕೆ:
1.ಕಲಶಜ 2.ಬದಲಿಸು
3.ಜಯಲಕ್ಷ್ಮಿ 4.ಶಬರ
7.ತರಕಾರಿ 9.ನವಬೆಳೆ
10.ಬೆಟ್ಟುಕಟ್ಟು
12.ಕಲ್ಲಂಗಡಿ
13.ಪುರಸ್ಕೃತ 14.ಕನಕ

ಎಡದಿಂದ ಬಲಕ್ಕೆ
1.ಸ್ನೇಹಿತ-ಸಂಗಾತಿಯೊಂದಿಗೆ ಇರುವ ಸಂಬಂಧ (4)
3.ಉಡುಗಿ ಹೋಗುವ ಕಾಲುಗಳಲ್ಲಿರುವ ಶಕ್ತಿ (4)
5.ಹತ್ತು ನೂರು-ಸಹಸ್ರಗಳು ತಿರುಗಿವೆ (3)
6.ನಗರಕ್ಕೆ ಬಂದ ಹಾಸ್ಯಗಾರ (4)
8.ವಾಕ್ಚತುರತ್ವವುಳ್ಳವನು (4)
10.ಕಡೆಗೂ ಗವಾ ಹೇಳಲು ಬಂದ ಗೊಲ್ಲ (4)
12.ಸಾಧ್ವಿ-ಗರತಿಯೀಕೆ (4)
14.ಸತಿಯ ನಡುವೆ ಒಂದು ಸಂಘವಿದೆ (3)
15.ವಕೀಲರು ಧರಿಸುವ ಕಪ್ಪು ಮೇಲಂಗಿ (4)
16.ವಸ್ತುವಿನ ಅತಿ ಕೆಳಗಿನ ಅಂಶ (4)
ಮೇಲಿನಿಂದ ಕೆಳಕ್ಕೆ
1.ಸ್ಥಿರ-ಏಕ ಬಗೆಯ ಚಿತ್ತ (5)
2.ಯುದ್ಧದಲ್ಲಿ ಶೌರ್ಯ ಮೆರೆಯುವವನು (5)
3.ಇವು ಯುದ್ಧದ ಸಾಮಾನುಗಳು (5)
4.ಅತಿ ಶ್ರೀಮಂತ ವ್ಯಕ್ತಿಯೀತ (5)
7.ಮೋಡಿ-ಮಂತ್ರಗಳ ಬಳಕೆ (3)
9.ತ್ರಿಭುಜವಿಲ್ಲಿ ತಲೆಕೆಳಗಾಗಿದೆ (3)
10.ಸಂಸ್ಕೃತದಲ್ಲಿ ಬಂಗಾರ (3)
11. ತುಪ್ಪ-ಎಣ್ಣೆಗಳ ಅಡಿಯಲ್ಲಿ ನಿಲ್ಲುವ ಕಸರು (3)
12. ನೈತಿಕವಾಗಿ ಪತನ ಹೊಂದಿದವನು (3)
13. ಅತ್ತಿಗೆಗೆ ಕಂಡ ಹೊಣೆಗಾರ (3)

ಕಿರುಸುದ್ದಿ

ನಾಳೆ ಹೊನ್ನಮ್ಮದೇವಿ ಜಾತ್ರೆ

◆**ರಾಣೇಬೆನ್ನೂರ:** ತಾಲೂಕಿನ ಗುಡಿಹೊನ್ನತ್ತಿಯ ಹೊನ್ನಮ್ಮದೇವಿ ಜಾತ್ರೋತ್ಸವವು ಮಾ.3ರಿಂದ ಮಾ.5ರವರೆಗೆ ಮೂರು ದಿನಗಳ ವಿವಿಧ ಪೂಜಾ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಮಾ.3ರಂದು ಹೋಳಿ ಹುಣ್ಣಿಮೆ ಹಾಗೂ ದೇವಿಗೆ ಉಡಿ ತುಂಬುವುದು. ಮಾ.4ರಂದು ದೇವಿಗೆ ಹರಕೆ ಸಲ್ಲಿಸುವುದು, ಮಾ.5ರಂದು ಓಕಳಿ ಸೇರಿದಂತೆ ವಿವಿಧ ಕಾರ್ಯಕ್ರಮ ಜರುಗಲಿವೆ ಎಂದು ದೇವಸ್ಥಾನ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.



ರೇಣುಕಾಚಾರ್ಯರ ಮೌಲ್ಯ ಅಳವಡಿಸಿಕೊಳ್ಳಿ



◆**ಬ್ಯಾಡಗಿ:** ರೇಣುಕಾಚಾರ್ಯರು ಜನತೆಗೆ ಮಾನವೀಯ ಮೌಲ್ಯ ಬೋಧಿಸಿ ಧರ್ಮಪ್ರಜ್ಞೆಯೊಂದಿಗೆ ನೆಮ್ಮದಿ ಬದುಕಿಗೆ ಧಾರ್ಮಿಕ ಆಚರಣೆಗಳನ್ನು ಜಾರಿಗೊಳಿಸಿದವರು ಜಗದ್ಗುರುಗಳು ರೇಣುಕಾಚಾರ್ಯರ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಹೇಳಿದರು.

ಪಟ್ಟಣದ ತಹಶೀಲ್ದಾರ ಕಚೇರಿಯ ಆವರಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದವರು ರೇಣುಕಾಚಾರ್ಯರು ಮೇಲು ಕೀಳು ಭಾವನೆ ತೊಲಗಿ ಸಮಾಜಕ್ಕೆ ಸಮಾನತೆ ನಿರ್ಮಾಣವಾಗಬೇಕು ಎಲ್ಲರೂ ಮಾನವತ್ವದೊಂದಿಗೆ ಮನುಷ್ಯರಾಗಿ ಬಾಳಬೇಕು ಎಂಬ ತತ್ವವನ್ನು ವೀರಶೈವ ಧರ್ಮ ಸಂಸ್ಥಾಪಕರಾದ ಜಗದ್ಗುರು ರೇಣುಕಾಚಾರ್ಯರು ಜಗತ್ತಿಗೆ ಹಾಗೂ ಮನುಕುಲಕ್ಕೆ ಹಾರೈಸಿದ್ದಾರೆ ವ್ಯಕ್ತಿ ತಿಳುವಳಿಗಿಂತ ನಡವಳಿಕೆ ಶ್ರೇಷ್ಠ ತಿಳುವಳಿಕೆ ಸೋಲ ಬಹುದು ಆದರೆ ನಡವಳಿಕೆ ಇಂದಿಗೂ ಸೋಲಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಾಜದವರಾದ ಕುಮಾರಸ್ವಾಮಿ ಹಿರೇಮಠ್.ಡಾ. ಕೆ.ಸಿ.ಹಿರೇಮಠ, ಹೇಮಯ್ಯ ಕಲ್ಯಾಣ ಮಠ ಹಾಗೂ ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಹಾಗೂ ಸಮಾಜದವರು ಉಪಸ್ಥಿತರಿದ್ದರು.

ಗ್ರಾಮದೇವಿ ಜಾತ್ರೆ ಮಹೋತ್ಸವ ಸಂಪನ್ನ



◆**ತಡಸ:** ಶಿಗ್ಗಾವಿ ತಾಲೂಕಿನ ದುಂಡಿಸಿ ಗ್ರಾಮದಲ್ಲಿ ಅತ್ಯಂತ ಸಂಭ್ರಮದಿಂದ ಜರುಗಿದ ಗ್ರಾಮದೇವಿ ಜಾತ್ರಾ ಮಹೋತ್ಸವ ಮುಕ್ತಾಯಗೊಂಡಿತು. ಜಾತ್ರೆಯ ಕೊನೆಯ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಧರ್ಮಸಭೆಯಲ್ಲಿ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಶ್ರೀಗಳು ಮತ್ತು ವಿರಕ್ತ ಮಠದ ಶ್ರೀಗಳು ಪ್ರವಚನ ನೀಡಿದರು. ಗ್ರಾಮದಲ್ಲಿ ಬೆಳಗ್ಗೆಯಿಂದ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆದವು. ಮೊದಲನೆಯ ದಿನದಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವಿಯ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ಜರುಗಿತು. ಸುತ್ತಮುತ್ತಲಿನ ಹಳ್ಳಿಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು.



ಶಿಗ್ಗಾವಿ: ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ತಾಲೂಕಾ ಆಡಳಿತದಿಂದ ಹಮ್ಮಿಕೊಂಡ ರೇಣುಕರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಆಡಳಿತಾಧಿಕಾರಿ ಎಲ್.ಎ.ಹಿರೇಮಠ, ಡಾ. ಆರ್.ಎಸ್. ಅರಳೆಲೆಮಠ, ಶಿಗ್ಗಾವಿ ತಾಲೂಕ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಶಿಧರ ಸುರಗಿಮಠ, ಉಪಾಧ್ಯಕ್ಷ ವಿಜಯ ಸಾಲಿಮಠ, ಕಾರ್ಯದರ್ಶಿ ಸೋಮಶೇಖರಯ್ಯ ಗೌರಿಮಠ, ಖಜಾಂಚಿ ಶಿವಪ್ರಕಾಶ ಹಿರೇಮಠ, ಸದಸ್ಯರಾದ ಮಲ್ಲಿಕಾರ್ಜುನ ಪಾಟೀಲ್, ಉಳುವಯ್ಯ ಬಮ್ಮಿಗಟ್ಟಿಮಠ ಸೇರಿದಂತೆ ಜಂಗಮ ಸಮಾಜದ ಮುಖಂಡರು ಇದ್ದರು.



ಹಾನಗಲ್ಲ: ಅಕ್ಕಿಆಲೂರಿನ ಸಿಂಧೂರ ಸಿದ್ದಪ್ಪ ಪ್ರೌಢಶಾಲೆಯಲ್ಲಿ ಹಾನಗಲ್ಲ ತಾಲೂಕು ಶಿಕ್ಷಣ ಸಂಸ್ಥೆ ಹಾಗೂ ಹಾವೇರಿಯ ಅರಳೀಕಟ್ಟಿ ಪ್ರಕಾಶನ ಸಂಯುಕ್ತವಾಗಿ ಆಯೋಜಿಸಿದ ಸ್ವಾತಂತ್ರ್ಯ ಸೇನಾನಿ ಧೀಮಂತ ನಾಯಕ ಸಿಂಧೂರ ಸಿದ್ದಪ್ಪನವರ 126ನೇ ಜನ್ಮ ದಿನೋತ್ಸವ ಆಚರಿಸಲಾಯಿತು.

ಜಲಾಶಯಕ್ಕೆ ಸಿಂಧೂರ ಸಿದ್ದಪ್ಪನವರ ಹೆಸರಿಡಿ: ಶಿಡ್ಲಾಪೂರ

◆**ಹಾನಗಲ್ಲ:** ಬಡವರ ಸೇವೆ ಮಾಡಿದ ಸಾಹುಕಾರ, ರೈತರ ಭೂಮಿಗೆ ನೀರು ಹರಿಸಿದ ಭಗೀರಥ, ಅನ್ನದಾನ, ರಾಜಕಾರಣದಲ್ಲಿದ್ದರೂ ರಾಜಕಾರಣ ಮಾಡದ ಮಾದರಿ ವ್ಯಕ್ತಿತ್ವವುಳ್ಳ ಸಿಂಧೂರ ಸಿದ್ದಪ್ಪನವರ ಹೆಸರನ್ನು ಧರ್ಮಾ ಜಲಾಶಯಕ್ಕೆ ನಾಮಕರಣ ಮಾಡಬೇಕು ಎಂದು ಸಾಹಿತಿ ಪ್ರೊ.ಮಾರುತಿ ಶಿಡ್ಲಾಪೂರ ತಿಳಿಸಿದರು.

ಅಕ್ಕಿಆಲೂರಿನ ಸಿಂಧೂರ ಸಿದ್ದಪ್ಪ ಪ್ರೌಢಶಾಲೆಯಲ್ಲಿ ಹಾನಗಲ್ಲ ತಾಲೂಕು ಶಿಕ್ಷಣ ಸಂಸ್ಥೆ ಹಾಗೂ ಹಾವೇರಿಯ ಅರಳೀಕಟ್ಟಿ ಪ್ರಕಾಶನ ಸಂಯುಕ್ತವಾಗಿ ಆಯೋಜಿಸಿದ ಸ್ವಾತಂತ್ರ್ಯ ಸೇನಾನಿ ಧೀಮಂತ ನಾಯಕ ಸಿಂಧೂರ ಸಿದ್ದಪ್ಪನವರ 126ನೇ ಜನ್ಮ ದಿನೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಆಶಯ ನುಡಿ ನುಡಿದ ಅರಳೀಕಟ್ಟಿ ಪ್ರಕಾಶನದ ಗೂಳಪ್ಪ ಅರಳೀಕಟ್ಟಿ, ಪುಸ್ತಕ ಸಂಸ್ಕೃತಿ ಬೇಕಾಗಿದೆ. ಮಹಾತ್ಮರ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಸಾಹಿತ್ಯ ಲೋಕದಲ್ಲಿ ಇನ್ನೂ ಚುರುಕಾಗಬೇಕು. ಸಿಂಧೂರ ಸಿದ್ದಪ್ಪನವರನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪರಿಚಯಿಸುವ ಅಗತ್ಯ ಈಗಿದೆ. ಅವರ ಪ್ರಾಮಾಣಿಕತೆ, ಶಿಸ್ತು, ಸಂಯಮ ಇಂದಿನ ರಾಜಕಾರಣಿಗಳಿಗೆ ಮಾದರಿಯಾದುದು ಎಂದರು. ಎಚ್‌ಟಿಇಎಸ್ ಸಂಸ್ಥೆ ಕೋಶಾಧ್ಯಕ್ಷ ವಿ.ಎಚ್.ಪೂಜಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿಂಧೂರ ಸಿದ್ದಪ್ಪನವರ ಮೊಮ್ಮಗ ಸಂಗಪ್ಪ ಸಿಂಧೂರ, ಸಂಸ್ಥೆಯ ನಿರ್ದೇಶಕರಾದ ಸದಾಶಿವ ಬೆಲ್ಲದ, ಉದಯಕುಮಾರ ಕೂಬಿಹಾಳ, ಸಿದ್ದಪ್ಪ ಸಿಂಧೂರ, ಕುಮಾರ ಧಾರವಾಡ, ಪ್ರಾಚಾರ್ಯರಾದ ಎಸ್.ಬಿ.ಕಲ್ಲೇರ, ಬಿ.ಎನ್.ಮ್ಯಾಗಳಗೇರಿ, ಮುಖ್ಯೋಪಾಧ್ಯಾಯರಾದ ವಿ.ಎಸ್.ಚಿಕ್ಕಣ್ಣನವರ, ಆರ್.ಎಚ್.ಓಲೇಕಾರ, ಸುಮಾ ಸಾವಕ್ಕನವರ ಪಾಲ್ಗೊಂಡಿದ್ದರು.



ಹಾವೇರಿ: ತಾಲೂಕಿನ ಅಗಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.2ರಲ್ಲಿ ಹಿರಿಯ ವಿದ್ಯಾರ್ಥಿಗಳು ಏರ್ಪಡಿಸಿದ್ದ ಗುರುವಂದನೆ ಹಾಗೂ ಸ್ನೇಹ ಸಮ್ಮೇಳನವನ್ನು ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಉದ್ಘಾಟಿಸಿದರು. ಈ ವೇಳೆಬಿಇಒ ಎಂ.ಎಚ್. ಪಾಟೀಲ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಚನ್ನಬಸಪ್ಪ ಮರಗೂರ, ಅಕ್ಕಿಮಠದ ಗುರುಲಿಂಗ ಸ್ವಾಮೀಜಿ, ಪ್ರಭುಸ್ವಾಮಿ ಮಠದ ಗುರುಸಿದ್ದ ಸ್ವಾಮೀಜಿ, ಎಲ್ಲಮ್ಮ ಶ್ಯಾವಿ, ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ಪ ಬಳಲಕೊಪ್ಪದ ಮತ್ತಿತರರು ಇದ್ದರು.

ಗ್ರಾಮೀಣ ಪ್ರದೇಶಕ್ಕೆ ಬಿಎಸ್‌ಎನ್‌ಎಲ್ ಸಂಪರ್ಕ ಹೆಚ್ಚಿಸಿ: ಸಂಸದ ಬೊಮ್ಮಾಯಿ

◆**ಹಾವೇರಿ:** ಗ್ರಾಮೀಣ ಪ್ರದೇಶದಲ್ಲಿ ಜನರ ಅನುಕೂಲಕ್ಕೆ ತಕ್ಕಂತೆ ಹೆಚ್ಚಿನ ಬಿಎಸ್‌ಎನ್‌ಎಲ್ ಸಂಪರ್ಕ ಕಲ್ಪಿಸುವ ಕಾರ್ಯ ಮಾಡಬೇಕು ಎಂದು ಬಿಎಸ್‌ಎನ್‌ಎಲ್ ಅಧಿಕಾರಿಗಳಿಗೆ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಸಲಹಾ ಸಮಿತಿ ಸಭೆ

ಹಾವೇರಿಯ ತಾಲೂಕು ಪಂಚಾಯತ ಆವರಣದಲ್ಲಿ ಇರುವ ಲೋಕಸಭಾ ಸದಸ್ಯರ ಜನಸಂಪರ್ಕ ಕಾರ್ಯಾಲಯದಲ್ಲಿ ಭಾರತ್ ಸಂಚಾರ ನಿಗಮ ನಿಯಮಿತ (ಬಿಎಸ್‌ಎನ್‌ಎಲ್) ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಗ ಸೆಟಲೈಟ್ ಮೂಲಕ ಎಲ್ಲವೂ ವೈರ್‌ಲೆಸ್ ಆಗಿದೆ. ಹೀಗಾಗಿ ಜನರು ಲ್ಯಾಂಡ್ ಲೈನ್‌ಗೆ ಆಸಕ್ತಿ ತೋರಿಸುವುದಿಲ್ಲ. ಯಾರು ಆಸಕ್ತಿ ಇದ್ದಾರೆ ಅಲ್ಲಿ ಸಂಪರ್ಕ ಕಲ್ಪಿಸಬೇಕು. ಈಗ 5ಜಿ ಬಂದಿದೆ, ತಂತ್ರಜ್ಞಾನ ಸಾಕಷ್ಟು ಮುಂದುವರೆದಿದೆ. ಜನರು ಇದನ್ನು ಬಯಸದಿರುವಾಗ ನೀವು ಯಾಕೆ ಮಾಡುತ್ತಿದ್ದೀರಿ. ಜನರು ಲ್ಯಾಂಡ್ ಲೈನ್ ಸಂಪರ್ಕ ಬಯಸುವುದಿಲ್ಲ, ಮನೆಯಲ್ಲಿ ಪ್ರತಿಯೊಬ್ಬರೂ ಪ್ರತ್ಯೇಕ ಸಂಪರ್ಕ ಬಯಸುತ್ತಾರೆ. ನೀವು ಜನರ ಬೇಡಿಕೆ ಏನಿದೆ ಅನ್ನುವುದನ್ನು ತಿಳಿದುಕೊಳ್ಳಬೇಕು. ವೈಫೈ ಬಳಕೆಗೆ ಕೆಲವೊಂದು ಮಿತಿಗಳಿವೆ. ಅವರು ಮನೆಯಲ್ಲಿದ್ದಾಗ ಮಾತ್ರ ವೈಫೈ ಬಳಕೆ ಮಾಡಬಹುದು. ಮನೆಯಿಂದ ಹೊರಗೆ ಹೋದಾಗ ವೈಫೈ ಉಪಯೋಗಕ್ಕೆ ಬರುವುದಿಲ್ಲ, ಜನರು ತಾವೆಲ್ಲಿ ಹೋಗುತ್ತಾರೆ ಅಲ್ಲಿ ಆನ್‌ಲೈನ್ ಸಂಪರ್ಕ ಇರಬೇಕೆಂದು ಬಯಸುತ್ತಾರೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಟವರ್‌ಗಳನ್ನು ಹಾಕಬೇಕು. ಅವರ ಅಗತ್ಯ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.ಜನರು ಮೊಬೈಲ್ ಜೊತೆಗೆ ಹೋಲಿಕೆ ಮಾಡಿ ನೋಡುತ್ತಿದ್ದಾರೆ. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 50 ಸಂಪರ್ಕ ಕಲ್ಪಿಸುವ ಸಮೃದ್ಧಿ ಜಿಪಿ ಯೋಜನೆ ಚಾಲನೆಯಲ್ಲಿದೆ. ಅದರಲ್ಲಿ ಶಾಲೆ, ಕಾಲೇಜು, ವಾಣಿಜ್ಯ ಮಳಿಗೆಗಳಿಗೆ ಒಳಗೊಂಡು ಸಂಪರ್ಕ ಕಲ್ಪಿಸಲಾಗುವುದು. ಜನರು ಬಿಎಸ್‌ಎನ್‌ಎಲ್ ಸಂಪರ್ಕ ಪಡೆದು ವೈರ್‌ಲೆಸ್ ಮೂಲಕ ಅವರು ಬೇರೆ ಸಂಪರ್ಕ ಪಡೆಯಬಹುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿ.ಎಂ. ಧನಂಜಯಕುಮಾರ ತ್ರಿಪಾಟಿ, ಡಿಜಿಎಂ ರಾಜಕುಮಾರ ಆಸಂಗಿ, ಮೋಬೈಲ್ ಡಿಜಿಎಂ ರಾಜೇಶ ಕದಂ, ಡಿಜಿಎಂ ದಾವಣಗೆರೆ ಕೆ. ಗೋಪಾಲ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ಅಧಿಕಾರಿಗಳಿಗೆ ಸೂಚನೆ

ಹಳ್ಳಿಗಳಲ್ಲಿ ನೆಟ್ ವರ್ಕ್ ಸಿಗಲು ಹೆಚ್ಚಿನ ಬಿಎಸ್‌ಎನ್‌ಎಲ್ ಟವರ್‌ಗಳನ್ನು ಹಾಕಬೇಕು. ಜನರಿಗೆ ಸುಲಭವಾಗಿ ನೆಟ್‌ವರ್ಕ್ ಸಿಗುವಂತೆ ಮಾಡಬೇಕು ಎಂದು ಸೂಚಿಸಿದರು.

> **ಹಾವೇರಿ ಜಿಲ್ಲೆಯಲ್ಲಿ ಬ್ಯಾಡಗಿ, ಹಿರೇಕೆರೂರು, ಹಾವೇರಿ ಬ್ಲಾಕ್ ಅಂತ ಮಾಡಿಕೊಂಡು ಪಂಚಾಯತಿಗಳಲ್ಲಿ ಸಂಪರ್ಕ ಕಲ್ಪಿಸುವ ಕೆಲಸ ಮಾಡಲಾಗುತ್ತಿದೆ. 260 ಗ್ರಾಪಂಗಳಿಗೆ ಸಂಪರ್ಕ ಕಲಿಸುವ ಗುರಿ ಇದೆ. ನಮ್ಮದು ಪಿಪಿಪಿ ಮಾಡೆಲ್ ಇರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ ಕಡಿಮೆ ಇದೆ.**
> ■ ಬಸವರಾಜ ಬೊಮ್ಮಾಯಿ, ಸಂಸದ

ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿ

◆**ಹಾವೇರಿ:** ಆಧುನಿಕ ಯುಗದಲ್ಲಿ ಆನ್‌ಲೈನ್ ಶಾಪಿಂಗ್ ಅಬ್ಬರದ ನಡುವೆ ಸ್ವ-ಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ವಿಸ್ತರಿಸುವುದು ಅಗತ್ಯವಾಗಿದೆ. ಸಾರ್ವಜನಿಕರು ಈ ಉತ್ಪನ್ನಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು ಎಂದು ಜಿಪಂ ಉಪಕಾರ್ಯದರ್ಶಿ ಡಾ. ಪುನೀತ್ ಬಿ. ಹೇಳಿದರು.

ನಗರದ ಜಿಲ್ಲಾ ಗುರುಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮೀಣ ಕೈಗಾರಿಕಾ ವಿಭಾಗದ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ವಿದ್ಯಮಾನಗಳಲ್ಲಿ ಆನ್‌ಲೈನ್ ಸ್ಪರ್ಧೆ ಹೆಚ್ಚಾಗಿದೆ. ಅಮೇಜಾನ್, ಫ್ಲಿಪ್‌ಕಾರ್ಟ್ ಹಾಗೂ ಮಿಶೋಗಳಂತಹ ಆನ್‌ಲೈನ್ ವೇದಿಕೆಗಳ ಮಾದರಿಯಲ್ಲೇ ಸ್ವ-ಸಹಾಯ ಸಂಘಗಳ ಉತ್ಪನ್ನಗಳು ಲಭ್ಯವಾಗುವಂತೆ ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದೆ. ಉತ್ಪಾದಕರು ಆನ್‌ಲೈನ್ ಪ್ರಸಾರ ಮತ್ತು ಸಾರ್ವಜನಿಕ ಸಂಪರ್ಕಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಿದರು.

ಜಿಲ್ಲೆಯ ಪ್ರಸಿದ್ಧ 'ಕಂಬಳಿ' ಉತ್ಪನ್ನಗಳು ಮೇಳದಲ್ಲಿ ಭಾಗವಹಿಸದ ಬಗ್ಗೆ ವಿಷಾದ ವ್ಯಕ್ತಪಡಿಸಿದರು.ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎಂ.ಎಂ. ಮೈದೂರ ಮಾತನಾಡಿ, ಉತ್ಪಾದನೆ ಎಷ್ಟು ಮುಖ್ಯವೋ ಮಾರುಕಟ್ಟೆಯೂ ಅಷ್ಟೇ ಮುಖ್ಯ. ಗ್ರಾಮಗಳ ಅಭಿವೃದ್ಧಿಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ.



ಸಣ್ಣ ಕೈಗಾರಿಕೆಗಳು ದೊಡ್ಡ ಮಟ್ಟದಲ್ಲಿ ಬೆಳೆಯಬೇಕು, ಆಗ ಮಾತ್ರ ಉತ್ಪಾದಕರು ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರೂ ಸ್ಪರ್ಧೆಗೆ ಒಡ್ಡಿಕೊಂಡಿದ್ದು, ಸರ್ಕಾರದಿಂದ ಲಭ್ಯವಿರುವ ಸೂಕ್ತ ರೀತಿಯ ಮಾರುಕಟ್ಟೆ ಸಹಾಯ ಪಡೆದುಕೊಳ್ಳಲು ಮುಂದಾಗಬೇಕು ಎಂದು ಹೇಳಿದರು.

ಗ್ರಾಮೀಣ ಕೈಗಾರಿಕಾ ವಿಭಾಗದ ಉಪನಿರ್ದೇಶಕ ರಾಜೇಂದ್ರ ನಾಮದೇವ ಕದಂ ಮಾತನಾಡಿ, ಫೆ.28ರಿಂದ ಮಾ.4ರ ವರೆಗೆ ಒಟ್ಟು 5 ದಿನಗಳ ಕಾಲ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದ್ದು, 25 ಮಳಿಗೆಗಳಲ್ಲಿ ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಸೌಲಭ್ಯ ಒದಗಿಸಲಾಗಿದೆ. ಹಾವೇರಿ ಜಿಲ್ಲೆಯ ಕುಶಲಕರ್ಮಿಗಳು, ಖಾದಿ ಗ್ರಾಮೋದ್ಯೋಗ, ಕೈಮಗ್ಗ ಹಾಗೂ ಸ್ವ-ಸಹಾಯ ಗುಂಪುಗಳಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಈ ಮೇಳ ಆಯೋಜಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ಗೃಹ ಉತ್ಪನ್ನಗಳನ್ನು ಖರೀದಿಸುವ ಮೂಲಕ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖಂಡ ಪ್ರಸನ್ನ ಹಿರೇಮಠ ಸೇರಿದಂತೆ ಜಿಲ್ಲೆಯ ಸ್ವ-ಸಹಾಯ ಉತ್ಪಾದಕರು ಹಾಗೂ ಇತರರು ಉಪಸ್ಥಿತರಿದ್ದರು.

ವೇಗದೂತ ಬಸ್ ಸಂಚಾರಕ್ಕೆ ಶಾಸಕ ಚಾಲನೆ

◆**ಹಾನಗಲ್ಲ** : ಇಲ್ಲಿನ ಬಸ್ ನಿಲ್ದಾಣದಲ್ಲಿ ಜನತೆಯ ಬಹುದಿನಗಳ ಬೇಡಿಕೆ ಹಾನಗಲ್ಲ, ತಿಳವಳ್ಳಿ, ಬೆಂಗಳೂರು ನೂತನ ಮಾರ್ಗದ ವೇಗದೂತ ಬಸ್ ಸಂಚಾರಕ್ಕೆ ಶಾಸಕ ಶ್ರೀನಿವಾಸ ಮಾನೆ ಚಾಲನೆ ನೀಡಿದರು.

ನಿತ್ಯ ರಾತ್ರಿ 8 ಗಂಟೆಗೆ ಹಾನಗಲ್ಲ ಬಸ್ ನಿಲ್ದಾಣದಿಂದ ಹೊರಡಲಿರುವ ಬಸ್ 8.30ಗಂಟೆಗೆ ತಿಳವಳ್ಳಿ, ಹಂಸಭಾವಿ, ರಾಣೇಬೆನ್ನೂರು, ದಾವಣಗೆರೆ, ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರಿಗೆ ತೆರಳಲಿದೆ. ಅತ್ತ ಬೆಂಗಳೂರಿನಿಂದ ರಾತ್ರಿ 10 ಗಂಟೆಗೆ ಮರಳಿ ಅದೇ ಮಾರ್ಗದ ಮೂಲಕ ತಿಳವಳ್ಳಿ ನಂತರ ಹಾನಗಲ್ಲಗೆ ಬಸ್ ಮರಳಲಿದೆ.

ಬೆಂಗಳೂರಿಗೆ ನೇರವಾಗಿ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ಬಸ್ ಓಡಿಸಬೇಕು ಎನ್ನುವುದು ತಿಳವಳ್ಳಿ ಸೇರಿದಂತೆ ಸುತ್ತಲಿನ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿತ್ತು. ಅದೀಗ ಈಡೇರಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಬಸ್‌ನ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊಸ ಬಸ್‌ಗಳನ್ನು ಒದಗಿಸಿರಲಿಲ್ಲ, ಕಳೆದ 2 ವರ್ಷಗಳಲ್ಲಿ 15 ಕ್ಕೂ ಹೆಚ್ಚು ಬಸ್‌ಗಳನ್ನು ಒದಗಿಸಲಾಗಿದೆ. ಇನ್ನಷ್ಟು ಹೊಸ ಬಸ್‌ಗಳು ಶೀಘ್ರ ಸಿಗಲಿವೆ ಎಂದು ಹೇಳಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಬಗರ್ ಹುಕುಂ ಸಮಿತಿ ಅಧ್ಯಕ್ಷ ಪುಟ್ಟಪ್ಪ ನರೇಗಲ್, ಪುರಸಭೆ ಮಾಜಿ ಅಧ್ಯಕ್ಷರಾದ ಖುರ್ಷಿದ ಹುಲ್ಲತ್ತಿ, ಮಮತಾ ಆರೆಗೊಪ್ಪ, ಘಟಕ ವ್ಯವಸ್ಥಾಪಕ ಪರಶುರಾಮ ಪ್ರಭಾಕರ, ಸಂಚಾರ ನಿರೀಕ್ಷಕ ಎನ್.ಬಿ.ಚವ್ಹಾಣ,

ಮುಖಂಡರಾದ ಅಶೋಕ ಆರೆಗೊಪ್ಪ, ಇರ್ಫಾನ್ ಮಿಠಾಯಿಗಾರ, ರಾಜಕುಮಾರ ಶಿರಪಂಥಿ, ಗೌಸ್ ತಾಂಡೂರ, ನಾಸೀರ್ ಮತ್ತಿಹಳ್ಳಿ, ವಿರುಪಾಕ್ಷ ತಳವಾರ, ಬಾಬಾಜಾನ್ ಕೊಂಡೆವಾಡೆ, ರಾಜೂ ಗುಡಿ, ಸುರೇಶ ನಾಗಣ್ಣನವರ, ಮರ್ದಾನ್ ಬಡಗಿ, ನಿಯಾಜ್ ಸರ್ವಿಕೇರಿ, ಮೇಘಾ ಸುಲಾಖೆ, ಉಮೇಶ ಮಾಳಗಿ ಸೇರಿದಂತೆ ಇನ್ನೂ ಹಲವರು ಇದ್ದರು.



ಬಾಲ, ಕಿಶೋರ ಕಾರ್ಮಿಕ ಕಾಯ್ದೆ ಕುರಿತು ಜಾಗೃತಿ

◆**ಬ್ಯಾಡಗಿ:** ಪಟ್ಟಣದ ಬಟ್ಟೆ ಅಂಗಡಿ, ಹೋಟೆಲ್, ಗ್ಯಾರೇಜ್ ಅಂಗಡಿ, ಇಟ್ಟಿಗೆ ಬಟ್ಟೆ ತಯಾರಿಕಾ ಸ್ಥಳಗಳಲ್ಲಿ ಬಾಲ ಮತ್ತು ಕಿಶೋರ ಕಾರ್ಮಿಕರ ತಪಾಸಣೆ ನಡೆಸಲಾಯಿತು.

ಪಟ್ಟಣದಲ್ಲಿ ಏನ್‌ಸಿಪಿಸಿಆರ್ ಎಸ್ ಆರ್ಗನೈಜೇಷನ್ ಫಾರ ಇಂಡಿಯಾ ರಿಸೋಸ್ ಮತ್ತು ರಿ ಹ್ಯಾಬಿಲೆಶನ್ ಚಾಂಪಿಯನ್ ಫಾರ್ ಯೆರಾಡಿಕೇಷನ್ ಆಫ್ ಚೈಲ್ಡ್ ಅಂಡ್ ಲೇಬರ್ ಇದರ ಅಂಗವಾಗಿ ತಾಲೂಕು ದಂಡಾಧಿಕಾರಿಗಳಾದ ಚಂದ್ರಶೇಖರ್ ನಾಯಕ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಎಂ.ಎಫ್.ನದಾಫ್ ಹಾಗೂ ಬಿಸಿಎಂ ಇಲಾಖೆ ಅಧಿಕಾರಿ ಸಿ.ಬಿ.ಪ್ರಸಾದಿಮಠ. ಇವರ ಹಾಗೂ ಹಾವೇರಿಯ ಎಸ್‌ಎಸ್‌ಸಿಎಲ್‌ಪಿ ನಿರ್ದೇಶಕರಾದ ರಾಘವೇಂದ್ರ ಶಿರೂರು ಇವರುಗಳು ತಪಾಸಣೆ ನಡೆಸಿದರು.

ಅಂಗಡಿಗಳ ಮಾಲೀಕರಿಗೆ ಬಾಲ ಮತ್ತು ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣದ ಕಾಯ್ದೆ 1986 ತಿದ್ದುಪಡಿ ಕಾಯ್ದೆ, 2016 ಕುರಿತು ಬಿತ್ತಿ ಪತ್ರ ಮತ್ತು ಕರಪತ್ರವನ್ನು ನೀಡಿ ಜಾಗೃತಿ ಮೂಡಿಸಿದರು.

ಶಾಲಾ ಶಿಕ್ಷಣ ಇಲಾಖೆ ಸಿಬ್ಬಂದಿ ಶರತ್ ಕುಮಾರ್, ಕೃಷಿ ಇಲಾಖೆ ಸಿಬ್ಬಂದಿ ಪ್ರಕಾಶ್ ಹುಲ್ಲೂರ್, ಪುರಸಭೆ ಇಲಾಖೆ ಸಿಬ್ಬಂದಿ ಶ್ರುತಿ ಓಲೆಕಾರ್, ಪೋಲಿಸ್ ಇಲಾಖೆಯ ಸಿಬ್ಬಂದಿ ಮಹೇಶ್ ಮಲ್ಲನಗೌಡ ಸೇರಿದಂತೆ ವಿನಯ್ ಶಿರೂರ್, ಮಂಜು ಹುರಗಿ, ಉಮೇಶ್ ಹಾಗೂ ಕಾರ್ಮಿಕ ಇಲಾಖೆ ಸಿಬ್ಬಂದಿ ಪುನೀತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ರೇಣುಕಾಚಾರ್ಯರ ಸಿದ್ಧಾಂತದ ಅರಿವು ಮೂಡಿಸಿ

◆**ಹಾನಗಲ್ಲ:** ಅಖಂಡ ವೀರಶೈವ ಲಿಂಗಾಯತ ಸ್ಥಾಪನೆ ಮಾಡಿದ್ದ ಜಗದ್ಗುರು ರೇಣುಕಾಚಾರ್ಯರು 1400 ವರ್ಷಗಳು ಈ ಭೂಮಿಯಲ್ಲಿ ವಾಸವಿದ್ದರು ಎಂಬುದು ಇತಿಹಾಸ ಎಂದು ಅಕ್ಕಿಆಲೂರ ಮುತ್ತಿನಕಂತಿಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಭಾನುವಾರ ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿಯಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.ರೇಣುಕಾಚಾರ್ಯರು ಬರೆದ ಸಿದ್ಧಾಂತ ಶಿಖಾಮಣಿ ಧರ್ಮಗ್ರಂಥವು ಜಗತ್ತಿನ 35 ಭಾಷೆಗಳಲ್ಲಿ ಪ್ರಕಟವಾಗಿದೆ. ಅಂಗದ ಮೇಲೆ ಲಿಂಗ ಇರಬೇಕು ಎನ್ನುವ ಸಿದ್ಧಾಂತವನ್ನು ಅವರು ರೂಢಿಸಿದರು. ಬೃಹತ್ ಜಾಥಾ ಕೈಗೊಂಡು ಜನಮಾನಸದಲ್ಲಿ ರೇಣುಕಾಚಾರ್ಯರ ಸಿದ್ಧಾಂತಗಳ ಅರಿವು ಮೂಡಿಸುವ ಕೆಲಸವಾಬೇಕು ಎಂದರು.

ಕೂಡಲ ಗುರುನಂಜೇಶ್ವರ ಮಠದ ಗುರುಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಸಿದ್ಧಾಂತ ಶಿಖಾಮಣಿ ಗ್ರಂಥವು ಮಾನವನ ಸಲಕ ಸಮಸ್ಯೆಗಳ ನಿವಾರಣೆಯ ಸ್ಫೂರ್ತಿಯಾಗಿದೆ ಎಂದರು.ಜಂಗಮ ಸಮಾಜದ ತಾಲೂಕು ಘಟಕದ ಅಧ್ಯಕ್ಷ ರವಿಕಿರಣ ಪಾಟೀಲ, ಮುಖಂಡ ಸಿದ್ದಲಿಂಗಣ್ಣ ಕಮಡೊಳ್ಳಿ ಮಾತನಾಡಿದರು.



ಶಾಂತಯ್ಯ ಹಿರೇಮಠ ಅವರು ಪ್ರಾಸ್ತಾವಿಕ ಮಾತನಾಡಿದರು. ಸಮಾಜದ ಪ್ರಮುಖರಾದ ಶಿವಯೋಗಿ ಹಿರೇಮಠ, ಡಾ.ಸುನಿಲ ಹಿರೇಮಠ, ಶಿವಕುಮಾರ ದೇಶಮುಖ, ರಾಜಶೇಖರ ಹಲಸೂರ, ಶಂಭುಲಿಂಗಯ್ಯ ಚಿಕ್ಕಮಠ, ಮಧುಮತಿ ಪೂಜಾರ, ಆರ್.ಸಿ.ಹಿರೇಮಠ, ನಾಗಪ್ಪ ಸವದತ್ತಿ, ಮಲ್ಲಿಕಾರ್ಜುನ ಜಿಗರಿಮಠ, ಜಗದೀಶ ಸಾಲಿಮಠ, ವಿಶ್ವನಾಥ ಆರಾಧ್ಯಮಠ, ಶಿವಯೋಗಿ ಅರಳಲೇಮಠ, ಚಿದಾನಂದ ಹಿರೇಮಠ, ಎಸ್.ಎಂ.ಮಹಾಂತಿನಮಠ, ಗಂಗಾಧರ ಹಿರೇಮಠ, ವಿ.ಜಿ.ಮೂಡಿಮಠ, ಗುರುಸಿದ್ದಯ್ಯ ಹಿರೇಮಠ ಮತ್ತು ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಖಾಯಂ ರೈಲ್ವೆ ನಿಲುಗಡೆಗೆ ಒತ್ತಾಯ

◆**ಬ್ಯಾಡಗಿ:** ಬ್ಯಾಡಗಿ ಪಟ್ಟಣವು ಏಷ್ಯಾ ಖಂಡದಲ್ಲಿ ಮೆಣಸಿನಕಾಯಿ ವ್ಯಾಪಾರಕ್ಕೆ ಹೆಸರು ಮಾಡಿದ್ದು, ವರ್ಷಕ್ಕೆ ಎರಡು ಸಾವಿರ ಕೋಟಿ ವಹಿವಾಟು ನಡೆಯುತ್ತದೆ ಇಂತಹ ಸ್ಥಳದಲ್ಲಿ ಕಳೆದ ಆರು ವರ್ಷಗಳಿಂದ ಯಾವುದೇ ವೇಗದ ರೈಲ್ವೆ ನಿಲುಗಡೆಯಾಗಿಲ್ಲ ಎಂದು ಹುಬ್ಬಳ್ಳಿ ಕರ್ನಾಟಕ ವಾಣಿಜ್ಯದ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಜೆಡ್ ಆರ್ ಸಿ ಸಿ ಸದಸ್ಯರಾದ ಜಿಕೆ ಮಾದಪ್ಪ ಗೌಡ್ರು ಹೇಳಿದರು.

ತಾಲೂಕಿನ ರೈಲ್ವೆ ಪ್ರಾಮಾಣಿಕರ ಕ್ಷೇಮಾಭಿವೃದ್ಧಿ ಹಾಗು ಸುಧಾರಣಾ ಸಮಿತಿಯ ನಿಯೋಗವು ನಡೆಸಿದ ಚರ್ಚೆ ವೇಳೆ ಅವರು ಮಾತನಾಡಿ, ಬ್ಯಾಡಗಿ ಸಮಿತಿಯವರು ಹಲವಾರು ಬಾರಿ ತಮಗೆ ಮನವಿ ಹಾಗೂ ದೆಹಲಿ ಹೋಗಿ ಸಚಿವರಿಗೆ, ಸಂಸದರಿಗೆ ಮನವಿ ಮಾಡಿದ್ದರು ಸಹ ನಿಲುಗಡೆ ಆಗುತ್ತಿಲ್ಲ ಎಂದು ಹೇಳಿದರು.



ಸಮಿತಿಯ ಅಧ್ಯಕ್ಷ ಹಾಗೂ ಡಿಆರ್‌ಸಿಸಿಯು ಮಾಲತೇಶ್ ಅರಳಿಮಟ್ಟಿ ಮಾತನಾಡಿ, ಯಶವಂತಪುರ -ವಾಸ್ಕೋ ಹಾಗೂ ಬೆಂಗಳೂರು -ಹುಬ್ಬಳ್ಳಿ ರಾತ್ರಿ ಸಂಚಾರ ಮಾಡುವ ವೇಗದ ರೈಲ್ವೆ ಗಳ ನಿಲುಗಡೆಯನ್ನು ಆರು ತಿಂಗಳವರೆಗೆ ತಾತ್ಕಾಲಿಕವಾಗಿ ನಿಲುಗಡೆ ಮಾಡಿರಿ ಅದರ ಆದಾಯ ನೋಡಿಕೊಂಡು ಮುಂದೆ ಖಾಯಂ ಮಾಡಿ ಎಂದು ಹೇಳಿದರು.

ಈ ವೇಳೆ ಸಮಿತಿಯ ಉಪಾಧ್ಯಕ್ಷ ಪರಶುರಾಮ್ ಮೇಲಗಿರಿ ಜಂಟಿ ಗೌರವ ಕಾರ್ಯದರ್ಶಿ, ಬಸಣ್ಣ ಹಂಜಿ ಹಾಗೂ ರೈಲ್ವೆ ಇಲಾಖೆ ಆರ್ಥಿಕ ಅಧಿಕಾರಿ ನಾಯಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸರ್ಕಾರ ಭೂ ಮಾಪಕರ ಹುದ್ದೆ ಖಾಯಂಗೊಳಿಸಲಿ: ಹೊನ್ನವ್ವ ತಳವಾರ

◆**ಸವಣೂರ :** ಕಳೆದ ಹಲವಾರು ವರ್ಷಗಳಿಂದ ತಾಲೂಕಿನಲ್ಲಿ ಪರವಾನಿಗೆ ಪಡೆದ ಭೂ ಮಾಪಕರಾಗಿ ಸೇವೆ ಸಲ್ಲಿಸುತ್ತಿರುವ ಭೂಮಾಪಕರನ್ನು ಖಾಯಂಗೊಳಿಸಿ ಸರ್ಕಾರಿ ನೌಕರರಿಗೆ ಸಿಗುವ ಸೇವಾ ಸೌಲಭ್ಯಗಳನ್ನು ಒದಗಿಸಬೇಕೆಂದು ರಾಜ್ಯ ಸರ್ಕಾರಿ ಪರವಾನಿಗೆ ಭೂ ಮಾಪಕರ ಸಂಘದ ಸದಸ್ಯೆ ಹೊನ್ನವ್ವ ತಳವಾರ ಹೇಳಿದರು.

ರಾಜ್ಯ ಸರ್ಕಾರಿ ಪರವಾನಿಗೆ ಭೂಮಾಪಕರ ಸಂಘದಿಂದ ಭೂಮಾಪಕರ ಸೇವೆ ಖಾಯಂ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಮುಷ್ಕರದ ಹಿನ್ನಲೆಯಲ್ಲಿ ಸವಣೂರ ಭೂ ದಾಖಲೆಗಳ ಉಪ ನಿರ್ದೇಶಕ ದೇವಯ್ಯ ಎಂ.ಕೆ. ಮೂಲಕ ಮನವಿ ಸಲ್ಲಿಸಿ ಮಾತನಾಡಿದರು.

ಹಲವಾರು ವರ್ಷಗಳಿಂದ ತಾಲೂಕಿನಲ್ಲಿ ಪರವಾನಿಗೆ ಪಡೆದ ಭೂ ಮಾಪಕರಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಸೇವೆಗೆ ತಕ್ಕಂತೆ ಸಮಾನ ವೇತನ ನೀಡುತ್ತಿಲ್ಲ, ಇದರಿಂದ ಜೀವನ ನಿರ್ವಹಣೆ ತುಂಬಾ ಕಷ್ಟವಾಗಿದೆ ಎಂದರು.

ಸೇವಾ ಭದ್ರತೆ ಹಾಗೂ ಜೀವನ ಭದ್ರತೆ ಹಾಗೂ ಭೂಮಾಪಕರ ಹುದ್ದೆ ಖಾಯಂ ನೇಮಕ ಮಾಡಿಕೊಂಡು ಸೂಕ್ತ ವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವವರೆಗೂ ಕಾರ್ಯ ನಿರ್ವಹಿಸುವುದಿಲ್ಲ, ರಾಜ್ಯ ಸಂಘಟನೆ ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸವಣೂರ ತಾಲೂಕ ಘಟಕದ ಎಲ್ಲ ಭೂಮಾಪಕ ಸಿಬ್ಬಂಧಿಗಳ ಬೆಂಬಲವಿದೆ ಎಂದರು.

ಈ ಸಂದರ್ಭದಲ್ಲಿ ಭೂ ಮಾಪನಾ ತಪಾಸಕ ಮಹೇಶ ಒಡೆಯರ, ಸಹಾಯಕ ಭೂಮಾಪಕರಾದ ಶಿವಕುಮಾರ ಅಂಬಲಿ, ಮಂಜುನಾಥ ಮಣ್ಣೂರ, ಪ್ರಶಾಂತ ಸಂತಣ್ಣನವರ, ಪ್ರವೀಣ ತಳವಾರ, ನಾಗರಾಜ ಗುತ್ತಲ, ಮಹೇಶ ಮಲಗುಂದ, ಮಹಮ್ಮದ ಕೈಫ್ ಇದ್ದರು.

ಮಕ್ಕಳಿಗೆ ವಿಜ್ಞಾನದ ಅರಿವು ಅಗತ್ಯ: ಪಾಟೀಲ

◆**ಹಾವೇರಿ:** ನಿತ್ಯ ಜೀವನದಲ್ಲಿ ವಿಜ್ಞಾನವು ಉಸಿರುಸಿರಿನಲ್ಲಿ ಸಮ್ಮಿಳತಗೊಂಡಿದೆ. ವಿಜ್ಞಾನ ವಿಲ್ಲದಿದ್ದರೆ ನಾಗರಿಕ ಜೀವನ ಆದಿ ಮಾನವನಂತೆ ಅನಾಗರಿಕವಾಗುತ್ತಿತ್ತು. ವಿಜ್ಞಾನಗಳ ಶೋಧನೆಗಳಿಂದಾಗಿ ಇಂದಿನ ಜೀವನ ಹೆಚ್ಚು ಸುಲಭವಾಗಿದೆ. ಬಾಲ್ಯದಲ್ಲಿಯೇ ಮಕ್ಕಳಿಗೆ ವಿಜ್ಞಾನದ ಅಗತ್ಯದ ಅರಿವು ಮೂಡಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ ಹೇಳಿದರು.

ತಾಲೂಕಿನ ಕೋಳೂರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ವಿಜ್ಞಾನ ವಸ್ತುಗಳು ಮತ್ತು ಮಾದರಿಗಳ ಪ್ರದರ್ಶನ ಹಾಗೂ ವಿಜ್ಞಾನ ರಂಗೋಲಿ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಸ್ಡಿಎಂಸಿ ಅಧ್ಯಕ್ಷ ಹಸನ್ ಸಾಬ ಮುಂದಿನಮನಿ ಅಧ್ಯಕ್ಷತೆವಹಿಸಿದ್ದರು. ಸಾಹಿತಿ ಹನುಮಂತಗೌಡ ಗೊಲ್ಲರ ಮತ್ತು ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಅವರು ವಿಜ್ಞಾನದ ಜೊತೆಗ ವೈಚಾರಿಕ ಮನೋಭಾವವನ್ನು ನಾವು ಬೆಳಸಬೇಕಾಗಿದೆ ಎಂದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸಮಿತಿ ಸದಸ್ಯೆ ರೇಣುಕಾ ಗುಡಿಮನಿ, ಸಿಆರ್‌ಪಿ ಮಾಲತೇಶ ದೊಡ್ಡಮನಿ, ಪ್ರಧಾನ ಗುರುಗಳಾದ ಎಂ.ಕೆ. ಹೊನ್ನಜ್ಜೇರ, ಆರ್.ಕೆ. ಸಣ್ಣಮನಿ, ಟಿ.ಜಿ. ಬಡಪ್ಪನವರ, ಸಣ್ಣಪ್ಪ ಮ್ಯಾಗಳಕೇರಿ, ಜುಬೇದಾ ನಾಯಕ್, ಅಕ್ಕಮಹಾದೇವಿ ಹಾನಗಲ್ಲ, ರೇಖಾ ಮಂಟಗಣಿ, ಪ್ರತಿಮಾ ಹೋಳಗಿ, ರೇಷ್ಮಾ ತುರ್ಕಗೌಡರ ಉಪಸ್ಥಿತರಿದ್ದರು.



ಭಾರತ ಜ್ಞಾನ ವಿಜ್ಞಾನ ಸಮಿತಿಯ ತಾಲೂಕಾ ಕಾರ್ಯದರ್ಶಿ, ಸಾಹಿತಿ ನಾಗರಾಜ ಹುಡೇದ ಸಂಪಾದಿಸಿದ ಕೊಡಗೂಸು ಪತ್ರಿಕೆಯನ್ನು ಸಾಹಿತಿ ಹನುಮಂತಗೌಡ ಗೊಲ್ಲರ ಬಿಡುಗಡೆ ಮಾಡಿದರು. ವಿಜ್ಞಾನ ಶಿಕ್ಷಕಿ ಸಹನಾ ವಡ್ಡಿಕೊಪ್ಪ ವಿಜ್ಞಾನ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಶಿಕ್ಷಕ ಬಿ.ಬಿ. ನಾಣಾಪೂರ ಕಾರ್ಯಕ್ರಮ ನಿರೂಪಿಸಿದರೆ, ಕೊನೆಗೆ ಬೆಳ್ಳಟ್ಟಿಮಠ ವಂದಿಸಿದರು.

ಜಲ ಮನೋರಂಜನಾ ಉದ್ಯಾನವನ ಉದ್ಘಾಟನೆ | ಸಚಿವ ಪಾಟೀಲ ಹೇಳಿಕೆ

ಅಣೆಕಟ್ಟು ಎತ್ತರಿಸಲು ಸರ್ಕಾರ ಬದ್ಧ

•ವಿಜಯಪುರ (ಆಲಮಟ್ಟಿ): ಐತಿಹಾಸಿಕ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524 ಮೀಟರ್ ಗೆ ಏರಿಸುವ ಮೂಲಕ ಈ ಭಾಗಕ್ಕೆ ನ್ಯಾಯ ಕೊಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಡಾ. ಎಂ.ಬಿ. ಪಾಟೀಲ ಹೇಳಿದರು.

ಜಲಸಂಪನ್ಮೂಲ ಇಲಾಖೆ,ಕೃಷ್ಣಾ ಭಾಗ್ಯ ಜಲ ನಿಗಮದ ಸಹಯೋಗದಲ್ಲಿ ಭಾನುವಾರ ಆಲಮಟ್ಟಿಯಲ್ಲಿ ನಿರ್ಮಾಣವಾದ ಜಲ ಮನೋರಂಜನಾ ಉದ್ಯಾನವನ ಉದ್ಘಾಟಿಸಿ ಅವರು ಮಾತನಾಡಿದರು.

ಜಲಾಶಯದ ಎತ್ತರ ಹೆಚ್ಚಿಸಲಿಕ್ಕೆ ಪ್ರಥಮ ಆದ್ಯತೆ ನೀಡುವ ಮೂಲಕ ನಮ್ಮ ಪಾಲಿನ ಶೇ. 90ರಷ್ಟು ನೀರನ್ನು ನಮ್ಮ ರೈತರಿಗೆ ಒದಗಿಸಲಾಗುವುದು ಎಂದರು.

ಇದಕ್ಕೆ ಕೇವಲ 3 ವರ್ಷಗಳ ಗಡುವಿನಲ್ಲಿ ಈ ಭಾಗದ ಭೂಮಿ ಹಾಗೂ ಕಾಲುವೆಗೆ ನೀರು ಪೂರೈಸಲಿಕ್ಕೆ ನಾವೆಲ್ಲ ಐತಿಹಾಸಿಕ ನಿರ್ಣಯ ಕೈಗೊಂಡಿದ್ದೇವೆ.ಆಲಮಟ್ಟಿ ಅಣೆಕಟ್ಟು ರಾಜ್ಯದಲ್ಲೇ ದೊಡ್ಡ ಜಲಾಶಯ. ಈ ಜಲಾಶಯದ ಎತ್ತರ ಹೆಚ್ಚಿಸಿದರೆ, ಈಗಿರುವ 130 ಟಿಎಂಸಿ ಬದಲಿಗೆ 233 ಟಿಎಂಸಿ ನೀರು ಸಂಗ್ರಹಿಸುವುದರೊಂದಿಗೆ ರಾಜ್ಯದಲ್ಲಿಅತೀ ದೊಡ್ಡ ಜಲಾಶಯ ನಮ್ಮದಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರು, ಕೃಷ್ಣಾ ಮೇಲ್ದಂಡೆ ರಾಷ್ಟ್ರೀಯ ಯೋಜನೆಯಾಗಲಿ ಎಂದ ಓ ಅವರು ಕೇಂದ್ರ ಹಾಗೂ ರಾಜ್ಯ ಕೇಂದ್ರ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು ಎಂದು ಒತ್ತಾಯಿಸಿದ ಅವರು, ರಾಷ್ಟ್ರಕ್ಕೆ ಬಲು ದೊಡ್ಡ ಕೊಡುಗೆ ನೀಡಿದಂತಾಗುವುದು ಎಂದರು.

ಇನ್ನೊಂದೆಡೆ ಆಲಮಟ್ಟಿ ಜಲಾಶಯ ನಮ್ಮ ಜಿಲ್ಲೆಗೆ ದೊಡ್ಡ ವರದಾನವಾಗಿ ಹೊರಹೊಮ್ಮಲಿದೆ. ಇಲ್ಲಿಯವರೆಗೆ ಈ ಜಲಾಶಯಕ್ಕಾಗಿ ಬಹಳಷ್ಟು ಜಮೀನು ಕಳೆದುಕೊಂಡ ಸಂತ್ರಸ್ತರು ನಮ್ಮವರೇ. ಜೊತೆಗೆ ಡ್ಯೋಗೀಕ ಕ್ರಾಂತಿಗೆ ಹೆಚ್ಚು ಜಮೀನು ಕಳೆದುಕೊಂಡವರು ಬಸವನಬಾಗೇವಾಡಿ ಮತಕ್ಷೇತ್ರದ ರೈತರು. ಹಾಗಾಗಿ ಸರಕಾರಿ ನೇಮಕಾತಿಯಲ್ಲಿ ಈ ಭಾಗದ ಸಂತ್ರಸ್ತರಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಹಿರಿಯರು ಮನವಿ ಸಲ್ಲಿಸಿದ್ದಾರೆ. ಸಂತ್ರಸ್ತರ ಈ ಮನವಿಯನ್ನು ಸರಕಾರದ ಗಮನ ಸೆಳೆಯಲಾಗುವುದು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಬಿ.ಎಸ್ ಕವಲಗಿ, ಜಲಸಂಪನ್ಮೂಲ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಆಲಮಟ್ಟಿ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಮೂರ್ತಿ ಕುಲಕರ್ಣಿ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಹಳೆಮನಿ ಇದ್ದರು.



ಆಲಮಟ್ಟಿ ಜಲಾಶಯದ ನೀರನ್ನು ವ್ಯರ್ಥವಾಗಿ ಸಮುದ್ರಕ್ಕೆ ಬಿಡುವ ಬದಲಿಗೆ, ಸದ್ಬಳಕೆ ಮಾಡಿಕೊಳ್ಳಬೇಕಿದೆ. ಆಲಮಟ್ಟಿ ಜಲಾಶಯ ಕೇವಲ ಕರ್ನಾಟಕದ ಯೋಜನೆಯಲ್ಲ, ನಾಲ್ಕು ರಾಜ್ಯಗಳಿಗೆ ದೊಡ್ಡ ಕೊಡುಗೆ ನೀಡುವ ಬೃಹತ್ ಯೋಜನೆಯಿದು. ಹಾಗಾಗಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು.
■ ಶಿವಾನಂದ ಪಾಟೀಲ, ಸಚಿವ

ಅಣು ಶಕ್ತಿ ಆಯೋಗದ ಅಧ್ಯಕ್ಷ ಡಾ.ಅಜಿತ್ ಕುಮಾರ್ ಮೊಹಂತಿ ಹೇಳಿಕೆ

ಅಣು ವಿದ್ಯುತ್ ಉತ್ಪಾದನೆಯಲ್ಲಿ ಸಂಪೂರ್ಣ ಆತ್ಮ ನಿರ್ಭರತೆ ಸಾಧನೆ

•ಕಾರವಾರ: ದೇಶದಲ್ಲಿ ಅಣು ವಿದ್ಯುತ್ ಘಟಕಗಳ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಸಂಪೂರ್ಣ ಸ್ವದೇಶಿ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಂಪೂರ್ಣ ಸ್ವಾವಲಂಬನೆ ಹೊಂದಿದ್ದು ಆತ್ಮ ನಿರ್ಭರತೆ ಸಾಧಿಸಲಾಗಿದೆ ಎಂದು ಅಣು ಶಕ್ತಿ ಆಯೋಗದ ಅಧ್ಯಕ್ಷ ಹಾಗೂ ಕೇಂದ್ರ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿ ಡಾ. ಅಜಿತ್ ಕುಮಾರ್ ಮೊಹಂತಿ ತಿಳಿಸಿದರು.

ಅವರು ಭಾನುವಾರ ಕೈಗಾದಲ್ಲಿ 5 ಮತ್ತು 6 ನೇ ಘಟಕದ ಪ್ರಥಮ ಕಾಂಕ್ರೀಟೀಕರಣಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶವು 2047ಕ್ಕೆ 100 ಗಿಗಾ ವ್ಯಾಟ್ ಅಣುವಿದ್ಯುತ್ ಉತ್ಪಾದನೆಯ ಗುರಿ ಹೊಂದಿದ್ದು, ಇದಕ್ಕಾಗಿ ಎನ್‌ಪಿಸಿಐಎಲ್ ವತಿಯಿಂದ 54 ಗಿಗಾವ್ಯಾಟ್ ಉತ್ಪಾದನೆಯನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಅಣು ವಿದ್ಯುತ್ ಉತ್ಪಾದನೆಗೆ ನೀರಿನ ಒತ್ತಡದ ರಿಯಾಕ್ಟರ್‌ಗಳು, ಲಘು ನೀರಿನ ರಿಯಾಕ್ಟರ್‌ಗಳು ಮತ್ತು ಹೊಸದಾಗಿ ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳನ್ನು ಆರಂಭಿಸುವ ಉದ್ದೇಶವನ್ನು ಹೊಂದಲಾಗಿದ್ದು, ಈಗಾಗಲೇ ಇದರ ಆರಂಭಿಕ ಕಾರ್ಯಗಳನ್ನು ಪ್ರಾಯೋಗಿಕವಾಗಿ ನಡೆಸುತ್ತಿದ್ದು, ಅಣು ವಿದ್ಯುತ್ ಉತ್ಪಾದನೆಯಲ್ಲಿ ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು. ಕೈಗಾದಲ್ಲಿ ಉದ್ದೇಶಿತ 5 ಮತ್ತು 6ರ ನೂತನ ಘಟಕಗಳ ಸುಮಾರು 60 ತಿಂಗಳಲ್ಲಿ ವಿದ್ಯುತ್ ಉತ್ಪಾದನಾ ಹಂತವನ್ನು ಸಾಧಿಸುವ ನಿರೀಕ್ಷೆಯಿದ್ದು, ಮೊದಲ ಬಾರಿಗೆ, ಈ ಯೋಜನೆಯ ನಿರ್ಮಾಣವನ್ನು ಕೆಲವೇ ಮೆಗಾ EPC ಪ್ಯಾಕೇಜ್‌ಗಳನ್ನು (ಉತ್ಪನ್ನ, ಪರಮಾಣು ದ್ವೀಪ, ಟರ್ಬೈನ್ ದ್ವೀಪ ಮತ್ತು ಪರಮಾಣು ಉಪಕರಣಗಳಂತಹವು) ಒಳಗೊಂಡ ನವೀನ ಕಾರ್ಯತಂತ್ರವನ್ನು ಅಳವಡಿಸಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಇದು ಯೋಜನೆಯನ್ನು ವೇಗವಾಗಿ ಕಾರ್ಯಗತಗೊಳಿಸಲು ಮತ್ತು ವಿವಿಧ ಪ್ಯಾಕೇಜ್‌ಗಳ ನಡುವೆ ಸಮನ್ವಯ ಸಾಧಿಸಿ, ಅತೀ ಕಡಿಮೆ ಸಮಯದಲ್ಲಿ ಮತ್ತು ವೆಚ್ಚದಲ್ಲಿ ಯೋಜನೆಯ ಕಾರ್ಯಾನ್ವಯಕ್ಕೆ ಅನುವು ಮಾಡಿಕೊಡುತ್ತದೆ ಎಂದರು.

ಕೈಗಾದ 5 ಮತ್ತು 6 ನೇ ಘಟಕಗಳು ಅತ್ಯಾಧುನಿಕ, ಭಾರತೀಯ ತಂತ್ರಜ್ಞಾನದ 700 MW PHWR ಗಳಾಗಿದ್ದು, ಇವು ಸುಧಾರಿತ ಸುರಕ್ಷತಾ ವೈಶಿಷ್ಟ್ಯಗಳನ್ನು ಒಳಗೊಂಡಿವೆ ಮತ್ತುವಿಶ್ವದ ಅತ್ಯಂತಸುರಕ್ಷಿತವಾದ ಅಣುಸ್ಥಾವರಗಳ ಸಾಲಿಗೆ ಸೇರಿವೆ. ಇಂತಹದ್ದುಮೂರು ಘಟಕಗಳು ಕ್ರಮವಾಗಿ KAPS-3&4 ಮತ್ತು RAPP-7, ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಯೋಜನೆಗೆ ಸಂಬಂಧಿಸಿದ ಸಾಮಗ್ರಿಗಳು ಮತ್ತು ಉಪಕರಣಗಳನ್ನು ದೇಶೀಯ ಉದ್ಯಮ ಪಾಲುದಾರರು ಪೂರೈಸಲಿದ್ದು ಮತ್ತು ಸರ್ಕಾರದ "ಆತ್ಮನಿರ್ಭರಭಾರತ" ಧ್ಯೇಯಕ್ಕೆ ಅನುಗುಣವಾಗಿ ಕೆಲಸಗಳನ್ನು ಭಾರತೀಯ ಗುತ್ತಿಗೆದಾರರೇ ನಿರ್ವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಎನ್‌ಪಿಸಿಐಎಲ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಭುವನ್ ಚಂದ್ರ ಪಾಠಕ್, ಕೈಗಾ ದ ಸ್ಥಳ ನಿರ್ದೇಶಕ ಬಿ. ವಿನೋದ್ ಕುಮಾರ್ ಹಾಗೂ ಕೈಗಾ 5 ಮತ್ತು 6 ರ ಘಟಕದ ನಿರ್ದೇಶಕ ಕುಲಕರ್ಣಿ ಸೇರಿದಂತೆ ಎನ್.ಪಿ.ಸಿ. ಎಲ್. ಕೈಗಾದ ಹಲವು ಅಧಿಕಾರಿಗಳು ಇದ್ದರು.

ಕೈಗಾದಲ್ಲಿ 5 ಮತ್ತು 6 ನೇ ಘಟಕದ ಪ್ರಥಮ ಕಾಂಕ್ರೀಟೀಕರಣಕ್ಕೆ ಚಾಲನೆ



ಪ್ರಸ್ತುತ ಕೈಗಾ ಸ್ಥಳದಲ್ಲಿ 220 ಮೆಗಾವ್ಯಾಟ್‌ನ ನಾಲ್ಕು ಘಟಕಗಳು ಒಟ್ಟು 880 ಮೆಗಾವ್ಯಾಟ್ ಸ್ಥಾಪಿತ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು 5 ಮತ್ತು 6 ಘಟಕಗಳು ಪೂರ್ಣಗೊಂಡ ನಂತರ, ಇಲ್ಲಿ ಒಟ್ಟು ಸಾಮರ್ಥ್ಯವು 2,280 ಮೆ.ವ್ಯಾಟ್ ಗೆ ಹೆಚ್ಚಳವಾಗಲಿದೆ.
■ ಡಾ.ಅಜಿತ್ ಕುಮಾರ್ ಮೊಹಂತಿ, ಅಣು ಶಕ್ತಿ ಆಯೋಗದ ಅಧ್ಯಕ್ಷ ಹಾಗೂ ಕೇಂದ್ರ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿ

ಕಿರುಸುದ್ದಿ

ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಇಂದು ವಿಚಾರಣೆ

•ಯಾದಗಿರಿ: ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ ಆರೋಪದ ಮೇಲೆ ಸದ್ಯ ಅಜ್ಞಾತ ಸ್ಥಳದಲ್ಲಿರುವ ಪವಾಡ ಪುರುಷ ಖ್ಯಾತಿಯ ಜಿಲ್ಲೆಯ ಶಹಾಪುರ ತಾಲೂಕಿನ ಮಹಲ್ ರೋಜಾ ಗ್ರಾಮದ ಚಾಂಗ್ ದೇವ್ ಮಠದ ಮಲ್ಲಿಕಾರ್ಜುನ ಮುತ್ಯಾ(25) ಜಾಮೀನು ಭವಿಷ್ಯ ಸೋಮವಾರ ಕಲಬುರಗಿ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ನಿರ್ಧಾರವಾಗಲಿದೆ.

ಕಳೆದೊಂದು ವಾರದ ಹಿಂದೆ ಮಲ್ಲಿಕಾರ್ಜುನ ಮುತ್ಯಾ ಅಪ್ರಾಪ್ತ ಬಾಲಕಿಯೊಂದಿಗೆ ಅಪೇಕ್ಷಾರ್ಹ ರೀತಿಯಲ್ಲಿ ಸ್ಪರ್ಶಿಸಿದ್ದ ವಿಡಿಯೋ ಸೋಶಿಯಲ್ ಮಿಡಿಯಾಗಳಲ್ಲಿ ಹರದಾಡಿ, ಎಲ್ಲೆಡೆ ಭಾರಿ ಸದ್ದು ಮಾಡಿತ್ತು. ಭಾರಿ ಪರ, ವಿರೋಧ ಚರ್ಚೆ ನಡೆಸು ಕೊನೆಗೆ ರಾಜ್ಯ ಮಕ್ಕಳ ಆಯೋಗ ಮತ್ತು ಮಹಿಳಾ ಆಯೋಗಗಳು ಸ್ವಯಂ ದೂರು ದಾಖಲು ಮಾಡಿಕೊಂಡಿವೆ.

ಇತ್ತ ಶಹಾಪುರ ತಾಲೂಕಿನ ಗೋಗಿ ಪೊಲೀಸ್ ಠಾಣೆಯಲ್ಲೂ ಸಹ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿದೆ.

ಪ್ರಶ್ನೆಪತ್ರಿಕೆ ಆಮಿಷ; ಚಿನ್ನ ಪಡೆದ ಶಿಕ್ಷಕ

•ಧಾರವಾಡ: ಪರೀಕ್ಷೆಗೆ ಮೊದಲೇ ಎಸ್ಸೆಸ್ಸೆಲ್ಸಿ ಪ್ರಶ್ನೆಪತ್ರಿಕೆ ನೀಡುವ ಆಸೆ ತೋರಿದ ಶಿಕ್ಷಕನೊಬ್ಬ ವಿದ್ಯಾರ್ಥಿಯಿಂದ ಚಿನ್ನದ ಆಭರಣ ಪಡೆದು ವಂಚಿಸಿದ ಪರಿಣಾಮ ವಿದ್ಯಾರ್ಥಿ ವಿಷ ಸೇವಿಸಿದ ಘಟನೆ ನಡೆದಿದೆ.

ಸ್ಥಳೀಯ ಶಿವಗಂಗಾ ನಗರದ ನಿವಾಸಿ ಶಿವಾನಂದ ಕರ್ಜಿ ಎಂಬುವರ ಪುತ್ರನೇ ಆತ್ಮಹತ್ಯೆಗೆ ಯತ್ನಿಸಿದ ವಿದ್ಯಾರ್ಥಿ. ವಿದ್ಯಾರಣ್ಯ ಶಾಲೆಯ ಶಿಕ್ಷಕ ರಾಜೇಶಖರ ಬಡಿಗೇರ ಎಂಬುವನೇ ವಂಚಿಸಿರುವ ಶಿಕ್ಷಕ.

ಪ್ರಕರಣ ಠಾಣೆ ಮೆಟ್ಟಿಲು ಏರಿದಾಕ್ಷಣ ಭಯಗೊಂಡ ವಿದ್ಯಾರ್ಥಿ ಮನೆಯಲ್ಲಿಯೇ ಕೀಟನಾಶಕ ಸೇವಿಸಿದ್ದಾನೆ. ತೀವ್ರ ಅಸ್ವಸ್ಥಗೊಂಡ ವಿದ್ಯಾರ್ಥಿಯನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿದ್ದು, ಈಗ ವಿದ್ಯಾರ್ಥಿಯು ಚೇತರಿಸಿ ಕೊಳ್ಳುತ್ತಿದ್ದಾನೆ.

ವಿದ್ಯಾರಣ್ಯ ಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದು ಆತ್ಮಹತ್ಯೆಗೆ ಯತ್ನಿಸಿದ ವಿದ್ಯಾರ್ಥಿಗೆ ಶಿಕ್ಷಕ ರಾಜಶೇಖರ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತೆ ಪರೀಕ್ಷೆ ಪ್ರಶ್ನೆಪತ್ರಿಕೆ ಮೊದಲೇ ಕೊಡುವುದಾಗಿ ನಂಬಿಸಿದ್ದಾನೆ.

ಪ್ರಶ್ನೆಪತ್ರಿಕೆ ನೀಡಲು ಹಣವಿದ್ದರೆ ತರುವಂತೆ ಹೇಳಿದ ಶಿಕ್ಷಕ ಹಣ ಇಲ್ಲದ ವೇಳೆ ಒಡವೆ ತರಲು ಹೇಳಿದ್ದಾರೆ. ಇದಕ್ಕೊಪ್ಪದ ವಿದ್ಯಾರ್ಥಿಗೆ ತನಗೆ ಹಣದ ಅಡಚಣೆ ಇದೆ ಎಂದು ಶಿಕ್ಷಕ ಹೇಳಿದ್ದಾನೆ. ಅಲ್ಲದೇ, ಒಡವೆ ಅಡವಿಟ್ಟು, ಕೆಲ ತಿಂಗಳ ನಂತರ ಬಿಡಿಸಿಕೊಡಲು ತಿಳಿಸಿದ್ದಾನೆ. ಇದಕ್ಕೆ ವಿದ್ಯಾರ್ಥಿ ಒಪ್ಪದಿದ್ದಾಗ ಪರೀಕ್ಷೆಗೆ ಅನುಮತಿಯೂ ನೀಡುವುದಿಲ್ಲ ಎಂದು ಬೇದರಿಕೆಯೂ ಹಾಕಿದ್ದಾನೆ ಎನ್ನಲಾಗಿದೆ.


ಹೆದರಿದ ವಿದ್ಯಾರ್ಥಿ ಡಿ.25ರಂದು 25 ಗ್ರಾಂ ಚಿನ್ನದ ಸರ, ಜ. 4ರಂದು 57 ಗ್ರಾಂ ಚಿನ್ನದ ಬಳೆ ಕೊಟ್ಟಿದ್ದಾನೆ. ಯಾರಿಗಾದರೆ ಹೇಳಿದರೆ ಪರೀಕ್ಷೆಗೆ ಕುಳ್ಳಿರಿಸಲ್ಲ, ಜೀವಂತ ಉಳಿಸಲ್ಲ ಎಂಬ ಬೆದರಿಕೆ ಹಾಕಿದ್ದಾನೆ.

ಜ.15ಕ್ಕೆ ಮನೆಯಲ್ಲಿ ಚಿನ್ನಾಭರಣ ಇರದಿರುವುದು ಪಾಲಕರ ಗಮನಕ್ಕೆ ಬಂದಿದೆ. ಇದರಿಂದ ತಾಯಿ ಮಾನಸಿಕವಾಗಿ ಕುಗ್ಗಿ ಹೋಗಿರುವುದು ಕಂಡ ವಿದ್ಯಾರ್ಥಿಯು ಶಿಕ್ಷಕನಿಗೆ ನೀಡಿದ ಕುರಿತು ತಂದೆ ತಿಳಿಸಿದ್ದಾನೆ. ಈ ಕುರಿತು ಉಪನಗರ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ನಡೆದಿದೆ. ಆದರೆ, ತಮ್ಮ ಚಿನ್ನಾಭರಣಗಳು ಮರಳಿ ಕೊಡಿಸುವಂತೆ ಪಾಲಕರು ಪೊಲೀಸ್ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ದುಬೈನಲ್ಲಿ ಸಿಲುಕಿದ ಸಿಂಧನೂರಿನ ವೈದ್ಯ !

•ಸಿಂಧನೂರು: ವಿಜಯರತ್ನ ಇಂಟರ್ ನ್ಯಾಷನಲ್ ಪ್ರಶಸ್ತಿ ಸ್ವೀಕರಿಸಲು ದುಬೈಗೆ ತೆರಳಿದ್ದ ಸಿಂಧನೂರಿನ ಖ್ಯಾತ ಮಕ್ಕಳ ತಜ್ಞ ಡಾ.ಕೆ.ಶಿವರಾಜ್ ಸೇರಿ ಕರ್ನಾಟಕದ 70 ಜನ ದುಬೈನಲ್ಲಿದ್ದಾರೆ.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 27ಕ್ಕೂ ಅಧಿಕ ಜನರಿಗೆ ವಿಆರ್ ಎಲ್ ಸಮೂಹ ಸಂಸ್ಥೆಯಿಂದ ದುಬೈನಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭ ಆಯೋಜಿಸಲಾಗಿತ್ತು. ಅದರಲ್ಲಿ ಸಿಂಧನೂರಿನ ಸಹಾನ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕೆ.ಶಿವರಾಜ್ ಅವರಿಗೆ ಮಾರ್ಚ್ 1 ರ ಬೆಳಗ್ಗೆ 11 ಗಂಟೆಗೆ ಭಾರತಕ್ಕೆ ವಾಪಾಸ್ಸು ಆಗಮಿಸಲು ಟಿಕೆಟ್ ಬುಕ್ ಮಾಡಲಾಗಿತ್ತು. ಆದರೆ, ಇರಾನ್-ಇಸ್ರೇಲ್ ನಡುವಿನ ಯುದ್ಧ



ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ಡಾ.ಕೆ.ಶಿವರಾಜ್ ಸೇರಿದಂತೆ 70 ಜನ ಭಾರತಕ್ಕೆ ಬರಲು ಆಗದೆ ಸಿಲುಕಿಕೊಂಡಿದ್ದಾರೆ.

ನಾವಿದ್ದ ಸ್ಥಳದಲ್ಲಿ ಐದಾರು ಬಾರಿ ಸ್ಫೋಟ!

•ರಬಕವಿ-ಬನಹಟ್ಟಿ: ಇರಾನ್ ವಿರುದ್ಧ ಇಸ್ರೇಲ್-ಅಮೆರಿಕಾ ಜಂಟಿ ಯುದ್ಧದಲ್ಲಿ ದುಬೈನಲ್ಲಿಯೂ ಸಾವು-ನೋವುಗಳು ಸಂಭವಿಸಿದ್ದಲ್ಲದೆ, ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ.

ಯುದ್ಧದ ಪರಿಸ್ಥಿತಿಯನ್ನು ದುಬೈನಲ್ಲಿ ಉದ್ಯೋಗಕ್ಕೆಂದು ತೆರಳಿರುವ ಕನ್ನಡಿಗ ಎಂಜಿನಿಯರ್ ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯ ಸಂಜೀವ ಮುನ್ನೋಳ್ಳಿ 'ಹೊಸ ದಿಗಂತದೊಂದಿಗೆ ವಿವರಿಸಿದ್ದಾರೆ.

ಸದ್ಯ ದುಬೈನ ಬರ್ ದುಬೈ ಪ್ರದೇಶದಲ್ಲಿ ವಾಸವಿದ್ದು ಇವರಿದ್ದ ಕಟ್ಟಡದ ಬಳಿಯೇ ಶನಿವಾರ ಸಂಜೆಯಿಂದ ಭಾನುವಾರ ಮಧ್ಯಾಹ್ನದವರೆಗೆ ಐದಾರು ಬಾರಿ ಡ್ರೋನ್ ಗಳಿಂದ ಅಟ್ಯಾಕ್ ಆಗಿರುವುದಾಗಿ ತಿಳಿಸಿದ್ದಲ್ಲದೆ, ಇವರು ವಾಸವಿರುವ ಕಟ್ಟಡದ ಮೇಲಿನಿಂದಲೇ ಡ್ರೋನ್ ಹಾರಿರುವ ದೃಶ್ಯ ನೋಡಿ ಕೆಲ ಹೊತ್ತು ಭಯಗೊಂಡಿದ್ದರು. ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿರುವ ದುಬೈನ ಮಿಡಿಯಾ ಸಿಟಿಯಲ್ಲಿಂದ ದೃಶ್ಯ ನೋಡಿದಾಗ ಜುಮೇರಾವೆಂಬ ಪ್ರದೇಶದಲ್ಲಿ ಡ್ರೋನ್ ಮೂಲಕ ದಾಳಿ ನಡೆದಿರುವದನ್ನು ಕಣ್ಣಾರೆ ಕಂಡಿದ್ದೇನೆಂದರು.ಅಬುದಾಬಿ, ಕತಾರ್, ಬಹರೆನ್ ಸೇರಿದಂತೆ ಮಧ್ಯ ಪ್ರಾಚ್ಯ ದೇಶಗಳಲ್ಲಿರುವ ಅಮೆರಿಕನ್ ಬೇಸ್ ಮೇಲೆ ದಾಳಿಯಾಗುತ್ತಿದೆ.



ಭಾನುವಾರ ಮಧ್ಯಾಹ್ನ ಊಟ ತರಲೆಂದು ಹೊರಗಡೆ ಹೋದಾಗ ಮತ್ತೇ ಅಟ್ಯಾಕ್ ಆಯಿತು. ನಾವಿರುವ ಪ್ರದೇಶದಲ್ಲಿಯೇ ಭಾರತ ಪಾಕ್ ಸೇರಿದಂತೆ ಇತರೆ ದೇಶಗಳ ರಾಯಭಾರಿ ಕಚೇರಿಗಳಿವೆ. ಅವುಗಳ ಸಮೀಪವೇ ಈ ದಾಳಿ ನಡೆದಿರುವುದಾಗಿತಿಳಿಸಿದರು. ನಾವಿರುವಸ್ಥಳದಲ್ಲಿ ಸುರಕ್ಷಿತವಾಗಿದ್ದೇವೆ. ಇಲ್ಲಿನ ಸರ್ಕಾರವೂ ಸಹಿತ ಕಟ್ಟೆಚ್ಚರದಿಂದ ಇರಲು ಆದೇಶ ಮಾಡಿದೆಯೆಂದು ಸಂಜೀವ ಮುನ್ನೋಳ್ಳಿ ತಿಳಿಸಿದ್ದಾರೆ.

ವೀಸಾ ಅವಧಿ ಮುಗಿಯುವ ಆತಂಕ

•ಗೋಕರ್ಣ: ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಇಲ್ಲಿಗೆ ಬಂದಿರುವ ವಿದೇಶಿ ಪ್ರವಾಸಿಗರು ವಾಪಸ್ ತೆರಳಲು ತೊಡಕಾಗುವ ಸಾಧ್ಯತೆ ಕಾಣುತ್ತಿದೆ.

ಈ ಹಿಂದೆ ವಿವಿಧ ದೇಶಗಳಿಂದ ಬರುವ ವಿದೇಶಿಗರಿಗೆ ಆರು ತಿಂಗಳ ವೀಸಾ ದೊರೆಯುತ್ತಿತ್ತು. ಆದರೆ, ಕೊರೋನಾ ನಂತರ ಹಲವು ದೇಶಗಳವೀಸಾ ಅವಧಿಯನ್ನು ಮೂರು ತಿಂಗಳಿಗೆ ಸೀಮಿತಗೊಳಿಸಿದೆ. ಈ ಮೊದಲು ಅಕ್ಟೋಬರ್ ತಿಂಗಳ ನಂತರ ಬರುವ ಪ್ರವಾಸಿಗರು ಏಪ್ರಿಲ್‌ವರೆಗೆ ಇದ್ದು ತೆರಳುತ್ತಿದ್ದರು.ಆದರೆ, ಮೂರು ತಿಂಗಳ ವೀಸಾ ಆಗಿರುವುದರಿಂದ ಶಿವರಾತ್ರಿ ಮಹೋತ್ಸವದ ರಥೋತ್ಸವ ವೀಕ್ಷಣೆಗೆ ಅನುವಾಗುವಂತೆ ಇಲ್ಲಿಗೆ ಬಂದಿದ್ದಾರೆ.ಅದರಂತೆ ಈ ವರ್ಷ ಬಂದವರಲ್ಲಿ ಹಲವರ ವೀಸಾ ಅವಧಿ ಮುಗಿಯುತ್ತ ಬಂದಿದ್ದು, ಸ್ವದೇಶಕ್ಕೆ ತೆರಳಲು ಸಜ್ಜಾಗುತ್ತಿದ್ದಾರೆ. ಆದರೆ, ಯುದ್ಧದ ಕಾರ್ಮೋಡದಿಂದ ವಿಮಾನಯಾನ ಸೇವೆ ಬಂದ್ ಆಗಿರುವುದರಿಂದ ಮರಳಿ ಗೂಡಿಗೆ ಸೇರಲು ತೊಡಕಾಗುತ್ತಿದೆ.

ಈಗಾಗಲೇ ಹಲವು ವಿದೇಶಿಗರು ವಾಪಸ್ ಆಗಿದ್ದು ಪ್ರಸ್ತುತ ಇಸ್ರೇಲ್‌ನವರೇ 70ಕ್ಕೂ ಹೆಚ್ಚು ಜನರಿದ್ದಾರೆ. ರಷ್ಯಾ, ಜರ್ಮನ್ ಸೇರಿದಂತೆ ಉಳಿದ ದೇಶದ ಒಟ್ಟು 120 ವಿದೇಶಿಗರಿದ್ದಾರೆ. ಇವರೆಲ್ಲರೂ ಈ ತಿಂಗಳ ಕೊನೆಯಲ್ಲಿ ಸ್ವದೇಶಕ್ಕೆ ತೆರಳುವವರಾಗಿದ್ದರು.

ರಾಜಸ್ಥಾನದಲ್ಲಿ ಹೋಳಿ ಆಚರಿಸಲಿರುವ ಇಸ್ರೇಲಿಗರು: ಇಲ್ಲಿನ ಓಂ ಹಾಗೂ ಕುಡ್ಲೆ ಕಡಲ ತೀರದಲ್ಲಿ ಇರುವ ಇಸ್ರೇಲಿಗರು ರಾಜಸ್ಥಾನ ತೆರಳಲಿದ್ದು, ಅಲ್ಲಿ ಹೋಳಿ ಹಬ್ಬದ ವಿಶೇಷ ಆಚರಣೆ ಮಾಡಲಿದ್ದಾರೆ. ಪ್ರತಿ ವರ್ಷದ ಇಲ್ಲಿಗೆ ಭೇಟಿ ನೀಡುವ ಇವರು ಹೋಳಿ ಸಮಯದಲ್ಲಿ ರಾಜಸ್ಥಾನಕ್ಕೆ ತೆರಳುವ ಪರಿಪಾಠವಿದ್ದು ಇದರಂತೆ ಈ ವರ್ಷವೂ ತೆರಳಲಿದ್ದಾರೆ. ಈ ಹಿಂದೆ ಕೊರೋನಾ ಮಹಾಮಾರಿ ಮಹಾಮಾರಿ ವಿದೇಶಿ ಪ್ರವಾಸೋದ್ಯಮ ನೆಲಕಚ್ಚಲು ಕಾರಣವಾಗಿತ್ತು. ಇದಾದ ನಂತರ ತುಸು ಚೇತರಿಸಿಕೊಳ್ಳುವ ಹಂತದಲ್ಲಿದ್ದಾಗ ಯದ್ದ ಭೀತಿ ಮತ್ತೆ ತಡೆಯೊಡ್ಡಿದೆ.

ಕನ್ನಡಿಗರನ್ನು ತಾಯ್ನಾಡಿಗೆ ಕರೆ ತರುವುದು ನಮ್ಮೆಲ್ಲರ ಕರ್ತವ್ಯ: ಸಂಸದ ಬೊಮ್ಮಾಯಿ

•ಹಾವೇರಿ (ಸವಣೂರು) : ಅಮೇರಿಕಾ ಇರಾನ್ ಯುದ್ಧದ ಪರಿಣಾಮವಾಗಿ ದುಬೈ ಹಾಗೂ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿರುವ ಕನ್ನಡಿಗರಿಗೆ ರಾಜ್ಯ ಸರ್ಕಾರ ಹಾಗೂ ಅಲ್ಲಿನ ರಾಯಭಾರಿ ಕಚೇರಿ ಮುಖಾಂತರ ತಾತ್ಕಾಲಿಕವಾಗಿ ಊಟ, ವಸತಿ ವ್ಯವಸ್ಥೆ ಮಾಡಿ ಕೂಡಲೆ ವಾಪಸ್ ಕರೆ ತರಲು ಎಲ್ಲ ರೀತಿಯ ವ್ಯವಸ್ಥೆ ಮಾಡಬೇಕು. ಭಾರತ ಸರ್ಕಾರದ ಜೊತೆ ಕೈ ಜೋಡಿಸಿ ಕನ್ನಡಿಗರನ್ನು, ಭಾರತಿಯರನ್ನು ತಾಯಿ ನಾಡಿಗೆ ಕರೆ ತರುವುದು ನಮ್ಮೆಲ್ಲರ ಕರ್ತವ್ಯ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸವಣೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಮೇರಿಕ ಮತ್ತು ಇರಾನ್ ನಡುವಿನ ಯುದ್ಧ ಬಹಳಷ್ಟು ಆತಂಕಕಾರಿ. ಇದರ ಪರಿಣಾಮ ಭಾರತದ ಮೇಲೂ ಆಗಲಿದೆ. ಇಲ್ಲಿಯ ಪೆಟ್ರೋಲಿಯಂ ವಲಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಆರ್ಥಿಕತೆಯ ಮೇಲೂ ದೊಡ್ಡ ಪ್ರಭಾವ ಬೀರಲಿದೆ. ಮತ್ತು ವಿಶ್ವಾದ್ಯಂತ ಇದರ ಪರಿಣಾಮ ಎಲ್ಲರೂ ಎದುರಿಸಬೇಕಾದ ಪರಿಸ್ಥಿತಿ ಇದೆ. ಇನ್ನಷ್ಟು ಜನರ ಸಾವುಗಳು ಆಗುವ ಮುಂಚೆ ಮಾತುಕತೆಯ ಮುಖಾಂತರ ಇದನ್ನು ಬಗೆ ಹರಿಸುವುದು ಸೂಕ್ತ ಎನಿಸುತ್ತಿದೆ ಎಂದರು.



ವಿದೇಶದಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ಈಗಾಗಲೇ ಭಾರತ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದರು.

ಹೊನ್ನಾವರ: ಭಾರತದ ಅಂತಾರಾಷ್ಟ್ರೀಯ ಕ್ರಿಕೆಟ್ ತಂಡದ ಅತ್ಯುತ್ತಮ ಆಟಗಾರ ಕೆ. ಎಲ್. ರಾಹುಲ್ ಅವರು ಶ್ರೀಕ್ಷೇತ್ರ ಬಂಗಾರಮಕ್ಕಿಗೆ ಭೇಟಿ ನೀಡಿ ಶ್ರೀ ವೀರಾಂಜನೇಯ ದೇವರ ಹಾಗೂ ಗುರೂಜಿಯವರ ಆಶೀರ್ವಾದ ಪಡೆದರು.



ಜನತೆ ಅನ್ಯಾಯ ದೀರ್ಘಕಾಲ ಸಹಿಸುವುದಿಲ್ಲ: ಶ್ರೀಗಳು

•ರಬಕವಿ-ಬನಹಟ್ಟಿ : ಐಶ್ವರ್ಯ ಹಾಗೂ ಅಧಿಕಾರ ದೊರೆತಾಗ ವ್ಯಕ್ತಿಯಲ್ಲಿ ನಮ್ರತೆ ಹೆಚ್ಚಾಗಬೇಕು. ಬದಲಾಗಿ ಅಧಿಕಾರದ ಮದ ಬೆಳೆದರೆ ಅದನ್ನು ಜನತೆ ಶಾಶ್ವತವಾಗಿ ಮುರಿದು ಬಿಡುತ್ತಾರೆ ಎಂಬುದನ್ನು ಆಡಳಿತ ನಡೆಸುವವರು ಅರಿತುಕೊಳ್ಳಬೇಕು ಎಂದು ಕಣೇರಿ ಅದೃಶ್ಯ ಕಾಡಸಿದ್ದೇಶ್ವರ ಶ್ರೀ ಹೇಳಿದರು.

ಬನಹಟ್ಟಿಯಲ್ಲಿ ಶನಿವಾರ ಆರಾಧ್ಯದೈವ ಶ್ರೀಕಾಡಸಿದ್ಧೇಶ್ವರ ದೇವಾಲಯ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದಲ್ಲಿ ಅನ್ಯಾಯ ನಡೆಯುತ್ತಿದೆಯೆಂಬ ಭಾವನೆ ಜನರಲ್ಲಿ ಮೌನವಾಗುವುದಿಲ್ಲ, ಜನರ ಸಹನೆಗೆ ಮಿತಿ ಇರುತ್ತದೆ. ಅನ್ಯಾಯವನ್ನು ಜನರು ಯಾವತ್ತೂ ದೀರ್ಘಕಾಲ ಸಹಿಸಿಕೊಳ್ಳುವುದಿಲ್ಲ, ಸರ್ಕಾರಕ್ಕೆ ಅಪಾರ ಅಧಿಕಾರಮತ್ತು ಸಾಮರ್ಥ್ಯವಿದೆ. ಮುಂದಿನ ದಿನಗಳಲ್ಲಿಯೂನನ್ನ ಮೇಲೆ ನಿರ್ಬಂಧ ವಿಧಿಸುವಸಾಧ್ಯತೆತಳ್ಳಿಹಾಕುವಂತಿಲ್ಲ, ಆದರೆ, ಇಂತಹಕ್ರಮಗಳಿಂದ ನನಗೆ ಯಾವುದೇ ಭಯ ಅಥವಾ ತೊಂದರೆ ಇಲ್ಲವೆಂದು ಕಣೇರಿ ಶ್ರೀ ಹೇಳಿದರು. ನನ್ನೊಂದಿಗೆ ಜನರಿದ್ದಾರೆ, ಜನರೇ ನನಗೆ ಶಕ್ತಿ, ನನ್ನ ಧ್ವನಿಯನ್ನು ಮೌನಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ನನ್ನ ಕೈ ಮಾತು ಬಾಯಿಯನ್ನು ಕಟ್ಟಿ ಹಾಕಲು ಯತ್ನಿಸಿದರು. ಆದರೆ ಸತ್ಯ ಮತ್ತು ಧರ್ಮದ ಮಾತುಗಳನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ, ಸಮಾಜದ ಹಿತದ ದೃಷ್ಟಿಯಿಂದ ಮಾತನಾಡುವುದನ್ನು ಮುಂದುವರಿಸುತ್ತೇನೆಂದು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಹಳೇ ಹುಬ್ಬಳ್ಳಿಯ ವೀರಭಿಕ್ಷಾವರ್ತಿ ನೀಲಕಂಠ ಮಠದ ಜಗದ್ಗುರು ಯೋಗಾಚಾರ್ಯ ಶಿವಶಂಕರ ಶಿವಾಚಾರ್ಯರು, ಶಿರೋಳದ ಶಂಕರಾರೂಢ ಶ್ರೀಗಳು, ಶಾಸಕ ಸಿದ್ದು ಸವದಿ, ಶಶಿಕಲಾ ಜೊಲ್ಲೆ ಸೇರಿದಂತೆ ಅನೇಕರಿದ್ದರು.



ಮಾರಿಕಾಂಬಾ ಜಾತ್ರೆಗೆ ಲಕ್ಷಾಂತರ ಜನ

ಅಶಕ್ತರಿಗೆ ಸೇವಾ ತಂಡದಿಂದ ವಿಶೇಷ ದರ್ಶನ

•ಶಿರಸಿ: ದಕ್ಷಿಣ ಭಾರತದಲ್ಲೇ ಅತಿದೊಡ್ಡ ಜಾತ್ರೆಯಾಗಿರುವ ಪ್ರಸಿದ್ಧ ಮಾರಿಕಾಂಬಾ ದೇವಿಯ ಜಾತ್ರೆಗೆ ರಜಾ ದಿನವಾದ ಶನಿವಾರ, ಭಾನುವಾರ ನಾಡಿನ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಭೇಟಿ ಕೊಡುತ್ತಿದ್ದು, ಹತ್ತಾರು ಗಂಟೆಗಳ ಕಾಲ ಸರತಿಯಲ್ಲಿ ನಿಂತು ದರ್ಶನ ಪಡೆಯುತ್ತಿದ್ದಾರೆ.

ಈ ಮಧ್ಯೆ ದೇವಿ ದರ್ಶನಕ್ಕೆ ಬರುವ ಅಶಕ್ತರು, ವೃದ್ಧರು ಮತ್ತು ಅಂಗವಿಕಲರಿಗೆ ದೇವಿಯ ವಿಶೇಷ ದರ್ಶನವನ್ನು ಸ್ವಯಂಸೇವಕರ ತಂಡವೊಂದು ನಿತ್ಯವೂ ಮಾಡಿಸುತ್ತಿದ್ದು, ಈ ಮಾನವೀಯ ಸೇವೆ ಶ್ಲಾಘನೆಗೆ ಒಳಗಾಗಿದೆ.

ಎರಡು ವರ್ಷಕ್ಕೊಮ್ಮೆ ಬರುವ ಮಾರಿಜಾತ್ರೆಯಲ್ಲಿ ದೇವಿದರ್ಶನಕ್ಕಾಗಿ ಪ್ರತಿಯೊಬ್ಬರೂ ಮುಗಿ ಬೀಳುವುದು ಸಾಮಾನ್ಯ. ನಿತ್ಯ ಲಕ್ಷಾಂತರ ಭಕ್ತರನ್ನು ಕಾಣುವ ಜಾತ್ರೆಯಲ್ಲಿ ಮಾಡಿಸಲು ಸೇವಾ ತಂಡವೊಂದು ಕಂಕಣ ಕಟ್ಟಿಕೊಂಡಿದೆ. ಗದ್ದುಗೆ ಏರಿದ ದೇವಿ ಕಣ್ತುಂಬಿಕೊಳ್ಳಲು ಹಾತೊರೆಯುತ್ತಾರೆ. ನಿತ್ಯ ಲಕ್ಷಾಂತರ ಭಜಕರು ಆಗಮಿಸುವ ಜಾತ್ರೆಯಲ್ಲಿ ವೃದ್ಧರಿಗೆ, ಅಶಕ್ತರಿಗೆ ಯಾವುದೇ ತೊಂದರೆ ಆಗಬಾರದೆಂದು ಮಧ್ಯಾಹ್ನ 2ರಿಂದ 5ಗಂಟೆ ತನಕ ಈ ವಿಶೇಷ ದರ್ಶನ ಏರ್ಪಡಿಸಲಾಗಿದೆ.



ನಗರದ ಐದು ರಸ್ತೆ ಹಳೆ ಲಕ್ಷ್ಮೀ ಟಾಕೀಸ್ ನಿಂದ ಮೂರು ಆಟೋ ಇಡಲಾಗಿದೆ. ಒಂದು ಆಟೋದಲ್ಲಿ 3 ಜನರಂತೆ ಮಹಾದ್ವಾರದ ಬಳಿ ಕರೆತರಲಾಗುತ್ತದೆ.

ಅಲ್ಲಿಂದ ಆರೆಂಟು ಸ್ವಯಂ ಸೇವಕರು ದೇವಿ ಗದ್ದುಗೆ ತನಕ ವ್ಹೀಲ್ ಚೇರಿನ ಮೇಲೆ ಕರೆದೊಯ್ದು ದರ್ಶನ ಮಾಡಿಸಿ ವಾಪಸ್ ಆಟೋ ತನಕ ಬಿಡುತ್ತಾರೆ. ಆಟೋದವರು ಮರಳಿ ಐದು ಕತ್ರಿ ತನಕ ಬಿಡುತ್ತಾರೆ.

ಈ ಆಟೋ ಸೇವೆ'ಯನ್ನು ನಗರದ ಪ್ರಸಿದ್ಧ ಸರಾಫ್ ಭಜಾರ್ ನ ಪ್ರದೀಪ ಎಲ್ಲನಕರ ಭಕ್ತರಿಗೆ ಸೇವಾ ರೂಪದಲ್ಲಿ ಲಭಿಸುವಂತೆ ಮಾಡಿದ್ದಾರೆ. ಕಳೆದ ನಾಲ್ಕು ಜಾತ್ರೆಗಳಿಂದ ಈ ಆಟೋ ಸೇವೆ ನೀಡುತ್ತಿದ್ದಾರೆ. ಆಟೋ ಚಾಲಕರಾದ ಸೋಮಶೇಖರ ಕುರುಬರ, ರಾಜೀವ ನಾಯ್ಕ, ಗಣಪತಿ ಬೈಂದೂರು ಸೇವೆಗೆ ಸಾಥ್ ನೀಡಿದ್ದಾರೆ.

ಮುಖ್ಯ ದ್ವಾರದಿಂದ ಭಕ್ತರನ್ನು ಘನಶ್ಯಾಮ ಪ್ರಭು, ಜೀವನ ಪೈ, ಸಂತೋಷ ನಾಯ್ಕ, ಮೂಲತ: ಶಿರಸಿಯ, ಸದ್ಯ ನಾಗಪುರ ನಿವಾಸಿ ಗಜಾನನ ಸಾಲೇಹಿತ್ತಲ, ಮುಂಬೈನಿಂದ ಬಂದ ಅಮಿತ್ ಪ್ರಭು,ಇತರರು ವೀಲ್ ಚೇರ್ ಮೂಲಕ ಒಳಗಡೆ ದೇವಿ ದರ್ಶನ ಮಾಡಿಸುತ್ತಿದ್ದಾರೆ. ಜಾತ್ರೆ ಆರಂಭದಿಂದ ದಿನಕ್ಕೆ ಸರಾಸರಿ 100-110 ಜನರಂತೆ ಈ ವಿಶೇಷ ದರ್ಶನ ಪಡೆದಿದ್ದಾರೆ.

ಪ್ರದೀಪ ಎಲ್ಲನಕರ ಗ್ರೀನ್ ಕೇರ, ವೈಷ್ಣವಿ ಎಂಟರ ಪ್ರೈಸಸ್ ತಲಾ ಒಂದೊಂದು ಹೊಸ ವೀಲ್ ಚೇರ್ ಒದಗಿಸಿದ್ದಾರೆ.

ಅಶಕ್ತ ಭಕ್ತರಿಗೆ ದೇವಿ ದರ್ಶನ ಭಾಗ್ಯ ಒದಗಿಸುವುದು ನಮ್ಮೆಲ್ಲರ ಭಾಗ್ಯ. ಇದರಲ್ಲಿ ನಾವೆಲ್ಲ ಜಾತ್ರೆಯ ಸಂಭ್ರಮ ಅನುಭವಿಸುತ್ತಿದ್ದೇವೆ ಎನ್ನುತ್ತಾರೆ, ವ್ಹೀಲ್ ಚೇರ್ ಮೂಲಕ ದರ್ಶನ ಭಾಗ್ಯ ಒದಗಿಸುತ್ತಿರುವ ಜೀವನ ಪೈ.

» ಹನ್ನೆರಡು ವರ್ಷದ ಹಿಂದಿನ ಜಾತ್ರೆಯಲ್ಲಿ ಅನಾರೋಗ್ಯದಲ್ಲಿದ್ದ ನನ್ನ ಚಿಕ್ಕಮ್ಮನಿಗೆ ದೇವಿ ದರ್ಶನ ಮಾಡಿಸಲು ಆಗಿರಲಿಲ್ಲ. ಚಿಕ್ಕಮ್ಮನಂತೆ ತೊಂದರೆಯಲ್ಲಿದ್ದವರಿಗೆ ನೆರವಾಗಲು ಆಟೋ ಸೇವೆ ನೀಡಲು ಶಕ್ತಿ ಕೊಡುವಂತೆ ಭಗವತಿಯಲ್ಲಿ ಕೇಳಿಕೊಂಡಿದ್ದೆ. ಅದರಂತೆ 5 ಜಾತ್ರೆಗಳಿಂದ ಅಶಕ್ತರಿಗೆ ಆಟೋ ಸೇವೆ ಒದಗಿಸುತ್ತಿದ್ದೇವೆ. ಮೊದಲಿದ್ದಂತೇ ಬೆಳಿಗ್ಗೆ 8ರಿಂದ ರಾತ್ರಿ 8ರ ತನಕ ಈ ಸೇವೆಗೆ ಅವಕಾಶ ಬೇಡಿಕೆ ಇದೆ ಎಂದು ಆಟೋ ಸೇವಾಕರ್ತ ಪ್ರದೀಪ ಎಲ್ಲನಕರ್ ಹೇಳುತ್ತಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಧೈರ್ಯದಿಂದ ಪರೀಕ್ಷೆ ಎದುರಿಸಿ



ಕಕಮರಿ: ವಿದ್ಯಾರ್ಥಿಗಳು ಭಯ ಮುಕ್ತರಾಗಿ, ಧೈರ್ಯದಿಂದ ಪರೀಕ್ಷೆ ಎದುರಿಸಿ. ಪರೀಕ್ಷಾ ಸಮಯವನ್ನು ಸರಿಯಾಗಿ ಬಳಸಿಕೊಂಡಲ್ಲಿ ಗರಿಷ್ಠ ಅಂಕಗಳಿಸಲು ಸಾಧ್ಯವಾಗುತ್ತದೆ ಎಂದು ಶಿಕ್ಷಕ ಎ.ಎಸ್. ಗಡಾಲೋಟಿ ಹೇಳಿದರು.ಸ್ಥಳೀಯ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಆತ್ಮ ವಿಶ್ವಾಸ ತುಂಬುವ ಉದ್ದೇಶದಿಂದ ಮನೆ-ಮನೆ ಭೇಟಿ ಸಂಧರ್ಭದಲ್ಲಿ ಮಾತನಾಡಿದ ಅವರು, ಪರೀಕ್ಷೆ ಮುಗಿಯುವವರೆಗೆ ಮಕ್ಕಳ ಓದಿಗೆ ಅನುಕೂಲವಾಗುವಂತೆ ಮನೆಯಲ್ಲಿ ಟಿ.ವಿ, ಮೊಬೈಲ್ ಬಳಕೆ ಮಾಡಬೇಕು ಎಂದು ಪಾಲಕರಿಗೆ ಕಿವಿ ಮಾತು ಹೇಳಿದರು. ಶಿಕ್ಷಕ ಸುಮೀತ್ ಈರಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯುವ ವಿಧಾನ, ಸಮಯ ನಿರ್ವಹಣೆ, ಪ್ರಶ್ನೆಪತ್ರಿಕೆ ಓದುವ ಕ್ರಮ ಹಾಗೂ ಒತ್ತಡ ನಿಯಂತ್ರಣ ಕುರಿತು ಮಾರ್ಗದರ್ಶನ ನೀಡಿದರು. ಶಿಕ್ಷಕ ಶ್ರೀಶೈಲ ಪೂಜಾರಿ, ಪಾಲಕರು ಇತರರಿದ್ದರು.

ನಂಬರ್ ಪ್ಲೇಟ್ ಇಲ್ಲದ ವಾಹನಗಳ ವಿರುದ್ಧ ಕಾರ್ಯಾಚರಣೆ

ಬೆಳಗಾವಿ: ನಗರ ಪ್ರದೇಶ ವ್ಯಾಪ್ತಿಯಲ್ಲಿ ನಂಬರ್ ಪ್ಲೇಟ್ ಇಲ್ಲದ ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿಕೊಂಡು ಸಂಚರಿಸುವ ವಾಹನಗಳ ವಿರುದ್ಧ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಒಟ್ಟು 126 ದ್ವಿಚಕ್ರ ವಾಹನಗಳ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ರ ಕಲಂ: 177 ರಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ರೂ.63,000 ಗಳ ದಂಡ ವಿಧಿಸಿ ಸದರಿ ವಾಹನಗಳ ನಂಬರ ಪ್ಲೇಟಗಳನ್ನು ಸ್ಥಳದಲ್ಲಿಯೇ ಸರಿಪಡಿಸಲಾಗಿರುತ್ತದೆ.

ಬೆಳಗಾವಿ ನಗರದ ಸಾರ್ವಜನಿಕರು ಸಂಚಾರ ನಿಯಮಗಳನ್ನು ಪಾಲಿಸಿ ತಮ್ಮ ವಾಹನಗಳಿಗೆ ನಿಗದಿತ ಮಾದರಿಯ ನಂಬರ ಪ್ಲೇಟ್ಗಳನ್ನು ಅಳವಡಿಸಿಕೊಂಡು ಸಂಚರಿಸುವಂತೆ ನಗರ ಪೊಲೀಸ್ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

ದುರದುಂಡಿಗೆ ಯುವರತ್ನ ಪ್ರಶಸ್ತಿ ಪ್ರದಾನ

ಮೂಡಲಗಿ : ಹಳ್ಳೂರ ಗ್ರಾಮದ ಪರಿಸರ ಪ್ರೇಮಿ, ಸಂಘಟಕ ಸಿದ್ದಣ್ಣ ದುರದುಂಡಿ ಅವರಿಗೆ ಮಾಯವ್ವಾ ವಿಠ್ಠಲ ಕಪರಟ್ಟಿ ಯುವರತ್ನ ಪ್ರಶಸ್ತಿ ಪ್ರಧಾನ ನಡೆಯಿತು. ಕೆಸರಗೊಪ್ಪ ಗ್ರಾಮದ ಮಾಯವ್ವ ವಿಠ್ಠಲ ಕಪರಟ್ಟಿ ಆಂಗ್ಲ ಮಾಧ್ಯಮ ಶಾಲೆಯ 9ನೇ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಕಪರಟ್ಟಿ ಫೆಸ್ಟಿವಲ್ 2026 ರ ಕಾರ್ಯಕ್ರಮದಲ್ಲಿ ಯುವ ಸಂಘಟಕ ಸಿದ್ದಣ್ಣ ದುರದುಂಡಿ ಅವರಿಗೆ ಮಾಯವ್ವ ಕಪರಟ್ಟಿ ಯುವರತ್ನ ಪ್ರಶಸ್ತಿಯನ್ನು ಹಂದಿಗುಂದದ ಶ್ರೀಮಂತಸಿದ್ಧ ಶಿವಯೋಗಿಗಳು, ಸಂಸ್ಥೆಯ ಅಧ್ಯಕ್ಷ ಜ್ಯೋತೆಪ್ಪ ಕಪರಟ್ಟಿ, ಬಾಗಲಕೋಟ್ ವಿಜಯಪುರದ ಕೆಎಂಎಫ್ ಮಾಜಿ ಅಧ್ಯಕ್ಷ ರಂಗನಗೌಡ ಪಾಟೀಲ ಸಿದ್ದಣ್ಣ ದುರದುಂಡಿ ಅವರಿಗೆ ಯುವರತ್ನ ಪ್ರಶಸ್ತಿ ಪ್ರಧಾನ ಮಾಡಿದರು. ತೇರದಾಳ ಮತಕ್ಷೇತ್ರದ ಮುಖಂಡ ಸಿದ್ದು ಕೊಣ್ಣೂರ ಮಹಾಲಿಂಗಪುರ್ ವಲಯದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವರಾಜ ಮೇಟಿ ಡಾ. ಪದ್ಮಜಿತ್ ನಾಡಗೌಡ್ರ, ಮಹಾದೇವ ಕಪರಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹಾರೂಗೇರಿ: ಚಿದಂಬರ ಮಹಾಸ್ವಾಮಿಯ ಸ್ವಸ್ವರೂಪರೇ ಆದ ಪರಮಪೂಜ್ಯ ಮಾರ್ತಾಂಡ ದೀಕ್ಷಿತರು ಅರ್ಥಾರ್ತ ಅರವಿಂದಪ್ಪನವರ ಆಶೀರ್ವಾದದಿಂದ ಪ್ರತಿವರ್ಷದಂತೆ ಈ ವರ್ಷವು ಔದುಂಬರ ಟ್ರಸ್ಟ್ ಕೊಡಮಾಡುವ ಪ್ರತಿಭಾ ಪುರಸ್ಕಾರ (5 ನೇ ವರ್ಷದ ಪ್ರತಿಭಾ ಪುರಸ್ಕಾರ – ಮಾರ್ಚ್ 2026) ಅರವಿಂದಪ್ಪನವರ 25 ನೇ ವರ್ಷದ ಪುಣ್ಯ ಸ್ಮರಣೋತ್ಸವದಲ್ಲಿ, ಚಿದಂಬರ ದೇವಸ್ಥಾನ ಶ್ರೀ ಕ್ಷೇತ್ರ ಬಡ್ಲಿ (ತಾ. ಸವದತ್ತಿ, ಜಿ. ಬೆಳಗಾವಿ)ಯಲ್ಲಿ ಮಾ.26ರಂದು ಸಕಲ ಸಂತರ ಪಾವನ ಸಾನಿಧ್ಯದಲ್ಲಿ ವಿತರಿಸಲಾಗುವುದು. ಆಸಕ್ತ ಬಡ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರು (ಪ್ರಥಮ ಪಿ.ಯು.ಸಿ. ಓದುತ್ತಿರುವವರು ಮತ್ತು ವೇದಾಭ್ಯಾಸ/ಗುರುಕುಲ/ವೇದ ಶಿಕ್ಷಣ ಮಾಡುತ್ತಿರುವವರು) ಅರ್ಜಿಗಳನ್ನು ಮಾ.15ರೊಳಗೆ ಭರ್ತಿ ಮಾಡಬೇಕು. ಅರ್ಜಿಗಳನ್ನು ಆನಲೈನ ಮೂಲಕವೇ ಭರ್ತಿ ಮಾಡಲು ಕೋರಲಾಗಿದೆ. ಆನಲೈನ್ ಅರ್ಜಿಯ ಲಿಂಕ್: https://forms.gle/msUrkfEJFHQH2K8w9 ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಲಾ 10,000 ರೂ. ಗಳ ನಗದು ಬಹುಮಾನ ಕೊಡಲಿದ್ದು, ಆಯ್ಕೆ ಪ್ರಕ್ರಿಯೆ, ನಿಯಮಾವಳಿ ಮತ್ತು ಅಂತಿಮ ಆಯ್ಕೆಯ ತೀರ್ಮಾನವನ್ನು ಔದುಂಬರ ಟ್ರಸ್ಟಗೆ ಕಾಯ್ದಿರಿಸಲಾಗಿದೆ.



ಬೆಳಗಾವಿ: ತಾಲೂಕಿನ ಮುತ್ನಾಳ ಗ್ರಾಮದಲ್ಲಿ ಸುಮಾರು 50 ಲಕ್ಷ ರೂ.ಗಳ ವೆಚ್ಚದ ಕಾಂಕ್ರೀಟ್ ರಸ್ತೆಗಳ ನಿರ್ಮಾಣದ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು. ಜನತೆಗೆ ಅನಕೂಲವಾಗುವ ನಿಟ್ಟಿನಲ್ಲಿ ಗುಣಮಟ್ಟ ಕಾಯ್ದುಕೊಂಡು, ಸಮಯಮಿತಿಯಲ್ಲಿ ಕಾಮಗಾರಿ ಮುಗಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದರು. ಈ ವೇಳೆ ಗ್ರಾಮದ ಹಿರಿಯರು, ಯುವಕರು, ಪಕ್ಷದ ಮುಖಂಡರು, ಕಾರ್ಯಕರ್ತರು, ಗುತ್ತಿಗೆದಾರರು ಸೇರಿದಂತೆ ಮತ್ತಿತರರು ಇದ್ದರು.

ಮಾ.4ರಂದು ಹೋಳಿಹಬ್ಬ ಆಚರಣೆ

ಗೋಕಾಕ: ನಾಗರಿಕ ಸಮಾಜ ಬಂಧು-ಭ್ರಾತೃತ್ವದೊಂದಿಗೆ ಒಗ್ಗೂಡಿ ಜೀವನದ ವಿವಿಧ ಸಂದರ್ಭಗಳಲ್ಲಿ ಪಾಲ್ಗೊಳ್ಳುವಿಕೆಗೆ ನೆರವಾಗಬಲ್ಲ ಹೋಳಿಹಬ್ಬ ಆಚರಣೆಗೆ ಇದೇ ಮೊದಲ ಬಾರಿಗೆ ಇಲ್ಲಿನ ಜೆಸಿಐ ಮತ್ತು ಜ್ಯೂನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ಇಂಡಿಯಾ ಸಂಸ್ಥೆ ಇದೇ ಮಾ.4ರಂದು ನಗರದ ಶ್ರೀ ಸಿದ್ದಲಿಂಗೇಶ್ವರ ಬಿಸಿಎ ಕಾಲೇಜು ಮೈದಾನದಲ್ಲಿ ಬೆಳಗ್ಗೆ 8.30ರ ಬಳಿಕ ಕುಟುಂಬದ ಸದಸ್ಯರೊಂದಿಗೆ ರಂಗ ಬರ್ಸೆ ಹೋಳಿಹಬ್ಬ ಆಚರಣೆ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿನ ಡಾಲರ್ಸ್ ಕಾಲೋನಿಯ ಡಾಲರ್ಸ್ ಕ್ಲಬ್ ಸಭಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಜೆಸಿಐ ಸಂಸ್ಥೆಯ ವಿಷ್ಣು ಲಾತೂರ ಮಾತನಾಡಿ, ರಂಗ ಬರ್ಸೆ ಆಚರಣೆ ಆರಂಭಕ್ಕೂ ಮುನ್ನ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಶೂನ್ಯ ಸಂಪಾದನಮಠದ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಶಾಸಕ ರಮೇಶ ಜಾರಕಿಹೊಳಿ, ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಯುಥ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಹುಲ ಜಾರಕಿಹೊಳಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಮೊದಲಾದವರು ಪಾಲ್ಗೊಳ್ಳಲಿದ್ದಾರೆ ಎಂದರು. ಪ್ರತಿಕಾ ಗೋಷ್ಠಿಯಲ್ಲಿ ಜೆಸಿಐ ಸಂಸ್ಥೆ ಅಧ್ಯಕ್ಷ ಕಿರಣ ಗಂಗರಡ್ಡಿ, ಉಪಾಧ್ಯಕ್ಷ ಇಮ್ತಿಯಾಜ ದಫೇದಾರ, ನಿಕಟ ಪೂರ್ವ ಅಧ್ಯಕ್ಷ ಶೇಖರ ಉಳ್ಳೇಗಡ್ಡಿ, ಸಂಸ್ಥೆಯ ಮಹಿಳಾ ಘಟಕ ಅಧ್ಯಕ್ಷೆ ಮೀನಾಕ್ಷಿ ಸವದಿ, ಕಾರ್ಯದರ್ಶಿ ಸುಶ್ಮಿತಾ ಶೆಟ್ಟಿ, ನಿರ್ದೇಶಕರುಗಳಾದ ಕೃಷ್ಣಾ ಮುಳಗುಂದ, ಅನ್ನಪೂರ್ಣಾ ಉಳ್ಳೇಗಡ್ಡಿ, ಭಾಗೀರತಿ ನಂದಗಾಂವಿ, ನೇತ್ರಾವತಿ ಲಾತೂರ ಇತರರು ಇದ್ದರು.



ರಾಯಬಾಗ: ರಾಯಬಾಗದಿಂದ ಶ್ರೀಶೈಲ್ ಮಲ್ಲಿಕಾರ್ಜುನ ಕಂಬಿಯೊಂದಿಗೆ ಶ್ರೀಶೈಲಂ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪಾದಯಾತ್ರೆಗೆ ಚಾಲನೆ ನೀಡಿದರು.ಈಶ್ವರಯ್ಯ ಅಮೋಗಿಮಠ, ನಾರಾಯಣ ಮೇತ್ರಿ, ಅಶೋಕ ಅಂಗಡಿ, ಮಹಾದೇವ ಹೊಸಮನಿ, ವಿನಾಯಕ್ ಮೇತ್ರಿ, ದಯಾನಂದ ಹೊಸಮನಿ, ಬಸವರಾಜ ಮೇತ್ರಿ, ಆದರ್ಶ ಡಬ್ಬಣ್ಣವರ, ಆನಂದ್ ಹೊಸಮನಿ, ರಾಹುಲ್ ಶಿವಪೂಜಿ, ರಾಜು ಶಿವಪೂಜಿ, ಸಂತೋಷ್ ಶಿವಪೂಜಿ, ಗಜಾನನ ಮಾಳಿ, ಮಹದೇವ ಮೇತ್ರಿ,ಭೀಮಪ್ಪ ಖಿಚಡೆ ಸೇರಿದಂತೆ ಇತರರಿದ್ದರು.

ವಿವಿಧ ಗ್ರಾಮಗಳಲ್ಲಿ ವಿವಿಧ ಕಾಮಗಾರಿಗೆ ಭೂಮಿಪೂಜೆ

ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ: ಸಚಿವೆ ಹೆಬ್ಬಾಳ್ಕರ್

ಬೆಳಗಾವಿ : ಗ್ರಾಮೀಣ ಭಾಗದ ಜನರಿಗೆ ಸಾಮಾಜಿಕಹಾಗೂಸಾಂಸ್ಕೃತಿಕಕಾರ್ಯಕ್ರಮಗಳಿಗೆ ಈ ಭವನವು ಪ್ರಮುಖ ವೇದಿಕೆಯಾಗಲಿದ್ದು, ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ಭಾನುವಾರ ಗ್ರಾಮೀಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಸುಮಾರು 2.50 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಹಾಗೂ ಉಚಗಾಂವ ಗ್ರಾಮದಲ್ಲಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಹಂತದಲ್ಲಿರುವ ಬೀರದೇವರ ಸಮುದಾಯ ಭವನದ ಮೇಲ್ಛಾವಣಿ ಕಾಂಕ್ರೀಟ್ ಸ್ಲ್ಯಾಬ್ ಕಾಮಗಾರಿಗೆ ಭೂಮಿಪೂಜೆ ನೇರವೇರಿಸಿ ಚಾಲನೆ ನೀಡಿ, ಮಾತನಾಡಿದರು.

ರಸ್ತೆ ಅಭಿವೃದ್ಧಿ ಗ್ರಾಮಾಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯ, ಸಮುದಾಯ ಸೌಲಭ್ಯ ಮತ್ತು ಸಂಚಾರ ವ್ಯವಸ್ಥೆ ಬಲಪಡಿಸುವ ಕಾರ್ಯಕ್ಕೆ ಸರಕಾರ ಬದ್ಧವಾಗಿದೆ ಎಂಬ ಸಂದೇಶ ನೀಡಿದರು.

ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ನಿರಂತರವಾಗಿದ್ದು, ಕ್ಷೇತ್ರದ ಚಿತ್ರಣವೇ ಬದಲಾಗುತ್ತಿದೆ ಎಂದು ಸಾರ್ವಜನಿಕರಲ್ಲಿ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಕ್ಷೇತ್ರದಲ್ಲಿನ ಜನತೆಯ ಸೇವೆ ಮಾಡುವುದಕ್ಕೆ ಅವಕಾಶ ನೀಡಿ ಎಂದು ವಿನಂತಿಸಿಕೊಂಡರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಶ್ರೀ ಬೀರದೇವರ ಟ್ರಸ್ಟ್ ಸಮಿತಿಯ ಸದಸ್ಯರು, ಮಹಿಳೆಯರು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಇದೇ ವೇಳೆ ತುರಮರಿ ಗ್ರಾಮದಲ್ಲಿ ಸುಮಾರು 80 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಸಚಿವರು ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಾಗರಾಜ ಜಾಧವ್, ಚಂದ್ರಕಾಂತ ಜಾಧವ್, ಬಾಬು ಬೆಳಗಾಂವ್ಕರ್, ಸುಹಾಸ್ ಜಾಧವ್, ರಘುನಾಥ್ ಖಂಡೇಕರ್, ಜ್ಞಾನೇಶ್ವರ ಕೊರಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅದೇ ಸರಣಿಯಲ್ಲಿ ಬಾಚಿ ಗ್ರಾಮದಲ್ಲೂ ಸುಮಾರು 72 ಲಕ್ಷರೂ. ವೆಚ್ಚದಲ್ಲಿ ಗ್ರಾಮದೊಳಗಿನ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಕಾಮಗಾರಿಗೆ ಲಕ್ಷ್ಮೀ ಹೆಬ್ಬಾಳ್ಕರ್ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಬಾಳು ದೇಸೂರಕರ್, ಮಹಾದೇವ್ ಗುಂಜಿಕರ್, ಕವಿತಾ ದೇವರಮನಿ, ಉಮಾಜಿ ಸಾವಂತ, ಲಕ್ಷ್ಮಣ ಗಾವಡೆ, ದತ್ತಾತ್ರೇಯ ದೇವರಮನಿ, ಪರಶುರಾಮ ಸಾವಂತ, ಬಾಹು ಸನದಿ, ಲಕ್ಷ್ಮಣ ಸನದಿ, ಶ್ರೀಕಾಂತ ಗುಂಜಿಕರ್ ಮುಂತಾದವರು ಉಪಸ್ಥಿತರಿದ್ದರು.

ಸತತ ಅಧ್ಯಯನದಿಂದ ಸಾಧನೆ ಸಾಧ್ಯ

ಚಿಕ್ಕೋಡಿ: ಪರೀಕ್ಷೆಗಳು ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ತೋರಿಸಲು ಇರುವ ಅಪೂರ್ವ ಅವಕಾಶವಾಗಿವೆ. ಇಂತಹ ಸುವರ್ಣ ಅವಕಾಶವನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ಸಾಧನೆ ಮಾಡಬೇಕು ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹೇಳಿದರು.

ಪಟ್ಟಣದ ಪರಟಿ ನಾಗಲಿಂಗೇಶ್ವರ ಕಲ್ಯಾಣಮಂಟಪದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಮಟ್ಟದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಭಾನುವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿ, ಮಕ್ಕಳು ದೇಶದ ದೊಡ್ಡ ಆಸ್ತಿಯಾಗಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಓದಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಅಂಕಗಳಿಕೆಗಾಗಿಯೇ ಓದುವುದು ಮುಖ್ಯವಲ್ಲದಿದ್ದರೂ ಸತತ ಅಧ್ಯಯನದಿಂದ ಸಮಾಜದಲ್ಲಿ ಉನ್ನತ ಸ್ಥಾನ ತಲುಪಲು ಸಾಧ್ಯವಿದೆ. ತಂದೆ-ತಾಯಿ, ಶಿಕ್ಷಕರು ಕಂಡ ಕನಸನ್ನು ನನಸು ಮಾಡುವ ಮೂಲಕ ಸಮಾಜಕ್ಕೆ ವಿದ್ಯಾರ್ಥಿಗಳು ವಿಶಿಷ್ಟವಾದ ಕೊಡುಗೆ ನೀಡುವ ತುಡಿತ ಹೊಂದಿದವರಾಗಿರಬೇಕು ಎಂದರು.

ಚಿಕ್ಕೋಡಿ ಡಿಡಿಪಿಐ ಆರ್. ಎಸ್. ಸೀತಾರಾಮು ಮಾತನಾಡಿ, ಪರೀಕ್ಷೆಎನ್ನುವುದು ಹಬ್ಬವಿದ್ದಂತೆ. ವಿದ್ಯಾರ್ಥಿಗಳು ಪರೀಕ್ಷೆಯನ್ನು ಸಂಭ್ರಮದಿಂದ ಬರೆಯಬೇಕು. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಬಗೆಯನ್ನು ಕಾರ್ಯಾಗಾರ ಹಮ್ಮಿಕೊಳ್ಳುವ ಮೂಲಕ ವಿನೂತನ ಹೆಜ್ಜೆ ಇಟ್ಟಿದ್ದು ಶ್ಲಾಘನೀಯವಾಗಿದೆ ಎಂದರು.

ಕಾರ್ಯಾಗಾರದಲ್ಲಿ ''ಪರೀಕ್ಷಾ ಭಯ ಹೋಗಲಾಡಿಸುವುದು ಮತ್ತು ಒತ್ತಡ ನಿರ್ವಹಣೆ'' ಕುರಿತು ಬೈಲವಾಡದ ಪ್ರಕಾಶ ಮಾಸ್ತಿಹೊಳಿ, ಪರೀಕ್ಷಾ ಸಿದ್ಧತೆ, ಪರಿಣಾಮಕಾರಿ ಅಧ್ಯಯನ'' ವಿಷಯ ಕುರಿತು ಶಿರಗಾಂವದ ಸುನೀಲ ಕಾಜಗಾರ, ''ಮಾನಸಿಕ ಆರೋಗ್ಯ, ಸಮಯದ ಹೊಂದಾಣಿಕೆ'' ಕುರಿತು ಬೆಲ್ಲದ ಬಾಗೇವಾಡಿಯ ಸುನೀಲ ಹಲಕರ್ಣಿ, ''ಗಣಿತ ವಿಷಯದ ಪ್ರಮುಖ ಅಂಶಗಳು'' ಕುರಿತು ಅರ್ಜುನವಾಡದ ಸುನೀಲ ಖೋತ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಚಿಕ್ಕೋಡಿ ಬಿಇಒ ಪ್ರಭಾವತಿ ಪಾಟೀಲ, ಜಿಲ್ಲಾ ನೋಡಲ್ ಅಧಿಕಾರಿ ಎಚ್.ಎಸ್. ಖಾಡೆ, ನಿಪ್ಪಾಣಿ ಬಿಇಒ ಮಹಾದೇವಿ ನಾಯ್ಕ, ರಾಯಬಾಗ ಬಿಇಒ ಬಸವರಾಜಪ್ಪ ಆರ್, ಅಥಣಿ ಬಿಇಒ ಮಲ್ಲಪ್ಪ ಮುಂಜಿ, ಕಾಗವಾಡ ಬಿಇಒ ಪಾಂಡುರಂಗ ಮದಭಾವಿ ಇದ್ದರು.




ಕಾವ್ಯಕ್ಕೆ ಸಂಸ್ಕಾರ, ಸಂಸ್ಕೃತಿ ಕಲಿಸುವ ಶಕ್ತಿ

ಮೂಡಲಗಿ : ಕಾಲಚಕ್ರ ಕೃತಿಯು ಸಹೃದಯರ ಹೃದಯವನ್ನು ತಟ್ಟುವ ಕವನಗಳನ್ನು ಹೊಂದಿದ್ದು ಆರು ತರಹದ ಹಂತಗಳಲ್ಲಿ ಓದಿದಾಗ ಅರ್ಥ ಆಗುತ್ತದೆ. ಮತ್ತು ಧ್ಯಾನದ ಮೂಲಕ ಜೀವನ ಸಾಕ್ಷಾತ್ಕಾರ ಮಾಡಿಕೊಳ್ಳಲು ಕೆಲವು ಕವನಗಳು ಸಹಾಯಕ. ಇಲ್ಲಿ ಕವಿಯ ಅತ್ಯಂತ ಕ್ರಿಯಾಶೀಲ ಚಿಂತನೆಗಳು ಜನಜಾಗೃತಿ ಮೂಡಿಸುವ ಕೆಲಸ ಮಾಡಿವೆ ಎಂದು ಸಾಹಿತಿ ಶಿವಕುಮಾರ ಕೋಡಿಹಾಳ ಹೇಳಿದರು.

ಚುಟುಕು ಸಾಹಿತ್ಯ ಪರಿಷತ್ತು ತಾಲೂಕ ಘಟಕ ಮೂಡಲಗಿ ವತಿಯಿಂದ ಕವಿಮನೆ ಸಾಯಿ ಮಂದಿರದಲ್ಲಿ ಶನಿವಾರ ಸಂಜೆ ನಡೆದ ಕವಿ ಮನೆಯೊಳ್ ಕಾವ್ಯಾವಲೋಕನ ಎಂಬ ಕಾರ್ಯಕ್ರಮದಲ್ಲಿ ಅನಿಲ ಮಡಿವಾಳರ ಕಾಲಚಕ್ರ ಕಾವ್ಯ ಕೃತಿಯ ಕಾವ್ಯಾವಲೋಕನ ಮಾಡಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಕವಿ ನಿಂಗಪ್ಪ ಸಂಗ್ರೇಜಿಕೊಪ್ಪ ಮಾತನಾಡಿ, ಕವಿ ಮನೆ ಒಳಗೆ ಕಾವ್ಯವನ್ನು ಅವಲೋಕನ ಮಾಡುವ ಕಾರ್ಯ ನಿಜಕ್ಕೂ ಶ್ಲಾಘನೀಯ. ಅನಿವಾರ್ಯ ಸಂದರ್ಭಗಳಲ್ಲಿ ಸಮೀಪದ ಸ್ಥಳಗಳಲ್ಲಿ ಕಾರ್ಯಕ್ರಮ ರೂಪಿಸುವ ಮೂಲಕ ಕನ್ನಡ ಸಾಹಿತ್ಯದ ಹೊಸ ಮುನ್ನುಡಿ ಬರೆಯುತ್ತ ಸಾಗಿರುವ ಚುಟುಕು ಸಾಹಿತ್ಯ ಪರಿ?ತ್ತಿಗೆ ಅಭಿನಂದಿಸುತ್ತ, ಕಾಲಚಕ್ರ ಕೃತಿಯು ಜೀವನದ ಮೌಲ್ಯಗಳನ್ನು ಹಾಗೂ ಬರುವ ಪಿಳಿಗೆಗೆ ನೀಡಬೇಕಾದ ಸಂಸ್ಕಾರಗಳ ಕುರಿತು ಮನದಟ್ಟು ಮಾಡವಲ್ಲಿ ಕಾವ್ಯ ಗೆದ್ದಿದೆ ಎಂದು ಹೇಳಿದರು.

ಚು.ಸಾ.ಪ ಅಧ್ಯಕ್ಷ ಚಿದಾನಂದ ಹೂಗಾರ ಮಾತನಾಡಿ, ಕವಿಯ ಕಾವ್ಯವನ್ನು ಅವಲೋಕನ ಮಾಡುವ ಮೂಲಕ ನಮ್ಮ ಭಾಗದ ಕವಿಗಳ ಕಾವ್ಯ ಪ್ರೌಢಿಮೆಯನ್ನು ಅರಿಯಲು ಸಾಧ್ಯ ಹಾಗೂ ಯುವ ಬರಹಗಾರರಿಗೆ ಮಾರ್ಗದರ್ಶನ ಸಮಾಜಕ್ಕೆ ಮುಟ್ಟಿಸುವಲ್ಲಿ ಹಾಗೂ ನೀಡಲಿದೆ ಎಂದು ಹೇಳಿದರು. ಕವಿ ಪರಿಚಯವನ್ನು ಶಶಿರೇಖಾ ಬೆಳ್ಳಕ್ಕಿ ನಡೆಸಿಕೊಟ್ಟರು.ಈ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಸಂಗಮೇಶ ಗುಜಗೊಂಡ, ವೈ.ಬಿ.ಕಳ್ಳಿಗುದ್ದಿ, ಮುರುಗೇಶ ಗಾಡವಿ, ರವೀಂದ್ರ ಸೊರಗಾಂವಿ, ಬಾಳಪ್ಪ ನಂದಿ, ದುರ್ಗಪ್ಪ ದಾಸನ್ನವರ, ಸಿದ್ದಣ್ಣ ನಡಗಡ್ಡಿ, ಸಿದ್ದು ಮಹಾರಾಜ, ಶೈಲಜಾ ಬಡಿಗೇರ, ಗೋದಾವರಿ ದೇಶಪಾಂಡೆ, ವಿದ್ಯಾಶ್ರೀ ಪೂಜಾರಿ, ಸರಸ್ವತಿ ಶೆಕ್ಕಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.ಯಲ್ಲಪ್ಪ ಗದಾಡಿ ಕಾರ್ಯಕ್ರಮ ನಿರೂಪಿಸಿದರು. ವಿವೇಕಾನಂದ ಹೂಗಾರ ವಂದಿಸಿದರು.



ಶಾಂತಿ ಸುವ್ಯವಸ್ಥೆಯಿಂದ ಹಬ್ಬ ಆಚರಿಸಿ



ಘಟಪ್ರಭಾ: ಹೋಳಿ ಹುಣ್ಣಿಮೆ ಹಾಗೂ ರಂಜಾನ್ ಹಬ್ಬಗಳನ್ನು ಶಾಂತಿಯುತವಾಗಿ ಆಚರಿಸುವ ಉದ್ದೇಶದಿಂದ ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ಶನಿವಾರ ಸಂಜೆ ಶಾಂತಿ ಸಮಿತಿ ಸಭೆ ನಡೆಯಿತು.

ವಿವಿಧ ಸಮಾಜಗಳ ಮುಖಂಡರು, ನಾಗರಿಕರು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಪರಸ್ಪರ ಸಹಕಾರದ ಅಗತ್ಯವನ್ನು ಒತ್ತಿ ಹೇಳಿದರು.

ಹಬ್ಬಗಳ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು ಎಂದು ನಾಗರಿಕರು ಭರವಸೆ ನೀಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಎಚ್ .ಡಿ. ಮುಲ್ಲಾ ಮಾತನಾಡಿ, ಎಲ್ಲಾ ಸಮಾಜದವರು ಪರಸ್ಪರ ಸಾಮರಸ್ಯದಿಂದ ನಡೆದುಕೊಳ್ಳುವುದು ಅತ್ಯಂತ ಮುಖ್ಯ ಎಂದು ತಿಳಿಸಿದರು.

ಯಾವುದೇ ರೀತಿಯ ಕಾನೂನು ಉಲ್ಲಂಘನೆ ಅಥವಾ ಶಾಂತಿ ಭಂಗ ಮಾಡುವ ಪ್ರಯತ್ನಗಳನ್ನು ಇಲಾಖೆ ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅಂಥ ಘಟನೆಗಳು ಸಂಭವಿಸಿದಲ್ಲಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಹಬ್ಬಗಳ ಸಂದರ್ಭದಲ್ಲಿ ಅಸಭ್ಯ ವರ್ತನೆ, ಗದ್ದಲ, ಧ್ವನಿ ಮಾಲಿನ್ಯ ಹಾಗೂ ಅಪಪ್ರಚಾರದಂತಹ ಘಟನೆಗಳನ್ನು ತಪ್ಪಿಸಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಅಧಿಕಾರಿಗಳು ತಿಳಿಸಿದರು.


ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಂಚದಂತೆ ವಿಶೇಷವಾಗಿ ಎಚ್ಚರಿಕೆ ನೀಡಲಾಯಿತು. ಸಭೆಯಲ್ಲಿ ವಿವಿಧ ಸಮಾಜಗಳ ಹಿರಿಯ ಮುಖಂಡರು, ಪತ್ರಕರ್ತರು ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಹಬ್ಬಗಳನ್ನು ಶಾಂತಿ, ಸಹೋದರತ್ವ ಮತ್ತು ಪರಸ್ಪರ ಗೌರವದೊಂದಿಗೆ ಆಚರಿಸುವಂತೆ ಎಲ್ಲರೂ ಒಗ್ಗಟ್ಟಿನ ಸಂದೇಶ ನೀಡಿದರು.

ರೇಣುಕಾಚಾರ್ಯರ ಜಯಂತಿ ಆಚರಣೆ

ರಾಯಬಾಗ: ರೇಣುಕಾಚಾರ್ಯರ ಜಯಂತಿಯ ನಿಮಿತ್ಯವಾಗಿ ರಾಯಬಾಗದ ತಹಶೀಲ್ದಾರ್ ಕಚೇರಿಯಲ್ಲಿ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮಕ್ಕೆ ಕಂದಾಯ ಇಲಾಖೆಯ ಸಿಬ್ಬಂದಿ ವಿನಾಯಕ ಭಾಟೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಕೌಜಲಗಿ ಮತ್ತು ಊರಿನ ಜಂಗಮ ಸಮಾಜದ ಎಲ್ಲ ಮುಖಂಡರು ಹಾಜರಿದ್ದರು.

ಈ ವೇಳೆ ರಾಯಬಾಗದ ಜಂಗಮ ಸಮಾಜದ ಹಿರಿಯರು ಮತ್ತು ವೇದಮೂರ್ತಿ' ಬಸಯ್ಯಾ ನಿಶಾನಿಮಠ ಮಾತನಾಡಿ, ಜಗತ್ತು ಸಹಬಾಳ್ವೆಯ ಪ್ರತೀಕ ಮತ್ತು ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಸರಕಾರಿ ಕಚೇರಿಗಳಲ್ಲಿ ಆಚರಿಸುತ್ತಿರುವುದು ನಿಜಕ್ಕೂ ಸ್ವಾಗತಾರ್ಹ. ರೇಣುಕಾಚಾರ್ಯರ ತತ್ವ ಆದರ್ಶ ಶಿಸ್ತು ಜಗತ್ತಿಗೆ ಮಾದರಿಯಾಗಲಿ ಎಂಬ ಆಶಯ ವ್ಯಕ್ತಪಡಿಸಿದರು. ಜಯಾನಂದ ಹಿರೇಮಠ ಮಾತನಾಡಿ, ರೇಣುಕಾಚಾರ್ಯರ ಜೀವನಶೈಲಿ ಮತ್ತು ಅವರ ಆಚಾರ ಆದರ್ಶಗಳನ್ನು ವಿಸ್ತಾರವಾಗಿ ತಿಳಿಸಿದರು.

ಶ್ರೀರೀ ವೀರೇಶ ಹಿರೇಮಠ ಸ್ವಾಗತಿಸಿದರು. ಮಹಾಂತೇಶ ಚರಂತಿಮಠ ವಂದಿಸಿದರು. ಕಾರ್ಯಕ್ರಮಕ್ಕೆ ಕಂದಾಯ ಇಲಾಖೆಯ ಸಿಬ್ಬಂದಿ ವಿನಾಯಕ ಭಾಟೆ, ಅಗ್ನಿಶಾಮಕ ಸಿಬ್ಬಂದಿ ಕೌಜಲಗಿ ಸರ್, ವೇದಮೂರ್ತಿ ಬಸಯ್ಯಾ ನಿಶಾನಿಮಠ, ಕುಮಾರ ಘಂಟಿಮಠ, ಶಿವಾನಂದ ಹಿರೇಮಠ, ಮಹಾಂತೇಶ ಹಿರೇಮಠ, ಮಹಾಂತೇಶ ಚರಂತಿಮಠ, ಮಹಾಂತೇಶ ಉಜ್ಜಯನಿಮಠ, ಬಾಳಯ್ಯ ಹಿರೇಮಠ, ಶರಣಯ್ಯ ಹಿರೇಮಠ, ಸಂಜೀವ ಹಿರೇಮಠ, ನಿತ್ಯಾನಂದ ನಿಶಾನಿಮಠ, ಜಯಾನಂದ ಹಿರೇಮಠ, ಮಪ್ಪಯ್ಯಾ ಮಠಪತಿ, ಸೋಮು ಹಿರೇಮಠ, ಎಸ್.ಎಸ್. ಹಿರೇಮಠ, ಕುಮಾರ ಸಂತೋಷ ಗುದ್ದಯ್ಯನವರಮಠ, ಕುಮಾರ ಪ್ರಥಮೇಶ ಹಿರೇಮಠ, ಸ್ಥಳೀಯರು ಆಗಮಿಸಿದ್ದರು.



ಕ್ರಿಕೆಟ್ ಪಂದ್ಯಾವಳಿಗೆ ಹಟ್ಟಿಹೊಳಿ ಚಾಲನೆ

ಬೆಳಗಾವಿ : ತಾಲೂಕಿನ ಕೆಕೆ ಕೊಪ್ಪ ಗ್ರಾಮದಲ್ಲಿ ಹರ್ಷಾ ಶುಗರ್ಸ್ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಹರ್ಷಾ ಶುಗರ್ಸ್ ಕೆಪಿಎಲ್ -2026 ಕ್ರಿಕೆಟ್ ಪಂದ್ಯಾವಳಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಚಾಲನೆ ನೀಡಿದರು.

ರವಿವಾರ ರಂದು ಕೆಕೆ ಕೊಪ್ಪ ಗ್ರಾಮದಲ್ಲಿನ ಕ್ರೀಡಾಭಿಮಾನಿಗಳು, ಯುವಕರು ಹಾಗೂ ಸ್ಥಳೀಯ ಮುಖಂಡರ ಸಮ್ಮುಖದಲ್ಲಿ ನಡೆದ ಉದ್ಘಾಟಿಸಿದ ಬಳಿಕ ಕ್ರಿಕೆಟ್ ಪಂದ್ಯಾವಳಿ ಕುರಿತು ಮಾತನಾಡಿದ ಅವರು, ಗ್ರಾಮೀಣ ಮಟ್ಟದಲ್ಲಿ ಕ್ರೀಡಾಕಾರ್ಯಕ್ರಮಗಳನ್ನು ಆಯೋಜಿಸುವುದು ಯುವಕರಲ್ಲಿ ಶಿಸ್ತು, ತಂಡಭಾವನೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಲು ಮಹತ್ವದ ಹೆಜ್ಜೆಯಾಗಿದೆ ಎಂದರು. ಕ್ರೀಡೆ ಕೇವಲ ಮನರಂಜನೆಗೆ ಮಾತ್ರವಲ್ಲ, ವ್ಯಕ್ತಿತ್ವ ವಿಕಾಸಕ್ಕೂ ಕಾರಣವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಯುವ ಪ್ರತಿಭೆಗಳನ್ನು ಗುರುತಿಸಿ ಉತ್ತೇಜಿಸುವ ಉದ್ದೇಶದಿಂದ ಈ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಉತ್ತಮ ಅವಕಾಶ ನೀಡುವ ಮೂಲಕ ಅವರನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗಳತ್ತ ಮುನ್ನಡೆಸುವುದು ಮುಖ್ಯ ಗುರಿಯಾಗಿದೆ ಎಂದು ಕೆಕೆ ಕೊಪ್ಪ ಗ್ರಾಮಸ್ಥರಿಗೆ ಕರೆ ನೀಡಿದರು.



ಕಂಬಿ ಮಲ್ಲಯ್ಯರ ಪಾದಯಾತ್ರೆಗೆ ಚಾಲನೆ



ಸಾವಳಗಿ: ಗೋಕಾಕ ತಾಲೂಕಿನ ಸಾವಳಗಿ ಗ್ರಾಮದಲ್ಲಿ ಕಂಬಿ ಮಲ್ಲಯ್ಯರ ಪಾದಯಾತ್ರೆಗೆ ಭಕ್ತಿಭಾವದಿಂದ ಭವ್ಯ ಚಾಲನೆ ನೀಡಲಾಯಿತು. ಬೆಳಗ್ಗಿಯೇ ಗ್ರಾಮದಲ್ಲಿ ಪೂಜೆ, ಹೂವಿನ ಅಲಂಕಾರ ಹಾಗೂ ಮಂಗಳವಾದ್ಯಗಳೊಂದಿಗೆ ದೇವರ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಪಾಲ್ಗೊಂಡ ಭಕ್ತರು ಕಂಬಿ ಮಲ್ಲಯ್ಯರ ಪವಿತ್ರ ಪಲ್ಲಕ್ಕಿಯನ್ನು ಭುಜದ ಮೇಲೆ ಹೊತ್ತು ಗ್ರಾಮದಿಂದ ಪಾದಯಾತ್ರೆ ಪ್ರಾರಂಭಿಸಿದರು. ಕೆಲ ಭಕ್ತರು ಹರಕೆ ತೀರಿಸುವ ನಿಟ್ಟಿನಲ್ಲಿ ಕಂಬದ ಮೇಲೆ ನಡೆದು ಭಕ್ತಿಭಾವ ವ್ಯಕ್ತಪಡಿಸಿದರು. ಗ್ರಾಮಸ್ಥರು ದಾರಿಯುದ್ದಕ್ಕೂ ಹೂವಿನ ಮಳೆ ಸುರಿಸಿ, ಆರತಿ ಬೆಳಗಿ ಸ್ವಾಗತ ಕೋರಿದರು.ಪಾದಯಾತ್ರೆಯಲ್ಲಿ ಯುವಕರು, ಮಹಿಳೆಯರು ಹಾಗೂ ಹಿರಿಯರು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು. ಭಜನೆ, ಜಯಘೋಷಗಳ ನಡುವೆ ಪಾದಯಾತ್ರೆ ಸಾಗಿತು. ಕಾರ್ಯಕ್ರಮದ ವೇಳೆ ಭಕ್ತರಿಗೆ ಪ್ರಸಾದ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಇದೆ ಸಮಯದಲ್ಲಿ ಊರಿನ ಹಿರಿಯರು ಪ್ರಮುಖ ಉಪಸ್ಥಿತರಿದ್ದರು.ರವಿಕುಮಾರ್ ಮಗದುಮ್ಮ, ವೀರಭದ್ರ ದಂಡಿನ, ಶಿವಾನಂದ ಕೋಟಬಾಗಿ, ಆನಂದ ಸನ್ನಕಿ, ಶಂಕರ್ ಹಿರೇಮಠ, ರಮೇಶ್ ಮಗದುಮ್ಮ, ಭರಮ ಗುಂಡಕಲ್, ಕುಮಾರ್ ಬಸ್ತವಾಡ ಸೇರಿದಂತೆ ಇತರರಿದ್ದರು.

ರೇಣುಕಾಚಾರ್ಯರ ಜಯಂತಿ ಆಚರಣೆ

ಯರಗಟ್ಟಿ: ಪಟ್ಟಣದ ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮ ಉದ್ದೇಶಿಸಿ ತಹಶೀಲ್ದಾರ ಎಂ.ವ್ಹಿ. ಗುಂಡಪ್ಪಗೋಳ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ಜಾತಿ ಮತ ಪಂಥ ಭೇದ ಎಲ್ಲವನ್ನು ಮರೆತು ನಿಂತು ಎಲ್ಲ ಧರ್ಮೀಯರಿಗೆ ಆದಿ ಗುರುವಾಗಿರುವರು ಎಂದರು.ಸಮಾಜದ ಹಿರಿಯರಾದ ಕುಮಾರ ಹಿರೇಮಠ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು 18 ಪಂಗಡಗಳಿಗೆ ಜಗದ್ಗುರು ವಾಗಿದ್ದು ಮಾನವ ಧರ್ಮ ಒಂದೇ ಎಂದು ಸಾರುವ ಮೂಲಕ ಎಲ್ಲಾ ಧರ್ಮೀಯರಿಗೆ ಮಂತ್ರೋಪದೇಶ ಪಡಿಸಲು ಅವಕಾಶ ನೀಡಿದವರು ಜಗದ್ಗುರು ರೇಣುಕಾಚಾರ್ಯರು ಎಂದು ಪ್ರತಿಪಾದಿಸಿದರು.ಈ ವೇಳೆ ಶಾಂತಯ್ಯ ಹಿರೇಮಠ, ದೀಪಕ ತೋರಗಲ್ಲಮಠ, ಈರಯ್ಯ ಹಿರೇಮಠ, ರುದ್ರಯ್ಯ ಹಿರೇಮಠ, ಈರಯ್ಯ ಗೌಡರ, ಜಗದೀಶ ಹೊಸಮಠ, ಈರಯ್ಯ ಮಠಪತಿ, ಗುರುಪಾದಯ್ಯ ಮಾಸ್ತಮರಡಿ, ಪ್ರಸನ್ನಶಾಸ್ತ್ರಿ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ವಿನಯಕುಮಾರ ಹಿರೇಮಠ, ಬಾಳಯ್ಯ ಮಾಸ್ತಮರಡಿ, ಗುರುಪುತ್ರಯ್ಯ ಹೂಗಾರ, ಬಸಯ್ಯ ಪತ್ರಿಗಿಡದ, ಈರಣ್ಣಾ ಮಠಪತಿ, ಈರಣ್ಣಾ ಪೂಜೇರ, ಬಸಯ್ಯ ಹಿರೇಮಠ, ಶಿವಾನಂದ ಕರ್ಜಗಿಮಠ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಅಪಾಯಕಾರಿ ಬಣ್ಣ ಬಳಕೆ ಬೇಡ

ಸಂಕೇಶ್ವರ: ಪಟ್ಟಣದಲ್ಲಿ ಹೋಳಿ ಹಬ್ಬವನ್ನು ಮಾ.8ರಂದು ಆಚರಿಸಲು ಹಿರಿಯರು, ಮುಖಂಡರು ಸೇರಿ ನಿರ್ಧರಿಸಿದ್ದು, ಅಪಾಯಕಾರಿ ಬಣ್ಣಗಳನ್ನು ಬಳಸದೆ ಹಬ್ಬವನ್ನು ಆಚರಿಸಬೇಕೆಂದು ಸಿಪಿಐ ಎಸ್.ಎಂ. ಅವಜಿ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಹೋಳಿ ಹಬ್ಬದ ನಿಮಿತ್ತ ಆಯೋಜಿಸಿದ್ದ ಶಾಂತಿ ಸಭೆ ಉದ್ದೇಶಿಸಿ ಅವರು ಮಾತನಾಡಿದರು, ಪರೀಕ್ಷೆ ಸಮಯ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು ಯಾವುದೇ ಅಹಿತಕರ ಘಟನೆಗಳು ನಡೆದರೇ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.



ಪುರಸಭೆಯ ಮುಖ್ಯಾಧಿಕಾರಿ ಪ್ರಕಾಶ ಮಠದ ಮಾತನಾಡಿ, ಸಂಕೇಶ್ವರದ ಜನರು ಹೋಳಿ ಹಬ್ಬ ದಿನವನ್ನು ಬಿಟ್ಟು ರಜೆ ದಿನದಂದು ಹಬ್ಬ ಆಚರಿಸುವುವ ಮೂಲಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಡೆದುಕೊಳ್ಳುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹಬ್ಬದ ಸಂದರ್ಭದಲ್ಲಿ ನೀರಿನ ಕೊರತೆ ಉಂಟಾಗದಂತೆ ಪುರಸಭೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದು, ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಿ ಸಹಕರಿಸುವಂತೆ ಮನವಿ ಮಾಡಿದರು.

ಈ ಸಂಧರ್ಭದಲ್ಲಿ ಕೆಇಬಿ ನಿರ್ದೇಶಕರಾದ ಗಜಾನನ ಕ್ವಳ್ಳಿ, ಶಿವಾನಂದ ಮುಡಶಿ ಮುಖಂಡರಾದ ಜಯಪ್ರಕಾಶ್ ಕರಜಗಿ,ಸಂತೋಷ ಮುಡಶಿ, ದೀಲಿಪ ಹೊಸಮನಿ, ವಿನೋದ ನಾಯಿಕ, ಮಹೇಶ ಹಟ್ಟಿವಳಿ, ಚಿದಾನಂದ ಕರದನ್ನವರ,ರೋಹನ ನೇಸರಿ, ಸುಭಾಷ ಕಾಸರಕರ, ಕುಮಾರ ಕಬ್ಬೂರಿ ಇದ್ದರು.

ಕಿರುಸುದ್ದಿ

ವಿವಿಧ ಕಾಮಗಾರಿಗೆ ಚಾಲನೆ



ಚಿಕ್ಕೋಡಿ: ತಾಲೂಕಿನ ಕುಂಗಟೋಳಿ, ಖಿಜಗೌಡನಹಟ್ಟಿ, ಹತ್ತರವಾಟ ಗ್ರಾಮಗಳಲ್ಲಿ 80 ಲಕ್ಷ ರೂ. ಮೊತ್ತದ ವಿವಿಧ ಕಾಮಗಾರಿಗಳಿಗೆ ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಭಾನುವಾರ ಭೂಮಿಪೂಜೆ ನೆರವೇರಿಸಿದರು.

ಜಿಲ್ಲಾ ಪಂಚಾಯತಿ ಇಲಾಖೆಯ ವತಿಯಿಂದ ಕುಂಗಟೋಳಿ ಗ್ರಾಮದಲ್ಲಿ 25 ಲಕ್ಷ ರೂ. ಅನುದಾನದಲ್ಲಿ ಸಿಸಿ ರಸ್ತೆ, ಖಿಜಗೌಡನಹಟ್ಟಿ ಗ್ರಾಮದ ರೇಣುಕಾದೇವಿ ದೇವಸ್ಥಾನದ ಬಳಿಯಲ್ಲಿ 5 ಲಕ್ಷ ರೂ. ಮೊತ್ತದಲ್ಲಿ ಸಮುದಾಯ ಭವನ, ಹತ್ತರವಾಟ ಗ್ರಾಮದಲ್ಲಿ 50 ಲಕ್ಷ ರೂ. ಮೊತ್ತದಲ್ಲಿ ಹತ್ತರವಾಟ-ಹಳ್ಳಿಕೋಡಿ ರಸ್ತೆ ಸುಧಾರಣಾ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಚಾಲನೆ ನೀಡಿದರು. ಮುಖಂಡ ಮಹೇಶ ಭಾತೆ, ರವಿ ಹಿರೇಕೋಡಿ, ಎಸ್ ಎಸ್ ಹೊಸಮನಿ, ಸಿದ್ದಗೌಡ ಪಾಟೀಲ, ಮಾರುತಿ ಹಿರೇಕೋಡಿ, ಶಿವರಾಯ ಕಮತೆ, ಸಂತೋಷ ಕಮತೆ, ಅಜೀತ ಹಂಜಿ, ಬಸವರಾಜ ನೇಜ, ಅಪ್ಪಯ್ಯಗೌಡ ಪಾಟೀಲ, ಬಸವರಾಜ ಕಾಂಬಳೆ, ಹಸನ್ ಸನದಿ, ದುಂಡಪ್ಪ ಖೋತ, ನಿಂಗಪ್ಪ ಸಿಂಗಾಯಿ, ಮೊನ್ನಪ್ಪ ಸಿಂಗಾಯಿ, ರಾಮಾ ಸಿಂಗಾಯಿ, ಬಸವರಾಜ ಮಾಳಗಿ ಇತರರು ಇದ್ದರು.

ರಾಜ್ಯಮಟ್ಟದ ವಿದ್ಯಾರ್ಥಿ ಸಮ್ಮೇಳನದಲ್ಲಿ ಸಾಧನೆ



ಸಂಕೇಶ್ವರ: ಬಾಗಲಕೋಟೆಯ ಬಿವಿವಿಎಸ್. ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ '5ನೇ ಐಎಸ್‌ಟಿಇ ರಾಜ್ಯಮಟ್ಟದ ವಿದ್ಯಾರ್ಥಿ ಸಮ್ಮೇಳನ-2026'ರಲ್ಲಿ ಬೆಳಗಾವಿ ಜಿಲ್ಲೆಯ ನಿಡಸೋಶಿಯ ಎಸ್.ಜೆ.ಪಿ.ಎನ್. ಟ್ರಸ್ಟ್‌ನ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.ನವದೆಹಲಿಯ ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜುಕೇಶನ್ ಹಾಗೂ ಐಎಸ್‌ಟಿಇ ಕರ್ನಾಟಕ ವಿಭಾಗದ ಸಹಯೋಗದಲ್ಲಿ ನಡೆದ ಈ ಪ್ರತಿಷ್ಠಿತ ತಾಂತ್ರಿಕ ಕೂಟದಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅತ್ಯಂತ ಸ್ಪರ್ಧಾತ್ಮಕವಾಗಿದ್ದ 'ಪೇಪರ್ ಪ್ರೆಸೆಂಟೇಶನ್' (ಪ್ರಬಂಧ ಮಂಡನೆ) ವಿಭಾಗದಲ್ಲಿ ನಿಡಸೋಶಿ ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಜ್ಞಾನ ಮತ್ತು ಸಂವಹನ ಕೌಶಲ್ಯದ ಮೂಲಕ ತೀರ್ಪುಗಾರರ ಮೆಚ್ಚುಗೆಗೆ ಪಾತ್ರರಾಗಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.ವಿಜೇತರ ವಿವರ: ತಾಂತ್ರಿಕ ವಿಭಾಗಗಳಲ್ಲಿ ನಡೆದ ಜಿದ್ದಾಜಿದ್ದಿನ ಸ್ಪರ್ಧೆಯಲ್ಲಿ ನಿಡಸೋಶಿ ಕಾಲೇಜಿನ ಈ ಕೆಳಗಿನ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ: ಸಿವಿಲ್ ವಿಭಾಗ: ಪ್ರಣವ ನಾರ್ವೇಕರ-ಪಾಪುನ್ ಶೇಖ್ (ದ್ವಿತೀಯ)- ಎಂಟಿಟಿ ವಿಭಾಗ: ಆರ್ಯನ್ ನಿರ್ವಾಣಿ (ತೃತೀಯ)- ಕಂಪ್ಯೂಟರ್ ಸೈನ್ಸ್: ಶ್ರೀನಿಧಿ ಚೋಗಲಾ (ತೃತೀಯ)ಗಣ್ಯರ ಅಭಿನಂದನೆ ರಾಜ್ಯಮಟ್ಟದಲ್ಲಿ ಕಾಲೇಜಿನ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಅಧ್ಯಕ್ಷ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಪ್ರೊ. ಬಿ.ಆರ್. ಉಮರಾಣೆ ಪ್ರಾಂಶುಪಾಲರು, ಉಪನ್ಯಾಸಕರು ವಿದ್ಯಾರ್ಥಿಗಳನ್ನು ಅಭಿನಂದಿಸಿ,ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದ್ದಾರೆ.

ನಿಧನ ಸುದ್ದಿ

ಶಕುಂತಲಾ ಮಟ್ಟಿಕಲ್ಲಿ



ಗೋಕಾಕ: ನಗರದ ಲಿಂಗಾಯತ ಸಮಾಜದ ಹಿರಿಯರು, ಬಣಗಾರ ಓಣಿಯ ನಿವಾಸಿ ಶಕುಂತಲಾ ಗು ಮಟ್ಟಿಕಲ್ಲಿ (74 ನಿಧನರಾದರು. ಮೃತರಿಗೆ ಪತಿ, ಮೂವರು ಪುತ್ರರು, ಸೂಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.

ಲಕ್ಷ್ಮೀಬಾಯಿ ಮನ್ನಿಕೇರಿ



ರಾಯಬಾಗ: ತಾಲೂಕಿನ ಮೊರಬ ಗ್ರಾಮದ ಲಕ್ಷ್ಮೀಬಾಯಿ ಹಾಲಪ್ಪ ಮನ್ನಿಕೇರಿ(84) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು,ಆರು ಜನ ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸುಶೀಲವ್ವ ತೆಲಸಂಗ



ಅಥಣಿ: ತಾಲೂಕಿನ ಐಗಳಿ ಗ್ರಾಮದ ಆದಿ ಬಣಜಿಗ ಸಮಾಜದ ಹಿರಿಯರಾದ ಸುಶೀಲವ್ವ ಶಿವಪ್ಪ ತೆಲಸಂಗ (92) ನಿಧನರಾದರು. ಮೃತರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ : ಇಲ್ಲಿನ ಶಿವಬಸವ ನಗರದ ಡಾ. ಸ. ಜ. ನಾಗಲೋಟಿಮಠ ವಿಜ್ಞಾನ ಕೇಂದ್ರದಲ್ಲಿ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಚಂದ್ರಗಿರಿ ಮಹಿಳಾ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದೊಂದಿಗೆ ಹಮ್ಮಿಕೊಂಡ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಲಾಯಿತು. ಈ ವೇಳೆ ಬೆಳಗಾವಿ ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಶನ್ ಕಾರ್ಯದರ್ಶಿ, ಮನೋಹರ ಉಳ್ಳೇಗಡ್ಡಿ, ಪ್ರಾಧ್ಯಾಪಕ ಶ್ರೀಧರ ಕಿಳ್ಳಿಕೇತರ ಸೇರಿದಂತೆ ಇತರ ಬೋಧನಾ ಸಿಬ್ಬಂದಿ ಸೇರಿದಂತೆ ಇತರರು ಇದ್ದರು.

ಮದ್ಯ ಮಾರಾಟ ನಿಷೇಧ: ಜಿಲ್ಲಾಧಿಕಾರಿ

ಬೆಳಗಾವಿ: ಹೋಳಿ ಹಾಗೂ ರಂಗಪಂಚಮಿ ಹಬ್ಬದ ಅಂಗವಾಗಿ ಬೆಳಗಾವಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳ ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧಿಸಿದ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಅವರು ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 21 (1) ರಡಿ ಪ್ರದತ್ತವಾದ ಅಧಿಕಾರದ ಮೇರೆಗೆ ಅನುಬಂಧದಲ್ಲಿ ನಮೂದಿಸಲಾದ ಬೆಳಗಾವಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರದೇಶಗಳಲ್ಲಿ ಬೇರೆ ಬೇರೆ ದಿವಸಗಳಂದು ರಂಗಪಂಚಮಿ ಆಚರಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಹೋಳಿ (ಬಣ್ಣ) ಆಚರಣೆಯ ಕಾಲಕ್ಕೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತ ದೃಷ್ಟಿಯಿಂದ ಬೆಳಗಾವಿ ಜಿಲ್ಲೆಯ (ಬೆಳಗಾವಿ ತಾಲೂಕು ಹೊರತುಪಡಿಸಿ) ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳ ಪ್ರದೇಶಗಳಲ್ಲಿ, ಅವುಗಳ ಮುಂದೆ ನಮೂದಿಸಿದ ದಿನಾಂಕ, ಸಮಯಗಳಂದು ಮುಂಜಾಗ್ರತಾ ಕ್ರಮವಾಗಿ ಮದ್ಯ ಮಾರಾಟ ನಿಷೇಧಿಸಿ, ಮದ್ಯ, ಬಾರ್ ಅಂಗಡಿಗಳನ್ನು ಬಂದ್ ಮಾಡುವಂತೆ ಆದೇಶಿಸಲಾಗಿದೆ. ಈ ಆದೇಶ ಉಲ್ಲಂಘಿಸಿದಲ್ಲಿ ಶಿಕ್ಷೆಗೆ ಒಳಪಡಿಸಲಾಗುತ್ತದೆ. ಅಬಕಾರಿ ಜಂಟಿ ಆಯುಕ್ತರು, ಅಬಕಾರಿ ಉಪ ಆಯುಕ್ತರು, ಅಬಕಾರಿ ಅಧೀಕ್ಷಕರು, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಅಧೀಕ್ಷಕರು, ಬೆಳಗಾವಿ, ಚಿಕ್ಕೋಡಿ ಸದರಿ ದಿನಗಳಂದು ಮದ್ಯ ಮಾರಾಟ ಆಗದಂತೆ ಕಟ್ಟುನಿಟ್ಟಾಗಿ ನಿಗಾ ವಹಿಸಬೇಕು. ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಒಬ್ಬ ವ್ಯಕ್ತಿ ಹೊಂದಬೇಕಾದ ಮದ್ಯ ಸಂಗ್ರಹಣೆ ಹೊರತುಪಡಿಸಿ ಹೆಚ್ಚಿನ ಸಂಗ್ರಹಣೆ ಇರದಂತೆ ಹಾಗೂ ಲೈಸನ್ಸ್ ಇಲ್ಲದ ಆವರಣಗಳಲ್ಲಿ ಸಂಗ್ರಹಣೆ ಇಡದಂತೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿದ್ದಾರೆ.



ಬೆಳಗಾವಿ : ಬಿಜೆಪಿ ಬೆಳಗಾವಿ ನಗರ ಜಿಲ್ಲೆ, ನೇತೃತ್ವದಲ್ಲಿ ಜಿಲ್ಲಾ ಕಾರ್ಯಕಾರಣಿ ಸಭೆಯನ್ನು ಆಯೋಜಿಸಲಾಯಿತು. ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಮಾರ್ಗದರ್ಶನದಂತೆ ಕೇಂದ್ರ, ರಾಜ್ಯದ ಎಲ್ಲ ಕಾರ್ಯಕರ್ತರು ಪದಾಧಿಕಾರಿಗಳು ಹಿರಿಯರು ಬೂತ್ ಮಟ್ಟದಲ್ಲಿ ಕೆಲಸ ಅಚ್ಚುಕಟ್ಟಾಗಿ ಕೆಲಸ ಕಾರ್ಯಗಳನ್ನು ಮಾಡಿ, ಕೇಂದ್ರ ಸರಕಾರದ ಅಭಿವೃದ್ಧಿ ಕೆಲಸಗಳ ಬಗ್ಗೆ ಪ್ರತಿ ಮನೆ ಮನೆಗಳಿಗೆ ತಲುಪಿಸುವ ಕೆಲಸ ಮಾಡಲಾಗುತ್ತದೆ ಎಂದು ಶಾಸಕ ಅಭಯ ಪಾಟೀಲ ತಿಳಿಸಿದರು.

ಕೆಪಿಎಸ್ ಮ್ಯಾಗ್ನೆಟ್- ಖಾಸಗೀಕರಣದ ಹುನ್ನಾರ ವಿರೋಧಿಸಿ ಜನಾಂದೋಲನ

ಬೆಳಗಾವಿ : ರಾಜ್ಯದಲ್ಲಿರುವ ಸರಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ನೀಡಿ ಬಲ ಪಡಿಸುವುದರ ಬದಲಾಗಿ ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ, ಎಐಡಿಎಸ್‌ಓ ನೇತೃತ್ವದಲ್ಲಿ ನಗರದ ಅಂಬೇಡ್ಕರ್ ಉಧ್ಯಾನ ವನದಲ್ಲಿ ಪೋಷಕರ ಸಮಾವೇಶ ನಡೆಸಲಾಯಿತು.



ಭಾನುವಾರ ಬೆಳಗಾವಿ ನಗರದ ಡಾ. ಬಾಬಾ. ಸಾಹೇಬ್ ಅಂಬೇಡ್ಕರ್ ಉದ್ಯಾನವನದಲ್ಲಿ ಆಯೋಜಿಸಲಾಗಿರುವ ಪೋಷಕರ ಸಮಾವೇಶದಲ್ಲಿ ರಾಜ್ಯ ಸರಕಾರ ಸರಕಾರಿ ಶಾಲೆಗಳು ಖಾಸಗಿಕರಣ ಮಾಡುವುದಕ್ಕೆ ಹೊರಟಿರುವುದರ ವಿರುದ್ಧ ದೊಡ್ಡ ಮಟ್ಟದ ಆಂದೋಲನವನ್ನು ಪ್ರಾರಂಭಿಸುವುದರ ಬಗ್ಗೆ ಚರ್ಚಿಸಲಾಯಿತು.

ಈ ಆಂದೋಲನ ಸಮಾವೇಶದಲ್ಲಿ ಪಾಲಕರು, ಗ್ರಾಮಸ್ಥರು, ಸಾಹಿತಿಗಳು, ವಿವಿಧ ಕನ್ನಡಪರ ಸಂಘಟನೆಯ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಕನ್ನಡ ನಾಡಿನಲ್ಲಿ ಕನ್ನಡ ಸರಕಾರಿ ಶಾಲೆಗಳನ್ನು ಉಳಿಸಲುಕೊಳ್ಳಲು ಕನ್ನಡಿಗರು ಹೋರಾಡಬೇಕಾಗಿರುವ ಪರಿಸ್ಥಿತಿ ಎಂದುರಾಗಿದೆ ಎಂದು ಸಾಹಿತಿ ಎಲ್ಲಪ್ಪ ಹಿಮ್ಮಡಿ ಅಸಮಾಧಾನ ಹೊರಹಾಕಿದರು.

ರಾಜ್ಯ ಸರಕಾರವು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಸರಕಾರಿ ಶಾಲೆಗಳನ್ನು ಮುಚ್ಚುವ ತನ್ನ ನಿರ್ಧಾರವನ್ನು ಬದಲಿಸಲೇಬೇಕು. ಇಲ್ಲವಾದಲ್ಲಿ ರಾಜ್ಯಾಧ್ಯಂತ ಸರಕಾರದ ವಿರುದ್ಧ ಜನ ಚಳುವಳಿ ನಡೆಸಬೇಕಾಗುತ್ತದೆ ಎಂದು ರಾಜ್ಯ ಸರಕಾರಕ್ಕೆ ಪೋಷಕರ ಸಮಾವೇದ ಮೂಲಕ ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿದರು.

ಇಚ್ಚಿನ ದಿನಗಳಲ್ಲಿ ರಾಜ್ಯದಲ್ಲಿ ಜಾತಿ ಬೇದಬಾವ ಸಮಾಜವನ್ನು ಒಡೆಯುವ ಕೆಲಸಯಾಗುತ್ತಿವೆ. ಜಾತಿವಾದಿ - ಕೋಮುವಾದಿ ದಾಳಿಗಳಿಂದ ಸಮಾಜವನ್ನು ಕಾಪಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ. ಸರಕಾರಿ ಶಾಲೆಗಳು ಉಳಿದರೆ ಮಾತ್ರ ಶಿಕ್ಷಣದ ಉಳಿವು. ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು.

ಇದೇ ವೇಳೆ ಹಿರಿಯ ಹೋರಾಟಗಾರ ಅಶೋಕ್ ಚಂದರಗಿ ಮಾತನಾಡಿ, ಏಷಿಯನ್ ಡೆವಲಪ್ಮೆಂಟ್ ಬ್ಯಾಂಕಿನ 2500 ಕೋಟಿ ಸಾಲದ ಹಿಂದೆ ಬಿದ್ದಿರುವ ಸರಕಾರವು ಶತಾಯಗತಾಯ ಶಾಲೆಗಳನ್ನು ಮುಚ್ಚಲು ಹವಣಿಸುತ್ತಿದೆ. ಒಂದೆಡೆ ಒಂದೇ ಒಂದು ಶಾಲೆಯನ್ನು ಮುಚ್ಚುವುದಿಲ್ಲ ಎಂದು ಹೇಳುತ್ತಾ ಇನ್ನೊಂದೆಡೆ ಸರಕಾರಿ ಶಾಲೆ ಮುಚ್ಚಲು ಪಿತೂರಿ ನಡೆಸಿದ್ದಾರೆ. ಗಡಿನಾಡು ಬೆಳಗಾವಿ ಸಾಂಸ್ಕೃತಿಕವಾಗಿ ಸೂಕ್ಷ್ಮ ಪ್ರದೇಶ. ಸರಕಾರವು ತನ್ನ ನಿರ್ಧಾರ ಬದಲಿಸದಿದ್ದರೆ. ಜನರ ದಂಗೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ರಕ್ಷಣಾವೇದಿಕೆಯ ಮಹದೇವ್ ತಳವಾರ್ ಮಾತನಾಡಿ, ಕಳೆದ 10 ವರ್ಷದಲ್ಲಿ ದೇಶವ್ಯಾಪಿ 93000 ಸರಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಕರ್ನಾಟಕ ಕಾಂಗ್ರೆಸ್ ಸರಕಾರವನ್ನು ಪ್ರಶ್ನೆ ಮಾಡಿದರೆ ಬಿಜೆಪಿ ರಾಜ್ಯಗಳಲ್ಲಿ ಶಾಲೆ ಮುಚಿಚ್ಚುವ ಬಗ್ಗೆ ಹೇಳುತ್ತಿದ್ದಾರೆ. ಕಾಂಗ್ರೆಸ್ ಬಿಜೆಪಿ ಸೇರಿದಂತೆ ಎಲ್ಲ ಸರಕಾರಗಳು ಸರಕಾರಿ ಶಾಲೆಗಳನ್ನು ಮುಚ್ಚುತ್ತಿವೆ. ವ್ಯವಸ್ಥಿತವಾಗಿ ಸರಕಾರಿ ಶಾಲೆಗಳ ಗುಣಮಟ್ಟವನ್ನು ಕುಗ್ಗಿಸಿ ಖಾಸಗಿ ಶಾಲೆಗಳ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ವಿನಯ ಚಂದ್ರ ಮಾತನಾಡಿ, ಕರ್ನಾಟಕದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ 40,000 ಶಾಲೆಗಳನ್ನು ಮುಚ್ಚಲಾಗುತ್ತಿದೆ. ಬಡವರಿಂದ ಜ್ಞಾನವನ್ನು ಕಸಿಯುವ ಈ ಹುನ್ನಾರದ ವಿರುದ್ಧ ರಾಜ್ಯದಾದ್ಯಂತ ಜನ ಹೋರಾಟ ನಡೆದಿದೆ. ಹಳ್ಳಿ-ಹಳ್ಳಿಗೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಿ ಸರಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಬುಡಮಟ್ಟದಿಂದ ಬಲಪಡಿಸಬೇಕು ಎಂದರು.ಈ ವೇಳೆ ಪೋಷಕರ್ ಸಮಾವೇಶದಲ್ಲಿ ನೂರಾರು, ಪೋಷಕರು, ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯರ್ತರು, ಸಾಹಿತಿಗಳು ಸೇರಿದಂತೆ ಹಲವರು ಇದ್ದರು.

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಬೆಳಗಾವಿ: ರಾಜ್ಯದಲ್ಲಿ ಹಲವಾರು ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳ ಮುಚ್ಚುವ, ರಾಜ್ಯ ಸರಕಾರದ ನೀತಿ ವಿರೋಧಿಸಿ ರಾಜ್ಯದಾದ್ಯಂತ ನಡೆದಿರುವ ಆಂದೋಲನವನ್ನು ಬೆಂಬಲಿಸಿ, ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಧರಣಿ ಸತ್ಯಾಗ್ರಹ, ಮೋರ್ಚಾ ನಡೆಸಲು ಕನ್ನಡಪರ ಸಂಘಟನೆಗಳು ತೀರ್ಮಾನಿಸಿವೆ ಎಂದು ಕನ್ನಡಪರ ಸಂಘಟನೆಗಳ ಕ್ರೀಯಾ ಸಮಿತಿ ಅಧ್ಯಕ್ಷ ಅಶೋಕ್ ಚಂದರಗಿ ಹೇಳಿದರು.

ಭಾನುವಾರ ನಗರದ ಸರ್ಕಿಟ್ ಹೌಸ್ನಲ್ಲಿ ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ಸಭೆ ನಡೆಯಿತು. ಕನ್ನಡಪರ ಸಂಘಟನೆಗಳ ಎಲ್ಲ ಸದಸ್ಯರುಗಳ ಒಪ್ಪಂದದ ಮೇರೆ ಬೆಳಗಾವಿ ಜಿಲ್ಲಾಧ್ಯಂತ ಎಲ್ಲ ತಾಲೂಕು ಕೇಂದ್ರಗಳಲ್ಲಿ ರಾಜ್ಯ ಸರಕಾರವು ಮ್ಯಾಗ್ನೆಟ್ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ ಪ್ರತಿಭಟನೆಗೆ ಬೆಂಬಲಿಸಿರುವುದರ ಬಗ್ಗೆ ತೀರ್ಮಾನಿಸಲಾಯಿತು.

ಹೊಸ ನೀತಿಯ ಪರಿಣಾಮವಾಗಿ ಬೆಳಗಾವಿ ಜಿಲ್ಲೆಯಲ್ಲಿ ಮುಚ್ಚಲಿರುವ ಕನ್ನಡ ಶಾಲೆಗಳ ವಿವರಗಳನ್ನು ಹಿರಿಯ ಕನ್ನಡ ಹೋರಾಟಗಾರ ಅಶೋಕ ಚಂದರಗಿ ಅವರು, ಡಿ.30 ರಂದು ಬೆಂಗಳೂರಿನಲ್ಲಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನಿಶ ಅವರಿಗೆ ಮನವಿಯನ್ನು ಸಲ್ಲಿಸಲಾಗಿತ್ತು. ಮನವಿಯ ಬಗ್ಗೆ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಚರ್ಚೆ ನಡೆಸುತ್ತಿದ್ದಾರೆ. ಇತ್ತೀಚಿಗೆ ಫೆ.20ರಂದು ಗಡಿ ಉಸ್ತುವಾರಿ ಸಚಿವ ಎಚ್. ಕೆ.ಪಾಟೀಲ್ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಲಾಗಿದೆ. ಯಾವುದನ್ನು ಲೆಕ್ಕಿಸದೆ ರಾಜ್ಯ ಸರಕಾರ ಬೆಳಗಾವಿ ಜಿಲ್ಲೆಯ ಅಲ್ಲದೆ ರಾಜ್ಯದಲ್ಲಿ ಹಲವಾರು ಮ್ಯಾಗ್ನೆಟ್ ಸರಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವುದಕ್ಕೆ ಮುಂದಾಗಿದೆ ಎಂದು ಅಸಮಾಧಾನ ಹೊರ ಹಾಕಿದರು.

ಕಿತ್ತೂರು ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಮಹಾದೇವ ತಳವಾರ ಮಾತನಾಡಿ, ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಜಿಲ್ಲಾ ಮಟ್ಟದ ಮತ್ತು ಪಾಲಿಕೆ ಮಟ್ಟದ ಕನ್ನಡ ಅನುಷ್ಠಾನ ಸಮಿತಿಗಳನ್ನು ರಚಿಸಿದ್ದರೂ ಸಹ ಇವರೆಗೂ ಸಭೆಯನ್ನು ಕರೆಯಲಾಗಿಲ್ಲ ಎಂದು ಆಕ್ಷೇಪಿಸಿದರು. ಕನ್ನಡಪರ ಸಂಘಟನೆಗಳ ಕ್ರೀಯಾ ಸಮಿತಿ ಅಧ್ಯಕ್ಷ ಅಶೋಕ್ ಚಂದರಗಿ, ಶ್ರೀನಿವಾಸ್ ತಾಲೂರಕರ್, ಮಹಾದೇವ ತಳವಾರ, ವಾಜೀಧ್ ಹೇರೆಕುಂಡಿ, ಸೇರಿದಂತೆ ಹಲವು ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಇದ್ದರು.



ಜನರ ಸೇವೆಯೇ ದೇವರ ಸೇವೆ

ಬೆಳಗಾವಿ: ಬಸವಣ್ಣನವರ ಕಾಯಕವೇ ಕೈಲಾಸ ಎನ್ನುವ ಮಾತಿನಲ್ಲಿ ನಂಬಿಕೆ ಇಟ್ಟು, ಜನ ಸೇವೆಯೇ ಜನಾರ್ದನ ಸೇವೆ ಎಂದು ತಿಳಿದು ಕ್ಷೇತ್ರದ ಜನರ ಸೇವೆ ಮಾಡುತ್ತಿದ್ದೇನೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

> ▸▸ ಶ್ರೀ ಗ್ರಂಥರಾಜ ಸಾಂಪ್ರದಾಯಿಕ ಪಾರಾಯಣ ಸೋಹಳಾ ಕಾರ್ಯಕ್ರಮದಲ್ಲಿ ಭಾಗಿ

ಭಾನುವಾರ ಮುತಗಾ ಗ್ರಾಮದಲ್ಲಿ ನಡೆದ ಶ್ರೀ ಗ್ರಂಥರಾಜ ಸಾಂಪ್ರದಾಯಿಕ ಪಾರಾಯಣ ಸೋಹಳಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಕಳೆದ 25 ವರ್ಷದಿಂದ ಬೆಳಗ್ಗೆಯಿಂದರಾತ್ರಿ ಯವರೆಗೆಜನರಸೇವೆಯಲ್ಲಿ ತೊಡಗಿಕೊಂಡಿದ್ದೇನೆ. ನಿಮ್ಮ ಸೇವೆಯೇ ದೇವರ ಸೇವೆ ಎಂದು ಕೆಲಸ ಮಾಡುತ್ತಿದ್ದೇನೆ. ರೈತ ಕುಟುಂಬದಿಂದ ಬಂದು, ಸರಕಾರಿ ಶಾಲೆಯಲ್ಲಿ ಕಲಿತು, ಸರಕಾರಿ ಬಸ್‌ನಲ್ಲಿ ಓಡಾಡಿ, ಹೆಚ್ಚು ಕಲಿಯಲು ಅವಕಾಶವಿಲ್ಲದಿದ್ದರೂ ಸಮಾಜ ಸೇವೆಯಿಂದಲೇ ಇಂದು ಈ ಹಂತಕ್ಕೆ ಬಂದಿದ್ದೇನೆ ಎಂದು ಅವರು ಹೇಳಿದರು.

ಭಾರತ ಮಹಾನ್ ದೇಶ, ನಮ್ಮ ಸಂಸ್ಕೃತಿ ಉನ್ನತವಾದದ್ದು. ಮಕ್ಕಳಿಗೆ ನಮ್ಮ ಸಂಸ್ಕೃತಿ ಕುರಿತು ತಿಳಿಸಲು ಪಾಲಕರು ಸ್ವಲ್ಪ ಸಮಯ ಮೀಸಲಿಡಬೇಕು. ಮಹಾನ್ ಪುರುಷರ ಕುರಿತು, ಇತಿಹಾಸದ ಕುರಿತು ಮಕ್ಕಳಿಗೆ ತಿಳಿಸಬೇಕು. ನಾನು ಕಳೆದ 7 ವರ್ಷಗಳಲ್ಲಿ ಕ್ಷೇತ್ರದ 154 ಮಂದಿರಗಳ ಜೀರ್ಣೋದ್ದಾರ ಮಾಡಿದ್ದೇನೆ. ಬಹಳ ಭಕ್ತಿಯಿಂದ ಕೆಲಸ ಮಾಡುತ್ತಿದ್ದೇನೆ ಎಂದು ಹೆಬ್ಬಾಳ್ಕರ್ ಹೇಳಿದರು. ಸಾಧ್ವಿ ರುಕ್ಮಿಣಿತಾಯಿ ಹಾವರೆ ಅವರ ಸುಂದರ ಹಾಗೂ ಅರ್ಥಪೂರ್ಣ ಪಾರಾಯಣವು ಮನಸ್ಸಿಗೆಶಾಂತಿ ಮತ್ತು ಆಧ್ಯಾತ್ಮಿಕಚೈತನ್ಯವನ್ನು ನೀಡಿತು ಎಂದು ಅವರು ಹೇಳಿದರು.

ಈ ವೇಳೆ ಚೇತನ ಚೌಗುಲೆ, ಸಚಿನ ಪಾಟೀಲ, ಶಿವಾಜಿ ಪಾಟೀಲ, ಬಾಬು ಪಾಟೀಲ, ಯಲ್ಲಪ್ಪ ಕೇದಾರ್, ನಾಗೇಶ್ ದೇಸಾಯಿ, ಗಜಾನನ ಕಣಬರಕರ್, ರಾಯಣ್ಣ ಕಾಕಾ, ಶರದ, ಪಿಂಟು, ಗ್ರಾಮದ ನೂರಾರು ಮಹಿಳೆಯರು, ಗ್ರಾಮದ ಹಿರಿಯರು ಸೇರಿದಂತೆ ಹಲವರು ಇದ್ದರು.



ವೈದ್ಯಕೀಯ ಶಿಕ್ಷಣದಿಂದ ಉತ್ತಮ ಬದುಕು ರೂಪಿಸಿಕೊಳ್ಳಿ: ಪಾಟೀಲ

ಚನ್ನಮ್ಮನ ಕಿತ್ತೂರು: ವೈದ್ಯಕೀಯ ಶಿಕ್ಷಣ ನಮ್ಮ ಕ್ಷೇತ್ರದ ಮಕ್ಕಳಿಗೆ ಸಿಗುತ್ತಿರುವುದು ಡಾ.ವೀರಭದ್ರಪ್ಪ ಗಡಗಿ ಅವರಶ್ರಮದಿಂದ ಇದು ನಮ್ಮೆಲ್ಲರ ಭಾಗ್ಯವೆಂದು ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.



ಪಟ್ಟಣದ ಹೊರವಲಯದಲ್ಲಿರುವ ಶ್ರೀ ಚನ್ನಬಸವ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಶಕುಂತಲಾ ಗಡಗಿ ಇನ್ಸ್ಟಿಟ್ಯೂಟ್ ನರ್ಸಿಂಗ್ ಸೈನ್ಸ್ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರಮಾಣ ವಚನ ಕಾರ್ಯಕ್ರಮದಲ್ಲಿಮಾತನಾಡಿ, ಈಸಂಸ್ಥೆನೀಡುತ್ತಿರುವ ಶಿಕ್ಷಣವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಜಾತಿ ಭೇದ ಭಾವ ತೊರೆದು ಪ್ರಾಮಾಣಿಕವಾಗಿ ರೋಗಿಯ ಜೀವ ಉಳಿಸುವ ಕೆಲಸ ವೈದ್ಯಕ್ಷೇತ್ರ ಮಾಡುತ್ತದೆ. ರೋಗಿಗೆ ಧೈರ್ಯ ತುಂಬಿ ಜೀವ ಉಳಿಸುವವರೆ ವೈದ್ಯರು, ದೇವರ ಇನ್ನೊಂದು ರೂಪವೇ ವೈದ್ಯರಿಗೆ ಸಮಾಜದಲ್ಲಿ ವಿಶೇಷ ಗೌರವವಿದೆ ಎಂದರು.

ಸಂಸ್ಥೆಯ ಚೇರಮನ್ ಡಾ.ವೀರಭದ್ರಪ್ಪ ಗಡಿಗಿ ಮಾತನಾಡಿ, ರೋಗಿಗಳ ನಂಬಿಕೆ ಇನ್ನೊಂದು ಹೆಸರೇ ವೈದ್ಯ. ರೋಗಿಯಲ್ಲಿ ಆತ್ಮವಿಶ್ವಾಸ ತುಂಬಿ ಹಾರೈಕೆ ನೀಡುವ ಕೆಲಸ ವೈದ್ಯಕ್ಷೇತ್ರದ್ದಾಗಿದೆ. ನನ್ನ ಬಹುದಿನಗಳ ಕನಸಿತ್ತು ಬಡ ಮಕ್ಕಳಿಗೂ ವೈದ್ಯಕೀಯ ಶಿಕ್ಷಣ ತಲುಪುವಂತಾಗಬೇಕೆಂದು ಎಲ್ಲರ ಸಹಕಾರದಿಂದ ಅದು ಈಡೇರುತ್ತಿದೆ. ಭಾಗದ ಮಕ್ಕಳು ಇದರ ಸದುಪಯೋಗ ಪಡೆದುಕೊಂಡು ವೈದ್ಯ ಕ್ಷೇತ್ರದಲ್ಲಿ ಉತ್ತಮ ಸೇವೆ ನೀಡುವಂತಾಗಬೇಕು ಎಂದರು.

ವೈದ್ಯಾಧಿಕಾರಿ ಡಾ.ಸಂಜಯ ಸಿದ್ದಣ್ಣವರ ಮಾತನಾಡಿ, ಮಾನಸಿಕ ರೋಗಿಗಳನ್ನು ಸದೃಢವಾಗಿ ಮಾಡುವ ಕೆಲಸ ವೈದ್ಯಕೀಯ ಕ್ಷೇತ್ರದ್ದು ಇಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಉತ್ತಮ ಸೇವೆ ನೀಡುವ ಮೂಲಕ ರೋಗಿಗಳ ಭರವಸೆಯನ್ನು ಕುಳಿತುಕೊಳ್ಳುವ ಕೆಲಸ ಮಾಡಿ ಎಂದರು. ಪಪಂ ಅಧ್ಯಕ್ಷ ಜೈಸಿದ್ದರಾಮ ಮಾರಿಹಾಳ, ಡಾ. ಪ್ರಭಾಕರ್ ಪಾಟೀಲ್, ಡಾ.ಚಂದ್ರಗೌಡ ಪೊಲೀಸ್‌ಪಾಟೀಲ, ಪ್ರಿನ್ಸಿಪಾಲ್ ಎಸ್ ಸುಕ್ರೆವ್ವಾ, ವಿಟಿ ಹಣಮರೆಡ್ಡಿ ಸೇರಿದಂತೆ ಇತರರು ಇತರರಿದ್ದರು.

ಶಾಂತಿಯುತವಾಗಿ ಹಬ್ಬ ಆಚರಿಸಿ

ಯರಗಟ್ಟಿ : ಹೋಳಿ ಹಾಗೂ ರಂಜಾನ್ ಹಬ್ಬದಲ್ಲಿ ಯಾವುದೇ ರೀತಿಯಲ್ಲಿ ಅಹಿತಕರ ಘಟನೆ ನಡೆಯದಂತೆ ಶಾಂತಿಯುತವಾಗಿ ಆಚರಿಸಬೇಕು ಎಂದು ಸಿಪಿಐ ಐ.ಎಂ. ಮಠಪತಿ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಭಾನುವಾರ ಹಿಂದೂ ಮತ್ತು ಮುಸ್ಲಿಂ ಸಮಾಜದ ಮುಖಂಡರ ಸಭೆ ನಡೆಸಿ ಮಾತನಾಡಿ, ಹೋಳಿ ಹಬ್ಬವನ್ನು ಆಚರಣೆ ಮಾಡಲಾಗುತ್ತಿದೆ. ಮಾ.21 ರಂದು ರಂಜಾನ್ ಹಬ್ಬವನ್ನು ಆಚರಿಸಲಾಗುತ್ತಿದೆ. ಈ ಹಬ್ಬಗಳ ಸಮಯದಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ನೋಡಿಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಪ್ರತಿಯೊಬ್ಬರು ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು. ಯಾವುದೇ ಜಾತಿ, ಧರ್ಮದ ಜನರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಶಾಂತಿಯುತವಾಗಿ ಆಚರಿಸಬೇಕು. ಹಬ್ಬ ಆಚರಣೆಯ ಕಾಲಕ್ಕೆ ಯಾವುದೇ ರೀತಿಯ ಅಹಿತಕರ ಘಟನೆ ಕಂಡು ಬಂದಲ್ಲಿ ತಕ್ಷಣ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಉಭಯ ಸಮಾಜದ ಮುಖಂಡರಿಗೆ ಸೂಚಿಸಿದರು.



ಈ ಸಂದರ್ಭದಲ್ಲಿ ಪಿಎಸ್‌ಐ ಎಲ್.ಬಿ. ಮಾಳಿ, ಪಪಂ ಅಧಿಕಾರಿ ಮಾರುತಿ ಕೋಳಿ, ವಿಠ್ಠಲಗೌಡ ದೇವರಡ್ಡಿ, ಈರಣ್ಣಾ ಮಠಪತಿ, ಸದಾನಂದ ಹಣಬರ, ವೆಂಕಟೇಶ ದೇವರಡ್ಡಿ, ಚೇತನ ಜಕಾತಿ, ಈರಣ್ಣಾ ಪೂಜೇರ, ರಾಮನಗೌಡ ಪಾಟೀಲ, ಭಾಸ್ಕರ ಹಿರೇಮೆತ್ರಿ, ಸಂತೋಷ ಚನ್ನಮೆತ್ರಿ, ಹನಮಂತ ಹಾರೂಗೊಪ್ಪ, ಯಲ್ಲಪ್ಪ ಪಟ್ಟಪನ್ನವರ, ಅರುಣ ನೀಲಪ್ಪನ್ನವರ, ಇಮಾಮಸಾಬ ಹುಸೇನಾಯ್ಕರ, ಸಲೀಂಬೇಗ ಜಮಾದಾರ, ರಫೀಕ ಡಿ.ಕೆ, ಇಮ್ತಿಯಾಜ್ ಖಾದ್ರಿ, ಮುನ್ನಾ ಶಾಬಾಶಖಾನ, ಹುಸೇನ ದಿಲಾವರನಾಯ್ಕ ಸೇರಿದಂತೆ ವಿವಿಧ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಗುರು ಎನ್ನುವ ಪದಕ್ಕೆ ಅಪಾರ ಗೌರವ: ಶ್ರೀಗಳು

ಕಾಗವಾಡ: ಪ್ರಪಂಚದಲ್ಲಿ ಗುರು ಎನ್ನುವ ಶಬ್ದಕ್ಕೆ ಅಪಾರವಾದ ಗೌರವವಿದೆ. ಭಾರತದಲ್ಲಿ ಗುರುಮಾತೆ, ಅಕ್ಷರದ ಅವ್ವ ಎಂದೇ ಖ್ಯಾತಿಯಾದ ಸಾವಿತ್ರಿಬಾಯಿ ಪುಲೆಯವರು ತಾವು ಸಾಕಷ್ಟು ನೋವು, ಅವಮಾನ, ಹಿಂಸೆಗಳನ್ನು ಅನುಭವಿಸಿ, ಮಹಿಳೆಯರಿಗೆ ಶಿಕ್ಷಣ ನೀಡುವುದೊಂದೇ ತನ್ನ ಗುರಿ ಎಂದು ತಿಳಿದು, ತನ್ನ ಎಲ್ಲ ವಿದ್ಯೆಯನ್ನು ದೇಶದ ಮಹಿಳೆಯರಿಗೆ ಧಾರೆಯೆರಿದು, ಜಗತ್ತಿನ ಶ್ರೇಷ್ಠ ಮಹಿಳೆ ಎಂದು ಖ್ಯಾತಿ ಪಡೆದಿದ್ದಾರೆಂದು ಐನಾಪೂರ-ಕೃಷ್ಣಾಕಿತ್ತೂರು ಗುರುದೇವ ಆಶ್ರಮದ ಪಪೂ ಬಸವೇಶ್ವರ ಶ್ರೀಗಳು ಹೇಳಿದರು.



ಭಾನುವಾರ ತಾಲೂಕಿನ ಉಗಾರ ಖುರ್ದ ಪಟ್ಟಣದ ಶ್ರೀ ಮಹಾದೇವ ಮಂದಿರದ ಸಭಾಭವನದಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕಿಯರ ಫೆಡರೇಶನ್ ಕಾಗವಾಡ ತಾಲೂಕ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ, ಉತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರಧಾನ ಮತ್ತು ಶೈಕ್ಷಣಿಕ ವಿಚಾರಗೋಷ್ಠಿ ಸಮಾರಂಭದಲ್ಲಿ ಆಶೀರ್ವಚನ ನೀಡಿ, ಇಂದು ದೇಶದಲ್ಲಿ ಸಾಕಷ್ಟು ಮಹಿಳೆಯರು ಶಿಕ್ಷಣ ಪಡೆದು, ಉನ್ನತ ಸ್ಥಾನಗಳನ್ನು ಪಡೆಯಬೇಕಾದರೆ ಹಾಗೂ ಸ್ವಾವಲಂಬಿ ಬದುಕು ರೂಪಿಸಿಕೊಂಡಿದ್ದರೆ ಸಾವಿತ್ರಿಬಾಯಿ ಫುಲೆ ಅವರೇ ಕಾರಣ. ಈ ಸಂಘಟನೆಗೆ ಸಾವಿತ್ರಿಬಾಯಿ ಪುಲೆ ಶಿಕ್ಷಕರ ಫೆಡರೇಶನ್ ಅಂತಾ ಹೆಸರಿಟ್ಟಿರುದು ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಲತಾ ಮುಳ್ಳೂರು ಮಾತನಾಡಿ, ಸಾವಿತ್ರಿಬಾಯಿ ಪುಲೆ ರಾಷ್ಟ್ರೀಯ ಮಹಿಳಾ ನೌಕರರ ಸಂಘಟನೆಯ ಸ್ತ್ರೀ ಸಬಲೀಕರಣ, ಮಹಿಳೆಯರ ಹಿತಾಶಕ್ತಿ ಕಾಪಾಡುವುದು. ಅವರ ಪ್ರಾಮಾಣಿಕ ಬೇಡಿಕೆಗಳನ್ನು ಈಡೇರಿಸುವುದು. ಮಹಿಳಾ ನೌಕರರಿಗೆ ಸಾಮಾಜಿಕ, ರಾಜಕೀಯವಾಗಿ ತೊಂದರೆಗಳಿಗೆ ಒಳಗಾಗಿದ್ದರೆ ಅವರ ಬೆನ್ನೆಲುಬಾಗಿ ನಿಲ್ಲುವದೇ ಸಂಘಟನೆಯ ಮುಖ್ಯ ಉದ್ದೇಶವಾಗಿದೆ ಎಂದರು.

ತಾಲೂಕ ಸಾವಿತ್ರಿಬಾಯಿ ಫುಲೆ ಮಹಿಳಾ ನೌಕರರ ಫೆಡರೇಶನ್ ಅಧಿಕೃತವಾಗಿ ಪ್ರಾರಂಭಿಸಿ, ಪದಾಧಿಕಾರಿಗಳಿಗೆ ಪದಗ್ರಹಣ ಮಾಡಲಾಯಿತು. ಕಾಗವಾಡ ವಲಯದ ಸಿಆರ್‌ಸಿ ಮಟ್ಟದ 10 ಶಾಲೆಗಳಿಗೆ ಉತ್ತಮ ಶಾಲೆ, ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಡಿ.ಕೆ. ಹಿರೇಮಠ, ಎನ್.ಕೆ. ಮಾಕಾಳಿ, ರಾಜು ಕೋಳಿ, ಕುಮಾರ ಗಾಣಿಗೇರ, ಅಶೋಕ್ ಮಗದುಮ್ಮ ಮಹೇಶ ಹಳ್ಳೊಳ್ಳಿ, ಎಸ್.ಜಿ. ಸನಕರಿ, ಶೋಭಾ ಬಾಳಪ್ಪಗೋಳ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಎಸ್. ಭಾವಿ, ಪ್ರಾಥಮಿಕ ಶಿಕ್ಷಕರ ಸಂಘದ ಮಾರುತಿ ಸಂಕಪಾಳ, ಸಾವಿತ್ರಬಾಯಿ ಫುಲೆ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಗಾಯತ್ರಿ ಮಾಳಗೆ, ಖಜಾಂಜಿ ಸುರೇಖಾ ಗಡನ್ನೇವರ, ರೈತ ಮಹಿಳೆ ದುಂಡವ್ವಾ ಸೇರಿದಂತೆ ಬಿಆರ್‌ಪಿ, ಸಿಆರ್‌ಪಿಗಳು, ವಿವಿಧ ಸಂಘಟನೆಗಳು ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ರೇಣುಕಾಚಾರ್ಯರ ಜಯಂತಿ ಆಚರಣೆ

ಚನ್ನಮ್ಮನ ಕಿತ್ತೂರು: ತಾಲೂಕಾಡಳಿತದಿಂದ ತಹಶೀಲ್ದಾರ ಕಚೇರಿಯಲ್ಲಿ ರೇಣುಕಾಚಾರ್ಯರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ತಹಶೀಲ್ದಾರ ಕಚೇರಿಯಲ್ಲಿ ಭಾನುವಾರ ಬೆಳಗ್ಗೆ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜಾಕೈಂಕರ್ಯಗಳನ್ನು ಸಲ್ಲಿಸುವಮೂಲಕ ಅದ್ದೂರಿಯಾಗಿ ಆಚರಿಸಲಾಯಿತು. ತಹಶೀಲ್ದಾರ ಕಲಗೌಡ ಪಾಟೀಲ, ಎಂ.ಜಿ ಹಿರೇಮಠ, ವ್ಹಿ.ಎಸ್. ಅರಿಷಣಕರ, ಕುಲಕರ್ಣಿ, ಮುಖಂಡರಾದ ಪ್ರಭುದೇವ ಪಾಟೀಲ, ಸುರೇಶ ಮುರಡಿಮಠ, ಕುಮಾರ ಹಿರೇಮಠ, ರಾಚಯ್ಯ ಹಿರೇಮಠ, ಆನಂದ ನರೇಂದ್ರಮಠ, ಕಲ್ಲಯ್ಯ ಪತ್ರಿಮಠ, ಆನಂದ ವಸ್ತ್ರದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಾ.8ರಂದು ಭವ್ಯ ಜ್ಯೋತಿ ಮೆರವಣಿಗೆ

ಸಾರ್ವಜನಿಕರ ವತಿಯಿಂದ ರೇಣುಕಾಚಾರ್ಯರ ಜಯಂತಿಯನ್ನು ಮಾ. 8ರಂದು ರಾಷ್ಟ್ರೀಯ ಹೆದ್ದಾರಿ ಪಕ್ಕದ ಚನ್ನಮ್ಮಾಜಿ ವರ್ತುಳದಿಂದ ಬೆಳಗ್ಗೆ 9ಕ್ಕೆ ರೇಣುಕಾಚಾರ್ಯರ ಭವ್ಯ ಜ್ಯೋತಿಯ ಮೆರವಣಿಗೆ 201 ಕುಂಭ ಹೊತ್ತ ಮಹಿಳೆಯರು, ಪಟ್ಟಣದ ಮುಖ್ಯ ರಸ್ತೆಯ ಮೂಲಕ ವಿವಿಧ ವಾದ್ಯಗಳೊಂದಿಗೆ ಮೆರಣಿಗೆ ಸಾಗಿ ಕೊನೆಗೆ ವೀರಭದ್ರೇಶ್ವರ ದೇವಸ್ಥಾನ ತಲುಪುವುದು ನಂತರ ಸ್ವಾಮೀಜಿಗಳ, ಗಣ್ಯ ಮಾನ್ಯರ ಉಪಸ್ಥಿತಿಯಲ್ಲಿ ವೇದಿಕೆ ಕಾರ್ಯಕ್ರಮ, ಪ್ರಸಾದ ಕಾರ್ಯಕ್ರಮ ನಡೆಯುವದು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಬೇಕೆಂದು ಸಂಘಟಿಕರು ತಿಳಿಸಿದರು.



ಶಾಂತಿ ಕದಡುವ ಕಿಡಿಗೇಡಿತನ ಪ್ರದರ್ಶಿಸಿದರೆ ಕಠಿಣ ಕ್ರಮ



ರಾಮದುರ್ಗ: ಹಬ್ಬಗಳ ಆಚರಣೆಯ ನೆಪದಲ್ಲಿ ಸಮಾಜದಲ್ಲಿಶಾಂತಿಕದಡುವಕಿಡಿಗೇಡಿತನಪ್ರದರ್ಶಿಸಿದರೆ ಕಠಿಣ ಕ್ರಮಗಳನ್ನು ಎದುರಿಸಬೇಕಾಗುತ್ತದೆ. ಹಿಂದಿನ ದಿನಗಳೇ ಬೇರೆ ಮುಂದಿನ ದಿನಗಳು ಕಷ್ಟದಾಯಕವಾಗಲಿವೆ ಎಂದು ಸಿಪಿಐ ವಿನಾಯಕ ಬಡಿಗೇರ ಎಚ್ಚರಿಕೆ ನೀಡಿದರು.

ರಾಮದುರ್ಗದಲ್ಲಿ ಭಾನುವಾರ ರಂಜಾನ್ ಮತ್ತು ಹೋಳಿ ಹಬ್ಬದ ಅಂಗವಾಗಿ ಪೊಲೀಸ್ ಠಾಣೆಯಲ್ಲಿ ಹಿಂದು ಮುಸ್ಲಿಂ ಸಮಾಜದವರ ಶಾಂತತಾ ಸಭೆಯಲ್ಲಿ ಮಾತನಾಡಿ, ಫೆಬ್ರವರಿ ತಿಂಗಳು ಮತ್ತು ಈ ತಿಂಗಳಲ್ಲಿ ಸಮಾಜಿಕ ತಾಣಗಳಲ್ಲಿ ಒಂದು ಸಮಾಜದ ವಿರುದ್ಧ ಒಂದು ಸಮಾಜದವರು ಆಕ್ರೋಶಿತ ಪೋಸ್ಟ್‌ಗಳನ್ನು ಹಾಕಿ ಗಲಭೆಗಳನ್ನು ಎಬ್ಬಿಸಲು ಯತ್ನಿಸುತ್ತಿದ್ದಾರೆ. ಮುಂದೆ ಇದೇ ರೀತಿ ನಡೆದರೆ ಕಠಿಣ ದಿನಗಳನ್ನು ಎದುರಿಸಬಹುದಾಗಿದೆ ಎಂದು ತಿಳಿಸಿದರು.

ಸದ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹೋಳಿ ಅಂಗವಾಗಿ ಹಲಗೆ ಬಾರಿಸುವುದನ್ನು ಕಡಿಮೆ ಮಾಡಬೇಕು. ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಕಡಿಮೆ ಸೌಂಡ್ ಬಳಕೆ ಮಾಡಿಕೊಳ್ಳಬೇಕು. ಇಬ್ಬರೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಬ್ದ ಮಾಲಿನ್ಯ ಕಾಯ್ದುಕೊಳ್ಳಬೇಕು. ಎಲ್ಲರೂ ಸಾಮರಸ್ಯದಿಂದ ಹಬ್ಬಗಳ ಆಚರಣೆ ಮಾಡಬೇಕು ಎಂದು ಹೇಳಿದರು.

ಹೋಳಿ ಆಚರಣೆ ವೇಳೆ ಆಪ್ತರಿಗೆ ಮಾತ್ರ ಬಣ್ಣ ಎರಚಬೇಕು. ನಮಾಜ್ ಇಲ್ಲವೇ ಮಸೀದಿಗೆ ತೆರಳುವವರ ಮೇಲೆ ಬಣ್ಣ ಹಾಕಬಾರದು. ಆಕಸ್ಮಿಕವಾಗಿ ಬಣ್ಣ ತಗಲಿದರೂ ಮುಸ್ಲಿಂ ಯುವಕರು ವಿಷಯವನ್ನು ದೊಡ್ಡದು ಮಾಡದೇ ಹಿರಿಯರ ಸಮಕ್ಷಮ ಪರಿಹಾರ ಕಂಡುಕೊಳ್ಳಬೇಕು. ಯಾವುದೇ ಪರಿಸ್ಥಿತಿಯಲ್ಲಿ ಕೋಮು ಭಾವನೆಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಡಿಎಸ್‌ಪಿ ಚಿದಂಬರ ಮಡವಾಳರ ಸಲಹೆ ಸೂಚನೆಗಳ ನೀಡಿದರು. ಪಿಎಸ್‌ಐ ಸವಿತಾ ಮುನ್ನಾಳ, ಹಿಂದು ಮುಸ್ಲಿಂ ನಾಯಕರು ಇದ್ದರು.



ಬಾದಾಮಿ: ಪೊಲೀಸ್ ಠಾಣೆಯಲ್ಲಿ ಶನಿವಾರ ಹೋಳಿ ಮತ್ತು ರಂಜಾನ್ ಹಬ್ಬದ ಅಂಗವಾಗಿ ಶಾಂತಿ ಸಭೆ ನಡೆಸಲಾಯಿತು. ಸಭೆಯಲ್ಲಿ ವಿವಿಧ ಸಮುದಾಯದ ಮುಖಂಡರು ಭಾಗವಹಿಸಿದ್ದರು. ಸಾರ್ವಜನಿಕರು ಹಬ್ಬವನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸುವಂತೆ ಪೊಲೀಸ್ ಇಲಾಖೆ ಅಧಿಕಾರಿಗಳಾದ ಸಿಪಿಐ ಕರೆಪ್ಪ ಬನ್ನೆ, ಪಿಎಸ್ಐ ಹನಮಂತ ನರಳೆ ಸಾರ್ವಜನಿಕರ ಸಭೆಯಲ್ಲಿ ಮಾತನಾಡಿ, ಹಬ್ಬವನ್ನು ಸರಕಾರದ ಆದೇಶ, ನಿಯಮಗಳಂತೆ ಬೇರೆಯವರಿಗೆ ತೊಂದರೆಯಾಗದಂತೆ ಹೋಳಿ ಹಬ್ಬ ಮತ್ತು ರಂಜಾನ್ ಹಬ್ಬ ಆಚರಿಸಬೇಕು ಎಂದು ಸಲಹೆ ನೀಡಿದರು.

ಕಿರುಸುದ್ದಿ

409 ವಿದ್ಯಾರ್ಥಿಗಳು ಪರಿಶೀಕ್ಷೆಗೆ ಹಾಜರು

ಗುಳೇದಗುಡ್ಡ: ಮುರಾರ್ಜಿ, ಕಿತ್ತೂರುರಾಣಿ ಚನ್ನಮ್ಮ, ಏಕಲವ್ಯ, ಮಾದರಿ, ಇಂದಿರಾಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್ ಸೇರಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ 6ನೇ ತರತಗತಿ ಪ್ರವೇಶಗಳಿಗೆ ಕರ್ನಾಟಕ



ಪರೀಕ್ಷಾ ಪ್ರಾಽಕಾರ ನಡೆಸುವ ಪರೀಕ್ಷೆ ಭಾನುವಾರ ಪಟ್ಟಣದ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಸುಗಮವಾಗಿ ನಡೆಯಿತು. ಪರೀಕ್ಷಾ ಕೇಂದ್ರದ ಸುತ್ತ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಪಟ್ಟಣದ ಭಂಡಾರಿ ಹಾಗೂ ರಾಠಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗಾಗಿ ಒಟ್ಟು 9 ಬ್ಲಾಕ್ ರಚಿಸಲಾಗಿತ್ತು, ಒಟ್ಟು 205 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಬಾಲಕರ ಸರಕಾರಿ ಪಪೂ ಕಾಲೇಜಿನಲ್ಲಿನ ಪರೀಕ್ಷಾ ಕೇಂದ್ರದಲ್ಲಿ 9 ಬ್ಲಾಕ್‌ಗಳಲ್ಲಿ ಒಟ್ಟು 204 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಒಬ್ಬ ವಿದ್ಯಾರ್ಥಿ ಗೈರಾಗಿದ್ದ, ಎರಡೂ ಪರೀಕ್ಷಾ ಕೇಂದ್ರದಲ್ಲಿ ಒಟ್ಟು 409 ವಿದ್ಯಾರ್ಥಿಗಳು ಉತ್ಸಾಹದಿಂದ ಪರೀಕ್ಷೆ ಬರೆದಿದ್ದಾರೆ ಎಂದು ಪರೀಕ್ಷಾ ಕೇಂದ್ರ ಮುಖ್ಯ ಅಽೀಕ್ಷಕರಾದ, ಮಹೇಶ ವಾಸನದ ಹಾಗೂ ವಿಠ್ಠಲ ಕಳಸಾ ತಿಳಿಸಿದ್ದಾರೆ.

ಸೌಹಾರ್ದಯುತವಾಗಿ ಹಬ್ಬ ಆಚರಿಸಿ



ಕೆರೂರ: ಭಾವೈಕತೆಯ ಹಬ್ಬವಾದ ಹೋಳಿ ಹಬ್ಬವನ್ನು ಸೌಹಾರ್ದಯುತವಾಗಿ ಆಚರಿಸಿ. ಸೌಹಾರ್ದಯುತ ಹೋಳಿ ಹಬ್ಬದ ಸಂಪ್ರದಾಯ ಉಳಿಸಿಕೊಂಡು ಮುಂದುವರಿಸಿಕೊಂಡು ಬರಲು, ಎಲ್ಲ ಸಮುದಾಯದವರು ಪಾಲಿಸಬೇಕೆಂದು ಪಿಎಸ್ಐ ಭೀಮಪ್ಪ ರಬಕವಿ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಆಯೋಜಿಸಲಾಗಿದ್ದ ಶಾಂತಿಪಾಲಾನಾ ಸಭೆಯಲ್ಲಿ ಮಾತನಾಡಿ, ಹಬ್ಬದ ಸಂದರ್ಭದಲ್ಲಿ ಕೆಲ ಕೀಡಿಗೇಡಿಗಳು ಅಶಾಂತಿ ನಿರ್ಮಾಣವಾಗದಂತೆ ಸಮಾಜದ ಹಿರಿಯರು ಮುಖಂಡರು ನಿಗಾವಹಿಸಬೇಕು . ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕೆಂದರು. ಅಶೋಕ ಜಿಗಳೂರ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ವಾಹನಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಬಣ್ಣ ಎರಚುವದನ್ನು ತಡೆಬೇಕೆಂದು ಹೇಳಿದರು. ಸಾರ್ವಜನಿಕರು ಕಾನೂನು ಪಾಲಿಸಬೇಕು ಅನಗತ್ಯ ಪ್ರಚೋದನಕಾರಿ ವರ್ತನೆ ತೋರುವವರ ವಿರುದ್ಧ ಕಾನೂನು ಕಠಿಣ ಕ್ರಮ ಜರುಗಿಸಲಾಗುವದೆಂದು ಈ ಸಮಯದಲ್ಲಿ ಎಚ್ಚರಿಸಿದರು. ದೇವಾಂಗ ಅಧ್ಯಕ್ಷ ಸಂಕಣ್ಣ ಹೊಸಮನಿ, ಧಂಜಯನ ಕಂದಕೂರ, ಮೋದಿನಸಾಬ್ ಚಿಕ್ಕೂರ, ಮೋದಿನ ದೊಡಕಟ್ಟಿ, ಅಶೋಕ ಜಿಗಳೂರ, ಉಸ್ಮಾನ ಮುಲಾ, ಗುಂಡಪ್ಪ ಬೊರಣ್ಣವರ, ವಿಷ್ಣು ಕಠಾರಿ, ದೇವರಾಜ ಚೂರಿ, ಬಸವರಾಜ ಹರಣಶಿಕಾರಿ, ಉಮರ ಪಾರುಕ ಪೆಂಡಾರಿ, ಸುಬಾಸ ಸಾಲಿ, ಪಿತಾಂಬ್ರಪ್ಪ ಹವೇಲಿ, ವಿಕಾಸ ದೇಸಾಯಿ, ಮಲ್ಲಪ್ಪ ಮಡ್ಡರ, ಸಿಬ್ಬಂದಿಗಳಾದ ರಮೇಶ ಸಮಗಾರ, ಸಿದ್ದು ದಳವಾಯಿ, ಅಂಬರಿಶ ಶಿರಹಟ್ಟಿ, ಹಣಮಂತ ಹೀರಲ್ಲವರ, ಪ್ರವೀಣ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ



ಮಹಾಲಿಂಗಪುರ: ಸಮೀಪದ ಕೆಸರಗೊಪ್ಪ ಗ್ರಾಮದ ಭಗೀರಥ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ನಿಮಿತ್ತ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಯಿತು. ದಂತ ವೈದ್ಯೆ ಡಾ.ದೀಪಾಲಿ ಡಂಗಿ, ಸರಕಾರಿ ಪ್ರೌಢಶಾಲೆಯ ಮುಖ್ಯ ಗುರು ಸಿ.ವಿ.ಚೌಧರಿ, ಕೆಎಲ್ಇ ಪ್ರಾಥಮಿಕ ಶಾಲೆಯ ವಿಜ್ಞಾನ ಶಿಕ್ಷಕಿ ರೇಷ್ಮಾ ರಾಠೋಡ, ಸಂಸ್ಥೆಯ ನಿರ್ದೇಶಕ ಬಸವರಾಜ ಶಿರೋಳ ಮಾತನಾಡಿ, ಮಕ್ಕಳ ರಂಗೋಲಿ ಚಿತ್ತಾರ ಹಾಗೂ ಮಿನಿ ವಿಜ್ಞಾನಿಗಳು ತಯಾರಿಸಿದ್ದ ವಿಜ್ಞಾನದ ವಿಶಿಷ್ಟ ಮಾದರಿಗಳನ್ನು ಕಂಡು ಶ್ಲಾಘನೆ ವ್ಯಕ್ತಪಡಿಸಿದರು. ಸಂಸ್ಥೆಯ ನಿರ್ದೇಶಕರಾದ ಮಾರುತಿ ಕರೋಶಿ, ಶ್ರೀಶೈಲ ಬಡಿಗೇರ, ಸಿದಗಿರೆಪ್ಪ ಉಳ್ಳಾಗಡ್ಡಿ, ಭೀಮಶಿ ಸಸಾಲಟ್ಟಿ, ವಸಂತ ಜಗದಾಳ, ಭೀಮಶಿ ಬ್ಯಾಕೋಡ, ಪ್ರಭು ಹುಬ್ಬಳ್ಳಿ, ಶಿವು ದೊಡಮನಿ, ಶಿಕ್ಷಕರಾದ ಸಿದ್ದು ಪೂಜಾರಿ, ವಿಠ್ಠಲ ಕಾರಜೋಳ ಇದ್ದರು.

ಕಾರ್ಮಿಕರು ಸರ್ಕಾರದ ಸೌಲಭ್ಯ ಪಡೆಯಿರಿ

ಮಹಾಲಿಂಗಪುರ: ಅಸಂಘಟಿತ ಕಾರ್ಮಿಕರಲ್ಲಿ ಖಾಸಗಿ ವಾಣಿಜ್ಯ ಹಾಗೂ ಇತರೆ ಸಂಭದಿತ 40 ಲಕ್ಷ ಕಾರ್ಮಿಕರು ಇದ್ದಾರೆ. ಅವರಿಗೆ ಸರ್ಕಾರ ಸಮಾಜೀಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯ ಒದಗಿಸುವ ಉದ್ದೇಶದಿಂದ ಸರ್ಕಾರ ಕ್ಷೇಮಾಭಿವೃದ್ಧಿ ಯೋಜನೆ ಅನಷ್ಠಾನ ಮಾಡಿದೆ. ಕಾರಣ ಎಲ್ಲ ತರಹದ ಕಾರ್ಮಿಕರು ಮೊದಲು ಕಾರ್ಮಿಕ ಕಾರ್ಡ್‌ಗೆ ನೋಂದಣಿ ಮಾಡಿಸಿ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆಯಬೇಕೆಂದು ಮುಧೋಳದ ಲೇಬರ್ ಇನ್ಸಪೆಕ್ಟರ್ ಅಶೋಕ ವಡ್ಡರ ಹೇಳಿದರು. ಸ್ಥಳೀಯ ರಾಜ್ಯ ನೇಕಾರ ಸೇವಾ ಸಂಘ ಮತ್ತು ಕಾರ್ಮಿಕ ಇಲಾಖೆಯ ಆಶ್ರಯದಲ್ಲಿ ನೇಕಾರ ಸಂಘದ ಕಚೇರಿಯಲ್ಲಿ ನಡೆದ ಅಸಂಘಟಿತ ವಲಯದ ಕಾರ್ಮಿಕರಿಗೆ ಕಾರ್ಮಿಕ ಸೌಲಭ್ಯದ ಮಾಹಿತಿ ಮತ್ತು ನೋದಣಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಯೋಜನೆಯಲ್ಲಿ ಸಂಬಂದಿತ ಕಾರ್ಮಿಕರನ್ನು ನೊಂದಾಯಿಸಿ ಸೌಲಭ್ಯಗಳನ್ನೊಳಗೊಂಡ ಸ್ಮಾರ್ಟಕಾರ್ಡ ನೀಡಲಾಗುತ್ತಿದ್ದು, 60 ವರ್ಷದ ನಂತರ ಪಿಂಚಣಿ ಪ್ರತಿ ತಿಂಗಳು 3 ಸಾವಿರ ರೂ.ದಂತೆ ಬರುತ್ತದೆ ಎಂದರು. ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಘ ಟರ್ಕಿ ಮಾತನಾಡಿ, ನೇಕಾರರಿಗೆ ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಸೌಲಭ್ಯಗಳನ್ನು ಜಾರಿ ಮಾಡಬೇಕು. ಪ್ರಧಾನ ಮಂತ್ರಿ ಶ್ರಮಯೋಗಿ ಮಾನ ಧನ ಇದನ್ನು ವಯೋಮಿತಿ 50 ವರ್ಷದ ವರೆಗೆ ಏರಿಕೆ ಮಾಡಬೇಕು. ಕಾರ್ಮಿಕರಿಗೆ ಅವರು ಇರುವಾಗಲೇ ಎಲ್ಲ ಸೌಲಭ್ಯಗಳನ್ನು ಕಟ್ಟಕಡೆಯ ವ್ಯಕ್ತಿಗೂ ತಲುಪಿಸಲು ಅಧಿಕಾರಿಗಳು ಮತ್ತು ಸರ್ಕಾರಕ್ರಮ ಕೈಗೊಳ್ಳಬೇಕು ಎಂದರು. ಮುಖಂಡರಾದ ರಾಜೇಂದ್ರ ಮಿರ್ಜಿ, ರಾಘವೇಂದ್ರ ಬೆಳಗಲಿ, ಸೋಮು ಮಿರ್ಜಿ, ಶಾಹಿನಷಾ ಚಿಕ್ಕೋಡಿ, ಲಾಲಸಾಬ ನಗಾರ್ಚಿ ಇದ್ದರು.



ಮಹಾಲಿಂಗಪುರ: ಸ್ಥಳೀಯ ರಾಜ್ಯ ನೇಕಾರ ಸೇವಾ ಸಂಘ ಮತ್ತು ಕಾರ್ಮಿಕ ಇಲಾಖೆಯ ಆಶ್ರಯದಲ್ಲಿ ನೇಕಾರ ಸಂಘದ ಕಚೇರಿಯಲ್ಲಿ ನಡೆದ ಅಸಂಘಟಿತ ವಲಯದ ಕಾರ್ಮಿಕರಿಗೆ ಕಾರ್ಮಿಕ ಸೌಲಭ್ಯದ ಮಾಹಿತಿ ಮತ್ತು ನೋದಣಿ ಅಭಿಯಾನ ಕಾರ್ಯಕ್ರಮ ನಡೆಯಿತು. ಮುಖಂಡರಾದ ರಾಜೇಂದ್ರ ಮಿರ್ಜಿ, ರಾಘವೇಂದ್ರ ಬೆಳಗಲಿ, ಸೋಮು ಮಿರ್ಜಿ, ಶಾಹಿನಷಾ ಚಿಕ್ಕೋಡಿ, ಲಾಲಸಾಬ ನಗಾರ್ಚಿ, ಸಲಿಂ ಅರಬ, ಬಸು ಜಮಖಂಡಿ, ಸುಮಿತ್ರಾ ಬೆಳಗಲಿ, ಗೀತಾಕರಡಿ, ರಾಜು ಕುಕ್ಕುಗೋಳ, ರಮೇಶ ನಾಗರಾಳ, ಸಂಜುಜಿಡ್ಡಿಮನಿ, ಗಣೇಶ ವಂದಾಲ, ಹಾಜಿಸಾಬ ಖಾಲೆಖಾನ ಇದ್ದರು.

ಹಿಂದೂ ಸಮ್ಮೇಳನ : ಭವ್ಯ ಶೋಭಾಯಾತ್ರೆ





ಒಗ್ಗಟ್ಟು ಪ್ರದರ್ಶಿಸಿದ ಶೋಭಾಯಾತ್ರೆ

ಶಿವಾಜಿ ಮೂರ್ತಿ ಸೇರಿದಂತೆ ಸಕಲ ಹಿಂದೂ ಮಹಾಪುರುಷರ ಭಾವಚಿತ್ರದ ಮೆರವಣಿಗೆ ಸಂಭ್ರಮದಿಂದ ಜರುಗಿತು. ಫೆ.19ರಂದು ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿಯ ಮೆರವಣಿಗೆ ವೇಳೆ ಪಂಕಾ ಮಸೀದಿಯಿಂದ ಕಲ್ಲು ತೂರಾಟದಿಂದ ಬಾಗಲಕೋಟೆ ಆತಂಕದ ವಾತಾವರಣ ಸೃಷ್ಟಿಯಾಯಿತು. ಆದರೆ ಭಾನುವಾರ ನಗರದಲ್ಲಿ ನಡೆದ ವಿರಾಟ ಹಿಂದೂ ಸಮ್ಮೇಳನದಲ್ಲಿ ಸಕಲ ಸಮಾಜದ ಹಿಂದೂಗಳು ಸೇರಿದಾಗ ಹಿಂದೂಗಳು ತಮ್ಮ ಒಗ್ಗಟ್ಟು ಏನು ಎಂಬುದನ್ನು ಶೋಭಾಯಾತ್ರೆ ಮೂಲಕ ತೋರಿಸಿದರು.

ಬಾಗಲಕೋಟೆ: ರಾಷ್ಟ್ರೀಯ ಸ್ವಯಂ ಸ್ವೇವಕ ಸಂಘದ ಶತಾಬ್ದಿ ವರ್ಷದ ಹಿನ್ನೆಲೆಯಲ್ಲಿ ನಗರದಲ್ಲಿ ಭಾನುವಾರ ನಡೆದ ವಿರಾಟ ಹಿಂದೂ ಸಮ್ಮೇಳನದ ಭವ್ಯ ಶೋಭಾಯಾತ್ರೆ ಅದ್ದೂರಿಯಾಗಿ ಜರುಗಿತು.

ನಗರದ ವೆಂಕಟಪೇಟೆಯಲ್ಲಿ ಬರುವ ವೇಪಾಂಚಜನ್ಯ ಶಾಖಾ ಸಂಘಸ್ಥಾನ ವೆಂಕಟೇಶ್ವರ ದೇವಸ್ಥಾನದ ಪ್ರಾರಂಭವಾಗಿ ಕಿಲ್ಲಾ ಕೊತ್ತಲೇಶ ದೇವಸ್ಥಾನ, ಟಾಂಗಾಸ್ಟ್ಯಾಂಡ್,ಪಂಕಾ ಮಸೀದಿ, ಎಂ.ಜಿ.ರೋಡ, ಬಸವೇಶ್ವರ ಸರ್ಕಲ್ ಮೂಲಕ ಬಸವೇಶ್ವರ ಕಾಲೇಜು ಮೈದಾನದಲ್ಲಿ ಸಮಾವೇಶಗೊಂಡಿತು.

ಹಳೆ ಬಾಗಲಕೋಟೆಯಲ್ಲಿ ಹಿಂದೂ ಸಮ್ಮೇಳನ ಅಂಗವಾಗಿ ನಡೆದ ಭವ್ಯ ಶೋಭಾಯತ್ರೆಯ ಮಾರ್ಗದಲ್ಲಿ ಹಾಗೂ ವೃತ್ತಗಳಲ್ಲಿ ಕೇಸರಿ ಧ್ವಜ, ಕೇಸರಿ ನಿರ್ಮಿಸಿದ್ದನ್ನು ನೋಡಿದಾಗ ನಗರ ಕೇಸರಿಮಯಗೊಂಡಿತು.

ಬಾಗಲಕೋಟೆಯ ಲ್ಲಿ ನಡೆದ ವಿರಾಟ ಹಿಂದೂ ಸಮ್ಮೇಳನದಲ್ಲಿ ಬಾಗಲಕೋಟೆ, ವಿದ್ಯಾಗಿರಿ,ನವನಗರ ಸೇರಿದಂತೆ ಜಿಲ್ಲೆಯ ವಿವಿಧ ಭಾಗದಿಂದ ಸಾವಿರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದರು. ಸುಮಾರು ಮೂರು ಗಂಟೆಗೂ ಹೆಚ್ಚು ಕಾಲ ಶೋಭಾಯಾತ್ರೆ ನಡೆಯಿತು. ಮಹಿಳೆಯರು ಸಹ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ಶೋಭಾಯಾತ್ರೆಯುದ್ದಕ್ಕೂ ಪ್ರತಿಯೊಬ್ಬರ ಕೈಯಲ್ಲಿ ಕೇಸರಿ ಭಗವದ್ಧ್ವಜ ರಾರಾಜಿಸಿತು. ಬಸವೇಶ್ವರವೃತ್ತದಲ್ಲಿಪ್ರತಿಯೊಂದು ವಾದ್ಯಮೇಳ ಸಾಹಸ ಪ್ರದರ್ಶನ ಮಾಡಿದರು.

ಮೆರವಣಿಗೆಗೆ ಆರಂಭಕ್ಕೂ ಮುನ್ನ ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಶಾಸಕ ವೀರಣ್ಣ ಚರಂತಿಮಠ ಗೋಮಾತೆಗೆ ಪೂಜೆ ಸಲ್ಲಿಸಿದರು.

ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹಣಮಂತ ನಿರಾಣಿ , ಪಂ.ರಘೋತ್ತಮಾಚಾರ್ಯ ನಾಗಸಂಪಿಗೆ, ಅಶೋಕ ಲಿಂಬಾವಳಿ, ಲಕ್ಷ್ಮೀನಾರಾಯಣ ಕಾಸಟ್ ,ಹೂವಪ್ಪ ರಾಠೋಡ, ಬಸವರಾಜ ಯಂಕಂಚಿ, ರಾಜು ನಾಯ್ಕರ, ಡಾ.ಶೇಖರ ಮಾನೆ, ಡಾ.ಗಿರೀಶ ಮಸೂರಕರ, ಪ್ರಭು ಹಡಗಲಿ, ಜಿ.ಎನ್.ಪಾಟೀಲ, ಜಯಂತ ಕುರಂದವಾಡ, ಅರುಣ ದೇಸಾಯಿ, ಸುರೇಶ ಮಾಗಿ, ಚಂದ್ರಶೇಖರ, ಶ್ರೀನಾಥ ಸಜ್ಜನ, ಸುರೇಶ ಮಜ್ಜಗಿ, ನಾಗರಾಜ ಬಾರಕೇರ, ಚಂದ್ರು ರಾಮವಾಡಗಿ, ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ, ಮಹಾಂತೇಶ ಶೆಟ್ಟರ, ಕಿರಣ್ ಪವಾಡ ಶೆಟ್ಟರ, ಸತ್ಯನಾರಾಯಣ ಹೇಮಾದ್ರಿ ಮತ್ತಿತರರು ಇದ್ದರು.

ಬಡವರಿಗೆ ಗ್ಯಾರಂಟಿ ಯೋಜನೆಗಳು ಅನುಕೂಲ

ಬೀಳಗಿ: ಕೇಂದ್ರದ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಗ್ಯಾಸ್, ಪೆಟ್ರೋಲ್, ಡೀಸೆಲ್, ಗೊಬ್ಬರದ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಕಷ್ಟದಲ್ಲಿದ್ದುದನ್ನು ಮನಗಂಡು, ಸಿಎಂ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಯಾವುದೇ ಮೇಲು-ಕೀಳು, ಬಡವ-ಬಲ್ಲಿದ ಎಂಬ ತಾರತಮ್ಯವಿಲ್ಲದೆ ಎಲ್ಲ ಜನರಿಗೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಶಾಸಕ ಜೆ.ಟಿ.ಪಾಟೀಲ ತಿಳಿಸಿದರು.

ತಾಲೂಕಿನ ಸುನಗ ಗ್ರಾಮ ಪಂಚಾಯತಿ ಮುಂಭಾಗದಲ್ಲಿ ಜಿಪಂ, ತಾಪಂ, ಗ್ರಾಪಂ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಗ್ಯಾರಂಟಿ ಯೋಜನೆಗಳ ಸಾರ್ವಜನಿಕ ಕುಂದುಕೊರತೆಗಳ ಸಭೆ ಉದ್ಘಾಟಿಸಿ ಮಾತನಾಡಿ, ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂದು ಆರೋಪಿಸುವ ಪ್ರಧಾನಿ ಮೋದಿ ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುವುದಾಗಿ ಹೇಳಿದ್ದರು. 11 ವರ್ಷದಲ್ಲಿ 22 ಕೋಟಿ ಜನರಿಗೆ ಉದ್ಯೋಗ ಕೊಡಬೇಕಿತ್ತು. ಕೊಟ್ಟಿದ್ದಾರಾ ಎಂದು ಖಾರವಾಗಿ ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ತಾಲೂಕಾಧ್ಯಕ್ಷ ಎ.ಆರ್ .ಪ್ಯಾಟಿಮಠ ಮಾತನಾಡಿ, ಗ್ಯಾರಂಟಿ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ಸುನಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಪಡೆಯುತ್ತಿರುವ ಫಲಾನುಭವಿಗಳ ವಿವರ ಮತ್ತು ಪ್ರಯೋಜನವನ್ನು ಅಂಕಿ-ಅಂಶಗಳ ಮೂಲಕ ಸಭೆಗೆ ತಿಳಿಸಿದರು.

ಮಹಿಳಾ ಒಕ್ಕೂಟದ ಅಧ್ಯಕ್ಷೆ ಸುವರ್ಣಾ ನಾಗರಾಳ ಮಾತನಾಡಿ, ಸುನಗ ಕ್ರಾಸ್‌ನಲ್ಲಿ ವಿಜಯಪುರ-ಹುಬ್ಬಳ್ಳಿ ಬಸ್ ನಿಲುಗಡೆ ಮಾಡಿಸಬೇಕು. ಸಣ್ಣಸಣ್ಣ ಮಕ್ಕಳು ಸಾರಾಯಿ ಚಟಕ್ಕೆ ಅಂಟಿಕೊಂಡು ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವುದರಿಂದ ತಾಂಡಾಗಳಲ್ಲಿ ಅಕ್ರಮವಾಗಿ ತಯಾರಿಸಿ ಮಾರಾಟ ಮಾಡುವ ಸರಾಯಿಯನ್ನು ನಿಲ್ಲಿಸುವಂತೆ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಚಂದ್ರಶೇಖರ ಪಂಢರಿ, ನೇಮರಾಜ ದೇಸಾಯಿ, ವೆಂಕನಗೌಡ ಪಾಟೀಲ, ರಸೂಲ ಮುಜಾವರ, ಶಿವಾನಂದ ಮಾದರ, ಮುತ್ತಪ್ಪ ಲಮಾಣಿ, ಸದಾಶಿವ ಜುಂಜೂರಿ, ನಾರಾಯಣ ಕಂಬಾರ, ಎಂ.ಆರ್.ಪಾಟೀಲ, ರೇಖಾ ಕಟ್ಟೆಪ್ಪನವರ, ಅಧಿಕಾರಿಗಳಾದ ಶ್ರೀನಿವಾಸ ಪಾಟೀಲ, ಬಿ.ಜಿ.ಕವಟೇಕರ, ಮಂಜುನಾಥ ಬೋಕಿ, ಸಂತೋಷ ರಬಕವಿ, ಮಹೇಶ ಜಗಲಿ, ಚನ್ನಪ್ಪಗೌಡ ಪಾಟೀಲ, ಕರಿಯಪ್ಪ ಲಗಮನಿ, ಹನಮಂತ ದಳವಾಯಿ, ಬಸು ಮೇಟಿ, ಮಹೇಶ ಲಮಾಣಿ, ಶಂಕರ ಲಮಾಣಿ, ಲಕ್ಕಪ್ಪ ದೊಡಮನಿ, ಮಲ್ಲಪ್ಪ ನಾಗರಾಳ ಇದ್ದರು.



5ಕೆ ಮ್ಯಾರಥಾನ್‌ಗೆ ಡಿಸಿ, ಎಸ್‌ಪಿ ಚಾಲನೆ

ಬಾಗಲಕೋಟೆ: ಸೌಹಾರ್ದತೆ, ಶಾಂತಿ, ಭಾವೈಕ್ಯತೆಯ ಸಂದೇಶವನ್ನು ಸಾರುವ ಉದ್ದೇಶದಿಂದ ನಗರದಲ್ಲಿ ಹಮ್ಮಿಕೊಂಡ 5ಕೆ ಮ್ಯಾರಥಾನ್‌ಗೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಜಂಟಿಯಾಗಿ ಚಾಲನೆ ನೀಡಿದರು.

ಭಾನುವಾರ ನಗರದ ಬಸವೇಶ್ವರ ಸರ್ಕಲ್ ಹತ್ತಿರ ಬಾಗಲಕೋಟೆ ಜಿಲ್ಲಾ ಪೊಲೀಸ್ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಸಹಯೋಗದಲ್ಲಿ ಹಮ್ಮಿಕೊಂಡ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು ಮ್ಯಾರಥಾನ್‌ಗಳು ಸಮಾಜದಲ್ಲಿ ಒಗ್ಗಟ್ಟಿನ ಭಾವನೆ ಬಲಪಡಿಸುತ್ತವೆ. ಆರೋಗ್ಯಕರವಾದ ಸಮಾಜ ಇದ್ದಾಗ ಮಾತ್ರ ನಾವೆಲ್ಲರೂ ಚೆನ್ನಾಗಿ ಇರಲು ಸಾಧ್ಯವಾಗುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಮಾನಸಿಕವಾಗಿ ಬಲಿಷ್ಟವಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ ಪೊಲೀಸ್ ಇಲಾಖೆ ವತಿಯಿಂದ ಬಾಗಲಕೋಟೆ ನಗರದಲ್ಲಿ ಸೌಹಾರ್ದತೆ ಮತ್ತು ಭಾವೈಕ್ಯತೆಗಾಗಿ ನಮ್ಮ ಓಟ ಎಂಬ ಧ್ಯೇಯ ವಾಕ್ಯದೊಂದಿಗೆ ಮ್ಯಾರಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಸಾಕಷ್ಟು ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿರುವುದು ಸಂತೋಷದ ವಿಷಯವಾಗಿದೆ ಎಂದು ಹೇಳಿದ ಸೌಹಾರ್ದತೆ ಮತ್ತು ಭಾವೈಕ್ಯತೆಗಾಗಿ ನಮ್ಮ ಓಟ ಎಂದು ಜೋರಾಗಿ ಹೇಳಿಸಿದರು.

ಮ್ಯಾರಥಾನ್ ನಗರದ ಬಸವೇಶ್ವರ ಸರ್ಕಲ್ ನಿಂದ ಪ್ರಾರಂಭವಾಗಿ ಪಂಕಾ ಮಸೀದಿ, ಹಳೆ ಪೋಸ್ಟ ಆಫೀಸ್, ಅಂಬೇಡ್ಕರ ಸರ್ಕಲ್, ಹಳೆ ನಿರೀಕ್ಷಣಾ ಮಂದಿರ ಕ್ರಾಸ್, ಕೆರೂಡಿ ಆಸ್ಪತ್ರೆ, ರೈಲ್ವೆ ನಿಲ್ದಾಣ ನಂತರ ಮರಳಿ ಬಸವೇಶ್ವರ ಸರ್ಕಲ್‌ಗೆ ಮುಕ್ತಾಯಗೊಂಡಿತು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ವಸತಿ ನಿಲಯದ ವಿದ್ಯಾರ್ಥಿನಿಯರು, ಕ್ರೀಡಾಪಟುಗಳು, ಕರಾಟೆ ವಿದ್ಯಾರ್ಥಿಗಳು, ಭಾರತೀಯ ಸ್ಟೇಟ್ ಬ್ಯಾಂಕನ ಅಧಿಕಾರಿ ಹಾಗೂ ಸಿಬ್ಬಂದಿಗಳು, ಸಾರ್ವಜನಿಕರು ಸೇರಿ 5 ನೂರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಕರಾಟೆ ಚೀಪ್ ಕೋಚ್ ಎಸ್.ಆರ್.ರಾಠೋಡ ನೇತೃತ್ವದಲ್ಲಿ ಏರೋಬಿಕ್ಸ್ ನಡೆಯಿತು.



ರನ್ನ ಬೆಳಗಲಿ ಪ್ರಥಮ ರಂಗೋತ್ಸವ ನಾಳೆ: ಸಾಂಗ್ಲೀಕರ

ರನ್ನ ಬೆಳಗಲಿ: ಪಟ್ಟಣದ ಸರ್ವಧರ್ಮ ಗೆಳೆಯರ ಬಳಗದ ಅಡಿಯಲ್ಲಿ ಪ್ರಪ್ರಥಮ ಬಾರಿಗೆ ರನ್ನ ಬೆಳಗಲಿಯ ರನ್ನ ವೃತ್ತದಲ್ಲಿ ರನ್ನ ಬೆಳಗಲಿ ರಂಗೋತ್ಸವ-2026 ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮದಲ್ಲಿ ಸರ್ವರಿಗೂ ಉಚಿತ ಪ್ರವೇಶವಿರುತ್ತದೆ ಎಂದು ಕಾರ್ಯಕ್ರಮದ ರೂವಾರಿ ವಕೀಲ ಸಿದ್ದು ಸಾಂಗ್ಲಿಕರ ಹೇಳಿದರು.

ಪಟ್ಟಣ ಪಂಚಾಯತಿ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಪಪಂ ಮಾಜಿ ಅಧ್ಯಕ್ಷ ಸಿದ್ದುಗೌಡ ಪಾಟೀಲ ಮಾತನಾಡಿ, ಪಟ್ಟಣದ ಆದಿ ದೇವತೆ ಬಂದ ಲಕ್ಷ್ಮಿ ದೇವಿಯ ದೇವಸ್ಥಾನದ ಮುಂದುಗಡೆಯ ರನ್ನ ವೃತ್ತದಲ್ಲಿ ಮೊದಲ ಬಾರಿಗೆ ಹೋಳಿ ಹಬ್ಬ ಆಚರಿಸಲು ಯೋಜಿಸಲಾಗಿದೆ. ಪ್ರಸ್ತುತ



ದಿನಮಾನಗಳಲ್ಲಿ ಬಣ್ಣದ ಆಟ ಆಡುವ ಪ್ರವೃತ್ತಿ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸನಾತನ ಧರ್ಮ ಸಂಸ್ಕೃತಿ ಉಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪಿಕೆಪಿಎಸ್ ಅಧ್ಯಕ್ಷ ಪ್ರವೀಣ ಪಾಟೀಲ ಮಾತನಾಡಿ, ಪರಿಸರ ಸ್ನೇಹಿ ಬಣ್ಣ ಮಾತ್ರ ಆಡಲಾಗುವದು. ರಂಗೋತ್ಸವದಲ್ಲಿ ಪಾಲ್ಗೊಂಡಿರುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿದೆ. ಅಶ್ಲೀಲ ಜಾನಪದ ಹಾಡುಗಳಿಗೆ ಉತ್ಸವದಲ್ಲಿ ಅವಕಾಶವಿಲ್ಲ. ಎಲ್ಲರೂ ಕಡಾಯವಾಗಿ ಬಿಳಿಯ ಬಣ್ಣದ ಬಟ್ಟೆ ಧರಿಸಬೇಕೆಂದು ತಿಳಿಸಿದರು. ಸರ್ಕಾರಿ ಅಲ್ಪಸಂಖ್ಯಾತ ಘಟಕದ ಜಿಲ್ಲಾ ನಿರ್ದೇಶಕ ಮುಬಾರಕ ಅತ್ತಾರ ಮಾತನಾಡಿ, ವಿಶೇಷವಾಗಿ ಅಂದು 'ಹಲಗೆ ಭಾರಿಸುವ ಸ್ಪರ್ಧೆ' ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ವಿಜೇತರಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಶಿವಾನಂದ ಗೌರಣ್ಣವರ ಪಪಂ ನಾಮ ನಿರ್ದೇಶಕ ಸದಸ್ಯ ಮಾತನಾಡಿ, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಸ್ಥಳಾವಕಾಶ ನಿಗದಿಪಡಿಸಿ ಸುರಕ್ಷತೆಗೆ ಹೆಚ್ಚು ಗಮನಹರಿಸಲಾಗಿದೆ. ಎಲ್ಲರೂ ಮುಕ್ತವಾಗಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ವಿನಂತಿಸಿಕೊಂಡರು.

10ನೇ ಕನ್ನಡ ಸಾಹಿತ್ಯ ಸಮ್ಮೇಳನ ಇಂದು

ಬಾದಾಮಿ: ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕು ಘಟಕದ ವತಿಯಿಂದ ತಾಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾ.2ರಂದು ಸೋಮವಾರ ಪಟ್ಟಣದ ವೀರಪುಲಿಕೇಶಿ ವಿದ್ಯಾಸಂಸ್ಥೆಯ ಬಸವಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 7.15 ಗಂಟೆಗೆ ಧ್ವಜಾರೋಹಣ ನಡೆಯಲಿದೆ. ಬೆಳಗ್ಗೆ 8 ಗಂಟೆಗೆ ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಭುವನೇಶ್ವರಿ ಮೆರವಣಿಗೆಯು ಪಿಕಾರ್ಡ್ ಬ್ಯಾಂಕ್ ಆವರಣದಿಂದ ಆರಂಭವಾಗಿ ಬಸವಮಂಟಪದ ವರೆಗೆ ನಡೆಯಲಿದ್ದು, ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟಿಸುವರು. ಸಮ್ಮೇಳನದ ಉದ್ಘಾಟನಾ ಸಮಾರಂಭ ಬೆಳಗ್ಗೆ 10.30 ಗಂಟೆಗೆ ನಡೆಯಲಿದ್ದು, ಕೆರೂರ ಚರಂತಿಮಠದ ಡಾ.ಶಿವಕುಮಾರ ಶ್ರೀಗಳು ಸಾನ್ನಿಧ್ಯ ವಹಿಸುವರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ವೈ.ಎಂ.ಯಾಕೊಳ್ಳಿ ಉದ್ಘಾಟಿಸುವರು. ಬೀಳಗಿ ಶಾಸಕ ಜೆ.ಟಿ.ಪಾಟೀಲ ಮಳಿಗೆಗಳನ್ನು ಉದ್ಘಾಟಿಸುವರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ, ವಿಪ ಸದಸ್ಯ ಹನಮಂತ ನಿರಾಣಿ ಕೃತಿಗಳನ್ನು ಬಿಡುಗಡೆ ಮಾಡುವರು. ಮಧ್ಯಾಹ್ನ 12.30 ಗಂಟೆಗೆ ಗೋಷ್ಠಿ-1ರಲ್ಲಿ ಬಾದಾಮಿ ತಾಲೂಕಿನ ಸಾಹಿತ್ಯಾವಲೋಕನ ನಡೆಯಲಿದ್ದು, ಶಿವಯೋಗಮಂದಿರ ಸಂಶೋಧಕ ಡಾ.ಜೆ.ಕೆ.ಹಿರೇಮಠ ಅಧ್ಯಕ್ಷತೆ ವಹಿಸುವರು. ಸೃಜನಶೀಲ ಸಾಹಿತ್ಯ ಕುರಿತು ಪ್ರೊ.ಚಂದ್ರಶೇಖರ ಹೆಗಡೆ ಉಪನ್ಯಾಸ ನೀಡುವರು. ಜನಪದ ಸಾಹಿತ್ಯ ಕುರಿತು ಪ್ರೊ.ನಾಗರಾಜ ಹೊಟ್ಟಿ ಉಪನ್ಯಾಸ ನೀಡುವರು. ಮಹಿಳಾ ಸಾಹಿತ್ಯ ಪ್ರೊ.ಶಾರದಾ ಮೇಟಿ ಉಪನ್ಯಾಸ ನೀಡುವರು. ಮಧ್ಯಾಹ್ನ 2 ಗಂಟೆಗೆ ಗೋಷ್ಠಿ-2 ಕವಿ ಸಮಯ ನಡೆಯಲಿದೆ. ಡಾ.ವಿ.ಬಿ.ಸಣ್ಣಸಕ್ಕರಗೌಡರ ಅಧ್ಯಕ್ಷತೆ ವಹಿಸುವರು. ಸಾಹಿತಿ ಕೆ.ವಿ.ವೀರಲಿಂಗನಗೌಡರ ಉದ್ಘಾಟಿಸುವರು. ಮಧ್ಯಾಹ್ನ 3.30 ಗಂಟೆಗೆ ಗೋಷ್ಠಿ-3 ನಡೆಯಲಿದ್ದು, ಸರ್ವಾಧ್ಯಕ್ಷರ ಬದುಕು ಬರಹ ಅವರೊಂದಿಗೆ ಸಂವಾದ ನಡೆಯಲಿದೆ. ಸಂಜೆ 4.30 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಬಿ.ಎಫ್.ಹೊರಕೇರಿ ತಿಳಿಸಿದ್ದಾರೆ.

ಸರ್ವಾಧ್ಯಕ್ಷರಾಗಿ ಶೀಲವಂತರ ಆಯ್ಕೆ



ಸಮ್ಮೇಳನದ ಅಧ್ಯಕ್ಷರಾಗಿ ನಿವೃತ್ತ ಪ್ರಾಚಾರ್ಯ ಪ್ರೊ.ಜಿ.ಬಿ.ಶೀಲವಂತರ ಆಯ್ಕೆಯಾಗಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಸ್ವತಂತ್ರ ಹಾಗೂ ಸಹಲೇಖಕರಾಗಿ ನಾಲ್ವತ್ತು ಕೃತಿಗಳನ್ನು ಅರ್ಪಿಸಿದ್ದಾರೆ. ಇದರಲ್ಲಿ ಜೀವನ ಚರಿತ್ರೆಗಳು ಕೂಡ ಸೇರಿವೆ. ಇವರು ರಾಜಕೀಯ, ವ್ಯಕ್ತಿಚಿತ್ರಣ, ಕಲಾವಿದರ ಪರಿಚಯ ಇತ್ಯಾದಿ ಬಹಳಷ್ಟು ಲೇಖನಗಳು ಸ್ಪರ್ಧಾತ್ಮಕ ಸಂಚಿಕೆ, ದೈನಿಕ, ವಾರಪತ್ರಿಕೆ, ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಬಣ್ಣದಾಟದ ತಯಾರಿ ಪರಿಶೀಲಿಸಿದ ಶಾಸಕ




ಜಮಖಂಡಿ: ನಗರದ ಅರಣ್ಯ ಇಲಾಖೆಯ ಹತ್ತಿರ ಮೈದಾನದಲ್ಲಿ ಏರ್ಪಟಿಸಿದ್ದ ರಂಗಕೇಸರಿ ಬಣ್ಣದಾಟದ ತಯಾರಿಯನ್ನು ಶಾಸಕ ಜಗದೀಶ ಗುಡಗುಂಟಿ ವೀಕ್ಷಿಸಿದರು.

ನಂತರ ಮಾತನಾಡಿದ ಅವರು ಮಾ.4ರಂದು ಹೋಳಿ ಬಣ್ಣದಾಟದ ಪ್ರಯುಕ್ತ ಸಾಮೂಹಿಕ ರಂಗಿನಾಟಕ್ಕಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಸಹ 5ನೇ ವರ್ಷದ ರಂಗ ಕೇಸರಿ ಉತ್ಸವ ಬಣ್ಣದಾಟವನ್ನು ಆಯೋಜಿಸಿದ್ದು ಅಂದು ಬೆಳಗಿನಿಂದ ಮಧ್ಯಾನ್ಹದ ವರೆಗೆ ಬಣ್ಣದಾಟವು ಇರುತ್ತದೆ. ಬಣ್ಣದಾಟದಲ್ಲಿ ಮಹಿಳೆಯರಿಗೆ ಕೂಡಾ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ. ಸುಮಾರು 15 ಕ್ವಿಂಟಾನಷ್ಟು ನೈಸರ್ಗಿಕ ಬಣ್ಣವನ್ನು ಉಪಯೋಗಿಸಲಾಗುವದು ಎಂದರು. ಜ್ಯಾತ್ಯಾತೀತವಾಗಿ ಪಕ್ಷಾತೀತವಾಗಿ ಬಣ್ಣದ ಉತ್ಸವವನ್ನು ಆಚರಿಸಲಾಗುವದು. ಮಾ.3ರಂದು ಹೋಳಿ ಹುಣ್ಣಿಮೆಯ ಕಾಮದಹನದಂದು ಹಿಂದೂ ಜಾಗರಣ ವೇದಿಕೆಯ ಸಹಯೋಗದಲ್ಲಿ ಹಲಗೆ ಹಬ್ಬವನ್ನು ಆಯೋಜಿಸಲಾಗಿದ್ದು, ನಗರದ ಹೊಕ್ಕಳಬಾವಿ ಮೈದಾನದಲ್ಲಿ ಹಲಗೆ ಹಬ್ಬ ಪ್ರಾರಂಭವಾಗಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಹನುಮಾನ ಮಂದಿರದ ಹತ್ತಿರ ಕಾಮ ದಹನದೊಂದಿಗೆ ಪೂರ್ಣಗೊಳ್ಳುವುದು. ರಂಗಕೇಸರಿ ಮತ್ತು ಹಲಗೆ ಹಬ್ಬಗಳಿಗೆ ಸಾರ್ವಜನಿಕರು ಆಗಮಿಸಿ ಸಂಭ್ರಮಿಸ ಬೇಕು ಎಂದು ಹೇಳಿದರು. ಈಶ್ವರ ಆದೆಪ್ಪನವರ, ಪವನ ಸಾಳುಂಕೆ, ಶ್ರೀಧರ ಕಂಬಿ, ವಿಠ್ಠಲ ಪರೀಟ, ನರೇಂದ್ರ ಮಾನೆ, ಸುನೀಲ ಪವಾರ, ರಾಕೇಶ ಗಾಯಕವಾಡ, ಕಲ್ಲಪ್ಪ ಚಿಗರಿ, ಡಾ.ರಾಕೇಶ ಲಾಡ, ಲೋಕೇಶ ಪೂಜಾರಿ, ಪ್ರಭು ಜನವಾಡ, ಸಂಗಮೇಶ ಕೌಜಲಗಿ, ಶಿವಯ್ಯಾ ಮಠಪತಿ ಇದ್ದರು.

ಸಿಸಿ ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ

ಲೋಕಾಪುರ: ಭಂಟನೂರ ನವ ಗ್ರಾಮದ ಪ.ಜಾ ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಸಚಿವ ಆರ್.ಬಿ.ತಿಮ್ಮಾಪುರ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನತೆ ಸರ್ಕಾರದ ಸವಲತ್ತು ಪಡೆದುಕೊಂಡು ಸರಿಯಾಗಿ ಸದ್ಬಳಕೆಮಾಡಿಕೊಳ್ಳಬೇಕು. ಅಂದಾಜು 50 ಲಕ್ಷ ರೂ.ಗಳ ವೆಚ್ಚದಲ್ಲಿ ಭಂಟನೂರ ನವಗ್ರಾಮದ ಪ.ಜಾ ಕಾಲೋನಿಯಲ್ಲಿ ನಿರ್ಮಿಸುತ್ತಿರುವ ಸಿಸಿ ರಸ್ತೆಗಳನ್ನು ಸಾರ್ವಜನಿಕರು ಸರಿಯಾಗಿ ಸದುಪಯೋಗ ಮಾಡಿಕೊಳ್ಳಬೇಕು. ಸಿಸಿ ರಸ್ತೆ ಕಾಮಗಾರಿಗೆ ಗ್ರಾಮಸ್ಥರು ಸಹಕಾರ ನೀಡಬೇಕೆಂದು ಹೇಳಿದರು. ಕಾಮಗಾರಿ ಗುಣಮಟ್ಟದಾಗುವಂತೆ ನೋಡಿಕೊಳ್ಳಬೇಕು ಎಂದು ಇಲಾಖೆಯವರಿಗೆ ತಿಳಿಸಿದರು. ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಮುಧೋಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸದುಗೌಡ ಪಾಟೀಲ, ವಿಮುಲ್ ಕೆಎಂಎಫ್ ನಾಮ ನಿರ್ದೇಶಿತ ಲಕ್ಷ್ಮಣ ಮಾಲಗಿ, ಜಿಲ್ಲಾ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ, ಕಾಂಗ್ರೆಸ್ ಮುಖಂಡರಾದ ಗುರುರಾಜ ಉದಪುಡಿ, ಸಂಗಪ್ಪ ಇಮ್ಮನ್ನವರ, ರಫೀಕ ಬೈರಕದಾರ, ಭೀಮನಗೌಡ ಪಾಟೀಲ, ಹೊಳಬಸು ದಂಡಿನ, ಆನಂದ ಹಿರೇಮಠ, ಕುಮಾರ ಪತ್ತಾರ, ತಾಲೂಕು ಪಿಡಬ್ಲೂಡಿ ಸಹಾಯಕ ನಿರ್ವಾಹಕ ಅಭಿಯಂತರ ಸಿ.ಎಚ್.ಮಾಚನೂರ , ಕಿರಿಯ ಎಂಜಿನಿಯರ ಅಶೋಕ ಕ್ಯಾದಗೇರಿ, ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು ಇದ್ದರು.



ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ



ಕೆರೂರ: ಸಮೀಪದ ಬೀಳಗಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಗಲಗೊಂಬ, ಮತ್ತಿಕಟ್ಟಿ, ಇನಾಂ ಹುಲ್ಲಿಕೇರಿ, ಯಂಕಂಚಿ ಗ್ರಾಮಗಳಲ್ಲಿ ಸುಮಾರ 4 ಕೋಟಿ ರೂ.ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಜೆ.ಟಿ.ಪಾಟೀಲ ಶನಿವಾರ ಭೂಮಿಪೂಜೆ ನೆರವೇರಿಸಿದರು. ಕಗಲಗೊಂಬ ಗ್ರಾಮದಲ್ಲಿ 2.45 ಕೋಟಿ ವೆಚ್ಚದ ಮುಖ್ಯ ರಸ್ತೆ ಸುಧಾರಣೆ ಹಾಗೂ ಡಾಂಬರಿಕರಣ,1.25 ಕೋಟಿ ವೆಚ್ಚದಲ್ಲಿ ಕಗಲಗೊಂಬ ಗ್ರಾಮದಿಂದ ಕಟಗೇರಿ ಗ್ರಾಮಕ್ಕೆ ಕೂಡವ ರಸ್ತೆ ಸುಧಾರಣೆ ಕಾಮಗಾರಿ,ಮತ್ತಿಕಟ್ಟಿ ಗ್ರಾಮದಲ್ಲಿ ಮುಖ್ಯದ್ವಾರದಿಂದ ಗ್ರಾಮಕ್ಕೆ ಕೂಡವ ರಸ್ತೆ ಸುಧಾರಣೆ, ಇನಾಂ ಹುಲ್ಲಿಕೇರಿ ಗ್ರಾಮದಲ್ಲಿ 16 ಲಕ್ಷ ರೂಪಾಯಿ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ,20 ಲಕ್ಷ ರೂಪಾಯಿ ವೆಚ್ಚದಲ್ಲಿ ಇನಾಂ ಹುಲ್ಲಿಕೇರಿ ಕೆರೆ ಅಭಿವೃದ್ಧಿ, 70 ಲಕ್ಷ ರೂಪಾಯಿ ವೆಚ್ಚದಲ್ಲಿ ಯಂಕಂಚಿ ಗ್ರಾಮದಿಂದ ಗುಬೇರಕೊಪ್ಪ ಗ್ರಾಮಕ್ಕೆ ಮುಖ್ಯ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿದರು. ಗ್ಯಾರಂಟಿಯೊಂದಿಗೆ ಅಭಿವೃದ್ಧಿಗೆ ಸಹ ನಮ್ಮ ಸರ್ಕಾರ ಆದ್ಯತೆ ನೀಡಿದೆ,ಅಭಿವೃದ್ಧಿ ಕೆಲಸದಲ್ಲಿ ರಾಜಕಾರಣ ಸಲ್ಲದು ಎಂದು ಶಾಸಕರು ಹೇಳಿದರು. ಎಸ್.ಆರ್.ಮಳ್ಳಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಾ.ಎಮ್.ಜಿ.ಕಿತ್ತಲಿ, ರಾಮಚಂದ್ರ ಯಡಹಳ್ಳಿ,ಡಾ.ಬಿ.ಕೆ ಕೋವಳ್ಳಿ,ರವಿ ಲಮಾಣಿ,ಅಧಿಕಾರಿಗಳು ಇದ್ದರು.

ಉದ್ಯಾನವನ ಕಾಮಗಾರಿಗೆ ಭೂಮಿಪೂಜೆ

ಮುಧೋಳ: ನಗರದ ಕೆಎಚ್‌ಬಿ ಕಾಲೋನಿಯ ಸರ್ವೆ ನಂ.213ರಲ್ಲಿರುವ ಉದ್ಯಾನವನವನ್ನು 72.10 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭಾನುವಾರ ಸಚಿವ ಆರ್.ಬಿ.ತಿಮ್ಮಾಪುರ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹಸಿರುಮಯ ಉದ್ಯಾನವನಗಳು ನಿವಾಸಿಗಳ ಆರೋಗ್ಯ, ಮನಸ್ಸಿನ ಶಾಂತಿ ಮತ್ತು ಪರಿಸರ ಸಂರಕ್ಷಣೆಗೆ ಅಗತ್ಯ. ಕೆಎಚ್‌ಬಿ ಕಾಲೋನಿಯ ಉದ್ಯಾನವನ ಅಭಿವೃದ್ಧಿಯಿಂದ ಸ್ಥಳೀಯ ನಿವಾಸಿಗಳು, ಮಕ್ಕಳು ಮತ್ತು ಹಿರಿಯರು ವ್ಯಾಯಾಮ, ವಿಹಾರ ಮತ್ತು ವಿಶ್ರಾಂತಿಗಾಗಿ ಉತ್ತಮ ಸ್ಥಳ ಪಡೆಯಲಿದ್ದಾರೆ ಎಂದು ಹೇಳಿದರು. ರಾಜ್ಯ ಸರ್ಕಾರವು ನಗರಾಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಹಸಿರುಮಯ ಪ್ರದೇಶಗಳ ಸೃಷ್ಟಿ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದು, ಈ ಕಾಮಗಾರಿಯ ಮೂಲಕ ಮುಧೋಳ ನಗರದ ಪರಿಸರ ಸೌಂದರ್ಯ ಇನ್ನಷ್ಟು ಹೆಚ್ಚಾಗಲಿದೆ. ಕಾಮಗಾರಿ ಗುಣಮಟ್ಟದೊಂದಿಗೆ ಶೀಘ್ರವಾಗಿ ಪೂರ್ಣಗೊಂಡು ನಿವಾಸಿಗಳಿಗೆ ಉಪಯುಕ್ತವಾಗಲಿ ಎಂದು ಹಾರೈಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸದುಗೌಡ ಪಾಟೀಲ, ಲೋಕಾಪೂರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ ವಕೀಲರು, ಮುಖಂಡರಾದ ಸಿದ್ದು ಸೂರ್ಯವಂಶಿ, ಸಂತೋಷ ಪಾಲೋಜಿ, ಸಿದ್ರಾಮ ಕುರಿಹಾಗೂ ಅಧಿಕಾರಿಗಳು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಕಾರ್ಯಕರ್ತರು, ಕೆಎಚ್‌ಬಿ ಕಾಲೋನಿ ನಿವಾಸಿಗಳು ಹಾಗೂ ಹಲವಾರು ಜನರು ಉಪಸ್ಥಿತರಿದ್ದರು.



ಕಿರುಸುದ್ದಿ

ಶಾಂತಿಯುತವಾಗಿ ಹಬ್ಬ ಆಚರಿಸಿ



ನಾಲತವಾಡ: ಪಟ್ಟಣದ ಹೊರ ಪೊಲೀಸ್ ಠಾಣೆಯಲ್ಲಿ ಹೋಳಿ ಮತ್ತು ರಂಜಾನ್ ಹಬ್ಬದ ಪೂರ್ವಭಾವಿ ಶಾಂತಿ ಸಭೆ ನಡೆಯಿತು. ಈ ವೇಳೆ ಪಿಎಸ್ಐ ಸಂಜೀವ ತಿಪ್ಪಾರೆಡ್ಡಿ ಮಾತನಾಡಿ, ಪಟ್ಟಣದಲ್ಲಿ ಮೊದಲಿನಿಂದಲೂ ಹಿಂದೂ ಮುಸ್ಲಿಂ ಬಾಂಧವರಲ್ಲಿ ಶಾಂತಿಯುತ ಸೌಹಾರ್ದ ನೆಲೆಸಿದ್ದು, ಇದೇ ರೀತಿ ಹಬ್ಬಗಳನ್ನು ಆಚರಿಸಿ. ದ್ವಿತೀಯ ಪಿಯುಸಿ ಪರೀಕ್ಷೆಗಳು ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಯುವಕರು ಹೋಳಿ ಹಬ್ಬದ ಸಂದರ್ಭದಲ್ಲಿ ಕಾಮಣ್ಣನ ದಹನದ ವೇಳೆ ಜಾಗ್ರತರಾಗಿ ಇರಬೇಕು ಎಂದರು. ಅಂಜುಮನ್ ಕಮಿಟಿಯ ಅಧ್ಯಕ್ಷ ಲಾಲೆಮಶಾಕ ಅವಟಿ ಮತ್ತು ಹಿರಿಯರಾದ ಬಾಲಚಂದ್ರ ಗದಗಿನ ವೀರೇಶ್ವರ ಶರಣರ ನಾಡು ನಮ್ಮ ಪಟ್ಟಣದಲ್ಲಿ ಅಹಿತಕರ ಘಟನೆ ಆಗುವುದಿಲ್ಲ ಮುಂದೇವು ಆಗುವುದಿಲ್ಲ ಎಂದು ಭರವಸೆ ಹೇಳಿದರು. ಡಿಎಸ್ಎಸ್ ಮುಖಂಡ ಗುಂಡಪ್ಪ ಚಲವಾದಿ ಮಾತನಾಡಿ, ಹೋಳಿ, ರಂಜಾನ್ ನಿಮಿತ್ತ ಪೊಲೀಸ್ ಸಿಬ್ಬಂದಿ ನೇಮಕ ಮಾಡಬೇಕು, ಮತ್ತು ಪಟ್ಟಣದ ಮುಖ್ಯ ಬೀದಿಗಳಲ್ಲಿ, ಬಸ್ ನಿಲ್ದಾಣದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕೆಂದರು. ಡಿಎಸ್ಎಸ್ ಮುಖಂಡ ಮಂಜುನಾಥ ಕಟ್ಟಿಮನಿ ಮಾತನಾಡಿದರು. ಪಪಂ ಉಪಾಧ್ಯಕ್ಷ ಬಸವರಾಜ ಗಂಗನಗೌಡ(ಗಡ್ಡಿ), ಶಿವಯ್ಯ ವಿರಕ್ತಮಠ, ಬಸವರಾಜ ಮುಕಾಶಿ, ಸಿದ್ದರಾಮಯ್ಯ ಬಂಟನೂರು, ರುದ್ರಯ್ಯ ರೇವಣಕಿಮಠ, ಅಜಯ ಕೋಟಿಖಾನಿ,ಅಲ್ಲಾಬಕ್ಷ ಕುಳಗೇರಿ, ನಾಗಪ್ಪ ಪೂಜಾರಿ, ಇದ್ದರು.

ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸಿ



ಝಳಕಿ: ಯುವಕರು ನಿಯಮಗಳನ್ನು ಪಾಲಿಸಿ ಕಾನೂನು ಸುವ್ಯವಸ್ಥೆ ಕಾಪಾಡಲು ಕೈಜೋಡಿಸಬೇಕು ಎಂದು ಪಿಎಸ್ಐ ಮಂಜುನಾಥ ತೀರಕ್ಕನ್ನವರ ಹೇಳಿದರು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ನಡೆದ ರಮಜಾನ ಹಾಗೂ ಹೋಳಿ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಹೋಳಿ ಹಬ್ಬ ಸಂಪ್ರದಾಯ ಪ್ರಕಾರ ಆಚರಿಸಬೇಕು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ಸಹಕರಿಸಬೇಕು ಹೋಳಿ ಹಬ್ಬ ಆಚರಿಸಬೇಕು ಇದೆ ತಿಂಗಳ ರಮಜಾನ ಹಬ್ಬದ ಇರುವುದು ಮುಸ್ಲಿಂ ಸಮುದಾಯದ ದೊಡ್ಡ ಹಬ್ಬವಾಗಿದ್ದು, ಅವರಿಗೆ ತೊಂದರೆಯಾಗಬಾರದು ಹಬ್ಬಗಳನ್ನು ಶಾಂತಿತವಾಗಿ ಆಚರಿಸಿ ಎಂದು ಹೇಳಿದರು. ಪಿಎಸ್ಐ ಶಕುಂತಲಾ ನಡುವೆನಕರಿ, ಬಿ.ಎಸ್.ದೇವರ, ಶಂಬೋಲಿಂಗ ಪೂಜಾರಿ, ಸುಜಾತಾ ಮೋರೆ, ಎಂ.ಎಫ್.ಬಿರಾದಾರ, ಎಸ್ .ಬಿ.ಸಿವೂರ, ಪ್ರಕಾಶಗೌಡ ಬಿರಾದಾರ, ರವಿ ಹೂಗಾರ, ರೇವಣಸಿದ್ದ ಮೇಲಿಮನಿ, ಬಸಗೂಂಡ ಪಾಟೀಲ್, ಅಜೀಜ ಗೋಡೆಮಾಲ, ಶೌಕತಲಿ ಜಹಾಗೀರದಾರ, ಅಕ್ಬರ ಖಾನಾಪುರ, ಅಜರತ್ ಮುಲ್ಲಾ, ಬಾಲಕೃಷ್ಣ ಭೋಷಲೆ, ಪ್ರಕಾಶ ಮೇಲಿಮನಿ ಉಪಸ್ಥಿತರಿದ್ದರು.

ಆರೋಗ್ಯ ಶಿಬಿರ ಇಂದು

ಮುದ್ದೇಬಿಹಾಳ: ಮಾ.2ರಂದು ಸೋಮವಾರ ಬೆಳಗ್ಗೆ 8ರಿಂದ ಮಧ್ಯಾಹ್ನ 2 ಗಂಟೆವರೆಗೆ ಫಕೀರೇಶ್ವರ ಡಯಾಗ್ನೋಸ್ಟಿಕ್ ಸೆಂಟರ್ ಹೊರಪೇಟೆ ಗಲ್ಲಿ ಶಿವಯೋಗಿಮಠ ಇವರ ಪ್ರಯೋಗಾಲಯ ಆವರಣದಲ್ಲಿ ಡಾ.ಕೂಡ್ಲಯ್ಯ ಘಟವಾಳಯ್ಯ ಶಿವಯೋಗಿಮಠ ದಿ.ಬೋರಮ್ಮ ಕೂಡಲಯ್ಯ ಶಿವಯೋಗಿಮಠ ಹಾಗೂ ದಿ. ಶಿವಶರಣಯ್ಯ ಕೂಡಲಯ್ಯ ಶಿವಯೋಗಿಮಠ ಅವರ ಪುಣ್ಯಸ್ಮರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಮಧುಮೇಹ ರಕ್ತ ತಪಾಸಣೆ, ಹೃದಯ ಸಂಬಂಧಿಸಿದ ಇಸಿಜಿ. ರಕ್ತ ಒತ್ತಡ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕಾರಣ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಡಾ.ಸಿ.ಕೆ.ಶಿವಯೋಗಿಮಠ, ಶಾಂತಯ್ಯ ಶಿವಯೋಗಿಮಠ ವಿನಂತಿಸಿದ್ದಾರೆ.

ಮಾ.4ರಂದು ಓಕುಳಿ

ಮುದ್ದೇಬಿಹಾಳ: ಹೋಳಿ ಹುಣ್ಣಿಮೆಯ ಪ್ರಯುಕ್ತ ಮಾ.4ರಂದು ಬುಧವಾರ ನಗರದ ಹುಡುಕೋ ಬಡಾವಣೆಯ ಗವಿಸಿದ್ದೇಶ್ವರ ವೇದಿಕೆಯ ಆವರಣದಲ್ಲಿ ಹಿಂದೂ ಸಂಘಟನೆಗಳ ವತಿಯಿಂದ ಬೆಳಗ್ಗೆ 8 ಗಂಟೆಯಿಂದ ಮಕ್ಕಳಿಗಾಗಿ ಬಣ್ಣದ ಓಕುಳಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಕ್ಕಳಿಗಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ಹಲಗೆಯ ಮೇಳದ ಜೊತೆಗೆ ಬಣ್ಣ, ನೀರು ಪೂರೈಕೆ ಹಾಗೂ ಮನರಂಜನಾ ಉದ್ದೇಶದಿಂದ ಸಂಗೀತ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.



ಝಳಕಿ: ಸಮೀಪದ ಭತಗುಣಕಿ ಗ್ರಾಮದ ಸಿದ್ದೇಶ್ವರ ಪೂರ್ವ ಮತ್ತು ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಶಂಕರಲಿಂಗ ಪೆಟ್ರೋಲ್ ಬಂಕ್ ಮಾಲೀಕ ಅಂಬಣ್ಣ ಗದ್ಯಾಳ ಮಾತನಾಡಿದರು. ಸಿದ್ದೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎಂ.ಕೋರೆ, ಮುಖ್ಯಗುರು ಎಸ್.ಎಸ್ .ದಶವಂತ, ಬಸವರಾಜ ಹಳಕಿ, ಶಾಹಾಜಿ ಮಿಸಾಳೆ, ಸಿದ್ದಾರಾಮ ನಿಚ್ಚಳ, ಅಂಬಣ್ಣ ಪವಾರ, ಮಲ್ಲಿಕಪ್ಪ ಕುಂಬಾರ ಇದ್ದರು.

ಮಹಿಳೆ ಅಬಲೆಯಲ್ಲ ಸಬಲೆ: ಪಟ್ಟಣಶೆಟ್ಟಿ

ವಿಜಯಪುರ: ಇಂದು ಮಹಿಳೆ ಅಬಲೆಯಲ್ಲ ಸಬಲೆಯಾಗಿ ಎಲ್ಲ ರಂಗದಲ್ಲೂ ತನ್ನದೇ ಆದ ಗುರುತರ ಹೆಜ್ಜೆಯನ್ನಿಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು. ನಗರದ ಎನ್‌ಸಿಸಿ ಕಚೇರಿ ಹಿಂಭಾಗದ ಶಿವಯೋಗಿ ಪುಟ್ಟರಾಜ ಗಾನಬನದ ಆವರಣದಲ್ಲಿ ಸಂಕೇತ ಸ್ವಯಂ ಸೇವಾ ಸಂಸ್ಥೆಯ ದಶಮಾನೋತ್ಸವ ನಿಮಿತ್ತ ಹಮ್ಮಿಕೊಂಡ ಸಾಧಕರಿಗೆ ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂಕೇತ ಸಂಸ್ಥೆಯುವ ಕಳೆದ 10 ವರ್ಷಗಳಿಂದ ಉತ್ತಮ ಕಾರ್ಯಗಳನ್ನು ಮಾಡುತ್ತ, ಜನರ ಮನಸ್ಸಿನಲ್ಲಿ ಉಳಿದಿದೆ. ಇಂತಹ ಸಂಸ್ಥೆಯನ್ನು ಓರ್ವ ಮಹಿಳೆ ಮುನ್ನಡೆಸಿಕೊಂಡು ಬರುತ್ತಿರುವುದು ಸಂತಸದ ಸಂಗತಿ. ಓರ್ವ ಮಹಿಳೆ ತನ್ನಲ್ಲ ಆರ್ಥಿಕ ಸಂಕಷ್ಟಗಳನ್ನು ಬದಿಗೊತ್ತಿ, ಸಂಸ್ಥೆಯನ್ನು ಬೆಳೆಸುವಲ್ಲಿ ಅವಿರತ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು. ರಾಜಯೋಗಿನಿ ಬ್ರಹ್ಮಕುಮಾರಿ ಸಾವಿತ್ರಿ ಅಕ್ಕನವರು, ಗಾನಬನದ ತೋಂಟದಾರ್ಯ ಕವಿ ಗವಾಯಿ ಸಾನ್ನಿಧ್ಯ ವಹಿಸಿದ್ದರು. ಸಂಕೇತ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷೆ ಪಾರ್ವತಿ ಜಿ. ಅಧ್ಯಕ್ಷತೆ ವಹಿಸಿದ್ದರು. ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಿರಿಯ ಅಪ್ತ ಸಮಾಲೋಚಕ ರಮಿ ಕಿತ್ತೂರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹ್ಮದ್ ರಫೀಕ್ ಟಪಾಲ್, ಪ್ರೈಮ್ ಅಂಗ್ಲ ಮಾಧ್ಯಮ ಶಾಲೆ ಸಂಸ್ಥಾಪಕ ಅಧ್ಯಕ್ಷ ಅಬ್ದುಲ್ ರಜಾಕ್ ಹೊರ್ತಿ ಇದ್ದರು.



ನಗರದ ಎನ್‌ಸಿಸಿ ಕಚೇರಿ ಹಿಂಭಾಗದ ಶಿವಯೋಗಿ ಪುಟ್ಟರಾಜ ಗಾನಬನದ ಆವರಣದಲ್ಲಿ ಸಂಕೇತ ಸ್ವಯಂ ಸೇವಾ ಸಂಸ್ಥೆಯ ದಶಮಾನೋತ್ಸವ ನಿಮಿತ್ತ ಹಮ್ಮಿಕೊಂಡ ಸಾಧಕರಿಗೆ ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಉದ್ಘಾಟಿಸಿದರು. ಮುಖಂಡರಾದ ಡಾ.ದೊಡ್ಡಪ್ಪ ಪೂಜಾರಿ, ಹಿರಿಯ ಸಾಹಿತಿ ರಂಗನಾಥ ತೊರ್ಪೆ, ಸುರೇಶ ಬಿಜಾಪುರ, ಸುರೇಶ ತೇರದಾಳ, ಭಗವಂತ ರೇವೂರ, ವಿಜಯಲಕ್ಷ್ಮೀ ಸುಖಸಾರೆ, ಶಿವಶಂಕರ ಜೋರಾಪುರ ಇದ್ದರು.

ಅಂಗ ಲಿಂಗವಾಗುವ ಅದ್ಭುತ ಸಿದ್ಧಾಂತ ಬೋಧಿಸಿದ ರೇಣುಕಾಚಾರ್ಯರು: ಶ್ರೀಗಳು

ಕೊಲ್ಹಾರ: ಮಾನವನ ದಾನವ ಗುಣಗಳನ್ನು ದಹಿಸಿ ಆತನನ್ನು ಮಹಾದೇವನನ್ನಾಗಿಸುವ ಅಪೂರ್ವ ಸಿದ್ಧಾಂತ ನೀಡಿದವರು ರೇಣುಕಾಚಾರ್ಯರು. ಜೀವಿ ಶಿವನಾಗುವ, ಮಾನವ ಮಹಾದೇವನಾಗುವ, ಅಂಗ ಲಿಂಗವಾಗುವ ಅದ್ಭುತ ಸಿದ್ಧಾಂತ ಜಗತ್ತಿಗೆ ಬೋಧಿಸಿದ ರೇಣುಕಾಚಾರ್ಯರು ಎಂದು ದಿಗಂಬರೇಶ್ವರ ಮಠದ ಕಲ್ಲಿನಾಥ ಶ್ರೀಗಳು ಹೇಳಿದರು.

ಪಟ್ಟಣದ ಬಸ್ ನಿಲ್ದಾಣದ ಹತ್ತಿರವಿರುವ ಜಗದ್ಗುರು ರೇಣುಕಾಚಾರ್ಯರ ಮಂದಿರದಲ್ಲಿ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಕುಲದ ಕಲ್ಯಾಣಕ್ಕಾಗಿ ಹಲವು ಆಚಾರ್ಯರು, ಪ್ರವಾದಿಗಳು, ಈ ಭುವಿಯ ಮೇಲೆ ಅವತರಿಸಿ ಬಂದಿದ್ದಾರೆ. ಅಂತಹ ಪರಂಪರೆಯಲ್ಲಿ ಅವತರಿಸಿದ ರೇಣುಕಾಚಾರ್ಯರು ಪರಶಿವನ ಆದೇಶದಂತೆ ಈ ಭೂತಲದಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಪ್ರಚುರಪಡಿಸಿ ವೀರಶೈವ ಧರ್ಮ ನೆಲೆಗೊಳಿಸಿದ್ದಾರೆ ಎಂದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಮಾತನಾಡಿ, ಆಚಾರ ವಿಚಾರಗಳ ಮೇಲೆ ಪುನರ್ಜನ್ಮಗಳ ಮೇಲೆ ನಂಬಿಕೆ ಇಟ್ಟಿದ್ದು ಕೇವಲ ಹಿಂದೂ ಧರ್ಮ



ನಾವು ಮಾಡಿರುವ ಪಾಪ ಪುಣ್ಯಗಳ ಮೇಲೆ ಸ್ವರ್ಗ ನರಕದಲ್ಲಿ ಹುಟ್ಟುತ್ತೇವೆ ಎಂದು ವೇದ ಉಪನಿಷತ್ತಗಳ ಕಾಲದಿಂದಲೂ ಹಾಗೂ ಜಗದ್ಗುರು ರೇಣುಕಾಚಾರ್ಯರ ನಾನುಡಿಯಂತೆ ನಂಬಿಕೆ ಇಟ್ಟವರು. ಕೇವಲ ಸನಾತನ ಹಿಂದೂ ಧರ್ಮೀಯರು ಮಾತ್ರ, ಹಿಂದೂ ಧರ್ಮ ಅಸಹಾಯಕರು ಕೂಡ ಬಲಾಢ್ಯರಂತೆ ಸಮಾನವಾಗಿ ಬದುಕು ಬೇಕು ಎಂದು ಚಿಂತನೆ ಕಲಿಸಿಕೊಟ್ಟಿದೆ. ದೇವಾನುದೇವತೆಗಳ ಜಗದ್ಗುರುಗಳ ಶಕ್ತಿಯ ಪ್ರತೀಕ ಎಂದು ಹೇಳಿದರು.

ಹಿರೇಮಠದ ಪಡದಯ್ಯ ಸ್ವಾಮಿಗಳು, ಕೈಲಾಸನಾಥ ಸ್ವಾಮಿಗಳು, ಪಟ್ಟಣ ಪಂಚಾಯತ ಅಧ್ಯಕ್ಷ ಸಿ ಎಸ್ ಗಿಡ್ಡಪ್ಪಗೋಳ, ಜಂಗಮ ಸಮಾಜ ಅಧ್ಯಕ್ಷ ಸಿ ಎಂ ಗಣಕುಮಾರ, ತುಳಸಿಗೇರಿ ಹಗೆದಾಳ, ಸಿದ್ದಪ್ಪ ಬಾಲಗೊಂಡ, ಬಸಪ್ಪ ಉಪ್ಪಲದಿನ್ನಿ, ಈರಯ್ಯ ಮಠಪತಿ,ವೀರಭದ್ರಪ್ಪ ಬಾಗಿ, ಪರಶುರಾಮ ಗಣಿ, ರಾಚಣ್ಣ ಕೊಟ್ಟಗಿ, ಶಂಕರಯ್ಯ ಚಿಕ್ಕಮಠ, ಈರಣ್ಣಗೌಡ ಕೂಮಾರ, ರಾಚಯ್ಯ ಮಠ, ರಮೇಶ್ ಮಠ, ಬಸಯ್ಯ ಈ ಗಣಾಚಾರಿ, ಗುರುಸಿದ್ದಯ್ಯ ಪರಡಿಮಠ,ಬಸಯ್ಯ ಶಿ ಗಣಾಚಾರಿ, ರಾಜಶೇಖರ ಹಿರೇಮಠ, ಶಾಂತಯ್ಯ ಮಠಪತಿ, ಈರಯ್ಯ ಗಣಕುಮಾರ, ಮಲ್ಲಪ್ಪ ಗಣಿ ಸೇರಿದಂತೆ ಪಟ್ಟಣದ ಹಿರಿಯರು ಸಮಾಜದ ಬಂಧುಗಳು ಇದ್ದರು.

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ

ಸಿಂದಗಿ: ಸಮಾಜದಲ್ಲಿನ ಬಡತನ, ಹಸಿವನ್ನು ಇಂಥ ಕಾರ್ಯಕ್ರಮಗಳ ಮೂಲಕ ತೊಲಗಿಸಲು ಸರಕಾರ ಕೈಜೋಡಿಸುತ್ತಿದೆ. ಗ್ಯಾರಂಟಿಗಳ ಮಧ್ಯದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ರಾಜ್ಯ ಸರಕಾರ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡುತ್ತಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ಪಟ್ಟಣದ ಶಿಶು ಅಭಿವೃದ್ಧಿ ಯೋಜನಾ ಕಾರ್ಯಾಲಯದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ವತಿಯಿಂದ ಹಮ್ಮಿಕೊಂಡ 2024-25ನೆಯ ಸಾಲಿನ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಶಾಸಕ ವಿತರಣೆ ಮಾಡಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕವಾಗಿ ಪ್ರಗತಿಯಾಗಲು ಸ್ವಂತ ಉದ್ಯಮವನ್ನು ಮಾಡಬೇಕು. ಅದಕ್ಕಾಗಿ ಹೊಲಿಗೆ ಯಂತ್ರ ನೀಡಲಾಗುತ್ತಿದೆ. ಇದನ್ನು ಮಹಿಳೆಯರು ಸದ್ಬಳಕೆ ಮಾಡಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದರು.

ಈ ವೇಳೆ ತಾಲೂಕಿನ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು 20 ಜನ ಪಲಾನುಭವಗಳನ್ನು ಆಯ್ಕೆಮಾಡಿ ಹೊಲಿಗೆ ವಿತರಣೆ ಮಾಡಿದರು. ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ಮುತ್ತುರಾಜ ಪೂಜಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಆಲಮೇಲ ಗ್ಯಾರಂಟಿ ಅಧ್ಯಕ್ಷ ಅಶೋಕ ಕೋಳಾರಿ, ಮಹಿಳಾ ಅಧ್ಯಕ್ಷೆ ಜಯಶ್ರೀ ಹದನೂರ, ಪ್ರಾಧಿಕಾರ ಅಧ್ಯಕ್ಷ ಬಸವರಾಜ ಕಾಂಬಳೆ, ಆಲಮೇಲ ಎಪಿಎಂಸಿ ಅಧ್ಯಕ್ಷ ಬಸವರಾಜ ಬಾಗೇವಾಡಿ, ಶ್ರೀಶೈಲ ಪೂಜಾರಿ, ಅಂಬರೀಷ ಚೌಗಲೆ, ಸುನಂದಾ ಯಂಪುರೆ, ಸುನಿತಾ ಕಪ್ಪಣ್ಣವರ, ಪ್ರತಿಭಾ ಚೆಳ್ಳಗಿ, ರಜತ ತಾಂಬೆ, ಮೊಶಿನ್ ಬೀಳಗಿ, ಮುತ್ತು ಮುಂಡೇವಾಡಗಿ ಸೇರಿದಂತೆ ಅನೇಕರು ಇದ್ದರು.



ಜಾಗೃತಿ ಓಟಕ್ಕೆ ಸಚಿವ ಎಂ.ಬಿ.ಪಾಟೀಲ ಚಾಲನೆ



ವಿಜಯಪುರ: ಕರ್ನಾಟಕ ರಾಜ್ಯ ಪೋಲಿಸ್ ಹಾಗೂ ವಿಜಯಪುರ ಜಿಲ್ಲಾ ಪೋಲಿಸ್‌ರ ವತಿಯಿಂದ ವಿಜಯಪುರ ನಗರದಲ್ಲಿ ಹಮ್ಮಿಕೊಂಡ ಡ್ರಗ್ಸ್ ಫ್ರೀ ಕರ್ನಾಟಕ -ಪಿಟ್ನೆಶ್ ಫಾರ್ ಆಲ್'' ಜಾಗೃತಿ ಓಟಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿಜಯಪುರ ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ, ಪೊಲೀಸ್ ವರಿಷ್ಠಾಧಿಕಾರಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ದಾಸೋಹ ಪರಂಪರೆ ಪರಿಚಯಿಸಿದ ಶರಣಬಸವೇಶ್ವರ

ದೇವರಹಿಪ್ಪರಗಿ: ಕೃಷಿಯನ್ನೆ ಕಾಯಕವಾಗಿಸಿಕೊಂಡು ನಿತ್ಯ ದಾಸೋಹ ಆರಂಭಿಸಿದ ಶರಣಬಸವೇಶ್ವರರು ಎಂದು ಪ್ರವಚನಕಾರ ಪಂಡಿತ ಮಹಾಂತಯ್ಯ ಶಾಸ್ತ್ರಿಗಳು ಹೇಳಿದರು.

ತಾಲ್ಲೂಕಿನ ಹುಣಶ್ಯಾಳ ಗ್ರಾಮದಲ್ಲಿ ನಡೆದ ದಾಸೋಹಿ ಶರಣಬಸವೇಶ್ವರ ಪುರಾಣದಲ್ಲಿ ಜೋಡಿ ಎತ್ತುಗಳ ಮೂಲಕ ಕುರಿಗೆ ಹೋಲ ಬಿತ್ತನೆಗೆ ಚಾಲನೆ ನೀಡಿ ಮಾತನಾಡಿದರು. 18ನೇ ಶತಮಾನದಲ್ಲಿ ಶರಣಬಸವೇಶ್ವರರು ಗರಿಕೇಯ ಹೊಲದಲ್ಲಿ ಶುದ್ಧ ಮನಸ್ಸಿನಿಂದ ಬಿತ್ತನೆ ಮಾಡಿ, ಉತ್ತಮ ಬೆಳೆ ಬೆಳೆದರು. ಅದನ್ನು ಗ್ರಾಮದವರಿಗೆ ಹಂಚಿದರು. ಕೊಟ್ಟಿದ್ದು ದಾಸೋಹ, ಮಾಡಿದ ಕಾಯಕ, ಪಡೆದದ್ದು ಪ್ರಸಾದ ಎಂಬ ಭಾವನೆ, ದಾಸೋಹ ಪರಂಪರೆ ಮೆರೆದ ಶರಣಬಸವೇಶ್ವರರು ಎಂದು ಹೇಳಿದರು.

ಗ್ರಾಮದ ದೇಶಮುಖರ ಮನೆ ಆವರಣದಲ್ಲಿ ಹಾಲುಮತದ ಪೂಜಾರಿ ಯಿಂದ 5 ಕಾಳುಗಳನ್ನು ಜೋಡೆತ್ತಿನ ಕುರಿಗೆಯಲ್ಲಿ ಉಳುಮೆ ಮಾಡುವ ಮೂಲಕ ಶರಣಬಸವೇಶ್ವರ ದಾಸೋಹ ಪರಂಪರೆಯನ್ನು ಜನರಿಗೆ ತಿಳಿಸಿದರು.

ಶರಣಬಸವೇಶ್ವರರು ಗ್ರಾಮೀಣ ಸೊಗಡಿನಲ್ಲಿ ಹೊಲ ಬಿತ್ತುವುದನ್ನು ಭಕ್ತರು ನೋಡಿ ಸಂತಸ ಪಟ್ಟರು, ಕೆಲವರು ತಮ್ಮ ಮೊಬೈಲ್ ಗಳಲ್ಲಿ ಸೇರೆ ಹಿಡಿದು, ಗೆಳೆಯರೊಂದಿಗೆ ದೃಶ್ಯಗಳನ್ನು ಹಂಚಿಕೊಂಡರು. ಚಿಕ್ಕ ಮಕ್ಕಳು ಕುತೂಹಲದಿಂದ ನೋಡುತ್ತಾ ಪೋಷಕರನ್ನು ಪ್ರಶ್ನಿಸುತ್ತಿರುವುದು ವಿಶೇಷವಾಗಿತ್ತು.

ಗ್ರಾಮದ ಪ್ರಮುಖರುಗಳಾದ ಶಿವರಾಜ ದೇಶಮುಖ, ನಾನಾಗೌಡ ಕರ್ನಾಳ, ಶರಣಗೌಡ ಕೋಟಿಖಾನಿ, ಶರಣಪ್ಪ ಹಿಪ್ಪರಗಿ ಪಡಶೆಟ್ಟಿ, ಅಪ್ಪಸಾಹೇಬ ದೇವರಗುಡಿ, ಶಂಕ್ರಪ್ಪ ಬಂಗಾರಗುಂಡ, ಗೋಲ್ಲಾಳಪ್ಪ ಪಟ್ಟಣಶೆಟ್ಟಿ, ಶಾಂತಗೌಡ ಕೋಟಿಖಾನಿ, ಗುತ್ತಪ್ಪಗೌಡ ಕೋಟಿಖಾನಿ, ಹುಸೇನ ನಾಗಾವಿ, ಗುಂಡಪ್ಪ ಹಿಪ್ಪರಗಿ, ಮಹಾಂತಯ್ಯ ಹಿರೇಮಠ, ಪ್ರಭುಗೌಡ ದೇವರಗುಡಿ, ಸೋಮನಗೌಡ ಕೋಟಿಖಾನಿ, ನಿಂಗಣ್ಣ ಪಾಕಿ, ಸಲಬಣ್ಣ ಬಡಿಗೇರ, ಕಾಸಪ್ಪ ತಳವಾರ, ಈರಣ್ಣ ಬಡಿಗೇರ, ಶಶಿ ಪತ್ತಾರ ಸೇರಿದಂತೆ ಗ್ರಾಮದ ಮಹಿಳೆಯರು ಭಾಗವಹಿಸಿದ್ದರು.



ನಗರದ ಅಭಿವೃದ್ಧಿಗೆ ಸಹಕರಿಸಿ

ಇಂಡಿ: ನಗರಸಭೆಯ 2026-27ನೇ ಸಾಲಿನ ಆಯ-ವ್ಯಯ ಅಂದಾಜು ಬಜೆಟ್‌ನ ಪತ್ರಿಕೆ ತಯಾರಿಸುವ ಕುರಿತು ನಗರದ ವಿವಿಧ ಸಂಘ ಸಂಸ್ಥೆಗಳ ಮುಖಂಡರ ಸಲಹೆ ಸೂಚನೆಯ ಸಭೆಯನ್ನು ಪೌರಾಯುಕ್ತ ಶಿವಾನಂದ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ಎರಡನೇ ಪೂರ್ವಭಾವಿ ಸಭೆ ನಡೆಯಿತು.

ಈ ಸಭೆಯಲ್ಲಿ ನಗರದ ವಿವಿಧ ಸಂಘ ಸಂಸ್ಥೆ, ಗಣ್ಯ ವ್ಯಕ್ತಿಗಳಿಂದ ಸಲಹೆ ಸೂಚನೆ ಪಡೆದುಕೊಂಡರು.

ಪೌರಾಯುಕ್ತ ಶಿವಾನಂದ ಪೂಜಾರಿ ಮಾತನಾಡಿ, ನಗರದ ಸ್ವಚ್ಛತೆ ಸೇರಿದಂತೆ ನೀರು, ಬಿದಿ ದೀಪ ಸೇರಿದಂತೆ ಇನ್ನಿತರ ಮೂಲ ಸೌಲಭ್ಯ ಕಲ್ಪಿಸಲು ಸಹಕಾರಿಯಾಗುತ್ತದೆ. ನಗರದ ಅಭಿವೃದ್ಧಿಗಾಗಿ ತಾವೂ ಕೂಡಾ ಕೈ ಜೊಡಿಸಬೇಕು. ಈ ಹಿಂದೆ ಪುರಸಭೆಯಾಗಿತ್ತು ಶಾಸಕರ ಪರಿಶ್ರಮದಿಂದ ಇಂದು ನಗರಸಭೆಯಾಗಿ ಮೇಲ್ದರ್ಜೆಗೆ ಏರಿದ್ದು ಸಂತಸದ ವಿಷಯವಾಗಿದೆ. ಅಲ್ಲದೆ ಈಗಾಗಲೆ ಕೇಲ ಒಳ ರಸ್ತೆ ಅಭಿವೃದ್ಧಿ ಕಾರ್ಯಗಳಿಗೆ ನಮ್ಮ ಶಾಸಕರು ಚಾಲನೆ ನೀಡಿದ್ದಾರೆ. ಆದ್ದರಿಂದ ನಗರದ ಸರ್ವಾಂಗಿಣ ಅಭಿವೃದ್ಧಿಗಾಗಿ ನಗರದ ಜನತೆ ನಮ್ಮ ಸಿಬ್ಬಂದಿಗಳಿಗೆ ಸಹಕಾರ ನೀಡುವುದು ಮುಖ್ಯ ಎಂದರು.



ನಗರಸಭೆ ವ್ಯವಸ್ಥಾಪಕ ಪ್ರವಿಣ ಸೋನಾರ, ಕಂದಾಯ ಅಧಿಕಾರಿ ಸದಾಶಿವ ನಿಂಬಾಳಕರ, ಆರೋಗ್ಯ ನೀರಿಕ್ಷಕ ಎಲ್.ಎಸ್.ಸೋಮನಾಯಕ, ಅಕೌಂಟಂಟ ಅಸ್ಲಂ ಖಾದಿಮ, ಎನ.ಎಸ್,ರೂಣಿಹಾಳ, ದಾವಲಸಾಬ ಶೇಖ, ಬಿ.ಜಿ.ನಾರಾಯಣಕರ, ಕೃಷ್ಣಾ ರಾಠೋಡ, ಇಂದಿರಾಗಾಂಧಿ ರಾಜಮಾನೆ, ನಿಂಗಪ್ಪ ಸುಂಗಠಾಣ, ಮಾಜಿ ಸದಸ್ಯರಾದ ಜಹಾಂಗೀರ ಸೌದಾಗರ, ಶಬ್ಬಿರ ಖಾಜಿ, ಭೀಮಾಶಂಕರ ಮೂರಮನ, ಸತೀಶ ಕುಂಬಾರ, ಉಮೇಶ ದೇಗಿನಾಳ, ಕಾಂತು ಕಂಬಾರ, ದೇವೆಂದ್ರ ಕುಂಬಾರ, ರಿಯಾಜ ಬಾಗವಾನ, ಅಶೋಕುಮಾರ ಚಂದನ, ಮುಸ್ತಾಕ ಇಂಡಿಕರ. ಸುರೇಕಾ ಕಾಂಬಳೆ, ಮುತ್ತು ಮುರಾಳ, ಹುಚ್ಚಪ್ಪ ಶಿವಶರಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಕ್ಕಳಿಗೆ ಪರೀಕ್ಷಾ ಪ್ಯಾಡ್ ವಿತರಣೆ

ಸಿಂದಗಿ: ಹತ್ತರ ಭಯ ಹತ್ತಿರ ಬೇಡ ಎಂಬ ಸದಾಶಯದೊಂದಿಗೆ ಮುಂಡೇವಾಡಗಿ ಕನ್ಸ್ಟ್ರಕ್ಷನ್ ತಾಲೂಕಿನಲ್ಲಿ ಪರೀಕ್ಷೆ ಬರೆಯುತ್ತಿರುವ ಎಲ್ಲ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪರೀಕ್ಷಾ ಪ್ಯಾಡ್‌ಗಳನ್ನು ವಿತರಣೆ ಮಾಡಿದ್ದಾರೆ ಎಂದು ಶಿಕ್ಷಕ ಸಿದ್ದಲಿಂಗ ಚೌಧರಿ ಹೇಳಿದರು.

ತಾಲೂಕಿನ ಎಲ್ಲ ಶಾಲೆಗಳಿಗೆ ಎಂ.ಎಂ.ಮುಂಡೇವಾಡಗಿ ಕನ್ಸ್ಟ್ರಕ್ಷನ್ ವತಿಯಿಂದ ಜ್ಞಾನ ಭಾರತಿ ಶಾಲೆಯ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪರೀಕ್ಷಾ ಪ್ಯಾಡ್ ನ್ನು ವಿತರಣೆ ಮಾಡಿ ಮಾತನಾಡಿದ ಅವರು, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ತಾಲೂಕಿನ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಮಕ್ಕಳಿಗೆ ಪ್ರೋತ್ಸಾಹ ನೀಡುವ ದಿಸೆಯಲ್ಲಿ ಮುಂಡೇವಾಡಗಿ ತಂಡವು ಇದೊಂದು ಹೆಜ್ಜೆ ಇಟ್ಟಿರುವುದು ಶ್ಲಾಘನೀಯ. ಒಟ್ಟು 2500 ಪರೀಕ್ಷಾ ಪ್ಯಾಡ್ ಗಳನ್ನು ಹಂಚುವ ಕಾರ್ಯಕೈಗೊಳ್ಳಲಾಗಿದೆ. ಇದರ ಸದುಪಯೋಗವನ್ನು ಎಲ್ಲ ಮಕ್ಕಳ ಪಡೆದುಕೊಳ್ಳಬೇಕು ಎಂದರು.

ಮುಂಡೇವಾಡಗಿ ಕನ್ಸ್ಟ್ರಕ್ಷನ್ ಸದಸ್ಯ ರಾಜಶೇಖರ ಕೂಚಬಾಳ ಮಾತನಾಡಿ, ಮಕ್ಕಳಿಗಾಗಿ ಒಂದು ಕಾರ್ಯಾಗಾರ ಮಾಡಬೇಕು ಎನ್ನುವ ಉದ್ದೇಶ ನಮ್ಮದಾಗಿತ್ತು. ಆದರೆ ಸಮಯ ಕಡಿಮೆ ಇರುವ ಕಾರಣದಿಂದ ಆಗಲಿಲ್ಲ, ಮುಂಬರುವ ದಿನಮಾನಗಳಲ್ಲಿ ಹತ್ತರ ಭಯ ಹತ್ತಿರ ಬೇಡ ಎಂಬ



ನಾಣ್ಣುಡಿಯೊಂದಿಗೆತಾಲೂಕಿನಾದ್ಯಂತಕಾರ್ಯಾಗಾರಹಮ್ಮಿಕೊಳ್ಳಲಾಗುವುದು. ಈ ವರ್ಷ ಮಕ್ಕಳಿಗೆ ಶುಭಕೋರುವ ಸಲುವಾಗಿ ಸಿಂದಗಿ ನಗರದಲ್ಲಿ ಓದುತ್ತಿರುವ ಎಲ್ಲ ಶಾಲೆಯ ಹತ್ತನೆಯ ತರಗತಿ ಮಕ್ಕಳಿಗೆ ಪರೀಕ್ಷಾ ಪ್ಯಾಡ್ ನೀಡಲಾಗುತ್ತಿದೆ. ಇದರ ಸದ್ಬಳಕೆಯನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ತಾಲೂಕಿಗೆ ಪ್ರಥಮ ಬರುವ ಮಕ್ಕಳಿಗೆ ನಗದು ಬಹುಮಾನ ವಿತರಣೆ ಮಾಡಲಾಗುವುದು. ಶೇ.95ರಷ್ಟು ಅಂಕ ಪಡೆಯುವ ಪ್ರತಿ ವಿದ್ಯಾರ್ಥಿಗೂ ರೂ.5ಸಾವಿರ ಪ್ರೋತ್ಸಾಹಧನ ನಮ್ಮ ತಂಡದಿಂದ ನೀಡಲಾಗುವುದು ಎಂದರು.

ಸಾಹಿತಿ ರಂಗನಾಥ ಥೋರ್ಪೆ, ಸಂಗಮ ಸಂಸ್ಥೆಯ ನಿರ್ದೇಶಕ ಫಾದರ್ ಸಂತೋಷ, ಸಿಸ್ಟರ್ ಸಿಂಥೀಯಾ ಡಿಮೇಲೊ, ಜ್ಞಾನ ಭಾರತಿಯ ಕಾರ್ಯದರ್ಶಿ ಸತೀಶ ಹಿರೇಮಠ, ಮಹಾಂತೇಶ ಮುಂಡೇವಾಡಗಿ, ವಿಜಯಕುಮಾರ ಪಟ್ಟಣಶೆಟ್ಟಿ ಸೇರಿದಂತೆ ಇತರರು ಇದ್ದರು.

ರಸ್ತೆಗಳಲ್ಲಿ ಕಸ ಎಸೆಯಬೇಡಿ: ಭಾಗ್ಯರಾಜ



ಬಸವನಬಾಗೇವಾಡಿ: ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಡಬೇಕು ಪ್ಲಾಸ್ಟಿಕ ವಸ್ತುಗಳನ್ನು ತ್ಯಜಿಸಿ, ಹಸಿ ಕಸ ಒಣ ಕಸ ಬೇರ್ಪಡಿಸಿ ಕಸದ ವಾಹನಗಳಿಗೆ ಕೊಡಬೇಕು, ಅನಾವಶ್ಯಕವಾಗಿ ಚರಂಡಿಗಳಲ್ಲಿ ರಸ್ತೆಗಳಲ್ಲಿ ಕಸ ಎಸೆಯಬಾರದು ಎಂದು ಪಪಂ ಸದಸ್ಯ ಭಾಗ್ಯರಾಜ ಸೊನ್ನದ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದ ಸೋಮೇಶ್ವರ ಭಜನಾ ಮಂಟಪದಲ್ಲಿ ಪಟ್ಟಣ ಪಂಚಾಯತ ಹಾಗೂ ಪ್ರೇರಣಾ ರೂರಲ್ ಡೆವಲಪಮೆಂಟ ಶಾಖೆ ಧಾರವಾಡ ಬೀಳಗಿ ಇವರ ಸಹಯೋಗದೊಂದಿಗೆ ಜರುಗಿದ ಸ್ವಚ್ಛ ಭಾರತ ಸ್ವಚ್ಛತಯೇ ಸೇವೇ 2.0 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪರಿಸರ ಸ್ವಚ್ಛ ಇದ್ದರೆ ಆರೋಗ್ಯವಂತರಾಗಿ ಬದುಕಲು ಸಾಧ್ಯ ಆದ್ದರಿಂದ ಸ್ವಚ್ಛತೆ ಪ್ರತಿಯೊಬ್ಬರ ಕರ್ತ್ಯವ್ಯವಾಗಬೇಕು, ನೀರನ್ನು ಹಿತಮಿತವಾಗಿ ಬಳಸಬೇಕೆಂದು ಹೇಳಿದರು.

ಪಪಂ ಉಪಾಧ್ಯಕ್ಷ ಶೇಖನಗೌಡ ಬಿರಾದಾರ ಚಾಲನೆ ನೀಡಿದರು. ಎಸ್. ಎಸ್.ಬೀಳಗಿ ತಂಡದವರಿಂದ ಸ್ವಚ್ಛತೆ ಬಗ್ಗೆ ಪಟ್ಟಣದ ವಿವಿಧ ವಾರ್ಡಗಳಲ್ಲಿ ಜಾಥಾ ನಡೆಸಿ ಬಸ್ ನಿಲ್ದಾಣ ಹತ್ತಿರ ಗಣೇಶ ದೇವಾಲಯ ಹತ್ತಿರ ಸ್ವಚ್ಛತೆ ಬಗ್ಗೆ ಬೀದಿ ನಾಟಕ ಹಾಗೂ ಸಂಗೀತ ನಡೆಯಿತು . ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಆಶಾ, ಅಂಗನವಾಡಿ ಕಾರ್ಯಕರ್ತರು ಪಟ್ಟಣ ಪಂಚಾಯತ ಸದಸ್ಯರು ಹಾಗೂ ಸಿಬ್ಬಂದಿ, ಪೌರ ಕಾರ್ಮಿಕರು ಪಾಲ್ಗೊಂಡಿದ್ದರು.

ಸೌಹಾರ್ದತೆಯಿಂದ ಹೋಳಿ ಆಚರಿಸಿ

ಆಲಮೇಲ: ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಪಿಎಸ್ಐ ಅರವಿಂದ ಅಂಗಡಿ ನೇತೃತ್ವದಲ್ಲಿ ಹೋಳಿ ಹಬ್ಬದ ನಿಮಿತ್ತ ಆಲಮೇಲ ಠಾಣಾ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಹಿಂದೂ-ಮುಸ್ಲಿಂ ಸಾಮಾಜದ ಮುಖಂಡರನ್ನು ಕರೆಸಿ ಶಾಂತಿ ಸಭೆ ನಡೆಸಿದರು.



ನಂತರ ಪಿಎಸ್ಐ ಅರವಿಂದ ಅಂಗಡಿ ಮಾತನಾಡಿ, ಜಿಲ್ಲೆಯಲ್ಲಿಯೇ ಭಾವೈಕತೆಯ ತವರೂರಾದ ಆಲಮೇಲ ಪಟ್ಟಣದಲ್ಲಿ ಹಿಂದೂಗಳ ಹಬ್ಬಗಳಲ್ಲಿ ಮುಸ್ಲೀಂ ಬಾಂಧವರು, ಮುಸ್ಲೀಂರ ಹಬ್ಬಗಳಲ್ಲಿ ಹಿಂದು ಬಾಂಧವರು ಕೂಡಿಕೊಂಡು ಹಬ್ಬ ಆಚರಿಸುತ್ತ ಬಂದಿದ್ದಾರೆ. ಹೋಳಿ ಹಬ್ಬವನ್ನು ಶಾಂತತೆಯಿಂದ ಆಚರಿಸಿ. ಯಾರಿಗೂ ತೊಂದರೆಯಾಗದಂತೆ ರಾಸಾಯನಿಕ ಮುಕ್ತ ಬಣ್ಣ ಆಡುವುದರ ಮೂಲಕ ಸಹೋದರತ್ವ ಎತ್ತಿ ಹಿಡಿದು ರಾಜ್ಯಕ್ಕೆ ಆಲಮೇಲ ಪಟ್ಟಣ ಮಾದರಿಯಾಗಬೇಕು. ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ಕೃತ್ಯಗಳು ನಡೆಸಿದರೆ ಅಂತಹ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಜರಗಿಸಲಾಗುವದು ಎಂದರು.

ನಾಗರೀಕ ವೇದಿಕೆ ಅಧ್ಯಕ್ಷ ರಮೇಶ ಬಂಟನೂರ, ಮಹಿಬೂಬ ಮಸಳಿ, ಎಂಜಿನೀಯರ ಶ್ರೀಶೈಲ ಮಠಪತಿ ಮಾತನಾಡಿದರು. ರಾಜಹಮದ ಬೆಣ್ಣೇಶಿರೂರ, ವಹಾಬ ಸುಂಬಡ, ಸಿದ್ದರಾಮ ಕೊಳಾರಿ, ಬಸವರಾಜ ತೆಲ್ಲೂರ, ಶಶಿಧರ ಗಣೆಹಾರ, ಹರೀಶ ಯಂಟಮನ ದೇವಪ್ಪ ಗುಣಾರಿ, ಸಿಬ್ಬಂದಿಗಳಾದ ಸಿದ್ದರಾಯ ಪಾಟೀಲ,ಸಲೀಮ ಸೌದಿ, ಎಸ್.ಟಿ.ಗೋಡೆಕರ್, ವಿನೋದ ಆಳ್ಳೂರ, ಸುರೇಶ ಜಾಲಗೇರಿ, ಸುರೇಶ ಪೂಜಾರಿ ಇದ್ದರು.

ಮುಂದುವರಿದ ಧರಣಿಗೆ ಬೆಂಬಲ

ತಾಳಿಕೋಟೆ: ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಭಾನುವಾರ ಐದನೇ ದಿನದ ಸತ್ಯಾಗ್ರಹವು ಶಿವಶರಣ ಅಂಬಿಗರ ಚೌಡಯ್ಯನವರ ಕ್ಷೇಮಾಭಿವೃದ್ಧಿ ಸಂಘ ತಾಳಿಕೋಟೆ ವತಿಯಿಂದ ಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಿದರು. ಬಳಿಕ ಮಾತನಾಡಿದ ತಾಲೂಕು ಅಧ್ಯಕ್ಷ ಪರಶುರಾಮ ತಂಗಡಗಿ ಈ ಹೋರಾಟ ಯಾರ ವಿರುದ್ಧವು ಅಲ್ಲಾ ಇದು ತಾಲೂಕಿನ ಎಲ್ಲಾ ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣವಾಗಬೇಕು. ಕೂಡಲೇ ಈಗ ನಿಗದಿಪಡಿಸಿದ ಸ್ಥಳ ರದ್ದು ಪಡಿಸಬೇಕು. ಪಟ್ಟಣದಲ್ಲಿರುವ ಸರ್ಕಾರಿ ಜಾಗೆಗಳಲ್ಲಿ ಪ್ರಜಾಸೌಧ ನಿರ್ಮಾಣ ಮಾಡಿ ಎಂದು ಆಗ್ರಹಿಸಿದರು. ಹಿರಿಯರಾದ ರಮೇಶ ಮುಕಿಹಾಳ, ಕಾಶೀನಾಥ ಮದರಿ, ಭೀಮಣ್ಣ ತಳವಾರ, ಮೋಹನ್ ಅಂಬಿಗೇರ, ಬಸವರಾಜ ತಳವಾರ, ಸಂಗಮೇಶ ಚಳ್ಳಗಿ, ಬಸವರಾಜ ಯಡಹಳ್ಳಿ, ದ್ಯಾಮಣ್ಣ ಮನಗೂಳಿ, ಮಲಕಾಜಿ ನಾಟಿಕಾರ, ಶಶಿಕಾಂತ ಮುಕಿಹಾಳ, ಮಲ್ಲಪ್ಪ ಗುರಗುಂದಗಿ, ಯಮನಪ್ಪ ಅಂಬಿಗೇರ, ಅಶೋಕ ಮುಕಿಹಾಳ ಮಲ್ಲಿಕಾರ್ಜುನ ನೆಲ್ಲಗಿ,ಮಾನಪ್ಪ ನಾಯ್ಕೋಡಿ, ಮಲ್ಲು ನಾಯ್ಕೋಡಿ, ಭೀಮಣ್ಣ ಚಳ್ಳಗಿ,ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಆರ್.ಎಸ್.ಪಾಟೀಲ (ಕೂಚಬಾಳ) ಮುತ್ತಪ್ಪ ಚಮಲಾಪುರ ಸೇರಿದಂತೆ ಇತರರು ಇದ್ದರು.



ಶಾಸಕ ಯತ್ನಾಳಗೆ ಮಂತ್ರಾಲಯ ಪರಿಮಳ ಪ್ರಶಸ್ತಿ ಪ್ರದಾನ

ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದಿಂದ ನೀಡುವ ಮಂತ್ರಾಲಯ ಪರಿಮಳ ಪ್ರಶಸ್ತಿ- 2026 ನೀಡಿ ಈಚೆಗೆ ಗೌರವಿಸಲಾಯಿತು.

ಮಂತ್ರಾಲಯದ ಮಠದಲ್ಲಿ ಹಮ್ಮಿಕೊಂಡ ಕಾರ್ಯಕ್ರಮ ದಲ್ಲಿ ಜಗದ್ಗುರು ಮನ್ಮಧ್ವಾ ಚಾರ್ಯರ ಮೂಲಮಹಾ ಸಂಸ್ಥಾನ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಡಾ. ಮತ್ತುಬುಧೇಂದ್ರ ತೀರ್ಥ ಶ್ರೀಗಳ ಸಾನ್ನಿಧ್ಯದಲ್ಲಿ ಪ್ರತಿಷ್ಠಿತ ಮಂತ್ರಾಲಯ ಪರಿಮಳ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ದೇಶಕಂಡಶ್ರೇಷ್ಠಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕೇಂದ್ರದ ಸಚಿವರಾಗಿ, ಶಾಸಕರಾಗಿ ಅನೇಕ ಅಭಿವೃದ್ಧಿ



ಕಾರ್ಯಗಳನ್ನು ಮಾಡಿರುವ, ಜನಪರ ಹೋರಾಟಗಳ ನೇತೃತ್ವ ವಹಿಸಿ ಯಶಸ್ವಿಯಾಗಿರುವ ಹಾಗೂ ಗೋ ಸೇವೆ, ಹಿಂದುತ್ವ, ಹಿಂದೂಗಳ ಪರವಾಗಿ ಗಟ್ಟಿ ಧ್ವನಿಯಾಗಿ ಶ್ರಮಿಸುತ್ತಿರುವ ಬಸನಗೌಡ ಪಾಟೀಲ ಯತ್ನಾಳ ಅವರು ಇಡೀ ನಾಡಿನ ಗಮನಸೆಳೆದಿದ್ದಾರೆ. ಸದ್ಯ ಅವರಿಗೆ ಮಂತ್ರಾಲಯ ಪ್ರಶಸ್ತಿ ದೊರೆತಿರುವುದು ಅಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಕಿರುಸುದ್ದಿ

ಎಲ್ಲರೂ ಸಮಾನರು ಎಂಬ ಭಾವನೆ ಮೂಡಲಿ



ಯಲಬುರ್ಗಾ: ವರ್ಣ, ಭೇದ, ಲಿಂಗ ತಾರತಮ್ಯ, ಜಾತಿ ಅಸ್ಪೃಶ್ಯತೆ, ಮೇಲು ಕೀಳು ಎಂಬ ನಮ್ಮಲ್ಲಿರುವ ಭಾವನೆಗಳು ನಮ್ಮಿಂದಲೆ ದೂರವಾದಾಗ ಸ್ವಾಸ್ಥ ಸಮಾಜ ನಿರ್ಮಾಣ ಸಾಧ್ಯ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಂಜುಕುಮಾರ್ ಪಚಪುರಿ ಹೇಳಿದರು. ಪಟ್ಟಣದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾಲೂಕಾ ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ತಾಲೂಕ ಪಂಚಾಯತ, ತಾಲೂಕ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಕಾನೂನು-ಅರಿವು ಹಾಗೂ ವಿಶ್ವ ಸಾಮಾಜಿಕ ನ್ಯಾಯ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ನಾವೆಲ್ಲರೂ ಸಮಾನರು ಎನ್ನುವ ಭಾವನೆ ನಮ್ಮಲ್ಲಿ ಮೂಡಿರಬೇಕು ಎಂದರು. ಸಮಾಜದಲ್ಲಿ ಇರುವ ಜನರಿಗೆ ಜಾತಿ, ವರ್ಗ, ಲಿಂಗಭೇದಗಳಿಂದ ಯಾವುದೇ ರೀತಿಯ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ವಿಶ್ವ ಸಾಮಾಜಿಕ ನ್ಯಾಯ ದಿನ ಆಚರಿಸಲಾಗುತ್ತಿದೆ. ಜನರಿಗೆ ಶಾಂತಿಯುತ ಮತ್ತು ಸುಭದ್ರ ಜೀವನ ನಡೆಯಬೇಕು ಎಂದರೆ ಸಮಾಜದ ಅಸಮಾನತೆ ತೊಲಗಬೇಕು ಜನರ ಭಾವನೆ ಬದಲಾವಣೆಯಾಗಿ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷರಾದ ಎಸ್.ಎಸ್.ಹೊಂಬಳ ವಹಿಸಿದ್ದರು. ಅತಿಥಿಗಳಾಗಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಗೀತಾ ಅಸೂಟಿ, ಸಮಾಜ ಕಲ್ಯಾಣ ಇಲಾಖೆ ತಾಲೂಕಾಧಿಕಾರಿ ಶಶಿಧರ ಸಕ್ರಿ, ಅಪರ ಸರ್ಕಾರ ವಕೀಲ ಮಲ್ಲನಗೌಡ ಪಾಟೀಲ, ವಕೀಲರ ಸಂಘದ ಕಾರ್ಯದರ್ಶಿ ಹಸನ್‌ಸಾಬ್ ನದಾಫ್, ವಸತಿ ನಿಲಯದ ಪ್ರಾಂಶುಪಾಲರು, ಮತ್ತಿತರರಿದ್ದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಮಾನ್ವಿ: ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ವಿಜ್ಞಾನದ ಹೊಸ ಹೊಸ ಸಂಶೋಧನೆಗಳನ್ನು ತಿಳಿದುಕೊಳ್ಳುವುದರ ಜೊತೆ ವಿದ್ಯಾರ್ಥಿಗಳು ಸಂಸ್ಕಾರಯುತ ಶಿಕ್ಷಣ ಪಡೆದು ಭವಿಷ್ಯದಲ್ಲಿ ದೇಶದ ಉತ್ತಮ ನಾಗರಿಕರು ಆಗಬೇಕು ವಿಶ್ವ ಚೇತನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಗೀತಾ ಹಿರೇಮಠ ಕರೆ ನೀಡಿದರು. ಅವರು ವಿಶ್ವ ಚೇತನ ವಿದ್ಯಾಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತವೆ ಎಂದು ತಿಳಿಸಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ಎಂ.ಹಿರೇಮಠ, ವಿಜ್ಞಾನದ ಶಿಕ್ಷಕಿ ಗಾಯತ್ರಿ, ವಿಜ್ಞಾನ ಶಿಕ್ಷಕರಾದ ಅಪ್ಸರಾ, ಎಂಜಿನಿಯರಿಂಗ್ ವಿದ್ಯಾರ್ಥಿನಿ ನಿವೇದಿತಾ ಮಾತನಾಡಿದರು ವಿದ್ಯಾರ್ಥಿನಿ ಚಿನ್ಮಯಿ ಹಿರೇಮಠ ಪ್ರಾರ್ಥಿಸಿದರು, ಮಾಧುರಿ ಶಿಕ್ಷಕಿ ಸ್ವಾಗತಿಸಿದರು, ಮುಖ್ಯಗುರುಗಳಾದ ನಂದಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ರಸಪ್ರಶ್ನೆ ಸ್ಪರ್ಧೆ ಮತ್ತು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು,.ಅಕ್ಷತಾ, ಚೈತ್ರಾ, ಸುಮೀರಾ, ಬಸಮ್ಮ ಶಿಕ್ಷಕರು ಉಪಸ್ಥಿತರಿದ್ದರು. ಸುನಿತಾ ನಿರೂಪಿಸಿದರು. ಅನಿತಾ ಶಿಕ್ಷಕಿ ವಂದಿಸಿದರು.

ಆರ್‌ಟಿಐ: ಪಿಡಿಓಗೆ 10 ಸಾವಿರ ರೂ. ದಂಡ

ವಿಜಯನಗರ: ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಕೆಯಾದ ಅರ್ಜಿಗೆ ಸಕಾಲದಲ್ಲಿ ಮಾಹಿತಿ ನೀಡದೇ ನಿರ್ಲಕ್ಷ್ಯ ತೋರಿದ ಜಿಲ್ಲೆಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ರಾಜ್ಯ ಮಾಹಿತಿ ಹಕ್ಕು ಆಯೋಗ 10 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದೆ.

ಜಿಲ್ಲೆ ಹರಪನಹಳ್ಳಿ ತಾಲೂಕಿನ ತಾಡರು ಗ್ರಾ.ಪಂ. ಪಿಡಿಓ ಶಿವಕುಮಾರ್ ದೊಡ್ಡಮನಿ ಅವರಿಗೆ 10 ಸಾವಿರ ರೂ. ದಂಡ ವಿಧಿಸಿದೆ. ಸಾರ್ವಜನಿಕ ಹಿತಾಸಕ್ತಿಯೊಂದಿಗೆ ವ್ಯಕ್ತಿಯೊಬ್ಬರು ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರು ಕೋರಿದ ಮಾಹಿತಿ ನೀಡದೇ, ಅನಗತ್ಯ ವಿಳಂಬ ಮಾಡಿ, ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದರು. ಈ ಕುರಿತಂತೆ ಸಲ್ಲಿಕೆಯಾಗಿದ್ದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ ಸಿಂಗ್ ಅವರು 10 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ.



ಮಸ್ಕಿ: ಪಟ್ಟಣದ ತಹಶೀಲ್ದಾರರ ಕಚೇರಿ ಆವರಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಿಸಲಾಯಿತು. ತಹಶೀಲ್ದಾರ್ ಮಂಜುನಾಥ ಭೋಗವತಿ, ಜಂಗಮ ಸಮಾಜದ ಪ್ರಮುಖ ಮುಖಂಡರು, ಯುವಕರು ಹಾಗೂ ತಹಶಿಲ್ದಾರರ ಕಚೇರಿಯ ಸಿಬ್ಬಂದಿ ಇದ್ದರು.

ಗೋ ಶಾಲೆಗೆ ಮೇವು ಸಮರ್ಪಣೆ

ಸಿಂಧನೂರು: ನಗರದ ಸುಕಾಲಪೇಟೆಯ ಸಮಸ್ತ ಭಕ್ತಾದಿಗಳು ಪ್ರತಿ ವರ್ಷದಂತೆ ಈ ವರ್ಷವೂ ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠಕ್ಕೆ ಮೇವು ಸಮರ್ಪಿಸುವ ಮೂಲಕ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ.

ಬಿಜೆಪಿ ಮುಖಂಡ ಕೆ.ಕರಿಯಪ್ಪ ಅವರ ನೇತೃತ್ವದಲ್ಲಿ ಒಟ್ಟು 28 ಟ್ರ್ಯಾಕ್ಟರ್‌ಗಳಲ್ಲಿ ಹಸುಗಳಿಗೆ ಮೇವನ್ನು ಮಂತ್ರಾಲಯಕ್ಕೆ ಕಳುಹಿಸಿ ಕೊಡಲಾಯಿತು.

ಮೇವು ಹೊತ್ತ 28 ಟ್ಯಾಕ್ಟರ್‌ಗಳಿಗೆ ಮೊದಲು ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ, ನಂತರ ಬಿಜೆಪಿ ಮುಖಂಡ ಕೆ.ಕರಿಯಪ್ಪ ಅವರು ಟ್ರ್ಯಾಕ್ಟರ್ ಚಾಲಕರಿಗೆ ಹಾಗೂ ಭಕ್ತಾದಿಗಳಿಗೆ ಶುಭ ಹಾರೈಸಿ ಯಾತ್ರೆಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು ಗೋ ಸೇವೆಯೇ ಪರಮಾತ್ಮನ ಸೇವೆ ಮಂತ್ರಾಲಯದ ಗೋಶಾಲೆಯಲ್ಲಿರುವ ಸಾವಿರಾರು ಗೋವುಗಳಿಗೆ ಮೇವಿನ ಕೊರತೆಯಾಗಬಾರದು ಎನ್ನುವ ಸತ್ಸಂಕಲ್ಪದೊಂದಿಗೆ ಸುಕಾಲಪೇಟೆಯ ಭಕ್ತರು ಈ ಕೈಂಕರ್ಯವನ್ನು ನಡೆಸುತ್ತಾ ಬಂದಿದ್ದಾರೆ.

ಈ ವರ್ಷ ರಾಯರ ಕೃಪೆಯಿಂದ ತಾಲೂಕಿನಲ್ಲಿ ಉತ್ತಮ ಮಳೆ-ಬೆಳೆಯಾಗಲಿ. ರೈತ ಸಮುದಾಯದ ಬದುಕು ಸುಖ-ಸಮೃದ್ಧಿಯಿಂದ ಕೂಡಿರಲಿ ಎಂದು ಗುರು ಸಾರ್ವಭೌಮರಲ್ಲಿ ಪ್ರಾರ್ಥಿಸುತ್ತೇನೆ ಎಂದು ಶುಭ ಹಾರೈಸಿದರು.

ಈ ವೇಳೆಯ ಧಾರ್ಮಿಕ ಕಾರ್ಯಕ್ರಮದಲ್ಲಿ ಸುಕಾಲಪೇಟೆಯ ಪ್ರಮುಖ ಮುಖಂಡರು, ಮಹಿಳೆಯರು ಹಾಗೂ ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.



ಸಿಂಧನೂರು: ನಗರದ ಸುಕಾಲಪೇಟೆಯ ಸಮಸ್ತ ಭಕ್ತಾದಿಗಳು ಪ್ರತಿ ವರ್ಷದಂತೆ ಈ ವರ್ಷವೂ ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠಕ್ಕೆ ಮೇವು ಸಮರ್ಪಿಸುವ ಮೂಲಕ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ.

ರೇಣುಕಾಚಾರ್ಯರ ಆದರ್ಶ ಸಮಾಜಕ್ಕೆ ಮಾರ್ಗದರ್ಶನ

ಕಲಬುರಗಿ: ರೇಣುಕಾಚಾರ್ಯರ ಆದರ್ಶಗಳು ಮತ್ತು ಧರ್ಮಬೋಧನೆಗಳು ಇಂದಿನ ಸಮಾಜಕ್ಕೂ ಮಾರ್ಗದರ್ಶನವಾಗಿವೆ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಸಾಧ್ಯ ಎಂಬ ಸಂದೇಶ ಸಾರಿದ್ದು, ಜನರಲ್ಲಿ ಭಕ್ತಿ ಭಾವ ಮೂಡಿದಾಗ ಪರಮಾತ್ಮನ ಅನುಭೂತಿ ಸಾಧ್ಯವಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅಭಿಮತ ವ್ಯಕ್ತಪಡಿಸಿದರು.

ನಗರದ ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಧ್ಯಾತ್ಮಿಕ ಜಾಗೃತಿ ಮೂಡಿಸುವ ಮೂಲಕ ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹಬಾಳ್ವೆ ಬೆಳೆಯಬೇಕು ಎಂಬುದು ಅವರ ಆಶಯವಾಗಿತ್ತು ಎಂದು ಹೇಳಿದರು. ವೀರಶೈವ ಲಿಂಗಾಯತ ಸಮಾಜ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ, ಎಲ್ಲಾ ವರ್ಗಗಳ ಜನರನ್ನು ಅಪ್ಪಿಕೊಳ್ಳುವ ವಿಶಾಲ ಮನೋಭಾವ ಹೊಂದಿದ ಸಮಾಜವಾಗಿದೆ. ಸಮಾನತೆ, ಸಹಿಷ್ಣುತೆ ಮತ್ತು ಕಾಯಕ ಸಂಸ್ಕೃತಿಯನ್ನು ಬೋಧಿಸಿದ ಶರಣರ ದಾರಿ ಎಲ್ಲರಿಗೂ ಆದರ್ಶವಾಗಿರಬೇಕು. ಜನರನ್ನು ಆಧ್ಯಾತ್ಮಿಕ ದಿಕ್ಕಿನಲ್ಲಿ ಮುನ್ನಡೆಸಿದ ರೇಣುಕಾಚಾರ್ಯರ ಕಾರ್ಯ ಸಮಾಜಕ್ಕೆ ಶಾಶ್ವತ ದೀಪವಾಗಿದೆಯೆಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಆಚರಣೆಗಳು ನಿಧಾನವಾಗಿ ದೂರವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಉತ್ತಮ ಸಂಸ್ಕಾರ ನೀಡುವುದು ತಾಯಂದಿರ ಪ್ರಮುಖ ಕರ್ತವ್ಯವಾಗಿದೆ. ಉತ್ತಮ ಸಂಸ್ಕೃತಿ, ಭಕ್ತಿ ಭಾವ ಮತ್ತು ಸಹಬಾಳ್ವೆಯ ಮನೋಭಾವ ಇದ್ದಾಗ ಮಾತ್ರ ನೆಮ್ಮದಿಯ ಜೀವನ ಸಾಧ್ಯವಾಗುತ್ತದೆ ಎಂದರು.

8 ಅಡಿ ಎತ್ತರದ ರೇಣುಕಾಚಾರ್ಯರ ಕಂಚಿನ ಮೂರ್ತಿಯ ಭವ್ಯ ಮೆರವಣಿಗೆಯ ವೇಳೆ 1008 ಮುತ್ತೈದೆಯರ ಕುಂಭ ಮೇಳ, ಪುರವಂತರು ಹಾಗೂ ವಿವಿಧಕಲಾತಂಡಗಳು ಭಾಗಿಯಾಗಿ ಮೆರುಗು ನೀಡಿದವು.



> ಆದಿ ಗುರು ರೇಣುಕಾಚಾರ್ಯರು ಸ್ಥಾಪಿಸಿದ ಸಮಾಜ ಕೇವಲ ಧರ್ಮ ಸೂಚಕವಲ್ಲ, ಅದು ಬದುಕಿನ ಹಾದಿ. ಮನುಷ್ಯ ಕುಲ ಒಂದೇ ಎಂದು ಸಾರಿದ ವೀರಶೈವ ಧರ್ಮವು ಪ್ರಾಣಿ-ಪಕ್ಷಿ ಗಳಿಗೂ ಲೇಸನ್ನು ಬಯಸುತ್ತದೆ. ತಾಯಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಜವಾಬ್ದಾರಿ ಹೊರಬೇಕು.
> ■ ಎಂ.ವೈ.ಪಾಟೀಲ, ಶಾಸಕ

ಪ್ರಮುಖ ಬೇಡಿಕೆ
ರಟ್ಕಲ್ ರೇವಣಸಿದ್ದೇಶ್ವರ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ. ಜಿಲ್ಲಾ ಜಂಗಮ ಸಮುದಾಯಕ್ಕೆ ಸಿಎ ಸೈಟ್ ನೀಡುವುದು. ಜಂಗಮ ಸಮುದಾಯಕ್ಕೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪನೆ ಮಾಡಬೇಕು ಎಂಬುದು ಸಮುದಾಯದ ಬೇಡಿಕೆ.

ಬಳಿಕ 1008 ಮುತ್ತೈದೆಯರಿಗೆ ಉಡಿ ತುಂಬಲಾಯಿತು. ಗುವಿವಿಯ ವಿಶ್ರಾಂತ ಪ್ರಾಧ್ಯಾಪಕ ಎಸ್.ಎಂ.ಹಿರೇಮಠ್ ವಿಶೇಷ ಉಪನ್ಯಾಸ ನೀಡಿದರು. ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್ ಮಾತನಾಡಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ಮಹಾಸಭಾದ ಜಿಲ್ಲಾಧ್ಯಕ್ಷ ಶರಣುಕುಮಾರ್ ಮೋದಿ, ಡಾ.ಸುಧಾ ಹಾಲಕಾಯಿ, ಬಸವರಾಜ್ ಮಠಪತಿ ಕಮಲಾಪುರ, ಜ್ಯೋತಿ ಹಿರೇಮಠ್, ಶಿವಕುಮಾರ್ ಲಿಂಗದಹಳ್ಳಿ ಸೇರಿ ಸಮಾಜದ ಹಲವು ಮುಖಂಡರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ಜಗದೀಶ್ವರಿ ನಾಶಿ ಸ್ವಾಗತಿಸಿದರು. ನಾಗಲಿಂಗಯ್ಯ ಮಠಪತಿ ನಿರೂಪಿಸಿದರು.

ರೇಣುಕಾಚಾರ್ಯರ ಜಯಂತಿ ಆಚರಣೆ

ಕುಷ್ಟಗಿ: ತಾಲೂಕಿನ ಕೇಸೂರು ಗ್ರಾಮದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಲಿಂ.ಚಂದ್ರಶೇಖರ ಶಿವಾಚಾರ್ಯರ 31ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ನಡೆದ ಭಾವಚಿತ್ರಗಳ ಮೆರವಣಿಗೆ ನಡೆಯಿತು.

ಗುಡದೂರಿನ ನೀಲಕಂಠಯ್ಯ ತಾತನವರು ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮ ಬೋಧಿಸುವ ಮೂಲಕ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿದ ಮಹಾಮಹಿಮರಾಗಿದ್ದಾರೆ ಎಂದು ಹೇಳಿದರು.

ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದಾದ್ಯಂತ ಅವರು ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿದ್ದಾರೆ ಎಂದರು.

ಕೇಸೂರು ಹಿರೇಮಠದ ಲಿಂ, ಚಂದ್ರಶೇಖರಶಿವಾಚಾರ್ಯರುಮಹಾನ್ ತಪಸ್ವಿಗಳು ಹಾಗೂ ಪೂಜಾನಿಷ್ಠರಾಗಿದ್ದರು ಸಮಾಜದ ಅಭಿವೃದ್ಧಿಗಾಗಿ ಅನೇಕ ಕೊಡುಗೆಗಳನ್ನು ಕೊಟ್ಟವರಾಗಿದ್ದಾರೆ ಅಂತಹ ಮಹನೀಯರನ್ನು ಪೂಜಿಸುವ ಮೂಲಕ ಧರ್ಮದ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕೆಂದರು.

ಚಂದ್ರಶೇಖರ ದೇವರು ಮಾತನಾಡಿ, ಅಂತರಂಗ ಬಹಿರಂಗ ಶುದ್ಧಿಗೆ ಪ್ರಾಧಾನ್ಯತೆ ಕೊಟ್ಟ ರೇಣುಕಾಚಾರ್ಯರು ಧರ್ಮದ ದಶ ಗಾತ್ರಗಳನ್ನು ಶೋಧಿಸಿ ಭಕ್ತರನ್ನು ಉದ್ಧರಿಸಿದರು. ಮಹಾಜ್ಞಾನಿ ಅಗಸ್ತ್ಯ ಮಹರ್ಷಿಗಳಿಗೆ ಶಿವಾದ್ವೈತ ತತ್ವ ಸಿದ್ಧಾಂತವನ್ನು ಬೋಧಿಸಿ ಹರಸಿದವರು ಎಂದರು.

ಅದ್ದೂರಿ ಮೆರವಣಿಗೆ: ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಚಂದ್ರಶೇಖರ ಶಿವಾಚಾರ್ಯರ 31ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ದೋಟಿಹಾಳ ಹಾಗೂ ಕೇಸೂರು ಗ್ರಾಮಗಳಲ್ಲಿ ಭಾವಚಿತ್ರಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ನೂರಾರು ಮಹಿಳೆಯರು ಕುಂಭ ಹಾಗೂ ಕಳಶಗಳನ್ನು ಹಿಡಿಕೊಂಡು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಮೆರವಣಿಗೆಯ ಅಂಗವಾಗಿ ಎಲ್ಲರು ತಮ್ಮ ತಮ್ಮ ಮನೆಯ ಮುಂದೆ ಸ್ವಚ್ಛತೆ ಮಾಡಿ ರಂಗೋಲಿಯನ್ನು ಬಿಡಿಸಲಾಗಿತ್ತು. ಮಾರ್ಗ ಮಧ್ಯೆ ಮೆರವಣಿಗೆಯಲ್ಲಿ ಪಾಲ್ಗೊಂಡವರಿಗೆ ಪಾನಕ, ಮಜ್ಜಿಗೆ, ಶರಬತ್ ವ್ಯವಸ್ಥೆ ಮಾಡಲಾಗಿತ್ತು.

ಮೆರವಣಿಗೆಯಲ್ಲಿ ಶಿವುಕುಮಾರ ದೇವರು, ವೀರಬಸವ ದೇವರು, ಗುರುದೇವ ದೇವರು, ಸಂಗಮ ದೇವರು, ಘನಲಿಂಗ ದೇವರು, ಸೇರಿದಂತೆ ಗ್ರಾಮದ ಗಣ್ಯರಾದಶಿವರಾಜಅಂಗಡಿ, ಮಹಾಂತೇಶ ಮೇಟಿ, ಉಮೇಶ ಮಡಿವಾಳರ, ಕಲ್ಲಯ್ಯಸ್ವಾಮಿ ಸರಗಣಾಚಾರಿ, ಪ್ರಭುದೇವ ಕಲ್ಯಾಣಮಠ, ಸೇರಿದಂತೆ ಅನೇಕ ಮಹಿಳೆಯರು ಮಕ್ಕಳು ಇದ್ದರು.

ಧರ್ಮ ಜನರನ್ನು ಒಂದು ಗೂಡಿಸುವ ಸಾಧನ

ಗಂಗಾವತಿ: ಏಕತೆಯನ್ನು ಬೆಳೆಸುವಲ್ಲಿ ಹಾಗೂ ವಿಶ್ವ ಬಂಧುತ್ವವನ್ನು ಸಾರುವ ಭಾರತದ ಸನಾತನ ಹಿಂದೂ ಧರ್ಮ ಜನರನ್ನು ಒಗ್ಗೂಡಿಸುವ ಸಾಧನವಾಗಿದೆ ಎಂದು ನಗರದ ಶಂಕರಮಠದ ಧರ್ಮದರ್ಶಿ ನಾರಾಯಣರಾವ್ ವೈದ್ಯ ಹೇಳಿದರು.

ಅವರು ಶಾರದಾ ದೇಗುಲದಲ್ಲಿ ಶುಕ್ರವಾರದಂದು ಎಂಟನೆಯ ವಾರ್ಷಿಕೋತ್ಸವ ಸಮಾರಂಭದ ಧರ್ಮಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಆದಿಗುರು ಶಂಕರಾಚಾರ್ಯರ ತತ್ವ ಸಿದ್ಧಾಂತಗಳನ್ನು ಗಮನಿಸಿದಾಗ ಜಾತಿ-ಮತ-ಧರ್ಮ-ಪ್ರಾಂತ-ಭಾಷೆ ಮತ್ತಿತರ ಕ್ಷುಲ್ಲಕ ಕಾರಣಗಳಿಂದ ಛಿದ್ರವಾಗುತ್ತಿರುವ ಸಮಾಜದಲ್ಲಿ ಭಾವಾದ್ವೈತವನ್ನು ಸಾಧಿಸುವ ಮೂಲಕ ಶೃಂಗೇರಿ ಶಾರದಾಂಬ ಪೀಠ ದೇಶ ಸೇರಿದಂತೆ ವಿಶ್ವದ ನಾನಾ ಭಾಗಗಳಲ್ಲಿ ಕಾರ್ಯ ಪ್ರವೃತ್ತವಾಗಿದೆ ಎಂದು ತಿಳಿಸಿದ ಅವರು, ಗಂಗಾವತಿಯಲ್ಲಿ ಶಂಕರಮಠ ಸ್ಥಾಪನೆಗೊಂಡು ಎಂಟು ವರ್ಷ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಹಾಗೂ ಶ್ರೀಭಾರತಿ ತೀರ್ಥ ಮಹಾಸ್ವಾಮಿಗಳವರ ವಜ್ರ ಮಹೋತ್ಸವದ ಆಚರಣೆಯ ಪ್ರಯುಕ್ತ ಧಾರ್ಮಿಕ ಹಾಗೂ ಸಮಾಜಮುಖಿ ಕಾರ್ಯಗಳನ್ನು ಸರ್ವ ಸಮಾಜ ಬಾಂಧವರ ಸಹಕಾರದಿಂದ ನಡೆಸುತ್ತಾ ಬರಲಾಗಿದೆ ಎಂದು ಹೇಳಿದರು.

ವಿದ್ವಾನ್ ಭೀಮ ಭಟ್ ಕುಂಕುಮಾರ್ಚನೆಯ ಮಹಾ ಸಂಕಲ್ಪವನ್ನು ನೆರವೇರಿಸಿ ಮಾತನಾಡಿ, ಜನ್ಮದ ಸಾರ್ಥಕತೆಗೆ ಸಂಪ್ರದಾಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಬರಲು ಪೋಷಕರು ಮುಂದಾಗಬೇಕು. ಪ್ರಾಣಿಗಳನ್ನು ಪ್ರೀತಿಸುವ ಮನುಷ್ಯ ತಮ್ಮ ಜೀವನದುದ್ದಕ್ಕೂ ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಸಾರ್ಥಕ ಬದುಕು ಸಾಧಿಸಬೇಕೆಂದು ಕರೆ ನೀಡಿದರು.

ಲಲಿತ ಸಹಸ್ರ ಪಾರಾಯಣ, ಭಜನೆ, ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ಇತ್ತೀಚಿಗಷ್ಟೇ ವಿರಾಟ ಹಿಂದೂಸಮ್ಮೇಳನವನ್ನು ಆಯೋಜಿಸಿದ ಕಂಚಿಕ ರಾಣಿ ಶಕುಂತಲಾ ಇವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಪಿಯುಸಿ ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ನೋಂದಣಿ ಪತ್ರವನ್ನು ಶ್ರೀಶಾರದಾ ದೇವಿಯ ಸನ್ನಿಧಿಯಲ್ಲಿ ಇಟ್ಟು ಪ್ರಾರ್ಥಿಸಿದ್ದು ವಿಶೇಷವಾಗಿತ್ತು.



ಪತ್ರಕರ್ತರು ವಸ್ತು ನಿಷ್ಟ ವರದಿಗೆ ಗಮನಹರಿಸಲಿ: ಶಿವಮೂರ್ತಿ

ಯಲಬುರ್ಗಾ: ಸಂಘಗಳು ಎಷ್ಟೇ ಇರಲಿ ಆದರೆ ವಸ್ತು ನಿಷ್ಠೆ ವರದಿ ಮಾಡುವ ಪತ್ರಕರ್ತಕರು ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆ ನಮ್ಮಲ್ಲಿರಬೇಕು ಎಂದು ಕರ್ನಾಟಕ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶಿವಮೂರ್ತಿ ಇಟಗಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ತಾಲೂಕಾ ಕರ್ನಾಟಕ ಪತ್ರಕರ್ತರ ಸಂಘದ ಪ್ರಥಮ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರಾಜಕೀಯ ಪಕ್ಷಗಳು, ಕನ್ನಡಪರ ಸಂಘಗಳು, ವಿವಿಧ ಸಮಾಜ ಸಂಘಟನೆಗಳು ಸೇರಿದಂತೆ ಅನೇಕ ಸಂಘಗಳಂತೆ ಪತ್ರಕರ್ತರ ಸಂಘಗಳು ಇದಕ್ಕೆ ಹೊರತಾಗಿಲ್ಲ ಎನ್ನುವುದನ್ನು ಅರಿತುಕೊಂಡು ವೃತ್ತಿ ಧರ್ಮವನ್ನು ಸದಾ ಕಾಪಾಡಿಕೊಳ್ಳಬೇಕು ಎಂದರು.



ಯಾವುದೇ ಸಂಘಗಳಾಗಿರಲಿ ಅದರ ಉದ್ದೇಶ ಮಾತ್ರ ಸಮಾಜಮುಖಿಯಾಗಿರಬೇಕು. ಸಂಘದ ಸದಸ್ಯತ್ವ ಐಡಿ ಕಾರ್ಡ, ಸಂಘಟನೆ ಸೇರಿದಂತೆ ಸಂಘದ ಸೌಲಭ್ಯಗಳನ್ನು ಪತ್ರಕರ್ತರಿಗೆ ಪ್ರಮಾಣಿಕವಾಗಿ ತಲುಪಿಸುವ ಕಾರ್ಯವನ್ನು ಎಲ್ಲರೂ ಸಮಾನ ಮನಸ್ಕಾರರಾಗಿ ಮಾಡಬೇಕು ಅಂದಾಗ ಸಂಘಗಳು ಸಂಘಟನೆಗೊಂಡು ಅಭಿವೃದ್ಧಿಗೊಳ್ಳುತ್ತೇವೆ. ನೂತನ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಶೀಘ್ರದಲ್ಲೇ ಮಾಡಲಾಗುವುದು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ದೇವರಾಜ ದೊಡ್ಮನಿ ಹಾಗೂ ಪ್ರಧಾನ ಕಾರ್ಯದರ್ಶಿ ಸಿವು ಮ್ಯಾಗೇರಿ ಮಾತನಾಡಿ, ಎಲ್ಲ ಪತ್ರಕರ್ತರು ಸಂಘದ ತತ್ವಸಿದ್ಧಾಂತಕ್ಕೆ ಬದ್ಧರಾಗಿ ನೈಜ ವರದಿಗಾರಿಕೆಗೆ ಹೆಚ್ಚು ಮಹತ್ವ ಕೊಡಬೇಕು ಎಂದರು.

ರವಿಕುಮಾರ ಛಲವಾದಿ, ವಿರೇಶ ಸ್ಟ್ಯಾಂಪಿನ್, ಶರಣಪ್ಪ ಆಡೀನ್, ಕಳಕೇಶ ಬೇವಿನಗಿಡದ, ದುರಗೇಶ ಪೂಜಾರ, ಮೌನೇಶ ವಜ್ರಬಂಡಿ ಮತ್ತಿತರರು ಇದ್ದರು.

ಮುಂದಿನ ಪೀಳಿಗೆಗೆ ರೇಣುಕಾಚಾರ್ಯರ ತತ್ವ ಸಿದ್ಧಾಂತ ತಿಳಿಸಿ

ಕುಕನೂರು: ರೇಣುಕಾ ಚಾರ್ಯರ ತತ್ವ ಸಿದ್ಧಾಂತಗಳು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು ಎಂದು ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸಿದ್ದಯ್ಯ ಕಳ್ಳಿಮಠ ಹೇಳಿದರು.

ಪಟ್ಟಣದಲ್ಲಿ ಆದಿಜಗದ್ಗುರು ರೇಣುಕಾಚಾರ್ಯ ವೃತ್ತದಲ್ಲಿ ಸಮಾಜದ ವತಿಯಿಂದ ಏರ್ಪಡಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಉದ್ದೇಶಿಸಿ ಮಾತನಾಡಿದ ಅವರು ರೇಣುಕರ ತತ್ವ ಸಿದ್ಧಾಂತಗಳು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಮಕ್ಕಳನ್ನು ಧರ್ಮ ಜಾಗೃತಿ ನೀಡಿ ಸಂಸ್ಕಾರವಂತರನ್ನಾಗಿ ಮಾಡುವ ಮೂಲಕ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಇಂತಹ ಮಹಾನ್ ಮೂಲ ಪುರುಷರ ಜಯಂತಿಗಳನ್ನು ಕೇವಲ ಸಮಾಜಗಳಿಗೆ ಸೀಮಿತವಾಗಿಸದೇ, ವಿಶ್ವಕ್ಕೆ ಒಳಿತು ಬಯಸಿದ ಮಹಾನ್ ದಾರ್ಶನಿಕರ ಜಯಂತಿಗಳನ್ನು ಈಡಿ ಮಾನವ ಧರ್ಮ ಒಗ್ಗೂಡಿ ಆಚರಿಸುವಂತಾಗಬೇಕು ಎಂದು ಕರೆ ನೀಡಿದರು.



ಸಮಾಜದ ಮುಖಂಡರಾದ ಮಲ್ಲಯ್ಯ ಹತ್ಲಗೇರಿಮಠ, ವೀರಯ್ಯ ದೇವಗಣಮಠ, ಸಿದ್ದಲಿಂಗಯ್ಯ ಬಂಡಿ, ಮಹೇಶ ಕಲ್ಮಠ, ಈಶಯ್ಯ ಶಿರೂರಮಠ, ಮಂಜುನಾಥ ಗೊರ್ಲೆಕೊಪ್ಪ, ಶರಣಯ್ಯ ಸಸಿಮಠ, ಪಂಚಯ್ಯ ಹಿರೇಮಠ, ವೀರಯ್ಯ ಪೂಜಾರ, ಶರಣಯ್ಯ ಹುಣಸಿಮರದ, ಚನ್ನಬಸಯ್ಯ ಹುಣಸಿಮರದ, ಶಶಿ ಓಲಿ, ವಿರುಪಾಕ್ಷಯ್ಯ ಬಂಡಿ, ಸಂಗಯ್ಯ ಬಂಡಿ, ಶರಣಪ್ಪ ಪೊಲೀಸ್ ಚಿಕೇನಕೊಪ್ ಸೇರಿದಂತೆ ಇತರರು ಇದ್ದರು.

ಮುಖ್ಯಮಂತ್ರಿ ಭೇಟಿಗೆ ಸರ್ವ ಪಕ್ಷಗಳ ನಿರ್ಧಾರ: ಸಂಗಣ್ಣ ಕರಡಿ

ಕೊಪ್ಪಳ: ನಗರಸಭೆ ಆವರಣದಲ್ಲಿ ನಡೆದಿರುವ ಬಲ್ಡೋಟ ತೊಲಗಿಸಿ ಹೋರಾಟದ 122ನೇ ದಿನದ ಧರಣಿಯಲ್ಲಿ ಮಾಜಿ ಸಂಸದ ಸಂಗಣ್ಣ ಕರಡಿ ಭಾಗಿಯಾಗಿ ಧರಣಿಗೆ ಬೆಂಬಲು ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಅವರು, ಕಾರ್ಖಾನೆ ಬಾಧೆಗೊಳಗಾದ ಜನರ ಕಷ್ಟ ಕಾರ್ಪಣ್ಯ ಹೇಳತೀರದು. ತಂತ್ರಜ್ಞರ ವರದಿ ಹೇಳಿದ್ದನ್ನು ಜಾರಿ ಮಾಡಿ ಎಂದು ಕೇಳೋಣ. ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಸಮಯ ಈಗ ಬಂದಿದೆ. ಜನಜಾಗೃತಿ ಆಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಬಂದ್ ಹೋರಾಟದಲ್ಲಿ ಮಹಿಳೆಯರು ತೋರಿಸಿದ ಆವೇಶ ಸಾತ್ವಿಕವಾಗಿತ್ತು. ಅವರ ನೋವಿಗೆ ಪಕ್ಷಾತೀತವಾಗಿ ಮಿಡಿದು ನಾವೆಲ್ಲ ಮುಂದೆ ನಿಂತು ಸರ್ಕಾರದ ಮನವೊಲಿಸಿ ಈ ಬಲ್ಡೋಟ ತೊಲಗಿಸೋಣ. ಜನರು ಎದ್ದು ನಿಂತರೆ ಎಂತಹ ದೊಡ್ಡ ಸಮಸ್ಯೆಯಾದರೂ ಪರಿಹಾರ ಸಿಗುತ್ತದೆ. ಇತ್ತೀಚಿಗೆ ದೇವನಹಳ್ಳಿ ಭೂಸ್ವಾಧೀನ ವಿರೋಧಿಸಿದ ಹೋರಾಟ ಗೆದ್ದಿತು. ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ತರಲಾಗಿದೆ. ಇದನ್ನು ಅಷ್ಟಕ್ಕೆ ಬಿಡಲ್ಲ. ಸದ್ಯದಲ್ಲೇ ಸರ್ವ ಪಕ್ಷಗಳ ಮುಖಂಡರು ಮತ್ತು ಜಂಟಿ ಕ್ರಿಯಾ ವೇದಿಕೆ ಮುಖಂಡರು ಇರುವ ನಿಯೋಗವನ್ನು ಕೊಂಡೊಯ್ದು ಮುಖ್ಯಮಂತ್ರಿಗಳಲ್ಲಿ ಸ್ಪಷ್ಟವಾಗಿ ಮನವಿ ಮಾಡೋಣ ಎಂದರು. ಅದಕ್ಕಿಂತ ಪೂರ್ವದಲ್ಲಿ ಜಿಲ್ಲಾಧಿಕಾರಿಗಳು ಸಭೆ ಕರೆಯುವಂತೆ ಮಾಡೋಣ ಎಂದರು.



ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಗುರುಮೂರ್ತಿ ಸ್ವಾಮಿ ಅಳವಂಡಿ ಮಾತನಾಡಿ, ಇದು ನಮ್ಮ ರಾಜಕಾರಣಿಗಳಿಗೆ ದೊಡ್ಡ ವಿಷಯವಲ್ಲ. ಇಷ್ಟು ಸಮಸ್ಯೆ ಎದುರಿಸಿ ಕಾರ್ಖಾನೆ ಮಾಲೀಕರನ್ನು ಬೆಳೆಸಿ, ನಮ್ಮ ಜನರು ರೋಗಬಾಧೆ, ಜೀವ ಸಂಕಟ ಯಾಕೆ ತೆಗೆದುಕೊಳ್ಳಬೇಕು. ಪಕ್ಷಾತೀತವಾಗಿ ರಾಜಕೀಯ ಮುಖಂಡರು ಕೂಡಿ ಕಾರ್ಖಾನೆ ತೊಲಗಿಸಿ, ಜನರ ಆರೋಗ್ಯ ಕಾಪಾಡಿರಿ ಎಂದರು.

ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ ಹೋರಾಟಕ್ಕೆ ಜನರು ಮತ್ತಷ್ಟು ದೊಡ್ಡ ಸಂಖ್ಯೆಯಲ್ಲಿ ಮುಂದೆ ಬರಬೇಕು. ಈ ಹೋರಾಟ ಗೆಲುವು ಅಂದರೆ ನಮ್ಮ ಜೀವದ ಉಳಿವು. ಮುಂದಿನ ಭವಿಷ್ಯದ ಉಳಿವು ಎಂದರು.

ಧರಣಿಗೆ ಇಪ್ಪತ್ತು ವರ್ಷ ಬಲ್ಡೋಟ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಹೋರಾಡಿದ ಸೂರ್ಯರೆಡ್ಡಿ, ನ್ಯಾಯವಾದಿ ರಾಜು ಬಾಕಳೆ ಹೋರಾಟ ಅನುಭವ ಹಂಚಿಕೊಂಡರು. ಸಾಹಿತಿ ವಿರೂಪಾಕ್ಷಪ್ಪಕೋರಗಲ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಚ್.ಎಸ್. ಪಾಟೀಲ್, ಭೂ ಬಾಧಿತ ಎಸ್. ನಾರಾಯಣರೆಡ್ಡಿ, ಕೃಷ್ಣ ಬೇವಿನಕಟ್ಟಿ, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ. ಗೊಂಡಬಾಳ, ಭಾಗ್ಯನಗರ ಗ್ಯಾನೇಶ ಹ್ಯಾಟಿ, ಶಂಭುಲಿಂಗಪ್ಪ ಹರಗೇರಿ, ಎಸ್.ಬಿ. ರಾಜೂರು, ಪಿ.ಎಸ್. ಹಿರೇಮಠ, ಜಿ.ಬಿ.ಪಾಟೀಲ್, ಪುಟ್ಟರಾಜ ಪಾಟೀಲ್ ಇತರರಿದ್ದರು.

ಸನಾತನ ಹಿಂದೂ ಧರ್ಮ ರಕ್ಷಿಸಿ: ಶ್ರೀಗಳು

ಬಳ್ಳಾರಿ: ಸನಾತನ ಹಿಂದೂ ಧರ್ಮವನ್ನು ರಕ್ಷಿಸಬೇಕು. ಧರ್ಮವನ್ನು ನಾವು ರಕ್ಷಿಸಿದರೆ ಉಳಿಸಿದರೆ, ಪಾಲಿಸಿದರೆ, ನಮ್ಮ ನಾಡು, ದೇಶ ಸುಭಿಕ್ಷೆಯಾಗಿರಲಿದೆ ಎಂದು ಶ್ರೀ ವಿದ್ಯಾ ಸಿಂಧೂ ಮಾಧವ ತೀರ್ಥ ಸ್ವಾಮೀಜಿ ಹೇಳಿದರು.

ನಗರದರಾಘವಕಲಾಮಂದಿರದಲ್ಲಿ ಶನಿವಾರ ಸಂಜೆ ಜೋತಿಷ್ಯ ರತ್ನ, ಶ್ರೀ ಗುರುಸಾರ್ವಭೌಮ, ಮಧ್ವವಿಜಯ ಪ್ರಶಸ್ತಿ ವಿಜೇತ, ಗುರುರಾಜ್ ಕುಲಕರ್ಣಿ ಅವರಿಂದ ವಿರಚಿತವಾದ ಶ್ರೀ ಗೌತಮ ಸೂರ್ಯ ಸಿದ್ಧಾಂತ ಪಂಚಾಂಗ ಬಿಡುಗಡೆ ಹಾಗೂ ಸಮಾಜದ ಗಣ್ಯರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಿರಿಯ ಲೆಕ್ಕ ಪರಿಶೋಧಕ ಸಿ.ಎ.ಜೆ.ಜಯ ಪ್ರಕಾಶ್ ಗುಪ್ತಾ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದ್ದರೂ ಎಲ್ಲರೂ ಪಂಚಾಂಗವನ್ನು ಗಮನಿಸುತ್ತಿದ್ದಾರೆ ಅಂದ್ರೆ, ಅದರ ಅರ್ಥ ಹೇಳಲು ಸಾಲದು. ಸೂರ್ಯಗ್ರಹಣ, ಚಂದ್ರಗ್ರಹಣ ನಡೆಯುವ ದಿನ, ಸಮಯ, ಬಿಡುವುದು, ಹಿಡಿಯುವ ಸಮಯವನ್ನು ಕಂಡು ಹಿಡಿಯುತ್ತಿದ್ದು, ದೇವರೇ ಪಂಡಿತರ ರೂಪದಲ್ಲಿ ಬಂದಿದ್ದಾನೆ. ಸನಾತನ ಧರ್ಮ ಉಳಿಯಬೇಕು, ಎಲ್ಲರೂ ಪಾಲಿಸಬೇಕು ಎಂದರು.

ಇದಕ್ಕೂ ಮುನ್ನ ವಿದ್ಯಾ ಸಿಂಧು ಮಾಧವ ತೀರ್ಥರೊಂದಿಗೆ ಗಣ್ಯರು ಪರಾಭವ ನಾಮ ಸಂವತ್ಸರದ ಪಂಚಾಂಗವನ್ನು ಬಿಡುಗಡೆಗೊಳಿಸಿದರು.

ಅಂತಾರಾಷ್ಟ್ರೀಯ ಪ್ರಖ್ಯಾತ ಗಾಯಕ ಡಾ.ಪಂ. ವಿದ್ಯಾ ಭೂಷಣ ಅವರಿಂದ ಶ್ರೀಕೃಷ್ಣ ದಾಸವಾಣಿ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಇದಕ್ಕೂ ಮುನ್ನ ಭಾರತಿ ಕಾಲ ಟ್ರಸ್ಟ್ ಇವರಿಂದ ಸಮೂಹ ನೃತ್ಯ ಕಾರ್ಯಕ್ರಮ ಗಮನಸೆಳೆಯಿತು. ಜೋತಿಷ್ಯ ರತ್ನ ಶ್ರೀಗುರುರಾಜ್ ಕುಲಕರ್ಣಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.



ಸಂಜೀವ ಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು. ಗಣ್ಯರಿಗೆ ಸನ್ಮಾನ: ವೈದ್ಯರಾದ ಡಾ.ಬಿ.ಕೆ.ಸುಂದರ್, ಡಾ.ನಾಗರತ್ನ ಸುಯಜ್ಞ, ಅವ್ವರ ಮಂಜುನಾಥ್, ಗಿರೀಶ್ ಕುಮಾರ್ ಜಿ., ಹಿರಿಯ ಪತ್ರಕರ್ತ ಅಹಿರಾಜ, ಪಂ.ಪ್ರಸನ್ನಾಚಾರ್ಯ ಐ. ಜಿ., ಡಾ.ಪ್ರಣತಿ ಅಜಯ, ಬಿ.ಕೆ.ಸಂಜೀವ ಪ್ರಸಾದ್, ಬಿ.ಕೆ.ಬಿ.ಎನ್.ಮೂರ್ತಿ, ಡಿ.ಹರಿಪ್ರಸಾದ್, ರಾಘವೇಂದ್ರ ಮೋಹನ್‌ಸೇರಿದಂತೆವಿವಿಧಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಇಸ್ಕಾನ್ ಸಂಸ್ಥೆಯ ನರಹರಿ ಆಚಾರ, ಡಾ.ಬಿ.ಕೆ.ಸುಂದರ್, ಸಂಗೀತ ರತ್ನ ಪಂ. ವಿದ್ಯಾ ಭೂಷಣ, ಡಾ.ಶ್ರೀನಾಥ್ ಡಿ. ಇತರರಿದ್ದರು.

ಶಿಲ್ಪಾ ಜಡೇಶ್ ಪ್ರಾರ್ಥಿಸಿದರು. ವಸುಧಾ ಹಾಗೂ ಸಂಜೀವ ಪ್ರಸಾದ್ ನಿರೂಪಿಸಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಿವಿಧ ಭಜನಾ ಮಂಡಳಿ ಸದಸ್ಯರಿಂದ ಸಾಮೂಹಿಕ ಭಜನೆ ಮಾಡಲಾಯಿತು. ಘನ ಮಲ್ಲನಗೌಡ, ವ್ಯಾಸರಾಜ ಆಚಾರ, ರಾಘವೇಂದ್ರ ಮೋಹನ್, ಡಿ.ಕೆ.ಪ್ರಸಾದ್, ಡಿ.ಗಿರಿ, ಅಶೋಕ್ ಕುಲಕರ್ಣಿ, ಭರತ್ ಕುಮಾರ್, ಶ್ರೀಧರ್ ಪಾರ್ಥಸಾರಥಿ, ಕರಣಂ ಶ್ರೀನಿವಾಸ್, ವಾಸುದೇವ ಆಚಾರ್ಯ, ಮಂಜುನಾಥ್, ಎಸ್. ಕೆ.ಮುರುಳಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ರೇಣುಕಾಚಾರ್ಯರ ಜಯಂತ್ಯುತ್ಸವ

ಸಿರುಗುಪ್ಪ: ಶಾಂತಿ, ಸೌಹಾರ್ದತೆ, ಸಹಬಾಳ್ವೆಯ ಮಹತ್ವವನ್ನು ತಿಳಿಸಿಕೊಟ್ಟ ಶ್ರೇಷ್ಠ ದಾರ್ಶನಿಕ ಜಗದ್ಗುರು ರೇಣುಕಾಚಾರ್ಯರು ಎಂದು ಮಾಜಿ ಶಾಸಕ ಟಿ.ಎಂ. ಚಂದ್ರಶೇಖರಯ್ಯ ಸ್ವಾಮಿ ಹೇಳಿದರು. ನಗರದ ಜಗದ್ಗುರು ಪಂಚಾಚಾರ್ಯ ವೈದಿಕ ಜ್ಯೋತಿಷ್ಯ ಪಾಠಶಾಲೆಯಲ್ಲಿ ಭಾನುವಾರ ಆಯೋಜಿಸಿದ್ದ ಆದಿ ಗುರು ಶ್ರೀರೇಣುಕಾಚಾರ್ಯರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ರೇಣುಕಾಚಾರ್ಯರು ವೀರಶೈವ ಧರ್ಮ ಮತ್ತು ಪಂಚಪೀಠಗಳನ್ನು ಸ್ಥಾಪಿಸಿ ಸಮಾಜದ ಉದ್ಧಾರಕ್ಕೋಸ್ಕರ ಧರ್ಮ ಬೋಧನೆ ವಿಚಾರಗಳು, ಧಾರ್ಮಿಕತೆಯೊಂದಿಗೆ ಜೀವನ ಸಾಗಿಸಬೇಕಾಗಿದೆಂದರು.

ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಕುಂಟನಾಳು ಮಲ್ಲಿಕಾರ್ಜುನ ಸ್ವಾಮಿ, ವೀರಶೈವ ಜಂಗಮರ ಸಂಘದ ಗೌರವಾಧ್ಯಕ್ಷ ಟಿ.ಎಂ.ಸಿದ್ದಲಿಂಗಯ್ಯ ಸ್ವಾಮಿ, ಅಧ್ಯಕ್ಷ ಎಚ್. ಕೆ.ಸುರೇಶ ಸ್ವಾಮಿ, ಉಪಾಧ್ಯಕ್ಷ ಎಂ.ಮಹಾಂತೇಶಸ್ವಾಮಿ ಹಳೇಕೋಟೆ, ಪ್ರಧಾನ ಕಾರ್ಯದರ್ಶಿ ಸಿಂಧು ಬಸವ, ಸಹಕಾರ್ಯದರ್ಶಿ ಕೆ.ಎಂ.ವಿರುಪಾಕ್ಷಯ್ಯ ಸ್ವಾಮಿ, ಖಜಾಂಚಿ ಎಚ್.ಎಂ.ಕಿರಣಕುಮಾರ್, ಹಿರಿಯ ವಕೀಲ ಎಚ್. ಕೆ.ಮಲ್ಲಿಕಾರ್ಜುನಯ್ಯ ಸ್ವಾಮಿ, ತೆಕ್ಕಲಕೋಟೆ ಸಿದ್ದರಾಮಯ್ಯ ಸ್ವಾಮಿ, ವಿಶ್ವನಾಥ ಸ್ವಾಮಿ, ಶಿವಪ್ರಸಾದ್, ಭಾಗವಹಿಸಿದ್ದರು.



ವಿಜಯನಗರ: ನಗರದ ಶುಭಕಾಂಕ್ಷಿ ಪೂರ್ವ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಹಾಗೂ ಸರಸ್ವತಿ ಪೂಜಾ ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ವತಿಯಿಂದ ಶಿಕ್ಷಕಿ ಸೌಮ್ಯಾ ಬಿ.ವಿ.ಅವರಿಗೆ ಆದರ್ಶ ಶಿಕ್ಷಕಿ ಅವಾರ್ಡ್ ಹಾಗೂ ಶಾಲೆಯ ಕೋರ್ಡಿನೇಟರ್ ಹುದ್ದೆಗೆ ಪದೋನ್ನತಿ ಮಾಡಲಾಯಿತು.

ಶಾಲೆಗಳಲ್ಲಿ ರಂಗ ಶಿಕ್ಷಕರ ನೇಮಕಾತಿಗೆ ಮನವಿ

ಕೆಂಭಾವಿ: ಶಾಲೆಗಳಲ್ಲಿ ರಂಗ ಶಿಕ್ಷಕರ ನೇಮಕಾತಿ ಕುರಿತು ಕರ್ನಾಟಕ ಸರ್ಕಾರ ಇತ್ತೀಚೆಗೆ ಭರವಸೆ ನೀಡಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ರಂಗಭೂಮಿ ಶಿಕ್ಷಣವನ್ನು ಬಲಪಡಿಸಲು ಅವಶ್ಯಕವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಫೆಬ್ರುವರಿ 2026ರಲ್ಲಿ ಹೊನ್ನಾರು ರಂಗೋತ್ಸವದಲ್ಲಿ ರಂಗ ಶಿಕ್ಷಕರ ನೇಮಕಾತಿಯನ್ನು ಸರ್ಕಾರ ಪರಿಗಣಿಸುತ್ತದೆ ಎಂದು ಹೇಳಿದರು.



ಆದ್ದರಿಂದ ಮಕ್ಕಳ ಸಮಗ್ರ ವಿಕಾಸ, ವ್ಯಕ್ತಿತ್ವ ನಿರ್ಮಾಣ ಮತ್ತು ಮಾನಸಿಕ ಆರೋಗ್ಯ ವನ್ನು ಬಲಪಡಿಸುವ ದೃಷ್ಟಿಯಿಂದ ಶಾಲೆಗಳಲ್ಲಿ ರಂಗಶಿಕ್ಷಕರ ನೇಮಕಾತಿ ಮಾಡುವಂತೆ ಮನವಿ ಮಾಡಿದ್ದಾರೆ. ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು ಪಠ್ಯಾಭ್ಯಾಸದ ಜೊತೆಗೆ ರಂಗಕಲೆಯು ಮಕ್ಕಳಲ್ಲಿ ಆತ್ಮ ವಿಶ್ವಾಸ, ಅಭಿವ್ಯಕ್ತಿ ಸಾಮರ್ಥ್ಯ, ಭಾವನೆ ಹಾಗೂ ಒತ್ತಡ ನಿವಾರಣೆಗೆ ಮಹತ್ವದ ಪಾತ್ರವಹಿಸುತ್ತದೆ ಎಂದರು. ಶಿಕ್ಷಣದಲ್ಲಿಯ ರಂಗಭೂಮಿಯನ್ನು ಅಳವಡಿಸುವುದು. ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯವಾಗಿರುತ್ತದೆ. ಶಿಕ್ಷಣ ಸಾಹಿತ್ಯ, ಚಿತ್ರಕಲೆ, ಸಂಗೀತ, ನೃತ್ಯ ಒಳಗೊಂಡ ಒಂದು ಸಂಯೋಜಿತ ಕಲಾ ಮಾಧ್ಯಮವಾಗಿದೆ. ಶಾಲೆಗಳಲ್ಲಿ ರಂಗ ಶಿಕ್ಷಣ ಅಳವಡಿಕೆಯಿಂದ ಮಕ್ಕಳಲ್ಲಿ ಆತ್ಮ ವಿಶ್ವಾಸ ಹೆಚ್ಚಾಗಿ, ಮಕ್ಕಳ ಕಲಿಕೆಯು ಪ್ರಗತಿಯತ್ತ ಸಾಗುತ್ತದೆ. ಇತ್ತೀಚೆಗೆ ಮಕ್ಕಳಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ, ಆತಂಕ ಮತ್ತು ಸಾಮಾಜಿಕ ಕೌಶಲ್ಯಗಳ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಶಾಲಾ ಮಟ್ಟದಲ್ಲಿ ಸೃಜನಾತ್ಮಕ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸುವುದು ಅವಶ್ಯಕತೆ. ಇದೆ. ಈ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಕ್ರಮ ಕೈಗೊಂಡು ಶಾಲೆಗಳಲ್ಲಿ ರಂಗ ಶಿಕ್ಷಕರನ್ನು ನಿಯೋಜಿಸಬೇಕು ಎಂದು ಮನವಿ ಮಾಡಿದ್ದಾರೆ.

ಪರೀಕ್ಷೆ ಬರೆದ 2506 ವಿದ್ಯಾರ್ಥಿಗಳು



ಹುಣಸಗಿ: ಕರ್ನಾಟಕ ಪರೀಕ್ಷಾ ಮಂಡಳಿ ವತಿಯಿಂದ ರಾಜ್ಯಾದ್ಯಂತ ಭಾನುವಾರ ನಡೆದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿ ಬರುವ ಮೊರಾರ್ಜಿ ದೇಸಾಯಿ, ಕಿತ್ತೂರಾಣಿ ಚನ್ನಮ್ಮ ಸೇರಿದಂತೆ ವಿವಿಧ ವಸತಿ ಶಾಲೆಗಳ 2026-27 ಶೈಕ್ಷಣಿಕ ವರ್ಷದ 6ನೇ ತರಗತಿ ಪ್ರವೇಶಕ್ಕೆ ಹುಣಸಗಿ ತಾಲೂಕಿನ ಒಟ್ಟು 7 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದು, ಒಟ್ಟು ನೋಂದಣಿಯಾದ 2531 ವಿದ್ಯಾರ್ಥಿಗಳಲ್ಲಿ, 2506 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 25 ವಿದ್ಯಾರ್ಥಿಗಳು ಗೈರು ಹಾಜರಿ ಆಗಿದ್ದಾರೆ. ಏಳು ಪರೀಕ್ಷಾ ಕೇಂದ್ರಗಳಲ್ಲಿ ಸುವ್ಯವಸ್ಥಿತವಾಗಿ ಪರೀಕ್ಷೆಗಳು ನಡೆದಿದ್ದು, ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತು ಒದಗಿಸಲಾಗಿತ್ತು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಸಿರುಗುಪ್ಪ: ನಗರದ ಜಗದ್ಗುರು ಪಂಚಾಚಾರ್ಯ ವೈದಿಕ ಜ್ಯೋತಿಷ್ಯ ಪಾಠಶಾಲೆಯಲ್ಲಿ ಭಾನುವಾರ ಆಯೋಜಿಸಿದ್ದ ಆದಿ ಗುರು ಶ್ರೀರೇಣುಕಾಚಾರ್ಯರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಟಿ.ಎಂ.ಚಂದ್ರಶೇಖರಯ್ಯ ಸ್ವಾಮಿ ಮಾತನಾಡಿದರು.

ಅದ್ಧೂರಿಯಾಗಿ ನಡೆದ ಜೋಡಿ ರಥೋತ್ಸವ

ಕೊಟ್ಟೂರು: ಕೊಟ್ಟೂರಿನ ಕೋಟೆ ಪೂರ್ವದ ಶ್ರೀವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀರೇಣುಕಾಚಾರ್ಯರ ಜೋಡಿ ರಥೋತ್ಸವ ಭಾನುವಾರ ಗೋದೋಳಿ ಮುಹೂರ್ತದಲ್ಲಿ ಅದ್ಧೂರಿಯಾಗಿ ಜರುಗಿದವು. ರಥೋತ್ಸವಕ್ಕೂ ಮುನ್ನಾದಿನವಾದ ಶನಿವಾರ ಬೆಳಗ್ಗೆ ಶ್ರೀವೀರಭದ್ರೇಶ್ವರ ಸ್ವಾಮಿಯ ಗಂಗೆ ಪೂಜೆ ನೆರವೇರಿದ ನಂತರ ವೀರಭದ್ರೇಶ್ವರ ಸ್ವಾಮಿಯ ಹಲಗೆಯನ್ನು ಹೊತ್ತ ಅನೇಕರು ಅಗ್ನಿಕೊಂಡವನು ಹಾದು ಭಕ್ತಿ ಸಮರ್ಪಿಸಿದರು. ಅನಂತರದಲ್ಲಿ ಶ್ರೀವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮಹೋತ್ಸವ ನಡೆಯಿತು. ಈ ಗುಗ್ಗಳ ಮಹೋತ್ಸವದಲ್ಲಿ ನೂರಾರು ಯುವಕರು ಹಾಗೂ ಮಹಿಳೆಯರು ಸಸ್ತ್ರವನ್ನು ಹಾಕಿಸಿಕೊಂಡರು. ಮಾರನೇ ದಿನ ಬೆಳಗ್ಗೆ ದೇವಸ್ಥಾನದಲ್ಲಿ ಶ್ರೀವೀರಭದ್ರೇಶ್ವರ ಸ್ವಾಮಿ ಹಾಗೂ ಕಾಳಮ್ಮ ದೇವಿಯ ವಿವಾಹ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ನಂತರ ಸಂಜೆಯ ಸಮಯದಲ್ಲಿ ಶ್ರೀವೀರಭದ್ರೇಶ್ವರ ಸ್ವಾಮಿ ಹಾಗೂ ರೇಣುಕಾಚಾರ್ಯರ ಉತ್ಸವ ಮೂರ್ತಿಗಳನ್ನು ದೇವಸ್ಥಾನದಿಂದ ಮೆರವಣಿಗೆ ಮೂಲಕ ತಂದು ರಥಗಳನ್ನು ಮೂರು ಪ್ರದಕ್ಷಿಣೆ ಹಾಕಲಾಯಿತು. ತದನಂತರದಲ್ಲಿ ಶ್ರೀವೀರಭದ್ರೇಶ್ವರ ಸ್ವಾಮಿಯ ಪಟವನ್ನು ಹರಾಜು ಹಾಕಲಾಯಿತು. ಪಟದ ಹರಾಜಿನಲ್ಲಿ ಹಳ್ಳಿ ಗಂಗಮ್ಮ ಎನ್ನುವವರು ರೂ. 1,90,000ಗಳಿಗೆ ಪಟವನ್ನು ತಮ್ಮದಾಗಿಸಿಕೊಂಡರು. ಅನಂತರದಲ್ಲಿ ಕ್ರಿಯಾಮೂರ್ತಿಗಳಾದ ಶಿವಪ್ರಕಾಶ ಕೊಟ್ಟೂರು ದೇವರು ಹಾಗೂ ಆರ್.ಎಂ.ಕೊಟ್ರಯ್ಯನವರು ರಥಗಳಲ್ಲಿ ಆಸೀನರಾಗುತ್ತಿದ್ದಂತೆ ಸಾವಿರಾರು ಭಕ್ತರು ಶ್ರೀವೀರಭದ್ರೇಶ್ವರ ಮಹಾರಾಜ್ ಕಿ ಜೈ ಎಂಬ ಭಕ್ತಿಯ ಘೋಷಣೆಗಳೊಂದಿಗೆ ಎರಡು ರಥಗಳನ್ನು ಎಳೆದು ಪುನೀತರಾದರು.



ಕೊಟ್ಟೂರು: ಕೊಟ್ಟೂರಿನ ಕೋಟೆ ಪೂರ್ವದ ಶ್ರೀವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀರೇಣುಕಾಚಾರ್ಯರ ಜೋಡಿ ರಥೋತ್ಸವ ಭಾನುವಾರ ಗೋದೋಳಿ ಮುಹೂರ್ತದಲ್ಲಿ ಅದ್ಧೂರಿಯಾಗಿ ಜರುಗಿದವು.

ಫಿಟ್ನೆಸ್ ಫಾರ್ ಆಲ್, ಡ್ರಗ್ಸ್‌ಫ್ರೀ ಕರ್ನಾಟಕಕ್ಕಾಗಿ ಓಟ

ಪೊಲೀಸ್ ಮ್ಯಾರಾಥಾನ್‌ಗೆ ಬೆಂಬಲ

ವಿಜಯನಗರ: ಜಿಲ್ಲಾ ಪೊಲೀಸ್ ವತಿಯಿಂದ 'ನಮ್ಮ ಪೊಲೀಸ್-ನಮ್ಮ ಹೆಮ್ಮೆ', 'ಫಿಟ್ನೆಸ್ ಫಾರ್ ಆಲ್' ಹಾಗೂ 'ಡ್ರಗ್ಸ್ ಫ್ರೀ ಕರ್ನಾಟಕ' ಘೋಷವಾಕ್ಯದೊಂದಿಗೆ ಭಾನುವಾರ ಹೊಸಪೇಟೆಯಲ್ಲಿ ಆಯೋಜಿಸಿದ್ದ ಜನಜಾಗೃತಿಯ ಮ್ಯಾರಾಥಾನ್‌ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಸುಮಾರು 2 ಸಾವಿರಕ್ಕೂ ಹೆಚ್ಚು ಜನರು ಮ್ಯಾರಾಥಾನ್‌ಲ್ಲಿ ಹೆಜ್ಜೆ ಹಾಕಿದರು.

10 ಕಿ. ಮೀಟರ್ ಓಟ ತುಂಗಭದ್ರಾ ಅಣೆಕಟ್ಟೆಯ ವೈಕುಂಠ ಅತಿಥಿ ಗೃಹದಿಂದ ಆರಂಭಗೊಂಡರೆ, 5 ಕಿಲೋ ಮೀಟರ್ ಓಟ ಟಿ.ಬಿ.ಡ್ಯಾಂ ಪ್ರವೇಶ ದ್ವಾರದಿಂದ ಆರಂಭಗೊಂಡಿತು. ಅಲ್ಲಿಂದ ಜಿಲ್ಲಾಧಿಕಾರಿಗಳ ಕಚೇರಿ ಮಾರ್ಗವಾಗಿ ಸಾಯಿ ಬಾಬಾ ಸರ್ಕಲ್, ಬಸವೇಶ್ವರ ಸರ್ಕಲ್ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಲ್, ಬಾಬು ಜಗಜೀವನರಾಂ ಸರ್ಕಲ್, ಖಾನ್‌ಸಾಬ್ ಬಿಲ್ಡಿಂಗ್ ಮಾರ್ಗವಾಗಿ ಡಾ.ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣಕ್ಕೆ ತಲುಪಿ ಮುಕ್ತಾಯಗೊಂಡಿತು.

ವಿಜಯನಗರ ಜಿಲ್ಲೆಯ ಪೊಲೀಸರು, ಗೃಹರಕ್ಷಕರು, ಎನ್‌ಸಿಸಿ ಕ್ಯಾಡೆಟ್‌ಗಳು ಹಾಗೂ ವಿವಿಧ ಪದವಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮ್ಯಾರಾಥಾನ್‌ಲ್ಲಿ ಭಾಗವಹಿಸಿದ್ದರು. ಅಲ್ಲದೇ, ನೆರೆಯ ಕೊಪ್ಪಳ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಯ ಕಾಲೇಜು ವಿದ್ಯಾರ್ಥಿಗಳೂ ಮ್ಯಾರಾಥಾನ್ ಗಾಗಿ ಆಗಮಿಸಿದ್ದು, 5 ಹಾಗೂ 10 ಕಿ.ಮೀ. ವಿಭಾಗದಲ್ಲಿ ಉತ್ಸಾಹದಿಂದ ಓಡಿ ಗಮ್ಯಸ್ಥಾನವನ್ನು ತಲುಪಿದರು. ಈ ಪೈಕಿ ಶೇಷಾವಲಿ ಎಂಬ ವಿಕಲಚೇತನ ಓಟಗಾರ ಹಾಗೂ ಚಿಣ್ಣರು ಕೂಡಾ ಮ್ಯಾರಾಥಾನಲ್ಲಿ ಹೆಜ್ಜೆ ಹಾಕುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.



ವಿಜೇತರ ವಿವರ

5 ಕಿ.ಮೀ. ಪುರುಷರ ವಿಭಾಗದಲ್ಲಿ ತಿಪ್ಪೇಶ್ ಯಾದವ್(ಪ್ರಥಮ), ಬಸವರಾಜ ಹಿರೇಮಠ(ದ್ವಿತೀಯ), ಚೇತನ್(ತೃತೀಯ) ಹಾಗೂ 10 ಕಿ.ಮೀ ವಿಭಾಗದಲ್ಲಿ ಚಂದ್ರಶೇಖರ ಬಸವರಾಜ(ಪ್ರಥಮ), ಗೋವಿಂದರಾಜ್ (ದ್ವಿತೀಯ), ಜೆ. ವಿನಯ್(ತೃತೀಯ) ಸ್ಥಾನಗಳಿಸಿದರು. ಮಹಿಳೆಯರ 5 ಕಿ.ಮೀ. ಓಟದಲ್ಲಿ ಸುವರ್ಣ(ಪ್ರಥಮ), ಕೆ. ಕವಿತಾ(ದ್ವಿತೀಯ), ಗೋಪಿಕ ಟಿ.ಬಿ(ತೃತೀಯ) ಮತ್ತು 10 ಕಿ.ಮೀ. ಓಟದಲ್ಲಿ ಉಷಾ ರೋಹಿಣಿ(ಪ್ರಥಮ), ಸೌಮ್ಯ(ದ್ವಿತೀಯ), ಗೋಪಿಕಾ ಮೂರನೇ ಸ್ಥಾನದಲ್ಲಿ ಗುರಿ ತಲುಪಿದರು. ವಿಜೇತರಿಗೆ ಕ್ರಮವಾಗಿ ಪ್ರಥಮ ಬಹುಮಾನ 10 ಸಾವಿರ ರೂ., ದ್ವಿತೀಯ ಬಹುಮಾನ 5 ಸಾವಿರ ರೂ. ಹಾಗೂ ತೃತೀಯ ಬಹುಮಾನ 3 ಸಾವಿರ ರೂ. ಹಾಗೂ ಪದಕ ವಿತರಿಸಲಾಯಿತು.

ಮ್ಯಾರಾಥಾನ್ ಓಟದ ನಡೆಯುವ ರಸ್ತೆಗಳಲ್ಲಿ ವಾಹನ ಸಂಚಾರದಿಂದ ಓಟಗಾರರಿಗೆ ತೊಂದರೆಯನ್ನು ತಡೆಯಲು ಈ ಬಾರಿ ರಸ್ತೆಯುದ್ದಕ್ಕೂ ಬ್ಯಾರಿಕೇಡ್ ಹಾಗೂ ಕೆಂಪು ರಿಬ್ಬನ್ ಕಟ್ಟುವ ಮೂಲಕ ಓಟಗಾರರಿಗೆ ದಾರಿಯನ್ನು ಮುಕ್ತಗೊಳಿಸಲಾಯಿತು. ಅಲ್ಲದೇ, ಓಟದುದ್ದಕ್ಕೂ ಸ್ಪರ್ಧಾಳುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಮ್ಯಾರಾಥಾನ್ ಬಳಿಕ ಎಲ್ಲರಿಗೂ ಉಪಹಾರ ಕಲ್ಪಿಸಿದ್ದು ಸೇರಿದಂತೆ ಅಚ್ಚುಕಟ್ಟಾದ ವ್ಯವಸ್ಥೆ ಸ್ಪರ್ಧಾಳುಗಳಲ್ಲಿ ಖುಷಿ ತಂದಿತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಕೆ.ಎಂ ರಾಜಶೇಖರ, ಸಿ.ಜೆ.ಎಂ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಸುಬ್ರಮಣ್ಯಂ, ಪ್ರಧಾನ ಸಿವಿಲ್ ನ್ಯಾಯಾಧೀಶ ಪ್ರಶಾಂತ ನಾಗಲಾಪುರ, ಎಸ್‌ಬಿಐ ಲೀಡ್ ಬ್ಯಾಂಕ್ ವ್ಯವಸ್ಥಾಪಕ ವಿರೇಂದ್ರ ಕುಮಾರ್, ಮರಿಯಮ್ಮನಹಳ್ಳಿ ಮುಖ್ಯ ಕಾರ್ಯದರ್ಶಿ ಸೂರ್ಯನಾರಾಯಣ, ಎಸ್ಪಿ ಜಾಹ್ನವಿ, ಹೆಚ್ಚುವರಿ ಎಸ್ಪಿ ಮಂಜುನಾಥ ಬಿ., ಡಿವೈಎಸ್ಪಿ ಟಿ ಮಂಜುನಾಥ, ಮಲ್ಲೇಶ್ ದೊಡ್ಡಮನಿ, ಸಂತೋಷ ಚೌವ್ಹಾಣ್ ಇದ್ದರು.

ಭಾರತ ಜಗತ್ತಿನ ಅನೇಕ ದೇಶಗಳಿಗೆ ಮಾದರಿ

ಹೂವಿನಹಡಗಲಿ: ಭಾರತ ದೇಶವು ಸಂಸ್ಕೃತಿ, ನಾಗರಿಕತೆ ಮತ್ತು ಧರ್ಮದ ನೆಲೆಬೀಡಾಗಿದೆ. ಜಗತ್ತಿನ ಅನೇಕ ದೇಶಗಳಿಗೆ ಮಾದರಿಯಾಗಿದೆ. ಇಂಥ ದೇಶದಲ್ಲಿ ಸನಾತನ ಹಿಂದೂ ಸಂಸ್ಕೃತಿ ಶಾಶ್ವತವಾಗಿ ಉಳಿಯುವಂಥದ್ದು ಸಂಘಟಿತ ಸಮಾಜದಿಂದ ಮಾತ್ರ ಜಗತ್ತಿಗೆ ಬೆಳಕು ಸಿಗುವುದು ಸಾಧ್ಯ. ಹಿಂದೂ ನಾವೆಲ್ಲರೂ ಒಂದು ಎನ್ನುವ ಭಾವ ಎಲ್ಲರಲ್ಲಿ ಬರಬೇಕು ಎಂದು ಸುಧೀರ್ ಘೋರ್ಪಡೆ ನುಡಿದರು.

ಪಟ್ಟಣದ ಜಿಬಿಆರ್ ಕಾಲೇಜು ಮೈದಾನದಲ್ಲಿ ಹಿಂದೂ ಸಮ್ಮೇಳನ ಸಂಚಾಲನಾ ಸಮಿತಿ ನೇತೃತ್ವದಲ್ಲಿ ಏರ್ಪಡಿಸಿದ್ದ ಬೃಹತ್ ಶೋಭಾಯಾತ್ರೆ ಹಾಗೂ ಹಿಂದೂ ಸಮ್ಮೇಳನದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹಿರೇಹಡಗಲಿ ಹಾಲವೀರಪ್ಪಜ್ಜ ಸ್ವಾಮಿ ಮಾತನಾಡಿ, ಭಾರತ ದೇಶದ ಇತಿಹಾಸ ಮೇರು ಪರ್ವತದಂತಿದೆ. ಜಗತ್ತಿನ ಅನೇಕ ದೇಶಗಳು ನಮ್ಮ ಸನಾತನ ಸಂಸ್ಕೃತಿಗೆ ಮಾರುಹೋಗಿವೆ. ಸಿಂಧು ನದಿ ಮೂಲದಿಂದ ಆರಂಭವಾದ ಇತಿಹಾಸ ನಮ್ಮದು. ಅಪಾರವಾದ ಜ್ಞಾನ ಪರಂಪರೆ ತ್ಯಾಗ ಹೋರಾಟ ನಮ್ಮ ನೆಲದ ಕೆಚ್ಚೆದೆಯಾಗಿದೆ. ಜಗತ್ತಿನ ಬಹುತೇಕ ದೇಶಗಳು ಭಾರತದ ಕಡೆ ತಿರುಗಿ ನೋಡುತ್ತಿವೆ ಎಂದರೆ ಅದಕ್ಕೆ ಮೂಲ ಕಾರಣ ಈ ದೇಶದ ಸನಾನತ ಸಂಪ್ರದಾಯ ಎಂದರು.

ಸಮ್ಮೇಳನದಲ್ಲಿ ಶಾಸಕ ಕೃಷ್ಣನಾಯಕ, ಡಾ.ಹಿರಿಶಾಂತವೀರ ಸ್ವಾಮೀಜಿ, ರಾಕೇಶಯ್ಯ ರಾಮಸ್ವಾಮಿ, ಸದ್ಗುರು ಗಾಡಿತಾತ ಚೌಕಿಮಠ ಕೊಂಬಳಿ, ನಾಗತಿಬಸಾಪುರ ಗಿರಿರಾಜ ಮಹಾಸ್ವಾಮೀಜಿ, ವಿವಿಧ ಮಠಾಧೀಶರು, ಸಂಘ ಪರಿವಾರದ ಮುಖಂಡರು, ವಕ್ತಾರರು, ಹಿಂದೂ ಸಮಾಜದ ಸಮ್ಮೇಳನದ ಅಧ್ಯಕ್ಷ ಎಂ.ಪರಮೇಶ್ವರಪ್ಪ, ಕೋಡಿಹಳ್ಳಿ ಮುದುಕಪ್ಪ, ಬೀರಬ್ಬಿ ಬಸವರಾಜ, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಸಂಜೀವ ರೆಡ್ಡಿ, ಎಚ್.ಪೂಜಪ್ಪ, ಪೂಜಾರ್ ಮಲ್ಲಿಕಾರ್ಜುನ, ಡಾ.ಓದೋ ಗಂಗಪ್ಪ, ಎಂ.ಬಿ.ಬಸವರಾಜ, ಡಾ.ಲಕ್ಷ್ಮಣ್ ಲಮಾಣಿ, ಪುನೀತ್ ದೊಡ್ಮನಿ, ಈಟಿ ಲಿಂಗರಾಜ, ರಾಜೇಶ್, ಹಣ್ಣಿ ಶಶಿಧರ್, ಪ್ರಶಾಂತ್ ಜೈನ್, ಜೆ.ಶಿವರಾಜ, ಕೆ.ಪುತ್ರೇಶ್, ವಿಲ್ಸನ್ ಸ್ವಾಮಿ, ಶಿವಪುತ್ರಪ್ಪ ಹೊಸಹಳ್ಳಿ, ಹನುಮೇಶ್, ಈಶ್ವರಗೌಡ, ಸಚಿನ್ ಹಾಗೂ ಹಿಂದೂ ಸಮಾಜದ ತಾಲೂಕಿನ ಎಲ್ಲ ಮುಖಂಡರು, ಕಾರ್ಯಕರ್ತರು, ಬಾಗಿಯಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.



ಕರಾಟೆಯಿಂದ ದೈಹಿಕ ಶಕ್ತಿ ಹೆಚ್ಚಳ

ಬಳ್ಳಾರಿ: ನಗರದ ಗಾಂಧಿನಗರ ಬಡಾವಣೆಯ ಬಾಲಭಾರತೀ ಶಾಲೆಯಲ್ಲಿ ಶ್ರೀಪಂಚಾಕ್ಷರಿ ಮಾರ್ಷಿಯಲ್ ಆರ್ಟ್ಸ್ ಟ್ರಸ್ಟ್ ವತಿಯಿಂದ ಸ್ವಾಮಿ ವಿವೇಕಾನಂದರ 163ನೇ ಜಯಂತ್ಯುತ್ಸವ ನಿಮಿತ್ತ ಕರಾಟೆ ಮಕ್ಕಳಿಗೆ ಬೆಲ್ಟ್ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಬಿ.ಕೆ.ಬಿ.ಎನ್. ಮೂರ್ತಿ ಮಾತನಾಡಿ, ಸ್ವಾಮಿ ವಿವೇಕಾನಂದರು ಜಗತ್ತು ಕಂಡ ಅದ್ಭುತ ಮಹನ್ ವ್ಯಕ್ತಿ, ಅವರನ್ನು ಸ್ಮರಿಸುವುದೇ ಬಹುದೊಡ್ಡ ಪುಣ್ಯದ ಕೆಲಸ. ಕರಾಟೆಯಿಂದ ದೈಹಿಕ ಮತ್ತು ಮಾನಸಿಕ ಶಕ್ತಿ ಹೆಚ್ಚಾಗಲಿದೆ. ಪ್ರತಿಯೊಬ್ಬ ಮಕ್ಕಳು ಶ್ರದ್ಧೆಯಿಂದ ಕರಾಟೆಯನ್ನು ಕಲಿಯಬೇಕು, ಇದು ನಮ್ಮ ಆತ್ಮ ರಕ್ಷಣೆಗೆ ಅತ್ಯಂತ ಸಹಕಾರಿಯಾಗಿದೆ ಎಂದು ತಿಳಿಸಿದರು. ನೆರೆಯ ಆಂಧ್ರಪ್ರದೇಶದ ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷ ದಂಡಿನ ಶಿವಾನಂದ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆದರ್ಶ ವ್ಯಕ್ತಿಗಳಾಗಬೇಕು. ಪ್ರತಿಯೊಬ್ಬ ಪಾಲಕರು ಗುಣಮಟ್ಟದ ಶಿಕ್ಷಣದ ಜೊತೆಗೆ ತಮ್ಮ ಮಕ್ಕಳಿಗೆ ಕರಾಟೆ, ಯೋಗ, ಧ್ಯಾನ, ಕಲಿಸಬೇಕು ಎಂದು ಕರೆ ನೀಡಿದರು.

ಮನೋಜ್ಞಾ ಪ್ರಾರ್ಥಿಸಿದರು. ನಂತರ ಕರಾಟೆ ಮಕ್ಕಳಿಂದ ಕರಾಟೆ ಪ್ರದರ್ಶನ ನಡೆಯಿತು. ಇದಕ್ಕೂ ಮುನ್ನ ಟ್ರಸ್ಟ್‌ನ ಅಧ್ಯಕ್ಷ, ನ್ಯಾಯವಾದಿ ಬಂಡ್ರಾಳ್ ಎಂ.ಮೃತ್ಯುಂಜಯಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೋರಿ ವಿರೂಪಾಕ್ಷಪ್ಪ, ಕಟ್ಟೆಗೌಡ, ಮುರುಳಿ, ಸುರೇಶ, ಕಾರ್ಯನಿರ್ವಹಕ ಅಭಿಯಂತರರು, ಗಂಗಾವತಿ ವಿರೇಶ್, ಆನಂದ ಗಾಜುಲು ಸೇರಿದಂತೆ ಇತರರು ಭಾಗವಹಿಸಿದ್ದರು. ವಾಸುದೇವರಾಜುಲು ಅವರು ನಿರ್ವಹಿಸಿದರು.



ಮಕ್ಕಳಿಗೆ ಸಂಸ್ಕಾರ ಕಲಿಸಿ: ಶ್ರೀಗಳು

ಕುರುಗೋಡು: ಮಾನವನ ಬದುಕು ಬಹು ಅಮೂಲ್ಯ. ಭಗವಂತನಿತ್ತ ಕೊಡುಗೆ ಅಮೋಘ. ಅರಿವು ಆದರ್ಶಗಳನ್ನು ಮೈಗೂಡಿಸಿಕೊಂಡು ಬಾಳಿದರೆ ಜೀವನ ಸಮೃದ್ಧಗೊಳ್ಳುತ್ತದೆ ಎಂದು ಹಂಪಿ ಸಾವಿರ ದೇವರ ಮಠದ ವಾಮದೇವ ಹೇಳಿದರು.

ಅವರು ತಾಲೂಕಿನ ಸಮೀಪದ ನೆಲ್ಲುಡಿ ಗ್ರಾಮದಲ್ಲಿ ಶಿವಶರಣ ಹನುಮಪ್ಪ ತಾತನವರ ನೂತನ ದೇವಸ್ಥಾನ ಧರ್ಮಸಭೆ ಉದ್ಘಾಟಿಸಿ ಅವರು ಮಾತನಾಡಿ, ಪಾಲಕರು ಮಕ್ಕಳಿಗೆ ವಿದ್ಯೆ ಧಾರ್ಮಿಕ ಸಂಸ್ಕೃತಿಯ ಬಗ್ಗೆ ಮಿಗಿಲಾದ ಐಶ್ವರ್ಯವಿಲ್ಲ, ನಿರ್ಮಲ ಸ್ವಭಾವಕ್ಕಿಂತ ಬೇರೆ ತೀರ್ಥ ಸ್ನಾನಗಳಿಲ್ಲ. ಸಂಸ್ಕಾರ ಒಂದಿದ್ದರೆ ಸಂಪೂರ್ಣ ಜಗತ್ತನ್ನು ಗೆಲ್ಲಬಹುದು. ಅಹಂಕಾರದಿಂದ ಗೆದ್ದ ಜಗತ್ತನ್ನು ಕಳೆದುಕೊಳ್ಳಬಹುದು. ಎಲ್ಲ ಕಡೆ ತಲೆ ಎತ್ತಿ ನಿಲ್ಲುವವನೇ ದೊಡ್ಡ ಮನುಷ್ಯ ಅಲ್ಲ, ಎಲ್ಲಿ ತಗ್ಗಿ ನಿಂತರೆ ಒಳ್ಳೆಯದು ಅಂತ ಅರಿತು ನಡೆಯುವವನೇ ದೊಡ್ಡ ಮನುಷ್ಯನಾಗಲು ಸಾಧ್ಯ ಎಂದರು. ಕಳೆದ ಮೂರು ದಿನಗಳಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಶ್ರೀಗಳನ್ನು ಸ್ಥಳೀಯ ಭಕ್ತರಿಂದ ಸನ್ಮಾನ ಜರುಗಿತು.



ಈ ವೇಳೆ ಕಂಪ್ಲಿ ಶಾಸಕ ಜೆ.ಎನ್.ಗಣೇಶ. ವೇದ ಮತಿ ಕೊಟ್ರಬಸಯ್ಯ ತಾತನವರು, ಮಾಜಿ ಗ್ರಾಮ ಅಧ್ಯಕ್ಷ ಕರಿಬಸವನಗೌಡ, ಜನಪ್ರತಿನಿಧಿಗಳು, ದೇವಸ್ಥಾನ ಸೇವಾ ಸಮಿತಿಯವರು, ಗ್ರಾಮದ ಮುಖಂಡರು. ರೈತರು ಮತ್ತು ಸುತ್ತಲಿನ ಗ್ರಾಮಗಳ ಭಕ್ತರು ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಗುರುಕುಲ ಶಿಕ್ಷಣ ಪೂರಕ

ವಿಜಯನಗರ: ಗುರುಕುಲ ಪದ್ಧತಿಯ ಮೌಲ್ಯಾಧರಿತ ಶಿಕ್ಷಣ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿದೆ ಎಂದು ಸಮಾಜ ಸೇವಕ ಎಚ್.ಆರ್.ಜಿ.ವಿರೂಪಾಕ್ಷ ಹೇಳಿದರು.

ನಗರದ ಶುಭಕಾಂಕ್ಷಿ ಪೂರ್ವ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಹಾಗೂ ಸರಸ್ವತಿ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುನಿರಾಬಾದ ಡಯಟ್ ಹಿರಿಯ ಉಪನ್ಯಾಸಕ ಎಲ್.ಡಿ.ಜೋಶಿ, ಉತ್ತಮ ಬಾಲ್ಯ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಭದ್ರ ಬುನಾದಿಯನ್ನು ಈ ಶಾಲೆ ಹಾಕಿರುವುದರಿಂದ ಮಕ್ಕಳು ನಿಶ್ಚಿತವಾಗಿ ಉಜ್ವಲ ಭವಿಷ್ಯ ಕಟ್ಟಿಕೊಳ್ಳುತ್ತಾರೆ. ಪಠ್ಯಪುಸ್ತಕದ ಶಿಕ್ಷಣ ಜ್ಞಾನವನ್ನು ಹೆಚ್ಚಿಸಿದರೆ, ಸಂಸ್ಕಾರ ಬದುಕಿನ ಮೌಲ್ಯವನ್ನು ವೃದ್ಧಿಸುತ್ತದೆ. ಮಕ್ಕಳ ಬಗ್ಗೆ ಜಾಗೃತಿ ವಹಿಸಿದರೆ ಪ್ರತಿಯೊಂದು ಮಗು ಸಮಾಜದಲ್ಲಿ ಮಾದರಿ ವ್ಯಕ್ತಿಯಾಗಿ ರೂಪಗೊಳ್ಳುತ್ತದೆ ಎಂದು ಹೇಳಿದರು.



ಕಾಳಪ್ಪ ರೇವಣಸಿದ್ದಪ್ಪ ಬಡಿಗೇರ ಅವರಿಗೆ ರಥಶಿಲ್ಪಿ ಎಂದು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ನರ್ಸರಿ, ಎಲ್‌ಕೆಜಿ ಮತ್ತು ಯುಕೆಜಿ ಮಕ್ಕಳಿಂದ ವಿವಿಧ ರೀತಿಯ ಮೌಖಿಕ ಪಠಣಗಳು, ಸಿದ್ದಜ್ಜ ನಾಟಕ, ನೃತ್ಯ ದೊಂದಿಗೆ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು.

ಸತ್ಯನಾರಾಯಣ ತೈಲಂಗ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪ್ರಸನ್ನ ತೈಲಂಗ, ಗೌರವಾಧ್ಯಕ್ಷ ರಾಮಕೃಷ್ಣ ಕಟಗಿ, ಉಪಾಧ್ಯಕ್ಷ ಶ್ರೀಕಾಂತ ಪಾಠಕ, ಸದಸ್ಯರಾದ ಸಂಪದಾ ಪಾಟೀಲ, ರೈತ ಸಂಘದ ಜಿಲ್ಲಾಧ್ಯಕ್ಷ, ಟಿ.ನಾಗರಾಜ, ಶಿಕ್ಷಕರಾದ ಮಾನಸಾ ಆಚಾರ್ಯ, ಸೌಮ್ಯಾ ಶೆಟ್ಟರ, ಅನುಷಾ, ಪ್ರೀತಿ ಬೋಗಾರ ಮತ್ತು ಕೇರ ಟೇಕರ್ಸ್‌ಗಳು, ಪೋಷಕರು ಇದ್ದರು. ಶಿಕ್ಷಕರಾದ ಸಂತೋಷ ಜೋಶಿ ಹಾಗೂ ಶಾಲೆಯ ಎಚ್‌ಎಂ ಶಾಲಿನಿ ಪ್ರಸನ್ನ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

ಹಿಂದೂ ಸಂಗಮ, ಶೋಭಾಯಾತ್ರೆ ಅದ್ಧೂರಿ

ಬಳ್ಳಾರಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ನಗರದಲ್ಲಿ ಹಿಂದೂ ಸಮ್ಮೇಳನ ಸಮಿತಿ ಸತ್ಯನಾರಾಯಣ ಪೇಟೆ ಉಪನಗರ ಸಮಿತಿ ಆಶ್ರಯದಲ್ಲಿ ಶನಿವಾರ ಸಂಜೆ ಭವ್ಯ ಶೋಭಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ನಗರದ ಸತ್ಯನಾರಾಯಣ ಪೇಟೆ ಶ್ರೀವೆಂಕಟೇಶ್ವರ ದೇವಾಲಯದ ಕೂಲ್ ಕಾರ್ನರ್ ದಿಂದ ಪ್ರಾರಂಭವಾದ ಭವ್ಯ ಶೋಭಾ ಯಾತ್ರೆ, ವಿವಿಧ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿ ಎಂಎಂ ಟಿಸಿ ಪಾರ್ಕ್ ತಲುಪಿತು. ಅತ್ಯಂತ ವೈಭವದಿಂದ ನಡೆದ ಭವ್ಯ ಶೋಭಾಯಾತ್ರೆಯಲ್ಲಿ ಅನೇಕ ಗಣ್ಯರು ಭಾಗವಹಿಸಿ ಗಮನಸೆಳೆದರು. ವಿವಿಧ ಬಣ್ಣಗಳ ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದ ರಥದಲ್ಲಿ ಭಾರತಾಂಬೆಯ ಭಾವಚಿತ್ರ, ಹಿಂದೂ ದೇವತೆಗಳ, ಮಹನೀಯರ ಭಾವಚಿತ್ರ ಮೆರವಣಿಗೆ ನಗರದಲ್ಲಿ ಸಂಜೆ ಅದ್ದೂರಿಯಾಗಿ ನಡೆಯಿತು. ಸುಮಾರು 20ಕ್ಕೂ ಹೆಚ್ಚು ಕಾಲ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿ ಗಮನಸೆಳೆದವು. ವಿವಿಧ ಭಜನಾ ಮಂಡಳಿಗಳಿಂದ ಸಮೂಹಿಕ ಕೋಲಾಟ ಗಮನಸೆಳೆಯಿತು. ನೂರಾರು ಮಹಿಳೆಯರು ಕಳಸ, ಕುಂಬಗಳನ್ನು ಹೊತ್ತು ಶೋಭಾ ಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಮಹಿಳೆಯರು, ಮಕ್ಕಳು ಕುಣಿದು ಕುಪ್ಪಳಿಸಿದರು. ಮೆರವಣಿಗೆಯಲ್ಲಿ ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ನಗರ ಅಧ್ಯಕ್ಷ ಜಿ.ವೆಂಕಟರಮಣ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗಣಪಾಲ್ ಐನಾಥ್ ರೆಡ್ಡಿ,ಮಾಜಿ ಸಚಿವ ಗಾಲಿ ಜನಾರ್ಧನ ರೆಡ್ಡಿ, ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಪಾಲಿಕೆ ಸದಸ್ಯರಾದ ಕೆ.ಎಸ್. ಅಶೋಕ್, ಸುರೇಖಾ ಮಲ್ಲನಗೌಡ, ಶ್ರೀನಿವಾಸ್ ಮೊತ್ಕರ್, ಸೋಮನಗೌಡ, ರಾಮಚಂದ್ರಪ್ಪ ಸೇರಿದಂತೆ ಇತರರಿದ್ದರು. ನಂತರ ನಗರದ ಎಸ್. ಎನ್.ಪೇಟೆಯ ಎಂಎಂಟಿಸಿ ಉದ್ಯಾನವನದಲ್ಲಿ ಶನಿವಾರ ಸಂಜೆ ವಿಶಾಲ ಹಿಂದೂ ಸಮ್ಮೇಳನ ಸಮೀತಿ, ಸತ್ಯನಾರಾಯಣ ಉಪ ಸಮಿತಿ ಆಶ್ರಯದಲ್ಲಿ ವೇದಿಕೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಇಡೀ ವೇದಿಕೆ ಕೇಸರಿ ಮಯವಾಗಿತ್ತು. ವಿವಿಧ ಸ್ವಾಮೀಜಿಗಳು ಮಾತನಾಡಿದರು.



ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷರು, ಸರ್ವ ಸದಸ್ಯರು ಭಾಗವಹಿಸಿದ್ದರು. ನಂತರ ಮುದ್ದು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಹೋಳಿ ಹಬ್ಬ, ರಂಜಾನ್: ಶಾಂತಿ ಸಭೆ

ಹೂವಿನಹಡಗಲಿ: ತಾಲೂಕಿನಲ್ಲಿ ಹೋಳಿ ಹಬ್ಬ ಹಾಗೂ ರಂಜಾನ್ ಹಬ್ಬವನ್ನು ಶಾಂತಿ, ಸೌಹಾರ್ದಯುತವಾಗಿ ಆಚರಿಸಲು ಸಾರ್ವಜನಿಕರು ಸಹಕಾರ ನೀಡಬೇಕು. ಅರ್ಥಪೂರ್ಣ ಆಚರಣೆಗೆ ಪ್ರತಿಯೊಬ್ಬರೂ ನೆರವಾಗಬೇಕು ಎಂದು ಸಿಪಿಐ ಮಲ್ಲಪ್ಪ ಎಸ್.ಹೂಗಾರ ಹೇಳಿದರು.

ಪಟ್ಟಣದ ಪೊಲೀಸ್ ಠಾಣಾ ಆವರಣದಲ್ಲಿ ನಡೆದ ಶಾಂತಿ ಪಾಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎರಡು ಹಬ್ಬಗಳನ್ನು ಶಾಂತಿ ಸೌಹಾರ್ದತೆಯಿಂದ ಎಲ್ಲಾ ಸಮಾಜದವರು ಭಾವೈಕ್ಯದಿಂದ ಹಬ್ಬ ಆಚರಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಧ್ವನಿವರ್ಧಕ ಗಳನ್ನು ಬಳಸಬೇಕು. ಹಿರಿಯ ನಾಗರಿಕರು, ಮಕ್ಕಳು, ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗದಂತೆ ಸಾರ್ವಜನಿಕರು ಸಮಾಜದ ಎರಡು ಮಂಡಳಿಗಳು ನಿಗಾವಹಿಸಿ ಜವಾಬ್ದಾರಿತವಾಗಿ ಹಬ್ಬಗಳನ್ನು ಆಚರಿಸಿ ಎಂದರು. ಪಿಎಸ್‌ಐ ಆರ್.ಮಣಿಕಂಠ ಮಾತನಾಡಿ, ಹೋಳಿ ಹಬ್ಬದಲ್ಲಿ ಯಾವುದೇ ರಾಸಾಯನಿಕ ಬಣ್ಣಗಳಿಂದ ಕೂಡಿರುವಂತಹ ಬಣ್ಣವನ್ನು ಹಚ್ಚಬಾರದು, ಯಾವುದೇ ಸಾರ್ವಜನಿಕರ ಅನುಮತಿ ಇಲ್ಲದೆ ಅವರಿಗೆ ಅಚ್ಚಕೂಡದು, ಶಾಂತಿಯುತವಾಗಿ ಹಬ್ಬವನ್ನು ಆಚರಿಸಿ ಎಂದರು. ಕ್ರೈಂ ಪಿಎಸ್‌ಐ ವಾಸು, ಹೂವಿನಹಡಗಲಿ, ಇಟಗಿ ಪಿಎಸ್‌ಐ ಅಬ್ಬಾಸ್, ಹಿರೇಹಡಗಲಿ ಮತ್ತು ಇಟ್ಟಗಿ ಪೊಲೀಸ್ ಠಾಣಾವಾರು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಮುದಾಯದ ಮುಖಂಡರು, ಹಿರಿಯರು, ಯುವಕರು ಭಾಗವಹಿಸಿದ್ದರು.



ನಾಯಕರನ್ನು ತಯಾರು ಮಾಡುವ ಪಕ್ಷ ಜೆಡಿಎಸ್

ಹಗರಿಬೊಮ್ಮನಹಳ್ಳಿ: ಜೆಡಿಎಸ್ ಪಕ್ಷ ಯಾವುದೇ ಫಲಾಪೇಕ್ಷೆ ಇಲ್ಲದೆ ನಿಷ್ಠಾವಂತ ಕಾರ್ಯಕರ್ತರಿರುವ ಪ್ರಾದೇಶಿಕ ಪಕ್ಷದಲ್ಲಿ ನಾಯಕರಿಗೆ ಕೊರತೆ ಇಲ್ಲ ದೇವೇಗೌಡರ ಮಾರ್ಗದರ್ಶನದಲ್ಲಿ ನಾಯಕರನ್ನು ಸೃಷ್ಟಿ ಮಾಡುವ ಶಕ್ತಿ ಸಾಮರ್ಥ್ಯ ಪಕ್ಷದ ಕಾರ್ಯಕರ್ತರಿಗೆ ಇದೆ ಜೆಡಿಎಸ್ ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರ್ ಸ್ವಾಮಿ ತಿಳಿಸಿದರು.



ಭಾನುವಾರ ಹಗರಿಬೊಮ್ಮನಹಳ್ಳಿಯಲ್ಲಿ ನೆಡೆದ ಕಾರ್ಯಕ್ರಮದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜನರೊಂದಿಗೆ ಜನತಾದಳ ರಾಜ್ಯದಲ್ಲಿ 2ನೇ ಹಂತದ ಪ್ರವಾಸವಾಗಿದ್ದು ಪಕ್ಷದ ಸದಸ್ಯತ್ವ ನೋಂದಣಿ ಮಾಡಿಸುವ ಜೊತೆಗೆ ಗ್ರಾಮ ಪಂಚಾಯಿತಿ ತಾಲೂಕು ಮತ್ತು ಜಿಪಂ ಚುನಾವಣೆಗಳು ಬರುತ್ತಿವೆ. ಜೆಡಿಎಸ್ ಪಕ್ಷ 1989ರಲ್ಲಿ ಎರಡು ಸ್ಥಾನ ಪಡೆದು ನಂತರದ ವರ್ಷಗಳಲ್ಲಿ ರಾಜ್ಯದಲ್ಲಿ ಅಧಿಕಾರ ಹಿಡಿಯಿತು. ನಮ್ಮ ಪಕ್ಷದಿಂದ ಶಾಸಕರಾದ್ರೂ, ಸಚಿವರಾದ್ರೂ, ಉಪ ಮುಖ್ಯಮಂತ್ರಿಗಳು ಆಗಿ ಕಾರಣಾಂತರದಿಂದ ಪಕ್ಷಬಿಟ್ಟು ಹೋದ್ರು, ರಾಜ್ಯಾದ್ಯಂತ ನಿಷ್ಠಾವಂತ ಕಾರ್ಯಕರ್ತರಿಂದ ಜೆಡಿಎಸ್ ಗಟ್ಟಿಯಾಗಿದೆ. ಪಕ್ಷದ ಬೆಳವಣಿಗೆಗಾಗಿ ಪಕ್ಷದ ಬಾವುಟ ಹಿಡಿದು ಪಕ್ಷಕ್ಕಾಗಿ ದುಡಿದ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾನ ಅಧಿಕಾರ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ರಾಜ್ಯದುದ್ದಕ್ಕೂ ನೆಡೆಯುವ ಇಂತಹ ಕಾರ್ಯಕ್ರಮಗಳಿಂದ ನಮ್ಮ ಪಕ್ಷದ ಗುರಿ ಮುಟ್ಟಲಿಕ್ಕೆ ಸಹಕಾರಿಯಾಗಲಿದೆ ಎಂದರು.

> **ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಬಗ್ಗೆ ಸುಪ್ರೀಂ ಕೋರ್ಟು ಛೀಮಾರಿ ಹಾಕಿದ ಬಳಿಕ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿದೆ. ದುರಾಡಳಿತದಿಂದ ಬೇಸತ್ತ ರಾಜ್ಯದ ಜನರು ತಿರಸ್ಕರಿಸುತ್ತಾರೆ ಎಂಬ ಆತಂಕ ಸ್ಥಳೀಯ ಚುನಾವಣೆ ನಡೆದರೆ ಸೋಲುವ ಭಯ ರಾಜ್ಯ ಸರ್ಕಾರಕ್ಕೆ ಇದೆ.**
> ■ ನಿಖಿಲ್ ಕುಮಾರ್ ಸ್ವಾಮಿ, ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ

ರಾಜ್ಯ ಸರ್ಕಾರದ ಲೋಪ ದೋಷಗಳಿಂದ ಯುವ ಸಮೂಹ ಬಲಿಯಾಗುತ್ತಿದೆ. ರಾಜ್ಯದಲ್ಲಿ ಜನರ ಆಶೀರ್ವಾದದಿಂದ 2028ಕ್ಕೆ ಎನ್‌ಡಿಎ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು ಯುವ ಸಮುದಾಯಕ್ಕೆ ಆಗುವ ಅನ್ಯಾಯವನ್ನು ಸರಿಪಡಿಸುವ ಭರವಸೆ ನೀಡಿದರು.

ಶಾಸಕರಾದ ಕೆ.ನೇಮಿರಾಜ್ ನಾಯ್ಕ್, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕರಾದ ಶಿವಶಂಕರ್ ಎಚ್.ಎಸ್., ಅನಿಲ್ ಲಾಡ್, ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ, ಮಾಜಿ ಜಿ ಪಂ ಸದಸ್ಯ ಹರ್ಷವರ್ಧನ್ ಪುರಸಭೆ ಸದಸ್ಯರು ಮುಖಂಡರು ಉಪಸ್ಥಿತರಿದ್ದರು.